ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 9

ಸಂಚಿಕೆ 4

ಅಕ್ಟೋಬರ್-ಡಿಸೆಂಬರ್-1980

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 9. No. 4, October–December 1980

Chief Editor: Dr. G. S. Sivarudrappa

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100–00

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ನೆಲ ನಗುವ ಹೊತ್ತು

ರಾಜಶೇಖರ್, ಡಿ. ವಿ.

ಗಾಳಿಯಂತೆ ತೇಲಿಹೋದ ಮೋಡಗಳೆ
ಮಂಜಿನಂತೆ ಮುಳುಗಿದ ಗುಡುಗುಗಳೆ
ಸತ್ತ ಮಕ್ಕಳ ಕಣ್ಣಿನಂತೆ ಮುಚ್ಚಿದ ಮಿಂಚುಗಳೆ
ನನ್ನ ಅಪ್ಪಿ ಬನ್ನಿ.

ರೆಕ್ಕೆ ಕಟ್ಟಿದ ಹಕ್ಕಿಯಂತೆ
ಹಗಲು ದಬ್ಬಿದ ರಾತ್ರಿಯಂತೆ
ಮುಗಿದ ನೀರಿನ ಕೆಸರಿನಂತೆ
ತೆರೆದ ಕಣಜಕೆ ಹುಲ್ಲು ತನ್ನಿ.

ದೊಕ್ಕೆ ದಾಟುವ ಮೈ ಬಿಗಿಯುವ ಕನಸುಗಳೆ
ತುಟಿ ಕಚ್ಚಿದ ಪ್ರೇಯಸಿಯರ ಕೆಂಡದ ತುಟಿಗಳೆ
ಮರೆತ ನೆನಪುಗಳೆ ದುಃಖಗಳ ಮೊಳಸಿ ಬನ್ನಿ.

ಹೂ ಬಿಡಿಸಿದ ಕತ್ತಾಳೆಗಳೆ, ಮುಳ್ಳುಬಿಡುವ ಜಾಲಿಗಳೆ
ಬತ್ತಿ ಹೋದ ನದಿಗಳಲ್ಲಿ ಮುದುಡಿದ ತೆಪ್ಪಗಳೆ
ಮುತ್ತಿಲ್ಲದೆ ಮುಡಿಗಳಲ್ಲಿ ಅಡಗಿದ ಮೊಗ್ಗುಗಳೆ
ಕರುಳು ಕಚ್ಚಿ ಸುಖದ ಹುಬ್ಬು ಕೆನೆ ಕಟ್ಟಿ ಬನ್ನಿ.

ಹೊಳೆವ ಮೈ ಬಣ್ಣದ ನೆರಳಿನ ಕನಸೆ, ನನ್ನ ರಕ್ತದಲ್ಲದ್ದಿ ಬರೆಯುವ ಬಯಂಕೆ
ಓಡುವ ಹಸಿದ ದನಗಳೇ ನಿಮ್ಮ ಕೊಂಬುಗಳನ್ನು ಬಲಿತ ಗಾಲಿಗಳ ಹೊಟ್ಟೆಗೆ
ಹೆಕ್ಕಿಸಿ
ಗೊರಸಿಗೆ ಸಿಕ್ಕುವ ಹಾಸಿಗೆ ಹಸಿರನ್ನು ಬಡಮಕ್ಕಳ ಬಾಯಿಗೆ ಮಿದ್ದಿಸಿ.

ಹಸಿದ ಬಟ್ಟೆಯ ಮೂರು ಬಣ್ಣದಡಿಯಲ್ಲಿ ಸೊರಗುವ ರೈತರೆ
ನಿಮ್ಮ ನೇಗಿಲಗುಳಗಳನ್ನು ನೆಲಕೆ ಮುಟ್ಟಿಸುವ ಮೊದಲು ನಿಮ್ಮ ಸುತ್ತಿರುವ
ಆಳುವವರ ಹಣೆಗೆ ಮೆಟ್ಟಿ ಬನ್ನಿರಿ.

ಆಗ ಇದು, ನಮ್ಮ ನೆಲ, ನಮ್ಮ ಜಲ
ನಮ್ಮ ಕರುಳ ಬೇಯಿಸಿ ತಿನ್ನುವ ಹೆಣಗಳ ಮೆರವಣಿಗೆ ಮಾಡಿ ಬೆಂಕಿಹತ್ತಿಸಿ.
ಆ ಹೊಗೆಗೆ ಮೋಡ ಕಟ್ಟುತ್ತದೆ, ಮಳೆ ಬರುತ್ತದೆ
ಆ ಬೆಳಕಿಗೆ ನೆಲ ನಗುತ್ತದೆ.

"—ಪುರ>—ವರ/—ವಾರ" ಎಂಬುದೇ ಸರಿ

ಡಾ॥ ಎಂ. ಚಿದಾನಂದಮೂರ್ತಿ

ಡಾ. ಎಂ. ಎಂ. ಕಲಬುರ್ಗಿಯವರು '–ಆಹಾರ' ಎಂಬುದು '–ವರ/–ವಾರ' ಆಗುತ್ತದೆಯೆಂದು ವಾದಿಸುತ್ತ '–ವರ/–ವಾರ'ಗಳು '–ಪುರ'ದಿಂದ ಬಂದಿವೆಯೆಂಬ ನನ್ನ ವಾದವನ್ನು ತಿರಸ್ಕರಿಸಿದ್ದಾರೆ (ಸಾಧನೆ, 9. 1. ಪು. 147-50). ಆದರೆ ನನ್ನ ವಾದ ಎಷ್ಟು ಗಟ್ಟಿ ಆಧಾರದ ಮೇಲೆ ನಿಂತಿದೆಯೆಂದರೆ ಅದನ್ನು ಅಲ್ಲಗಳೆಯಲು ಸದ್ಯಕ್ಕಂತೂ ಸಾಧ್ಯವೇ ಇಲ್ಲವೆಂಬುದು ನನ್ನ ದೃಢ ವಿಶ್ವಾಸವಾಗಿದೆ.

ನನ್ನ ಲೇಖನದ ಉದಾಹರಣೆಗಳನ್ನೇ ಕೊಡುವಾಗ, ಕಲಬುರ್ಗಿಯವರು 'ಗಂಗಪುರ'ವನ್ನು (ಈಗಿನ ಗಂಗವಾರ) ಮಾತ್ರ ಉಲ್ಲೇಖಿಸುತ್ತಾರೆ. ನಾನು ನನ್ನ ಲೇಖನದಲ್ಲಿ, ಹಿಂದಿನ ಶಾಸನಗಳಿಂದ 'ಇಂದಪುರ' ವನ್ನೂ (ಈಗಿನ ಇಂದವಾರ), 'ಉದಯಪುರ'ವನ್ನೂ (ಈಗಿನ ಉದ್ಯಾವರ, ಉದಯಾವರ) ಉದಾಹರಿಸಿದ್ದೇನೆ. '–ಪುರ'ವು '–ವುರ' ಆಗಿ, '–ವರ' ಆದದ್ದನ್ನು ಅವು ಕ್ರಮವಾಗಿ ತೋರಿಸುತ್ತವೆ.

'ಇಂದಪುರ'ದ ಹಿಂದಿನ ರೂಪ 'ಇಂದಪುರ' ಎಂಬಲ್ಲಿ ಅನುಮಾನವಿಲ್ಲ.

ಇಂದಪುರ> ಇಂದವುರ> ಇಂದಾವರ

ಇಲ್ಲಿ, '–ಪ್' > '–ವ್–' ಆಗುವುದು ಸರಿಯೇ, '–ವುರ' ಎನ್ನುವುದು '–ವರ' ಎಂದಾಗಲು, ಅಂತ್ಯಾಕ್ಷರದ 'ಅ' ಎನ್ನುವ ಸ್ವರ ಕಾರಣ ; ಮತ್ತು '–ವುರ'ದ ಹಿಂದಿನ ಅಕ್ಷರದ 'ಅ' ಕಾರವೂ ಕಾರಣ. ಇದು 'vocalic harmony' ಕ್ರಿಯೆಯ ಫಲವೆಂಬುದು ಸ್ಪಷ್ಟ. ಈಗಿನ ಉದ್ಯಾವರ ಅಥವಾ ಉದಯಾವರ ಹೆಸರಿನ ಪ್ರಾಚೀನ ರೂಪಗಳು ಉದಯಪುರ/ಉದಯಾಪುರ/ಉದಯವುರ : ಈ ಮೂರೂ ರೂಪಗಳು ಕ್ರಿ. ಶ. 700ರ ಹೊತ್ತಿಗೇ ನಮಗೆ ಶಾಸನಗಳಲ್ಲಿ ದೊರಕುತ್ತವೆ ಇವುಗಳಲ್ಲಿ ಅಂತ್ಯ '–ಪುರ' ವುಳ್ಳ 'ಉದಯಪುರ'ವೇ ಮೂಲವೆಂಬಲ್ಲಿ ಅನುಮಾನ ವಿಲ್ಲ. ಅದು ಏಳನೇ ಶತಮಾನದ ಹೊತ್ತಿಗೆ 'ಉದಯವುರ' ಎಂದಾಗಿದ್ದರೂ, ಹೊಸ ರೂಪದ ಜೊತೆ ಹಳೆಯ ರೂಪವೂ ಬಳಕೆಯಲ್ಲಿತ್ತು ಎಂದು ಹೇಳಬೇಕಾಗುತ್ತದೆ. 'ಉದಯವುರ'ವು ಮುಂದೆ 'ಉದಯಾವರ' ಎಂದಾಯ್ತು.

ಗಂಗಪುರ, ಇಂದವುರ, ಉದಯಪುರ (ಉದಯವುರ) ಇವೆಲ್ಲವೂ ಶಾಸನಕಾರರು ಕಲ್ಪಿಸಿದ ರೂಪಗಳೆಂದು ಹೇಳಲು ಧೈರ್ಯ ಸಾಲದು. ಅಲ್ಲದೆ, '–ವುರ'

ಎಲ್ಲ ಕಡೆಯೂ '–ವರ' ಆಗಬೇಕಾಗಿಲ್ಲವೆಂದೂ, ಕೆಲವೆಡೆಯಾದರೂ ಅದು '–ಊರ್' ಆಗಬಹುದೆಂದೂ ನಾನು ತೋರಿಸಿದ್ದೇನೆ. ಉದಾ : ಸಿರಿವುರ>ಸಿರೂರ್; ಹೊಸವುರ>ಹೊಸೂರ್ (ಧಾರವಾಡ ಜಿಲ್ಲೆ). 'ಸಿರಿವುರ' ಎಂಬುದು ಶಾಸನಕಾರ ನಿಂದ ಕಲ್ಪಿತರೂಪವೆಂದು ಹೇಳುವುದಾದರೆ, ಆಗ ಶಾಸನಕಾರ 'ಸಿರಿಪುರ'ವೆಂದೇ ಸ್ಪಷ್ಟ ವಾಗಿ ಕಲ್ಪಿಸುತ್ತಿದ್ದ. ಆದ್ದರಿಂದ –ವರ/–ವಾರಗಳು '–ಪುರ'ದಿಂದ ಬಂದಿವೆ ಯೆಂಬ ನನ್ನ ವಾದದ ಬಗ್ಗೆ ನನಗೆ ಅನುಮಾನವೇ ಉಳಿದಿಲ್ಲ. ಸ್ಥಳನಾಮದ ಅಧ್ಯಯನದ ಪ್ರಾಥಮಿಕ ತತ್ವವೆಂದರೆ, ಒಂದು ಊರಿನ ಹೆಸರಿನ ನಿಷ್ಪತ್ತಿ ಹೇಳಲು ಆ ಹೆಸರಿನ ಎಷ್ಟು ಪ್ರಾಚೀನ ರೂಪ ದೊರಕಲು ಸಾಧ್ಯವೋ ಅದನ್ನು ಕಂಡು ಕೊಳ್ಳುವುದು. ನನಗೆ ತಿಳಿದ ಮಟ್ಟಿಗೆ ಈ ದಿನ –ವರ/–ವಾರದಿಂದ ಕೊನೆಯಾಗುವ ಯಾವ ಊರಿನ ಪ್ರಾಚೀನ ರೂಪದಲ್ಲೂ ಅಂತ್ಯದಲ್ಲಿ '–ಆಹಾರ' ಎಂಬುದು ದೊರ ಕುವುದಿಲ್ಲ.

ಅಷ್ಟೇ ಅಲ್ಲ, '–ಆಹಾರ' ಎಂದು ಕೊನೆಯಾಗುವ ಪ್ರಾಚೀನ ಕರ್ನಾಟಕದ ಯಾವುದೇ ಊರಿನ ಹೆಸರನ್ನೂ ಕಲಬುರ್ಗಿಯವರು ಕೊಟ್ಟಿಲ್ಲ.

ಈಗ 'ಆಹಾರ' ಶಬ್ದಕ್ಕೆ ಬರುತ್ತೇನೆ. ಸಂಸ್ಕೃತದಲ್ಲಿ ಈ ಶಬ್ದಕ್ಕೆ 'ಪ್ರದೇಶ' ಎಂಬರ್ಥವಿದ್ದರೂ ಅದು ಪ್ರಸಿದ್ಧವಾದುದಲ್ಲ. ಕರ್ನಾಟಕದಲ್ಲಂತೂ ಆ ಶಬ್ದ ಆ ಅರ್ಥದಲ್ಲಿ ಇರಲೇ ಇಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟಿನ ಮೊದಲ ಸಂಪುಟದಲ್ಲಿ ಪ್ರದೇಶ ವಾಚಕವಾದ 'ಆಹಾರ' ಶಬ್ದವೇ ದಾಖಲಾಗಿಲ್ಲ. ಮೋನಿಯರ್ ವಿಲಿಯಂಸ್ ಅವರ ಸಂಸ್ಕೃತ ನಿಘಂಟಿನಲ್ಲೂ ಆ ಪದ ಇಲ್ಲ !

'ಅಗ್ರಹಾರ' ಎಂಬುದು ಮೂಲತಃ 'ಅಗ್ರ+ಆಹಾರ' ಎಂದು ಬಿಡಿಸಿ ಮೊದಲ ಬಾರಿ ನಿಷ್ಪತ್ತಿ ಹೇಳಿದ ಡಿ. ಎಲ್. ನರಸಿಂಹಾಚಾರ್ಯರೇ ತಮ್ಮ ವಾದವನ್ನು ಕೈಬಿಟ್ಟಂತೆ ತೋರುತ್ತದೆ. ಏಕೆಂದರೆ ಆ ಲೇಖನ ಪ್ರಕಟವಾದ ಬಳಿಕ, ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ ಕನ್ನಡ ನಿಘಂಟಿನಲ್ಲಿ (ಪ್ರಥಮ ಸಂಪುಟ) 'ಅಗ್ರಹಾರ' ಎಂಬ ರೂಪವನ್ನೇ ಒಪ್ಪಿಕೊಳ್ಳಲಾಗಿದೆ. 'ಅಗ್ರಾಹಾರ' ಎಂಬುದು ಮೂಲರೂಪವಾಗಿದ್ದರೆ, ಸಂಸ್ಕೃತದಲ್ಲಾದರೂ ಅದು ಉಳಿದುಕೊಳ್ಳಬೇಕಾಗಿತ್ತು. 'ಅಗ್ರಾಹಾರ' ಎನ್ನುವ ರೂಪ ಶಾಸನಗಳಲ್ಲಿ ಅಪಲಿಖಿತವಾಗಿ, ತಪ್ಪು ಗ್ರಹಿಕೆಯಿಂದಾಗಿ ಕಾಣಿಸಿಕೊಳ್ಳುತ್ತದೆ ; ಅದೇ ಮೂಲ ರೂಪವಲ್ಲ, ಆ ಕಾರಣ, '–ಆಹಾರ' ಶಬ್ದ ವನ್ನು 'ಅಗ್ರಹಾರ'ದಲ್ಲಿ ಕಾಣಬಹುದೆಂಬ ಕಲಬುರ್ಗಿಯವರ ವಾದಕ್ಕೆ ಸ್ವಲ್ಪವೂ ಎಡೆಯಿಲ್ಲ.

'—ಆಹಾರ' ಕೊನೆಯಲ್ಲಿರುವ 'ತ್ರೇಯಣಾಹಾರ' ಇತ್ಯಾದಿ ಊರುಗಳ ಹೆಸರುಗಳು ಕರ್ನಾಟಕದವಲ್ಲ, ಮತ್ತು ಕರ್ನಾಟಕದಲ್ಲಿ ಅಂತಹ ಒಂದಾದರೂ

ಪ್ರಾಚೀನ ಹೆಸರುಗಳು ದೊರಕಿಲ್ಲ. ಮತ್ತು, '—ಆಹಾರ'ವೇ —ವರ/-ವಾರ ಎನ್ನುವಾಗ, ಪು. 149ರ ಅಡಿ ಟಿಪ್ಪಣಿಯಲ್ಲಿ ಹ್ > ವ್ ಆಗುತ್ತದೆ ಎಂಬುದರ ಸಮರ್ಥನೆಗೆ ಅರ + ಪಾವು → ಅರವಾವು ಎಂಬ ಉದಾಹರಣೆ ಕೊಟ್ಟಿದ್ದಾರೆ. ಇಲ್ಲಿ ಪ್ > ವ್ ಆಗುತ್ತದೆಯೇ ಹೊರತು, ಹ್ > ವ್ ಆಗುವುದಿಲ್ಲ. 'ಪ್' ಮತ್ತು 'ವ್' ಗಳೆರಡೂ ಓಷ್ಠ್ಯ ಸ್ವನಗಳಾದ್ದರಿಂದ ಪ್ > ವ್ ಆಗುವ ಸಾಧ್ಯತೆಗಳುಂಟು. ಆದರೆ, ಹ್ > ವ್ ಆಗುವುದಕ್ಕೆ ಉದಾಹರಣೆಗಳು ಇಲ್ಲದಿರುವಾಗ, –'ಆಹಾರ' ವೇ '–ವಾರ' ಆಯಿತು ಎಂದು ವಾದಿಸುವುದು ತೀರ ಹಗುರವಾಗುತ್ತದೆ. 'ಸಿರಿವಾರ'ದಲ್ಲಿ, 'ಕಾಂಜೀವರಂ' ನಲ್ಲಿ ಅಂತ್ಯ '–ಆಹಾರ' ಇದ್ದರೆ, ಸಿರಿ + ಆಹಾರ, ಕಾಂಜಿ (<ಕಂಚಿ) + ಆಹಾರಗಳು ಸಂಧಿಯಲ್ಲಿ ಯಾವ ರೂಪಗಳನ್ನು ತಾಳಬಹುದು ? ಅವು ಸಿರಿವಾರ, ಕಾಂಜೀವರಂ ಆಗಲು ಸಾಧ್ಯವೇ ಇಲ್ಲ.

ಡಾ. ಕಲಬುರ್ಗಿಯವರ –ಹರ, –ಯರ ಕೊನೆಯಲ್ಲಿರುವ ಊರ ಹೆಸರುಗಳು ದೊರಕಿಲ್ಲವೆಂದೂ, –ಹಾರ, –ಯಾರ ಕೊನೆಯಲ್ಲಿರುವ ಊರುಗಳ ಹೆಸರುಗಳು ದೊರಕಿವೆಯೆಂದು, ಗಣಿಹಾರ, ಕೋಲ್ಹಾರ, ಭೂಯಾರ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಈ ಹೆಸರುಗಳ ಪ್ರಾಚೀನ ರೂಪಗಳು ದೊರಕುವವರೆಗೆ ಇವುಗಳ ಅಂತ್ಯ ಪ್ರತ್ಯಯಗಳ ಬಗ್ಗೆ ಏನನ್ನು ಹೇಳಿದರೂ ತಪ್ಪಾಗುತ್ತದೆ. 'ಗಣಿಹಾರ'ದ ಪೂರ್ವಾರ್ಧ 'ಗಣಿ' ಆಗಿದ್ದರೆ, 'ಗಣಿ + ಆಹಾರ' ಏನಾಗಬಹುದು ? 'ಗಣಿಹಾರ' ರೂಪವಂತೂ ಸಿದ್ಧಿಸುವುದಿಲ್ಲ. '–ಆಹಾರ' ದಿಂದ ಸ್ಪಷ್ಟವಾಗಿ ಕೊನೆಯಾಗುವ ಕರ್ನಾಟಕದ ಹಲವಾದರೂ, ಕೊನೆಯ ಪಕ್ಷ ಕೆಲವಾದರೂ ಹಿಂದಿನ ಹೆಸರುಗಳನ್ನು ಕೊಡದೆ, ಅವು ಈಗ –ವರ/–ವಾರದಿಂದ ಕೊನೆಯಾಗಿದೆ ಎಂದು ತೋರಿಸಿಕೊಡದೆ ಡಾ. ಕಲಬುರ್ಗಿಯವರ ವಾದಕ್ಕೆ ತೂಕ ಬರುವುದಿಲ್ಲ.

ವಾಸ್ತವ ಸಂಗತಿಯೆಂದರೆ, – ವರ/ – ವಾರಗಳು '-ಆಹಾರ' ದಿಂದ ಬಂದಿರಬಹುದೇ ಎಂಬ ಸಾಧ್ಯತೆಯನ್ನು ನಾನು ಪರಿಶೀಲಿಸಿ, ಅದನ್ನು ಹಿಂದೆಯೇ ಕೈಬಿಟ್ಟಿದ್ದೆ (ಡಿ. ಎಲ್. ಎನ್. ಅವರು 'ಅಗ್ರಹಾರ'ವನ್ನು ಅಗ್ರ + ಆಹಾರ ಎಂದು ಬಿಡಿಸಿರುವುದು ನನ್ನ ಮನಸ್ಸಿನಲ್ಲಿತ್ತು). "ಮೃಗಧಣಿಕಾಹಾರ – ವಿಷಯಂ" ಎಂಬುದು ಹಿಮಾಲಯ ಪರ್ವತ ಪಂಕ್ತಿಯ ಸಮೀಪದ ನಾಡು ಎಂಬುದನ್ನು ನಾನು ಗುರುತಿಸಿದ್ದೇನೆ (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 1979. ಪು. 139). ಮತ್ತು ಅಲ್ಲೇ (ಪು. 209), 'ಅಗ್ರಹಾರ' ಎಂಬ ರೂಪವನ್ನು ನಾನು ಒಪ್ಪಿಕೊಂಡು ಡಿ. ಎಲ್. ಎನ್. ಅವರನ್ನು ಉಲ್ಲೇಖಿಸಿದ್ದೇನೆ. ಎಂದರೆ, '–ಆಹಾರ' ಕೊನೆಯಲ್ಲಿ ಬರುವ ರೂಪಗಳ ವಿಷಯ ನನಗೆ ಗೊತ್ತಿತ್ತು ಎಂಬುದನ್ನು ಉಲ್ಲೇಖಿಸಲಿಕ್ಕೆ ಮಾತ್ರ ಈ ಮಾತುಗಳನ್ನು ಹೇಳಬೇಕಾಯಿತು. ನಾನು ನನ್ನ

ಲೇಖನ ಬರೆಯುವ ಮುನ್ನ ಸಾಧ್ಯತೆ ಯೋಚಿಸಿ, ಆ ಸಾಧ್ಯತೆ ಉಲ್ಲೇಖಾರ್ಹವೂ ಅಲ್ಲ ಎಂದು ಕೈ ಬಿಟ್ಟದ್ದನ್ನೇ ಡಾ. ಕಲಬುರ್ಗಿಯವರು ಎತ್ತಿ ಹಿಡಿಯಲು ಪ್ರಯತ್ನಿಸಿದ್ದಾರೆ.

'ಪುರ' ವು – ವರ / – ವಾರ ಆಗುವ ರೀತಿಯ ಬಗ್ಗೆ ನನ್ನ ಈಚಿನ ವಿವರಣೆ ಹೀಗಿದೆ. ಹ್ರಸ್ವದಿಂದ ಕೊನೆಯಾಗುವ ನಿರ್ದಿಷ್ಟಗಳ (specifics) ಮುಂದೆ '–ಪುರ' ಬಂದಾಗ, ಉಚ್ಚಾರದಲ್ಲಿ ಆ ಅಂತ್ಯ ಹ್ರಸ್ವವು ಕೆಲವು ಸಾರಿ ದೀರ್ಘವಾಗುತ್ತದೆ.

ಉದಾ : ರಾಜ + ಪುರ → ರಾಜಾಪುರ
ಮಲ್ಲ + ಪುರ → ಮಲ್ಲಾಪುರ
ಕೃಷ್ಣ + ಪುರ → ಕೃಷ್ಣಾಪುರ
ಕೇರಳ + ಪುರ → ಕೇರಳಾಪುರ

'–ಪಟ್ಟಣ' ಅಂತ್ಯದಲ್ಲಿ ಬಂದರೂ ಹ್ರಸ್ವಾಂತವಾದ ನಿರ್ದಿಷ್ಟವು ದೀರ್ಘಾಂತ ವಾಗುವ ಸಂಭವ ಉಂಟು. ಉದಾ :

ಬಸವ + ಪಟ್ಟಣ → ಬಸವಾಪಟ್ಟಣ.

ಈ ಉದಾಹರಣೆಗಳಲ್ಲಿ ನಿರ್ದಿಷ್ಟದ ಮುಂದೆ–'ನ'– ದಂತಹ ಪ್ರತ್ಯಯ ಒಂದು ಲೋಪವಾಗಿ, ಆ ಲೋಪವನ್ನು ಸರಿದೂಗಲು ಅದರ ಹಿಂದಿನ ಸ್ವರ ದೀರ್ಘ ವಾಯಿತು ಎಂಬ ವಿವರಣೆಯನ್ನು ಯಾರಾದರೂ ಕೊಟ್ಟರೂ, ಇಲ್ಲಿ ಪ್ರಸ್ತುತ ವಿಷಯವೆಂದರೆ '–ಪುರ'ದ ಹಿಂದಿನ ಸ್ವರ ದೀರ್ಘವಾಗುವ ಪ್ರವೃತ್ತಿಯನ್ನು ಹೊಂದಿರುವುದು. ಸು. 700 ರ ಶಾಸನಗಳಲ್ಲೇ 'ಉದಯ ಪುರ' ಎಂಬುದು 'ಉದಯಾಪುರ' ಎಂಬ ರೂಪದಲ್ಲಿ ದೊರಕುವುದು ಗಮನಾರ್ಹ. (ಅಡಿಟಿಪ್ಪಣಿ 2 ನೋಡಿ).

ಈ ಹಿನ್ನೆಲೆಯಲ್ಲಿ ನೋಡಿದಾಗ, '–ಪುರ'ದಿಂದ —ವರ/—ವಾರ ಬಂದಿರುವುದನ್ನು ಹೀಗೆ ತೋರಿಸಬಹುದು.

ಗಂಗಪುರ → ಗಂಗಾಪುರ (ಜನರ ಉಚ್ಚಾರದಲ್ಲಿ)
(ಅಥವಾ, ಗಂಗಾಪುರ → ಗಂಗಪುರ)
ಗಂಗಾಪುರ → ಗಂಗಾವುರ (-ಪ್- > -ವ್)
(ಅಥವಾ, ಗಂಗವುರ → ಗಂಗಾವುರ)
ಗಂಗಾವುರ → ಗಂಗಾವರ (ಸಮರೂಪಧಾರಣೆ. 'ವು' ಅಕ್ಷರದ ಹಿಂದೆ ಅಥವಾ / ಮತ್ತು ಮುಂದೆ ಬಂದಿರುವ 'ಅ' ಸ್ವರದ ಪ್ರಭಾವದಿಂದ 'ವು' ಎಂಬುದು 'ವ' ಆಗುತ್ತದೆ.)
ಗಂಗಾವರ → ಗಂಗವಾರ (ಅಕ್ಷರಪಲ್ಲಟ)

ಮೇಲಿನದು, ನಡೆದಿರುವ ಸ್ವನವ್ಯತ್ಯಾಸಗಳ ಸಾಧ್ಯತೆಗಳನ್ನು ತೋರಿಸುವ ಒಂದು ಮಾದರಿ (typical) ಉದಾಹರಣೆ. ಆ ಎಲ್ಲ ಸ್ವನವ್ಯತ್ಯಾಸಗಳಿಗೆ ಆಧಾರಗಳು ಉಂಟು ಈ ಟಿಪ್ಪಣಿಯಲ್ಲಿ ಹಿಂದೆ ತೋರಿಸಿದ್ದೇನೆ.

ವಾರದಿಂದ ಕೊನೆಯಾಗುವ ಹೆಸರುಗಳು ತಮಿಳುನಾಡಿನಲ್ಲಿ ಉಂಟು. ಆಂಧ್ರ ದಲ್ಲಂತೂ ಇವು ಇನ್ನೂ ಹೆಚ್ಚು.[2] '-ಆಹಾರ'ದಿಂದ —ವರ ಬಂದುವೆಂದು ತೋರಿಸುವಾಗ ಆಂಧ್ರ, ತಮಿಳುನಾಡುಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ತೆಲುಗು, ತಮಿಳುಗಳಲ್ಲೂ 'ಆಹಾರ' (= ಪ್ರದೇಶ, ಊರು) ಶಬ್ದವನ್ನು ತೋರಿಸಬೇಕು.

ಅಡಿಟಿಪ್ಪಣಿಗಳು

1. ಈಗಿನ ಕಂಚಿಗೆ ಈಗಲೂ ಬರಹಗಳಲ್ಲಿ 'ಕಾಂಜೀಪುರ' ಎಂಬ ಹೆಸರು ಬಳಕೆಯಾದರೆ, ವ್ಯವಹಾರದಲ್ಲಿ 'ಕಾಂಜೀವರ' ಎಂಬ ಹೆಸರು ಬಳಕೆಯಲ್ಲಿದೆ ಎಂದು ತಮಿಳು ನಾಡಿನ ಮಿತ್ರರು ತಿಳಿಸುತ್ತಾರೆ. —'ವರ' ಎಂಬುದರ ಮೂಲ '—ಪುರ' ಎಂಬುದು ಇಲ್ಲಿ ಸ್ಪಷ್ಟ.

2. ನನ್ನ -ವರಂ/ –ವಾರಂ ಮೇಲಿನ ಲೇಖನ 'ಸಾಧನೆ'ಯಲ್ಲಿ ಪ್ರಕಟವಾದ ಬಳಿಕ ಡಾ॥ ಕೇತು ವಿಶ್ವನಾಥ ರೆಡ್ಡಿ ಅವರ 'ಕಡಪ ಊರ್ಲ ಪೇರ್ಲು' ಎಂಬ ತೆಲುಗು ನಿಬಂಧ ನನ್ನ ಗಮನಕ್ಕೆ ಬಂದಿತು. (ಪ್ರ: ನವ್ಯ ಪರಿಶೋಧಕ ಪ್ರಚುರಣಲು, ತಿರುಪತಿ, 1976). ಅದರಲ್ಲಿ ಅವರು ಆಂಧ್ರ ಪ್ರದೇಶದ ಕಡಪ ಜಿಲ್ಲೆಯಲ್ಲಿನ '–ವರಂ' ಎಂದು ಕೊನೆಯಾಗುವ ಹೆಸರುಗಳೆಲ್ಲ '-ಪುರಂ' ಎಂಬುದರಿಂದ ಬಂದಿವೆಯೆಂದು ಸ್ಪಷ್ಟವಾಗಿ ಹೇಳುತ್ತಾರೆ. 'ಪುರ' ಎನ್ನುವುದು '–ಪೂರ್' ಎಂಬ ರೂಪದಲ್ಲಿ ಕ್ರಿ.ಶ. ಐದನೇ ಶತಮಾನದಲ್ಲಿಯೇ ದೊರಕುತ್ತದೆ ಎನ್ನುತ್ತಾರೆ. ಉದಾ : ಕುರುಪೂರ್. '–ಪುರಂ' ಬಂದಾಗ, ಅದರ ಹಿಂದಿನ ಸ್ವರ ದೀರ್ಘವಾಗುವ ಉದಾಹರಣೆಗಳು ಈಗಲೂ ಉಂಟು. ಉದಾ : ಕೊತ್ತ ತಿರುವೆಂಗಲಾಪುರ. (ಕಡಪ ಊರ್ಲ ಪೇರ್ಲು, ಪು. 498). '–ಪುರ' ದಿಂದ ಕೊನೆಯಾಗುವ ಊರುಗಳ ಹೆಸರಿನ ಪೂರ್ವಾರ್ಧದ ಅಂತ್ಯಸ್ವರ ದೀರ್ಘವಾಗುವುದಕ್ಕೆ ಕರ್ನಾಟಕದಲ್ಲೂ ನಿದರ್ಶನಗಳು ದೊರಕುವುದನ್ನು ಮೇಲೆ ನೋಡಿದ್ದೇವೆ.

ಆಂಧ್ರದಲ್ಲಿ '-ವರ' ಭಾಗದ ಹಿಂದಿನ ದೀರ್ಘ ಗ್ರಾಮ್ಯರ ಆಡು ಮಾತಿನಲ್ಲುಂಟು ; ಶಿಷ್ಟರ ಭಾಷೆಯಲ್ಲಿ ಅದು ಹ್ರಸ್ವವಾಗಿಯೇ ಇರುತ್ತದೆ. ಉದಾ : ಗ್ರಾಮ್ಯದಲ್ಲಿ ಧರ್ಮಾವರಂ, ಶಿಷ್ಟರ ಮಾತಿನಲ್ಲಿ 'ಧರ್ಮವರಂ'. '-ವಾರ' ಎಂದು ಕೊನೆಯಾಗುವ ಹೆಸರುಗಳು ಕರ್ನಾಟಕಕ್ಕೆ ವಿಶಿಷ್ಟ ವೆಂದು ತೋರುತ್ತದೆ. (ಪಂಪನಿಗೆ ಅರಿಕೇಸರಿ ಕೊಟ್ಟ 'ಧರ್ಮಪುರ' ಎಂಬ ಊರನ್ನು ನಾವಿನ್ನೂ ಗುರುತಿಸಬೇಕಾಗಿದೆ).

"-ಪುರ > -ವರ, -ವಾರ"ದ ಬಗ್ಗೆ ಹೆಚ್ಚಿನ ಆಧಾರಗಳು

ಡಾ. ಆರ್. ಎನ್. ಗುರುವ ಅವರು "ತರ್ದವಾಡಿ ನಾಡು" ಎಂಬ ಪುಟ್ಟ, ಆದರೆ ಪ್ರೌಢ ಪುಸ್ತಕದಲ್ಲಿ (ಪ್ರ : ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ) ಕೊಟ್ಟಿರುವ ಮಾಹಿತಿ '-ವರ/ -ವಾರ' ಎಂಬ ಸ್ಥಳನಾಮ ವಾರ್ಗಿಕವು '-ಪುರ' ದಿಂದ ಬಂದಿದೆಯೆಂಬ ನನ್ನ ವಾದಕ್ಕೆ ಹೆಚ್ಚಿನ ಪುಷ್ಟಿಯನ್ನು ಒದಗಿಸುತ್ತದೆ.

1) ವಿಜಾಪುರ ತಾಲ್ಲೂಕಿನ 'ಕನ್ನೂರು' ಎಂಬ ಗ್ರಾಮದ ಹಿಂದಿನ ಹೆಸರು ಕನ್ನವುರಿ. ಪುಟ. 7. 'ಕನ್ನವುರಿ'ಯು ಸ್ಪಷ್ಟವಾಗಿ 'ಕನ್ನ + ಪುರಿ'.

2) ಬಾಗೆವಾಡಿ ತಾಲೂಕಿನ ದಿಂಡವಾರ ಎಂಬ ಈಗಿನ ಊರಿನ ಹಿಂದಿನ ಹೆಸರು 'ದಿಂಡಾಪುರ' (ಪು. 14). 'ದಿಂಡಾಪುರ'ದ ಅಂತ್ಯ ಭಾಗವು '-ಪುರ'ದಿಂದ ಬಂದಿದೆಯೆಂಬುದು ಸ್ಪಷ್ಟ.

3) ಈಗಿನ ಯಾಳವಾರ ಎಂಬ ಊರಿನ ಹಿಂದಿನ ಹೆಸರು 'ಏಳಾಪುರ' (ಪು. 75)

4) ಇಂದಿನ ಅಲೂರಿನ ಹಿಂದಿನ ರೂಪ 'ಅಳುಹುರ' (ಪು. 99).

5) ಇಂದಿನ ನಾಗೂರಿನ ಹಿಂದಿನ ರೂಪ 'ನಾಗಹುರ' (ಪು. 13).

ಕನ್ನಡದ ಬಹುಸಂಖ್ಯೆಯ ಊರಿನ ಹೆಸರುಗಳು '-ಊರು' ಎಂದು ಕೊನೆಯಾಗುತ್ತವೆ, ದುತ್ತು ಅಂತ್ಯ – 'ಊರು' ಎಂಬುದು ಸಾಮಾನ್ಯವಾಗಿ ದ್ರಾವಿಡ ಭಾಷೆಯ ಗ್ರಾಮ ಎಂದರ್ಥದ ಪದವೇ ಆಗಿದೆ. ಆದರೆ, ವಿರಳವಾಗಿಯಾದರೂ ಸ್ಥಳನಾಮಗಳ ಅಂತ್ಯದ 'ಊರು' ಎಂಬುದು ಸಂಸ್ಕೃತದ '-ಪುರ' ದಿಂದ ಬಂದಿದೆಯೆಂಬುವನ್ನು ಶಾಸನಗಳಿಂದ ನಾನು ಬೇರೆ ಕಡೆ ತೋರಿಸಿದ್ದೇನೆ. ಆದ್ದರಿಂದ ಸಂಸ್ಕೃತದ 'ಪುರ'ಕ್ಕೆ ಕನ್ನಡ ಸ್ಥಳ ನಾಮಗಳಲ್ಲಿ ಇಷ್ಟು ಬದಲಾವಣೆಗಳಾಗುತ್ತವೆ.

-ಪುರ →
- -ಪುರ
- -ವುರ > -ವರ/ -ವಾರ (ಉದಾ : ಮೇಲಿನ 2,3).
- -ವುರ/-ಹುರ > -ಊರು (ಉದಾ ; ಮೇಲಿನ 1,4,5).

ಸ್ಥಳನಾಮಗಳ ಅಂತ್ಯದ 'ಪುರ'ವು ಕೆಲವೆಡೆಗಳಲ್ಲಾದರೂ '-ಊರು' ಎಂದಾಗಲೂ, ಅಚ್ಚ ದ್ರಾವಿಡದ '-ಊರು' ವಾರ್ಗಿಕದ ಬಾಹುಳ್ಯ ಮತ್ತು ಸೆಳೆತ ಎಂಬುದು ಸ್ಪಷ್ಟವಾಗಿದೆ.

'ಲಾವಣಿ' ಒಂದು ಟಿಪ್ಪಣಿ

ರಾಜಗೋಪಾಲ ಕಂ. ವೆಂ.

ಕಾಳಿದಾಸನ ಕಾಲಕ್ಕೆ ಲಾವಣ್ಯ ಎಂದರೆ ಸೌಂದರ್ಯ ಮತ್ತು ಉಪ್ಪಿನಿಂದ ಕೂಡಿದ ಎಂಬ ಅರ್ಥಗಳಿದ್ದಂತೆ ತಿಳಿಯಬರುತ್ತದೆ. ಅದೇ ಲಾವಣಿಗ ಎಂದರೆ ಉಪ್ಪಿನಲ್ಲಿ ವ್ಯಾಪಾರ ಮಾಡುವಾತ ಎಂದಿರಬೇಕು. ವಿಜಯನಗರದ ಸಾಮ್ರಾಜ್ಯದಲ್ಲಿ ಎರಡನೇ ಹರಿಹರನ ಕಾಲದಲ್ಲಿದ್ದ ಇರುಗಪ್ಪ ದಂಡಾಧಿನಾಥನು ರಚಿಸಿರುವ ಸಂಸ್ಕೃತ ನಿಘಂಟಿನಲ್ಲಿ (ಸು. ಕ್ರಿ.ಶ. 1450) ಲಾವಣ್ಯಕ್ಕೆ ಸೌಂದರ್ಯವೆಂಬ ಅರ್ಥವೇ ಇದೆ; ಲಾವಣಿ ಎಂಬ ಪದವೇ ಸಂಸ್ಕೃತದಲ್ಲಿಲ್ಲ ಎಂಬುದನ್ನು ಮರೆಯಬಾರದು.

ನಮ್ಮ ವಿಜಯನಗರ ಸಾಮ್ರಾಜ್ಯದ ಜತೆಗೆ ಬಹಮನೀ ರಾಜ್ಯವೂ ಹುಟ್ಟಿದ್ದು ಸು. ಕ್ರಿ.ಶ. 1520ರಲ್ಲಿ ಒಡೆದು ಅಹಮದ್‌ನಗರ, ಬಿದರೆ, ಬಿರಾರ್, ಬಿಜಾಪುರ ಮತ್ತು ಗೋಲ್ಕೊಂಡ ಎಂಬ ಐದು ರಾಜ್ಯಗಳು ಪ್ರಬಲವಾಗಿ ಕಡೆಗೆ ವಿಜಯನಗರದ ಪತನಕ್ಕೂ ಕಾರಣವಾದವು. ಈ ರಾಜರುಗಳಿಗೆ ಇರಾನಿನ ಸಂಬಂಧವಿದ್ದುದೂ ಪರ್ಷಿಯನ್ ಮತ್ತು ಉರ್ದು ಭಾಷೆಗಳಿಗೆ ಇವರ ಉತ್ತೇಜನ ದೊರಕಿದುದೂ ಸಹಜವಾಗಿದೆ. ದಕ್ಷಿಣಭಾರತದಲ್ಲಿನ ಇವರ ಪ್ರಾಬಲ್ಯವನ್ನು ಅಡಗಿಸಲು ಷಾಹಜಹಾನ್ ಮತ್ತು ಔರಂಗಜೇಬ್ ಪ್ರಯತ್ನಿಸಿದರು. ಇದರ ಪರಿಣಾಮವಾಗಿ ಮೊಗಲ್ ಸೇನೆಯು ಎಲ್ಲೋರದ ಗುಹೆಗಳಿಗೆ ನೆಲ್ಲಾ ತುರುಕಿ ಬೆಂಕಿಹೊತ್ತಿಸಿದ ಪರಿಣಾಮವಾಗಿ ಅಲ್ಲಿಯ ಭಿತ್ತಿಚಿತ್ರಗಳು ಮಾಸಿಹೋದವು. ಅಲ್ಲದೆ ಅಲ್ಲಿಗೆ ಸಮೀಪದಲ್ಲಿ (ಔರಂಗಾಬಾದ್) ಔರಂಗಜೇಬನು ಮಡಿದಿರುವ ಗುರುತಾಗಿ ಅವನ ಸಮಾಧಿಯೂ ಇದೆ.

ಹೀಗೆ ಮುಸಲ್ಮಾನರ ಪ್ರಾಬಲ್ಯವನ್ನು ಶಿವಾಜಿಯು ತನ್ನ ಗರಿಲ್ಲಾ ಪಡೆಗಳ ಮೂಲಕ ಅಡಗಿಸಲು ಯತ್ನಿಸಿದ ಮತ್ತು 1650 ರ ವೇಳೆಗೆ ಮರಾಠಿ ಪದಪಾದಷಾಹಿಯನ್ನು ಸ್ಥಾಪಿಸಿದನು. ಈ ವೇಳೆಗೆ ಔರಂಗಜೇಬನು ಷಾಹೀರಾಜ್ಯಗಳನ್ನು ಒಂದೊಂದಾಗಿ ಗೆದ್ದು ಮರಾಠರನ್ನು ಮಾತ್ರವೇ ತನ್ನ ದಕ್ಷಿಣದ ಶತ್ರುಗಳನ್ನಾಗಿಸಿ ಹೆಣಗಿದನು. ಈ ಬಗೆಯ ಹಿನ್ನೆಲೆಯಲ್ಲಿ ಮಹಮದೀಯರ ಮತ ಮತ್ತು ಸೈನಿಕ ಶಿಬಿರಗಳ ಸಂಪರ್ಕದ ಒಂದು ಸೈನಿಕ ಸಂಸ್ಕೃತಿಯು ಜಾರಿಗೆ ಬಂದಿರಬೇಕು. ಇದರ ಫಲವಾಗಿಯೇ 'ಲಾವಣಿ' ಎಂಬ ಸಾಹಿತ್ಯ ಮತ್ತು ರೂಪವು ಕಾಣಿಸಿಕೊಂಡಿದೆ.

ಕ್ರಿ.ಶ. 15, 16, 17ನೇ ಶತಮಾನಗಳಲ್ಲಿ ಮುಹಮ್ಮದೀಯ ಪ್ರಾಬಲ್ಯದಿಂದ 'ಉರ್ದು' (ಎಂದರೆ ಸೈನಿಕರ ಭಾಷೆ ಎಂದು ಅರ್ಥ ಮಾಡಿದ್ದಾರೆ) ರೂಪ ತಾಳಿತು. ಇದರಲ್ಲಿ ಪರ್ಷಿಯನ್ ಪದಗಳು ಹೇರಳವಾಗಿ ಸೇರಿಕೊಂಡಿವೆ. 'ಲಾವಣಿ'ಯೂ ಅದಕ್ಕೆ ಹೊಂದಿದ ಪದಗಳೂ ಹೀಗೆಯೇ ಇವೆ. 'ಲಾವಣ್ಯ'ದಂಥ ಶುದ್ಧ ಸಂಸ್ಕೃತ ಪದವೂ ಸೇರಿರಬಹುದು. ಇದನ್ನೇ ಅಥವಾ ಈ ಕಲಬೆರಕೆಯನ್ನೇ 'ಹಿಂದೂಸ್ತಾನಿ' ಎಂದಿದ್ದಾರೆ. ಇದರಲ್ಲಿ ಪರ್ಷಿಯನ್ ಭಾಷೆಯ ಲಿಪಿ (ಅರಾಬಿಕ್) ಬಳಕೆಯಲ್ಲಿದೆ. ಒಟ್ಟಿನಲ್ಲಿ ತುರ್ಕಿ, ಇರಾನಿ, ಮೊಗಲಾಯ ಹೀಗೆ ಮುಹಮ್ಮದೀಯ ಬೇರೆಬೇರೆ ದೇಶಿಯರ ಬೆರಕೆಯನ್ನು ದಕ್ಷಿಣಭಾರತದಲ್ಲಿ ಕಾಣುತ್ತೇವೆ. ಆದುದರಿಂದಲೇ ಮೈಸೂರಿನಲ್ಲಿಯೂ ಇವರು ಪ್ರಬಲರಾದರು. ಹೈದರಾಲಿ ಮತ್ತು ಇವರ ಸೇನಾಧಿಪತಿಗಳು ಹಿಂದೂ ರಾಜರಿಗೆ ಬಲಗೈಯಾಗಿ ಇದ್ದುದೂ ಕಂಡುಬರುತ್ತದೆ. ಅಂದರೆ ಇವರಲ್ಲಿ ಮುಖ್ಯವಾಗಿ ಒಂದು ಸೈನಿಕ ಸಂಸ್ಕೃತಿಗೇ ಒಳ್ಳೆಯ ಅವಕಾಶ ದೊರಕಿದ್ದಿರಬೇಕೆಂಬುದು ಖಚಿತವಾಗುತ್ತದೆ.

ಈ ಹಿನ್ನೆಲೆಯಲ್ಲಿ 'ಲಾವಣಿ'ಯನ್ನು ಪರಿಶೀಲಿಸಬಹುದು. ಇದರ ಜೊತೆಗೆ ಕಲ್ಗಿ–ತುರಾಯಿ, ಸವಾಲ್–ಜವಾಬ್, ಕರ್ಬಲ್, ರಿವಾಯಿತು, ಕವ್ವಾಲಿಸ್ ಅಲ್ಲದೆ ಲಾವಣಿಯಲ್ಲಿ ಕಂಡುಬರುವ 'ಶಾಹಿರಿ' 'ಚಾಲ್', 'ಉಡಾನ್' ಎಂಬ ಅಂಶಗಳನ್ನು ಅರಿತುಕೊಳ್ಳಬೇಕಾದರೆ ಹಿಂದೂಸ್ತಾನೀ ನಿಘಂಟು ನೆರವಾಗುತ್ತದೆ. ನಿಜಕ್ಕೂ ಲಾವಣಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳೆಲ್ಲವೂ ಹಿಂದೂಸ್ತಾನಿಯಲ್ಲಿ ಸಿಕ್ಕುತ್ತವೆ. ಅಂದರೆ ಖಚಿತವಾಗಿ ಕನ್ನಡ, ಮರಾಠಿ, ಹಿಂದಿ ಲಾವಣಿಗಳಿಗೆ ಹಿಂದೂಸ್ತಾನಿಯ ಸಾಹಿತ್ಯಕ ಪದ್ಧತಿಯು ಆಧಾರವಾಗಿರಬೇಕೆಂಬುದು ಸ್ಪಷ್ಟ. ಇಲ್ಲದಿದ್ದರೆ ಈ ಭಾಷೆಗಳಲ್ಲಿರುವ ಲಾವಣಿಗಳಿಗೆಲ್ಲಾ ಪಾರಿಭಾಷಿಕ ಸಾಮ್ಯತೆಯು ಇರುತ್ತಿರಲಿಲ್ಲ.

'ಲಾವಣಿ'ಯನ್ನು ಪರೀಕ್ಷಿಸುವಲ್ಲಿ 'ಕಲ್ಗಿ ಬಾಜ್' ಅಂದರೆ ಲಾವಣಿಯನ್ನು ಹಾಡುವ ಎರಡು ಪಕ್ಷಗಳಲ್ಲಿ ಒಂದು. ತುರಾಯಿ ಅಥವಾ ತುರುಹಿ ಅಂದರೆ ತುತ್ತೂರಿ, 'ಲಾವಣಿ ಬಾಜ್' ಎಂದರೆ ಲಾವಣಿಯನ್ನು ಹಾಡುವ ಅಥವಾ ರಚಿಸುವವನು. 'ಶಹರ್ ಆಶೂಬ್' ಅಂದರೆ ವಿನಾಶವಾದ ನಗರದ ಮೇಲೆ ರಚಿಸಿದ ಒಂದು ಪದ. ರಿವಾಯತ್ ಅಂದರೆ ಒಂದು ಕಥನಗೀತೆ. ಕರ್ಬಲ್ ಅಂದರೆ ಚರಮಗೀತೆ. ಅಲ್ಲದೆ ಲಾಹಿ (ಪರ್ಷಿಯನ್) ಅಂದರೆ ಸಕಲ ಸೈನಿಕ ಸಿಬ್ಬಂದಿ ಸಮೇತವಾಗಿ ಬೀಡುಬಿಟ್ಟಿರುವ ಸೈನ್ಯ. ಆದುದರಿಂದಲೇ ಲಾಹಿನಿ ಎಂಬುದು 'ಲಾವಣಿ'ಯಾಗಿದೆ. ಇದು ಇಂದಿಗೂ ತೋಂಡೀ ಸಂಪ್ರದಾಯಕ್ಕೆ ಸೇರುತ್ತದೆ. ಇದರ ಪ್ರಸಿದ್ಧಿಯಿಂದಾಗಿ ಅಚ್ಚು ಹಾಕಿಸಿದ್ದರೂ ಇದರ ಪದಗಳು ಅಂಥ ಕಟ್ಟನ್ನು ಮೀರಿ ಜೀವಂತವಾಗುತ್ತವೆ.

'ಲಾವಣಿ'ಯು, ನಿಜವಾದ ಆಧಾರವೆಂದರೆ 'ಡಪ್ಪು' ಎಂಬ ವಾದ್ಯ. ಇದು ನಮ್ಮ ದೇಶದ ಯಾವುದೇ ಧಾರ್ಮಿಕ ಸಂಸ್ಥೆಯಲ್ಲೂ ಬಳಕೆಯಾಗುವುದಿಲ್ಲ. ಆದರೆ ಮಹಮ್ಮದೀಯರಿಗೆ 'ರಿಚ್ಯುಯಲಿಸ್ಟಿಕ್' (ಧಾರ್ಮಿಕ) ಆದ ವಾದ್ಯವಾಗಿದೆ. ಉರುಸುಗಳು ಮತ್ತು ಹಬ್ಬಗಳಲ್ಲಿ ಅವರು ಇದನ್ನು ಬಳಸುತ್ತಾರೆ. 'ಲಾವಣಿ'ಯಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ 'ಶಾಹಿರಿ' (ಶಾಯಿರಿ ಅಲ್ಲ) ಗಮನಾರ್ಹವಾದ ಅರ್ಥಪೂರ್ಣವಾದ ಪ್ರಯೋಗವಾಗಿದೆ. ಇದು ಶಹರಿಗೆ ಸಂಬಂಧಿಸಿದ್ದು. ಷಾಹೀ ರಾಜ್ಯಗಳು ಐದು ಶಹರುಗಳನ್ನು ರಾಜಧಾನಿಗಳನ್ನಾಗಿ ಉಳ್ಳಂತವುಗಳಾಗಿದ್ದವು. ಆಗಾಗ 'ಕೀಶೋ ಷಾಹಿರೀ' ಎಂಬ ಪ್ರಯೋಗವು ಸ್ಪಷ್ಟವಾಗಿ ಎಚ್ಚರಿಸುತ್ತದೆ.

'ಲಾವಣಿ'ಯು ಮರಾಠಿಯಲ್ಲಿ 17ನೇ ಶತಮಾನದಲ್ಲಿ ಬಂದಿದೆ. ಅದರಲ್ಲೂ ಶಿವಾಜಿಯ ಸೈನಿಕರು ಸಂತೋಷವಾಗಿ ಇರುವಾಗ 'ಪೋವಾಡ' ಎನ್ನಿಸಿಕೊಂಡರೂ 'ಗೀಗಿಪದ' ಎನ್ನಿಸಿಕೊಂಡರೂ ಬಳಕೆಯಲ್ಲಿರುವುದಾಗಿದೆ. ಈ ಮರಾಠಿ ಪದಗಳಲ್ಲಿ ಕೂಡ ಮೇಲೆ ಹೇಳಿದ ಹಿಂದೂಸ್ತಾನಿ ಪದಗಳೇ ಮುಖ್ಯವಾಗಿವೆ. 'ಶಾಹಿರೀ' ಎಂಬುದು ಕೂಡ ಸ್ಪಷ್ಟವಾಗಿದೆ.

'ಲಾವಣಿ'ಯು ಒಂದು ರೂಪದಲ್ಲಿ ಅದು ಸೈನಿಕ ಸಿಬ್ಬಂದಿಯ ಖುಷಿಗಾಗಿ ಬಳಕೆಯಾಗುವಾಗ ಎರಡು ಆಯ್ದ ಪಂಗಡಗಳಲ್ಲಿ ಜರುಗುವ ಸವಾಲ್-ಜವಾಬ್ ಮಾದರಿಯನ್ನು ಪಡೆದಿರಬೇಕು. ಅಥವಾ ಹೆಣ್ಣು ಗಂಡಿನ ಗುಂಪುಗಳಾಗಿ 'ಕಲ್ಗಿ–ತುರಾ'ಗಳಾರಬೇಕು. ಹೀಗೆಯೇ 'ಸೋಲೋ' ರೂಪದಲ್ಲಿ ಕರ್ಬಲ್ ಮತ್ತು ರಿವಾಯತುಗಳಿರಬೇಕು. ಏಕೆಂದರೆ ಅವುಗಳೆಲ್ಲವೂ ಕನ್ನಡದಲ್ಲಿಯೂ ಇವೆ; ಮರಾಠಿ, ಹಿಂದಿಗಳಲ್ಲಿಯೂ ಇವೆ.

ಆದರೆ ಈ 'ಕಲ್ಗಿ–ತುರಾ' 'ಕರ್ಬಲ್' ಮತ್ತು 'ರಿವಾಯತು' ಎನ್ನಿಸಿಕೊಳ್ಳುವ (ಕನ್ನಡ) ಪದಗಳನ್ನೇ ಪರಿಶೀಲಿಸಿದರೂ ಕನ್ನಡ ಸಂಸ್ಕೃತಿಯ ಭಾಗಗಳಂತೆ ಕಂಡು ಬರುತ್ತವೆ. ಕಲ್ಗಿತುರಾಯ್, ಹರದೇಶಿ–ನಾಗೇಶಿಗಳ ಸವಾಲ್–ಜವಾಬ್ ಅಥವಾ ವಸ್ತುತಃ ಪ್ರಕೃತಿ-ಪುರುಷರ ರೂಪಗಳಾಗುತ್ತವೆ. 'ಕರ್ಬಲ್'ದಲ್ಲಿ ನರಗುಂದದ ಇತಿಹಾಸಕ್ಕೆ ಸೇರಿದ ಪದವಿದೆ. 'ರಿವಾಯತು'ಗಳಲ್ಲಿ ಅತ್ತೆಸೊಸೆಯರ ವಿಚಿತ್ರ ಕಥೆಯಿದೆ. ಲಾವಣಿ ಸೋಲೊ ರೂಪದಲ್ಲಿ ಶೃಂಗಾರಮಯ ಕೃತಿಗಳು ಹೇರಳವಾಗಿವೆ.

ಮರಾಠಿಯಲ್ಲಿ ಕಂಡುಬರುವ ಲಾವಣಿಗಳನ್ನು ಪರಿಶೀಲಿಸಿದಾಗ ಈ ಪದಗಳ ಉದ್ದಿಶ್ಯ ಕೂಡ ಸ್ಪಷ್ಟವಾಗುತ್ತದೆ. ಅಂದರೆ ಮರಾಠಿಯ ಸೈನಿಕರು ಗೆರಿಲ್ಲಾ ಯುದ್ಧದಲ್ಲಿ ತೊಡಗಬೇಕಾಗಿ ಬಂದು ಮನೆಮಠಗಳನ್ನು ಬಿಟ್ಟು ಕಾಡುಮೇಡುಗಳನ್ನು ಅಲೆಯಬೇಕಾಗಿದ್ದುದರ ಕಾರಣದಿಂದ ಅವರ ನೀತಿವಂತಿಕೆಯನ್ನು (morality) ಜಾಗರೂಕತೆಯಿಂದ ಕಾಪಾಡುವ ರೀತಿಯೂ ಅವುಗಳಲ್ಲಿರಬೇಕೆನ್ನಿಸುತ್ತದೆ.

ಶೃಂಗಾರ ಗೀತೆಗಳು ಒಂಟಿಯಾದ ಸೈನಿಕನಿಗೆ ಒಳ್ಳೆಯ ಮನರಂಜನೆಯೂ ಹೌದು. ಅಂದರೆ ಮೋಜಿನ ಪದವಾಗುತ್ತದೆ. ಅವುಗಳಲ್ಲಿ ಶೃಂಗಾರದ ಅತಿರೇಕಗಳು ಕಾಣಿಸಿಕೊಳ್ಳುವುದು ಕೂಡ ಆಶ್ಚರ್ಯ ತರುವುದಿಲ್ಲ. ನಿಜಕ್ಕೂ ಅವುಗಳನ್ನು ಸೈನಿಕರೇ ರಚಿಸಿಕೊಳ್ಳುವವರಾಗಿದ್ದರು. ಕ್ರಿ.ಶ. 1800 ರವರೆಗೂ 'ಲಾವಣಿ'ಯ ಬಳಕೆಯು ಮೇಲೆ ಹೇಳಿದಂತೆ ಇದ್ದರೆ ಅನಂತರ ಆಂಗ್ಲರು ಆಳತೊಡಗಿದಾಗ 'ಕರ್ಬಲ್'ಗಳಿಗೆ ಅವಕಾಶವಾದಂತೆ ಕಂಡುಬರುತ್ತದೆ. ಟಿಪ್ಪುಸುಲ್ತಾನನಿಗೆ ಸಂಬಂಧಿಸಿದ ಶ್ರೀರಂಗಪಟ್ಟಣದ ಲಾವಣಿಯಾಗಲಿ ನರಗುಂದದ ಮತ್ತು ಇತರ ಪದಗಳೇ ಆಗಲಿ ಹೀಗೆ ರೂಪ ತಾಳಿದವರಾಗಿರಬೇಕು. ಇವು ಐತಿಹಾಸಿಕ ಶೋಕಗೀತೆಗಳು.

ಲಾವಣಿಯ ವಾದ್ಯದಲ್ಲಿ ಕಾಲಕ್ರಮೇಣ ದೇಶಾಚಾರಕ್ಕೆ ಅವಕಾಶವಾದಂತೆ ಕಂಡುಬರುತ್ತದೆ. ಆದುದರಿಂದ ಗೀಗಿ ಪದಕ್ಕೆ ತುಂತುಣಿ, ತಾಳ, ಡಪ್ಪಿನೊಡನೆ ಸೇರುತ್ತವೆ. ಈ ಪದದ ಹಳೆಯ ರೂಪ ಕೂಡ ಬದಲಾಗಿ ಇದರ ಪ್ರೇಕ್ಷಕರು ಎಂದಿನಂತೆ ಪಾಲುಗೊಳ್ಳುದವರಾಗುತ್ತಾರೆ. ಇದರಲ್ಲಿ 'ಹಗೀ ಹಗೀ' ಪಲ್ಲವಿಯನ್ನು ಪ್ರೇಕ್ಷಕರು ಹೇಳುವ ಪದ್ಧತಿ, ಸೈನಿಕ ಪದ್ಧತಿಯು ಮುಂದುವರಿದ ರೂಪವಾಗಿದೆ. ಈಗ ತಪ್ಪುತ್ತಿದೆ. ಅಂದರೆ ಅಂತಹ ಸೈನಿಕ ಸಂಸ್ಕೃತಿಯೂ ರೂಪಾಂತರ ಹೊಂದುತ್ತಾ ಬಂದಿದೆ. 'ಲಾವಣಿ' ನಿಜವಾದ ರೂಪ ಕೂಡ ಪಂಡಿತರಿಗೆ ಬೇಕಿಲ್ಲದಂತೆ ಆಗುತ್ತಿದೆ.

ಲಾವಣಿಯ ಛಂದೋರೂಪವನ್ನು ಪರಿಶೀಲಿಸಿದಾಗ ಅದು 'ಡಪ್ಪಿ'ನಮೇಲೆ ಹಾಕುವ ಬಡಿತಗಳನ್ನು ಆಧಾರವಾಗಿಸಿಕೊಂಡಂತೆ ತೋರುತ್ತದೆ. ಡಾ॥ ಎಸ್. ಎಂ. ಬಿರಾದಾರರು ತಮ್ಮ ಪುಸ್ತಕ 'ಜಾಪಹಾಕತೇವ ಡಪ್ಪಿನ ಮ್ಯಾಲ'ದಲ್ಲಿ ಇದನ್ನು ಗುರುತಿಸಿದ್ದಾರೆ. 17ನೇ ಶತಮಾನದಲ್ಲಿದ್ದ ಗುಣಚಂದ್ರ ಎಂಬಾತನಿಂದ ರಚಿತವಾದ 'ಛಂದಸ್ಸಾರ'ದಲ್ಲಿ ಹುಡುಕಿದ್ದಾರೆ. ಆತ 'ಲಾವಳಿ' ಎಂಬುದಕ್ಕೆ

ಲಘುಗಳ ಮಿಳಿತವ ಮಾಡಿ
ಕೊನೆಯಲಿ ಗುರುಗಳ ಹೂಡಿ
ಅರ್ಥದ ಸಾರವ ನೋಡಿ
ಪ್ರಾಸನು ಕೊನೆಯಲಿ ಕೂಡಿ
ಪಾದ ಮಿತಿಯ ಬೀಸಾಡಿ
'ಲಾವಳಿ' ಕೃತಿಗಳ ಪಾಡಿ.

ಎಂಬ ವಿವರ ನೀಡಿದ್ದಾನೆ. ಅಷ್ಟೇ ಸರಿಯಾದುದು. ದೇಶಿ ಛಂದಸ್ಸಿನ ಬಗ್ಗೆ ವಿಶೇಷ ಕಾಳಜಿ ವಹಿಸದ ನಾಗವರ್ಮ ಕೂಡ 'ಲಾವಳಿ'ಯನ್ನು ಕಂಡಿಲ್ಲ. ಅದು ಅವನ ತಪ್ಪೇನಲ್ಲ. ಏಕೆಂದರೆ ಆಗ ಈ ಪದರೂಪವು ಕಾಣಿಸಿಕೊಳ್ಳಲು ಅಂಥ 'ಸೈನಿಕ ಸಂಸ್ಕೃತಿ'ಯು ಇರಲಿಲ್ಲ.

ಡಾ॥ ಗದ್ದಿಗೀಮಠ ಅವರು 'ಕುಮಾರ ರಾಮನ ದುಂದುಮೆ' ಪದದ ಪೀಠಿಕೆಯಲ್ಲಿ ಮತ್ತೊಂದು ಮಹತ್ವದ ವಿಷಯವನ್ನು ಕೊಟ್ಟಿದ್ದಾರೆ. ಈ "ರಿವಾಯಿತ ಹಾಡನ್ನು ಮೊದಲು ರಚಿಸಿದ, ಹಾಡಿದ ಕವಿಯಾರು ?" ಎಂದು ಸವಾಲು ಬಿತ್ತು. ಈ ಸವಾಲು ಹಾಕಿದವನೇ ಅದನ್ನು ಬಿಚ್ಚಿ ಹೇಳಿದಾಗ

ಆಸ್ಥಾನ ಕವಿ : ಕಿತ್ತೂರ ಸಂಸ್ಥಾನ
ಎಕ್ಕುಂಡಿ ಶಿವಲಿಂಗ ರುದ್ರ : ಕಟ್ಟಿ ಹಾಡಿದ
ಮೊದಲು ಕರ್ಬಲಾ...... : ಕೇಳೋ ಶಾಹಿರಾ

ಎಂದು ಹಾಡಲು ನನ್ನ ಅನುಮಾನ ಸ್ಪಷ್ಟವಾಯಿತು. ಕಿತ್ತೂರ ಇತಿಹಾಸವನ್ನು ನೋಡಿದಾಗ ಈ ಕವಿಯು ಕಿತ್ತೂರ ಒಂಬತ್ತನೆಯ ಅರಸನಾದ ಫಕೀರ ರುದ್ರ ಸರ್ಜನ ಕಾಲ (ಕ್ರಿ.ಶ. 1734 ರಿಂದ 1744) ರಲ್ಲಿ ಇದ್ದುದು ತಿಳಿದು ಬಂತು. ಈ ಅರಸನ ಪ್ರೇಮದ ರಾಣಿ, ಪಟ್ಟಮಹಿಷಿ ನಿರಂಜನಿಯ ತೃಪ್ತಿಗಾಗಿ ಈ ರಿವಾಯಿತುಗಳನ್ನು ರಚಿಸಿ ಹಾಡಿದನೆಂದು ಜನಪದದಿಂದ ತಿಳಿದು ಬರುವುದು. ಇವಳು ದೇಸಿನೂರ ಮುಸಲ್ಮಾನರ ಚಲುವೆಯಾಗಿದ್ದಳು. ಅರಸನು ಅವಳನ್ನು ಮೋಹಿಸಿ ವೀರಶೈವ ದೀಕ್ಷೆ ಕೊಡಿಸಿ 'ನಿರಂಜಿನಿ' ಎಂದು ಹೆಸರಿಟ್ಟು ಲಗ್ನವಾಗಿದ್ದನು. ಅವಳ ಸಮಾಧಿಯೂ ಅರಸಿನ ಬದಿಯಲ್ಲಿ ಕಿತ್ತೂರ ಕಲ್ಲಮಠದ ಅಂಗಣದಲ್ಲಿದೆ..." ಇದೊಂದು ಐತಿಹಾಸಿಕ ಜಾನಪದ ದಾಖಲೆ ಟಿಪ್ಪೂಸುಲ್ತಾನನ ಲಾವಣಿಯೂ ಉರ್ದುವಿನಲ್ಲಿದ್ದುದೆಂದು ಹೇಳುತ್ತಾರೆ. ಒಬ್ಬ ಇಂಗ್ಲೀಷ್ ಕವಿಯು ಅದನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿರುವುದಾಗಿ ಕಂಡುಬರುತ್ತದೆ.

ಇಲ್ಲೆಲ್ಲಾ ನಾವು ಗಮನಿಸಬೇಕಾದ ಒಂದಂಶವಿದೆ. ಮುಸಲ್ಮಾನ ಮತ ಮತ್ತು ಅವರೊಡನೆ ಒಂದು ರೂಪ ತಾಳಿದ ಸೈನಿಕ ಸಂಸ್ಕೃತಿಯೊಂದು 'ಲಾವಣಿ'ಯ, ನಿಜವಾದ ಅಧಿಕಾರಿಯಾಗಿರಬೇಕು. ಷಾಹೀರಾಜ್ಯಗಳು ದುರ್ಬಲವಾಗಿ ಅಲ್ಲಿಯ, ಬಿಜಾಪುರದಂಥ ಭಾಗದ ಜನತೆ ಕನ್ನಡಕ್ಕೆ ಮನಸ್ಸು ಕೊಟ್ಟಾಗ ಈ ಲಾವಣಿಗಳು ಜಾನಪದದ ಒಂದು ಸಾಧನವೂ ಆಗಿ ಬಂದಿರಬೇಕು. ಮರಾಠಿಗೂ ಇದು ಷಾಹೀ ರಾಜ್ಯಗಳಿಂದಲೇ ಹರಿದಿರಬಹುದಾಗಿದೆ. ಅನಂತರ ಗೀಗೀ ಪದವು ಮಾತ್ರ ಕನ್ನಡಕ್ಕೆ ಬಂದಿರಬಹುದು ಅಷ್ಟೆ.

ಟಿಪ್ಪಣಿ

1) ದಾಯಿರಾ—A ಅರಬ್ಬಿ ಮತ್ತು ಹಿಂದೂಸ್ಥಾನಿ ಪದ—a Tambourine
2) ದಫ್—P ಪಾರ್ಸಿ ಪದ—a small Tambourine
3) ದಫಾಲಿ—P ಡಪ್ಪಿನ ವಾದಕ—a Tambourine Player

4) ಡಪ್ಪು—ಕನ್ನಡ ಪದ

5) ಲಾವಣಿ—ಅನ್ಯಭಾಷಾಪದ (ಕನ್ನಡ ನಿಘಂಟು : ನೇಡಿಯಾಪು ಕೃಷ್ಣಭಟ್ಟ)

6) ಲಾವಳಿ—ಎಲ್. ಆರ್. ಹೆಗ್ಗಡೆಯವರ ಅಧ್ಯಕ್ಷ ಭಾಷಣದಲ್ಲಿದೆ

ಶ್ರೀ ಕೃಷ್ಣಮೂರ್ತಿಯವರು ತೋರಿಸಿದಂತೆ ಗುಣಚಂದ್ರನ ಛಂದಸ್ಸಾರಂ (1650)

ಜನಪದ ಸಾಹಿತ್ಯ ದರ್ಶನ ಭಾಗ ೪. ಸಂ. ಡಾ. ಎಂ. ಎಸ್. ಸುಂಕಾಪುರ ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ.

7) ಬಂದೇ ನವಾಜ್—ಗುಲ್ಬರ್ಗದ ಒಂದು ಚಾರಿತ್ರಿಕ ಉರುಸ್

ಇದರಲ್ಲಿ ಬೇರ ಬೇರೆ ದೇಶಗಳ ಮಹಮದಿಯರು ಬಂದು
'ಕಲ್ಗಿ-ತುರಾ'ದಲ್ಲಿ ಪಾಲುಗೊಳ್ಳುತ್ತಾರೆ.
ಇದೊಂದು ವಿಶೇಷ ತಾತ್ವಿಕ ಗೋಷ್ಠಿಯಾಗಿ ಜರುಗುತ್ತದೆ.
ಶಾಹೀ ರಾಜ್ಯಗಳ ಒಂದು ಅಮೂಲ್ಯ ಕೊಡುಗೆಯಾಗಿದೆ.

ಆರ್. ಎಂ. ಹಡಪದ್

8) Indian Antiquary Vol. XVIII PP 359. Foot Note 44.

ಅವರ ಡಬ್ಬಿನ ಮೇಗ ಮುತ್ತಿನ ತುರಾ
ವೈರಿಗ ಮಾಡೇರ ಜೇರಾ
ಇಳಿತ ಕಲಿಗಿಗಿ ಸೀರಾ ॥

ಲಾವಣಿಕಾರ ಹೇಳಿಕೊಳ್ಳುವಂತೆಯೇ—

ಪುಟ್ಟಿ ಇಲ್ಲಿಗೆ ತುರಾ-ಕಲ್ಗಿ
ಚರ್ಚೆ ತಿಳಿಯದೊ ಶಾಹಿರಾ
ಒಂದು ಸಾವಿರದೊಂಭೈನೂರ ವರ್ಷಗಳ ಮೇಲೆ ಬಲ್ಲಿರಾ ॥

ಎಂಬುದು ಇದು ಕಾಶಿಯಿಂದ ಬಂದಿತೆಂಬ ವದಂತಿಯನ್ನು ಗಮನಿಸಬಹುದು.

—'ಕಲಿ' ಅವರಿಂದ ಸಂಗ್ರಹ

9) *From* The Student's Practical Dictionary & Hindustani—English

by Ram Narain Lal, 3rd Edition 1910.

Cha'l—H. Movement

Shahari—P. Belonging to the City

Kalgi—T. a kind of L'aoni verse

Kalgi–b'az—T. one of the Two classes of L'aoni singers
L'aoni H. A. kind of song. (reference ; reap.ng)
Har Every

L'ao Lashkar P. A Large army with its baggage and camp followers.

ಲಾವ(ಣ)ಿ. ಇದನ್ನು ಛಂದಸ್ಸಾರದಲ್ಲಿ 1974ರ ವೇಳೆಗೇ ಗುರುತಿಸಲಾಗಿದೆ. ಡಾ॥ ಎಲ್. ಬಸವರಾಜ್, ನಂತರ ಡಾ॥ ಕೃಷ್ಣಮೂರ್ತಿಯವರು, ಡಾ॥ ಎಲ್. ಆರ್. ಹೆಗ್ಗಡೆಯವರು. ಇತ್ಯಾದಿ ಜಾನಪದ ಸಮ್ಮೇಲನಗಳ ಸಂದರ್ಭದಲ್ಲಿ ಹೇಳಿದ್ದಾರೆ. ಆದುದರಿಂದ ಇದನ್ನು ಗುರುತಿಸಿದ ಹೇಳಿಕೆಯು ಡಾ॥ ಎಲ್. ಬಸವರಾಜರಿಗೆ ಸೇರಬೇಕಾಗುತ್ತದೆ. "ಆದುದರಿಂಡ ಗುಣಚಂದ್ರನ ಕಾಲಕ್ಕೆ 'ಲಾವಣಿ' ಪ್ರತಿಷ್ಠೆಯನ್ನು ಪಡೆದಿತ್ತೆಂದೂ, ಅವನು ಕಂಡಂತೆ ಅದರ ಒಂದು ಬಗೆಯ ಲಕ್ಷಣ ಮೇಲಣ ರೀತಿಯದೆಂದೂ ಊಹಿಸಬಹುದು". ಕನ್ನಡ ಛಂದಸ್ಸಂಪುಟ, ಪೀಠಿಕೆ IXV 1974, ಡಾ॥ ಎಲ್. ಬಸವರಾಜ್

ಸಪ್ತಸಂತಾನಗಳ ಉಲ್ಲೇಖ–ಕನ್ನಡ ಕೃತಿಯೊಂದರಲ್ಲಿ

ಎಸ್. ವಿದ್ಯಾಶಂಕರ

ಅಗ್ರಹಾರ, ಛತ್ರ, ದೇವಾಲಯ, ಉದ್ಯಾನ, ತಟಾಕ, ಸತ್ಕೃತಿ. ನಿಧಿ–ಇವು ಸಪ್ತ ಸಂತಾನಗಳು. ಇವುಗಳ ಉಲ್ಲೇಖ ತೆಲುಗು ಸಾಹಿತ್ಯ ಹಾಗೂ ಶಾಸನಗಳಲ್ಲಿ ವಿಶೇಷವಾಗಿ ಕಾಣಬರುತ್ತದೆ. ತೆಲುಗಿನಲ್ಲಿ ನನ್ನಿ ಚೋಡನ (ಕ್ರಿ. ಶ. 1130) 'ಕುಮಾರ ಸಂಭವಮು' ಕಾವ್ಯದಲ್ಲಿ ಮೊದಲಿಗೆ, ಕ್ರಿ. ಶ. 1132 ರ ಕೃಷ್ಣಾ ಜಿಲ್ಲೆಯ ಗನ್ನಾವರಮು ತಾಲೂಕಿನ ಎನಮಲಕುದುರು ಗ್ರಾಮದಲ್ಲಿ ದೊರೆತ ಭೀಮಣ್ಣನು ಹಾಕಿಸಿದ ಶಾಸನದಲ್ಲಿ ಪ್ರಥಮಬಾರಿಗೆ, ಸಪ್ತಸಂತಾನಗಳ ಉಲ್ಲೇಖ ನೋಡುತ್ತೇವೆ. ಆಂಧ್ರಪ್ರದೇಶದಲ್ಲಿ ಸಪ್ತಸಂತಾನಗಳಂತಹ ಸಾಮೂಹಿಕ ದಾನಗಳು ಪುಣ್ಯಸಂಪಾದನೆ ಹಾಗೂ ಕೀರ್ತಿಗಾಗಿ ದಾನಿಗಳಿಂದ ಕೈಗೊಳ್ಳಲಾಗುತ್ತಿತ್ತು.

ಸಪ್ತಸಂತಾಗಳ ಪಟ್ಟಿಯಲ್ಲಿ ಬರುವ ಎಲ್ಲ ದಾನಗಳನ್ನು ಒಬ್ಬನೇ ವ್ಯಕ್ತಿ ಮಾಡಿದಂತೆ ಕನ್ನಡನಾಡಿನ ಕಾವ್ಯ ಶಾಸನಗಳಲ್ಲಿ ಹೇಳಲಾಗಿಲ್ಲ. ಪ್ರಾಚೀನ ಕರ್ನಾಟಕದಲ್ಲಿ ದೊರೆಯುವ ಶಾಸನಗಳಿಂದ ಅಗ್ರಹಾರ, ದೇವಾಲಯ, ಉದ್ಯಾನ, ತಟಾಕ–ಇವುಗಳ ನಿರ್ಮಾಣ ಹಾಗೂ ಮೇಲ್ವಿಚಾರಣೆಗೆ ದಾನದತ್ತಿಗಳನ್ನು ಬಿಟ್ಟ ಸಂಗತಿ ತಿಳಿದುಬರುತ್ತದೆ. ಧರ್ಮನಿಧಿಯು ಸತ್ರ ವಿದ್ಯೆ ಇತ್ಯಾದಿಗಳಿಗೆ ಕೊಡುತ್ತಿದ್ದ ಧನರೂಪದ ನಿಧಿ ಅಥವಾ ದತ್ತಿಯನ್ನೇ ಹೇಳುತ್ತದೆ.[1] ಸತ್ಕೃತಿಯು ರಚನೆಗೆ ಹತ್ತನೇ ಶತಮಾನದಿಂದಲೂ ಅರಸ, ಮಂತ್ರಿ, ಮಾಂಡಲಿಕ, ಸಹೃದಯ ಧನಿಕ–ಇವರುಗಳಿಂದ ಕವಿಗಳಿಗೆ ಕರ್ನಾಟಕದಲ್ಲಿ ಆಶ್ರಯ ದೊರೆತಿದ್ದಿತು. ಈ ಆಶ್ರಯದಲ್ಲಿ ದೊರೆತ ಪ್ರೋತ್ಸಾಹ ಪ್ರೇರಣೆಗಳಿಂದ ಕವಿಗಳು ಕೃತಿರಚನೆ ಮಾಡುತ್ತಿದ್ದರು. ಆಂಧ್ರ ಸಾಹಿತ್ಯದಲ್ಲಿ ಕಂಡುಬರುವ 'ಅಂಕಿತ ಪದ್ಧತಿ'[2] ಕನ್ನಡದಲ್ಲಿ ಕಂಡುಬರದಿದ್ದರೂ ಆಶ್ರಯದಾತನನ್ನು ಬಾಯ್ತುಂಬ, ಕೃತಿಯ ಆದಿ ಅಂತ್ಯ ಆಶ್ವಾಸಗಳಲ್ಲಿ ಹೊಗಳುವ, ಪ್ರತಿ ಆಶ್ವಾಸಾಂತ್ಯ ಗದ್ಯದಲ್ಲಿ ಕೃತಜ್ಞತೆಯಿಂದ ನೆನೆದು ಗುಣಗಾನಮಾಡುವ,

---

1. ನೋಡಿ : ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1979) ಪು. 453 ರ ಅಡಿ ಟಿಪ್ಪಣಿ.
2. ಕವಿ ತನ್ನ ಕೃತಿಯನ್ನು ತನಗೆ ಮೆಚ್ಚುಗೆಯಾದವರಿಗೆ ಅರ್ಪಿಸುವುದನ್ನು 'ಅಂಕಿತ' ಎಂದು ಕರೆಯಲಾಗುತ್ತದೆ. ಉದಾಹರಣೆಗೆ ನನ್ನಿಚೋಡನು (ಕ್ರಿ. ಶ. 1130) ತನ್ನ 'ಕುಮಾರ ಸಂಭವಮು' ಕಾವ್ಯವನ್ನು ಗುರು ಜಂಗಮ ಮಲ್ಲಯ್ಯನಿಗೆ ಅಂಕಿತ ಮಾಡಿರುವುನ್ನು ನೋಡಬಹುದು.

ಆಶ್ರಯದಾತನನ್ನು ರಾಮಾಯಣ ಮಹಾಭಾರತಗಳ ನಾಯಕರುಗಳಿಗೆ ಹೋಲಿಸಿ ಲೌಕಿಕ ಕೃತಿರಚನೆ ಮಾಡುವ ಕ್ರಮವನ್ನು ನಾವು ನೋಡುತ್ತೇವೆ. ತೆಲುಗು ಕವಿಗಳು ಕೃತಿಗಳನ್ನು ಕನ್ಯೆಯರೆಂದು ಭಾವಿಸಿದ್ದರಿಂದಲೊ ಏನೋ ದಾನಗಳಲ್ಲಿ ಕೃತಿಯೂ ಒಂದಾಗಿ ಸೇರಿರಬೇಕು. (ಸಪ್ತಸಂತಾನಗಳಲ್ಲಿ 'ಕೃತಿ'ಯೇ ಶ್ರೇಷ್ಠವಾದು ದೆಂಬುದು ತೆಲುಗು ಕವಿಗಳ ಅಭಿಮತ.) ಪುತ್ರನು ವಂಶದ ಉನ್ನತಿಗಷ್ಟೇ ಅಲ್ಲ ಸಮಾಜದ ಉನ್ನತಿಗೂ ನೆರವಾಗುವನೆಂಬ ಉದ್ದೇಶದಿಂದ ಸಪ್ತಸಂತಾನಗಳಲ್ಲಿ 'ಪುತ್ರ' ನನ್ನೂ ಸೇರಿಸಿದಂತಿವೆ. ಮುಖ್ಯ ಸಂಗತಿ ಎಂದರೆ, ಆಂಧ್ರ ಪ್ರದೇಶದಲ್ಲೂ ಸಪ್ತ ಸಂತಾನಗಳು ಏಕೈಕ ವ್ಯಕ್ತಿಯಿಂದ ದಾನರೂಪದಲ್ಲಿ ನಡೆದುವು. ಆದರೆ, ಕರ್ನಾಟಕ ದಲ್ಲಿ ಸಪ್ತ ಸಂತಾನಗಳು ಈ ಹೆಸರಿನಲ್ಲಿ ದಾನವಾಗಿ ಬಳಕೆಗೊಳ್ಳಲಿಲ್ಲ; ಸಪ್ತ ಸಂತಾನಗಳ ಪಟ್ಟಿಯಲ್ಲಿ ಬರುವ ಬಹುಪಾಲು ದಾನಗಳು ಪ್ರತ್ಯೇಕವಾಗಿ ದಾನಿಗಳಿಂದ ನಡೆದುವು.

ಸಪ್ತಸಂತಾನಗಳ ಉಲ್ಲೇಖ ಪ್ರಾಚೀನ ಕರ್ನಾಟಕದ ಶಾಸನಗಳಲ್ಲಿ ಎಲ್ಲೂ ಕಂಡು ಬರುವುದಿಲ್ಲ[3]. ಅಪರೂಪಕ್ಕೆ ಚಿಕ್ಕಮಲ್ಲಿಕಾರ್ಜುನನ (ಸು. 1460) 'ಧರ್ಮಸಂಪಾವನೆ' ಎಂಬ ಏಕೈಕ ಕೃತಿಯಲ್ಲಿ[4] ಮಾತ್ರ ಸಪ್ತ ಸಂತಾನಗಳ ಉಲ್ಲೇಖ ನಮಗೆ ಕಾಣಸಿಗುತ್ತದೆ. ಚಿಕ್ಕಮಲ್ಲಿಕಾರ್ಜುನ ಸಪ್ತಸಂತಾನಗಳನ್ನು ಆ ಹೆಸರಿನಿಂದಲೇ ಕರೆದು ಅವುಗಳ ವಿವರಗಳನ್ನು ಒಂದು ಪದ್ಯದಲ್ಲಿ ಕೊಟ್ಟಿರು ವನು :

> ಕೆರೆಯು ಧನನಿಕ್ಷೇಪ ವನಗಳು
> ಹರನ ಆಲಯ ಬ್ರಹ್ಮಸ್ಥಾಪ್ಯವು
> ಪರಮ ಸತ್ಕೃತಿ ಪುತ್ರಮಿಂತಿವು ಸಂಪ್ತ ಸಂತಾನ
> ಧರೆಯೊಳಗೆ ಮಿಗಿಲೆನಿಪ ಧರ್ಮಿಗ
> ಳರಿತು ಮಾಳ್ಪರು ಧರ್ಮ ಕೀರ್ತಿಯ
> ಧರಿಸಿ ಚಿಕವೀರೇಶ ಸತ್ಕೃತಿಪುತ್ರನಂ ಪಡೆದಾ॥

ಕವಿಯ ಪ್ರಕಾರ ಕೆರೆ, ಧನನಿಕ್ಷೇಪ (= ನಿಧಿ), ವನ, ಶಿವಾಲಯ, ಬ್ರಹ್ಮ ಸ್ಥಾಪ್ಯ (= ಅಗ್ರಹಾರ), ಸತ್ಕೃತಿ, ಪುತ್ರ — ಇವು ಸಪ್ತಸಂತಾನಗಳು. ಇವನ್ನು ಲೋಕದಲ್ಲಿ ಮಿಗಿಲಾದ ಧರ್ಮಿಗಳು ಧರ್ಮ, ಕೀರ್ತಿಗಳಿಗಾಗಿ ಮಾಡುವರು. ಕವಿ 'ತನ್ನ ಕೃತಿಯೆಂಬ ಪುತ್ರ'ನನ್ನು ತನ್ನ ಗುರುವಾದ ಚಿಕವೀರೇಶನಿಗೆ ಅರ್ಪಿಸಿರುವನು.

---

3. ನೋಡಿ; ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1979) ಪು. 453ರ ಅಡಿ ಟಿಪ್ಪಣಿ.
4. ಧರ್ಮಸಂಪಾದನೆ, (ಸಂ॥ ಎಸ್. ವಿದ್ಯಾಶಂಕರ ಹಾಗೂ ಹು. ಕಾ. ಜಯದೇವ್) ಸಂಧಿ 5 ಪ. 51

(ಕಾವ್ಯವನ್ನು ಕನ್ಯೆಯೆಂದು ಭಾವಿಸಿದರೆ ವಿರಕ್ತಮೂರುತಿಯಾದ ಗುರುವಿಗೆ ಆ ಕಾವ್ಯವನ್ನು ಅರ್ಪಿಸುವುದಾದರೂ ಹೇಗೆ ? ಅದಕ್ಕಾಗಿಯೇ ಇಲ್ಲಿ ಕವಿ ತನ್ನ 'ಸತ್ಕೃತಿ ಎಂಬ ಪುತ್ರ'ನನ್ನು ಗುರುವಿಗೆ ಅರ್ಪಿಸುವುದು).

ತೆಲುಗು ಸಾಹಿತ್ಯ ಶಾಸನಗಳಲ್ಲಿ ಪ್ರಸಿದ್ಧವಿರುವ ಸಪ್ತಸಂತಾನಗಳು ಕನ್ನಡದ ಕೃತಿಯೊಂದರಲ್ಲಿ ಬಂದುದು ಆಕಸ್ಮಿಕ. ಕೃತಿಯಿಂದ ತಿಳಿದುಬರುವಂತೆ ಕವಿಯ ತಂದೆಯಾದ ಉಜ್ಜಣಾರಾಧ್ಯನು ಹಾಗೂ ಕವಿಯ ಗುರುವಾದ ಉಜ್ಜಯನಿ ದೇಶಿ ಕೇಂದ್ರನು ಗೋರಕೋಡ (ಗೋರಕೊಂಡ ?) ಪುರದವರು. ಆಂಧ್ರ ಹಾಗೂ ಕರ್ಣಾಟಕದ ಗಡಿಗೆ ಸೇರಿದ ಊರು ಗೋರಕೋಡ ಆಗಿರಬಹುದು. ತೆಲುಗು ವಾಙ್ಮಯದ ನೇರ ಪರಿಚಯ ಕವಿಗಿರುವ ಸಾಧ್ಯತೆ ಇದೆ. ತೆಲುಗು ನಾಡಿನಲ್ಲಿ ಪ್ರಚಲಿತವಿರುವ ಸಾಮಾಜಿಕ ಸೇವಾ ಕಾರ್ಯಗಳಾದ ಸಪ್ತಸಂತಾನಗಳ ಪರಿಚಯವೂ ಕವಿಗೆ ಇದ್ದಿರಬೇಕು. ಚಿಕ್ಕಮಲ್ಲಿಕಾರ್ಜುನನ 'ಧರ್ಮ ಸಂಪಾದನೆ' ಸದ್ಯಕ್ಕೆ ಸಪ್ತಸಂತಾನಗಳನ್ನು ಹೇಳುವ ಕನ್ನಡದ ಏಕೈಕ ಕೃತಿ.*

* ಚಿಕ್ಕಮಲ್ಲಿಕಾರ್ಜುನನ 'ಧರ್ಮಸಂಪಾದನೆ'ಯಲ್ಲಿ ಬರುವ ಸಪ್ತಸಂತಾನಗಳ ಉಲ್ಲೇಖವನ್ನು ನನ್ನ ಗಮನಕ್ಕೆ ತಂದವರು ಗುರುಗಳಾದ ಡಾ॥ ಎಂ. ಚಿದಾನಂದಮೂರ್ತಿ ಅವರು. ಅದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು. ತೆಲುಗು ಸಾಹಿತ್ಯ ಹಾಗೂ ಶಾಸನಗಳಲ್ಲಿ ಬರುವ ಸಪ್ತಸಂತಾನಗಳ ಬಗೆಗೆ ನಾನು ಪ್ರತ್ಯೇಕ ಲೇಖನವೊಂದರಲ್ಲಿ ಹೇಳಲಿರುವುದರಿಂದ ಅವುಗಳನ್ನು ಕುರಿತು ಈ ಲೇಖನದಲ್ಲಿ ಹೆಚ್ಚಿಗೆ ಏನನ್ನೂ ಹೇಳಿಲ್ಲ.

ಕಪೋತಾಖ್ಯಾನದ ರಾಚನಿಕ ಅಧ್ಯಯನ: ಒಂದು ಪ್ರಯತ್ನ*

ಟಿ. ಎಸ್. ಸತ್ಯನಾಥ್

೧. ಪೀಠಿಕೆ

ಕಥೆಯೊಂದರ ರಚನೆಯ ಹಿಂದೆ ಅಡಗಿರುವ ಗುಟ್ಟನ್ನು ಅರಿಯಲು ಜಾನಪದ ವಿದ್ವಾಂಸರು ಹಲವಾರು ಪ್ರಯತ್ನಗಳನ್ನು ನಡೆಸಿದ್ದಾರೆ. ಜನಪದ ಕಥೆಗಳ ರಾಚನಿಕ ಮಾದರಿಗಳನ್ನು ಗುರುತಿಸುವುದರ ಮೂಲಕ ಅವುಗಳ ರಚನೆ, ಪ್ರಸರಣೆ ಮತ್ತು ಸಂವಹನ ಸಂದರ್ಭಗಳಲ್ಲಿನ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಶಿಷ್ಟ ಸಂಪ್ರದಾಯದಲ್ಲಿ ಸೇರಿಕೊಂಡಿರುವ ಕಥೆಯ ಬಗ್ಗೆ ಇಂತಹ ಅಧ್ಯಯನ ಸಾಧ್ಯವೇ ಮತ್ತು ಅಂತಹ ಅಧ್ಯಯನ ಸಾಹಿತ್ಯ, ಗ್ರಂಥಸಂಪಾದನೆ ಮತ್ತು ಸಾಹಿತ್ಯ ಚರಿತ್ರೆಗಳಿಗೆ ಅರ್ಥಪೂರ್ಣವಾಗಿ ಅನ್ವಯಿಸಲು ಸಾಧ್ಯವೇ ಎಂಬ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಚಾರಿತ್ರಿಕವಾಗಿ ಅತ್ಯಂತ ಪ್ರಾಚೀನವಾದ ಕಥಾಪಾಠವೇ ಮೂಲಪಾಠ್ಯಕೆ ಎನಿಸಿಕೊಳ್ಳುತ್ತದೆ. ಕಾಲಾನುಕ್ರಮದಲ್ಲಿ ಹೊಸ ಹೊಸ ಅಂಶಗಳು ಸೇರ್ಪಡೆಯಾಗುತ್ತಾ ಹೋಗಿ ಕಥೆಯ ಗಾತ್ರ ಮತ್ತು ಸ್ವರೂಪ ಗಳಲ್ಲಿ ಹಲವಾರು ಬದಲಾವಣೆಗಳಾಗುತ್ತವೆ. ಇವುಗಳನ್ನು ಪ್ರಕ್ಷಿಪ್ತ ಎಂದು ಹೊರಹಾಕುವ ವಾಡಿಕೆ ಗ್ರಂಥಸಂಪಾದನೆಯಲ್ಲಿ ಇದೆಯಾದರೂ ಕಥೆಯ ರಾಚನಿಕ ಮತ್ತು ಅರ್ಥರಚನೆಗಳಿಗೆ ಪ್ರಕ್ಷಿಪ್ತಗಳು ಯಾವ ಹಾನಿಯನ್ನೂ ಉಂಟುಮಾಡುವು ದಿಲ್ಲ ಎಂಬುದು ಸ್ಪಷ್ಟವಿದೆ. ಗ್ರಂಥಸಂಪಾದನೆ ಸೂಕ್ಷ್ಮ (micro) ಮಟ್ಟದ ಅಧ್ಯಯನವಾದ್ದರಿಂದ ಮತ್ತು ರಾಚನಿಕ ಅಧ್ಯಯನ ಸ್ಥೂಲ (macro) ಮಟ್ಟದ ಅಧ್ಯಯನವಾಗುವುದರಿಂದ ಇವೆರಡರ ನಡುವೆ ಇಂತಹ ಕಂದರ ಕಂಡುಬರುತ್ತದೆ. ಕಥೆಯ ರಾಚನಿಕ ಘಟಕಗಳಷ್ಟೇ ಅವುಗಳ ಸಂವಹನ ಪ್ರಕ್ರಿಯೆಯ ದೃಷ್ಟಿಯಿಂದ ಮುಖ್ಯವಾದುದಾಗಿದ್ದು ಅದರ ಸೂಕ್ಷ್ಮ ವಿವರಗಳು ಮಹತ್ವವಾದವುಗಳಲ್ಲ ಎಂದು ಜಾನಪದ ವಿದ್ವಾಂಸರು ಭಾವಿಸುತ್ತಾರೆ. ಕಥೆಯೊಂದರಲ್ಲಿ ಹಾಗಿದ್ದಲ್ಲಿ ಸ್ಥಿರಾಂಶ

---

*ಈ ಲೇಖನ ವೆಂಕಟಾಚಲವಾಸಾಂಕಿತ 'ಕಪೋತ ಚರಿತ್ರೆ'ಯ ಸಂಪಾದನೆಯ ಮುನ್ನುಡಿಯ ಒಂದು ಭಾಗದ ವಿಸ್ತೃತ ರೂಪವಾಗಿದೆ. ಇಲ್ಲಿ ಚರ್ಚಿಸಲಾಗಿರುವ ಹಲವಾರು ಅಂಶಗಳಿಗೆ ಪೂರಕವಾದ ವಸ್ತು ಸಂಪಾದನೆಯ ಮುನ್ನುಡಿಯಲ್ಲಿದ್ದು ಹೆಚ್ಚಿನ ವಿವರಗಳಿಗಾಗಿ ಅದನ್ನು ನೋಡಬಹುದು. ಸದ್ಯದಲ್ಲೇ ಅದು ಪ್ರಕಟವಾಗಲಿದೆ.

(Fixed Features or Constants) ಮತ್ತು ಚರಾಂಶ (Variable Features) ಗಳು ಉಂಟೆ ಮತ್ತು ಅವುಗಳು ಹೇಗೆ, ಯಾವರೀತಿಯಲ್ಲಿ ಪ್ರಸರಣ ಹೊಂದಿವೆ ಎಂಬ ಪ್ರಶ್ನೆಗಳು ಇಲ್ಲಿ ಏಳುತ್ತವೆ. ಕಪೋತಾಖ್ಯಾನದ ಹಲವು ಕಥಾಪಾಠಗಳನ್ನು ಮುಂದಿಟ್ಟುಕೊಂಡು ಕಪೋತಾಖ್ಯಾನದ ಕಥೆಗಳ ಸ್ಥಿರಾಂಶ ಮತ್ತು ಚರಾಂಶಗಳನ್ನು ಗುರುತಿಸಿ ಕಥೆಯ ರಾಚನಿಕ ಮಟ್ಟದಲ್ಲಿ ಪ್ರವರ್ತಿಸುತ್ತಿರುವ ನಿಯಮವನ್ನು ತೋರಿಸಲು ಪ್ರಯತ್ನಿಸಲಾಗಿದೆ.

2. ಭಾಷಾವಿಜ್ಞಾನದ ಸಂಶೋಧನೆಗಳು ಮತ್ತು ಅದರ ಪ್ರಭಾವ :

ಭಾಷಾವಿಜ್ಞಾನದಲ್ಲಿ ಇತ್ತೀಚೆಗೆ ನಡೆದಿರುವ ಸಂಶೋಧನೆಗಳು ಬರಿಯ ಭಾಷೆಯ ರಚನೆಯ ಬಗೆಗಷ್ಟೇ ಅಲ್ಲದೆ ಅದರ ಸಾಂದರ್ಭಿಕ ಉಪಯೋಗವಾದ ಸಂವಹನ ಮತ್ತು ಭಾಷೆಯ ಸಾಮಾಜಿಕ ನಿಯೋಗದ ಬಗ್ಗೆಯೂ ಹೊಸ ಹೊಸ ಅರಿವುಗಳನ್ನು ಮೂಡಿಸಿದೆ. ಇಲ್ಲಿ ಭಾಷಾವಿಜ್ಞಾನದ ಸಂಶೋಧನಾಕ್ರಮಗಳು ಮತ್ತು ಜಾನಪದ ಕ್ಷೇತ್ರದಲ್ಲಿ ಅದರ ಪ್ರಭಾವದಿಂದಾಗಿ ನಡೆದಿರುವ ಅಧ್ಯಯನಗಳ ಪರಿಚಯವನ್ನು ಮಾಡಿಕೊಳ್ಳುವುದರ ಮೂಲಕ ರಾಚನಿಕ ಅಧ್ಯಯನದ ಹಿಂದಿನ ತಾತ್ವಿಕ ಮತ್ತು ಸಂಶೋಧನಾಕ್ರಮದ ಚೌಕಟ್ಟನ್ನು ಗುರುತಿಸಿಕೊಂಡಂತಾಗುತ್ತದೆ.

ಬಿಹೇವಿಯರಿಸಂ ಯೋಜನಾಕ್ರಮದಿಂದ ರಾಚನಿಕ (structuralist) ಪಂಥ ಭಾಷಾವಿಜ್ಞಾನದಲ್ಲಿ ರೂಪುಗೊಂಡಿತು. ಸಸೂರನ ಭಾಷಾವಿಜ್ಞಾನದ ಸಿದ್ಧಾಂತಗಳು ಮತ್ತು Stimulus-Response ನ ಸಿದ್ಧಾಂತಗಳು ಈ ಪಂಥದ ಕೊಡುಗೆಯಾಗಿದ್ದು ಈ ಅಧ್ಯಯನಕ್ರಮದಲ್ಲಿ ವಿಶ್ಲೇಷಣೆ ನಡೆಸಿದ ಇತರ ಶಿಸ್ತುಗಳು ಮೇಲಿನ ಚೌಕಟ್ಟಿನಲ್ಲಿ ಅಧ್ಯಯನಗಳನ್ನು ನಡೆಸಿದವು. ಭಾಷಾಪ್ರಕ್ರಿಯೆಯನ್ನು ಒಂದು ಯಾಂತ್ರಿಕವಾದ ಕ್ರಿಯೆ ಎಂದೂ ಭಾಷೆಯ ಕಲಿಕೆ ಅನುಕರಣೆ ಮತ್ತು ಬಾಯಿಪಾಠ (Memorization) ಗಳಿಂದ ಸಾಧ್ಯವೆಂದೂ ಭಾವಿಸಿದರು. ಮಾನಸಿಕ (Mentalistic) ಪ್ರಕ್ರಿಯೆಯನ್ನು ವಿರೋಧಿಸಿದ ಪಂಥವಾದುದರಿಂದ ಯಾಂತ್ರಿಕವಾಗಿ ಧ್ವನಿಮಾ, ಆಕೃತಿಮಾ ಮತ್ತು ವಾಕ್ಯಗಳನ್ನು ಪಟ್ಟಿಮಾಡಿ ಅವುಗಳ Phrase Structure Grammar (P S G) ನ್ನು ಕುರಿತು ಅಧ್ಯಯನ ಮಾಡಿದರು. ಇದು ವರ್ಗೀಕರಣ ರೂಪದ (Taxonomic) ಅಧ್ಯಯನ ಎಂದು ಕರೆಸಿಕೊಂಡು ಧ್ವನಿಮಾ, ಆಕೃತಿಮಾ, ವಾಕ್ಯಗಳನ್ನು ಅವುಗಳ ಅರ್ಥ (Semantics)ಕ್ಕೆ ಗಮನವನ್ನೇ ಕೊಡದೆ ಪಟ್ಟಿಮಾಡಿದ ಕೋಣೀಕೃತ ಅಧ್ಯಯನವಾಯಿತು. ಭಾಷಾ ಸಾರ್ವತ್ರಿಕ ಅಂಶಗಳನ್ನು (Linguistic Universals) ಗುರುತಿಸದೆ ಹೋದುದರಿಂದ ಪ್ರತಿಭಾಷೆಗೂ ತನ್ನದೇ ಆದ ವಿಶಿಷ್ಟ ವ್ಯಾಕರಣವಿದೆ ಎಂದು ವಾದಿಸಲಾಯಿತೇ

ಹೊರತು ಭಾಷೆಯ ಅರ್ಥ ಮತ್ತು ನಿಯೋಗಗಳ ಹಂತದಲ್ಲಿರುವ ಸಾರ್ವತ್ರಿಕತೆಯನ್ನು ಅಲಕ್ಷ್ಯ ಮಾಡಲಾಯಿತು.

ಮೇಲಿನ ಅಧ್ಯಯನ ಕ್ರಮವನ್ನು ವಿರೋಧಿಸಿದ ನೋಂ ಚೋಮ್‌ಸ್ಕಿ ತನ್ನ ರೂಪಾಂತರ ವ್ಯಾಕರಣದ (Transformational Grammar) ಸಿದ್ಧಾಂತಗಳನ್ನು ಗೆಸ್ಟಾಲ್ಟ್ ಮನೋವಿಜ್ಞಾನದ ತಾತ್ವಿಕ ಹಿನ್ನೆಲೆಯಲ್ಲಿ ಮಂಡಿಸಿದ. ಈ ಪಂಥ ಮಾನವನ ಸಾಂಸ್ಕೃತಿಕ ಪ್ರಕ್ರಿಯೆ ಬಿಹೇವಿಯರಿಸಂನ Stimulus Response ಗಳಷ್ಟು ನೇರ ಸಂಬಂಧವನ್ನು ಪಡೆದವುಗಳಾಗಿರದೆ, ವ್ಯಕ್ತಿ ಮತ್ತು ಪರಿಸರದ ನಡುವೆ ಒಂದು ನಿರ್ದಿಷ್ಟ ಸಂದರ್ಭದಲ್ಲಿ ಏರ್ಪಡುವ ನಡವಳಿಯಾಗಿದ್ದು, ಈ ಸಂದರ್ಭದಲ್ಲಿ ವ್ಯಕ್ತಿ ಮತ್ತು ಪರಿಸರಗಳೆರಡೂ ನಿಯೋಗಾತ್ಮಕವಾಗಿ ವರ್ತಿಸುತ್ತವೆ ಎಂದು ವಿವರಿಸುತ್ತದೆ. ಇದನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳುವುದಾದರೆ ಬಿಹೇವಿಯರಿಸಂ ವ್ಯಕ್ತಿಯೊಳಗೆ ಅಂತರ್ಗತವಾಗಿರುವ ಚಿತ್ತವೃತ್ತಿಗಳು (Instincts) ವ್ಯಕ್ತಿಯ ನಡವಳಿಕೆಯನ್ನು ಪ್ರಭಾವಿಸುತ್ತವೆ ಎಂದು ಭಾವಿಸಿದರೆ ಗೆಸ್ಟಾಲ್ಟ್ ಮನೋವಿಜ್ಞಾನ ವ್ಯಕ್ತಿ ಮತ್ತು ಪರಿಸರಗಳ ಸಂಬಂಧಗಳನ್ನು ಪರಸ್ಪರ ನಿಯೋಗಾತ್ಮಕವಾಗಿ ಪ್ರಭಾವಿಸಬಲ್ಲ ವೆಕ್ಟಾರ್‌ಗಳು (vectors) ಎಂದು ಪರಿಗಣಿಸುತ್ತದೆ.

ಚೋಮ್‌ಸ್ಕಿ ಮಗುವೊಂದು ತನ್ನ ಸುತ್ತಲಿನ ಪರಿಸರದ ಜನರು ಭಾಷೆಯ ಉಪಯೋಗ ಮಾಡುವ ರೀತಿಯನ್ನು ಗಮನಿಸುತ್ತಿರುವಂತೆಯೇ ಅದರ ಹಿಂದೆ ಪ್ರವರ್ತಿಸುತ್ತಿರುವ ವ್ಯಾಕರಣ ನಿಯಮಗಳನ್ನು ಅಂತಸ್ಥ ಮಾಡಿಕೊಳ್ಳುವುದರ ಮೂಲಕ ಭಾಷೆಯ ಉಪಯೋಗವನ್ನು ಮಾಡುತ್ತಾ ಹೋಗುತ್ತದೆ ಎಂದು ವಾದಿಸಿದ ಅರ್ಥದ (Semantics) ಹಂತದಲ್ಲಿ ಎಲ್ಲ ಭಾಷೆಗಳ ವಾಕ್ಯಗಳೂ ಸಾರ್ವತ್ರಿಕವಾಗಿ ಹೆಚ್ಚು ಕಡಿಮೆ ಒಂದೇ ಎನ್ನಬಹುದಾದ Deep Structureನ್ನು (ನಂತರ ಜನರೇಟಿವ್ ಸಿಮ್ಯಾಂಟಿಕ್ಸ್ ಪಂಥದವರು ಇದನ್ನೇ ಮಾರ್ಪಡಿಸಿ Underlying Representation ಎಂದು ಕರೆದರು) ಪಡೆದಿರುತ್ತದೆ ಎಂದ. ಇದಲ್ಲದೆ ಭಾಷಾ ಸಾರ್ವತ್ರಿಕ ಅಂಶಗಳನ್ನು ಗುರುತಿಸಿ ಬೇರೆ ಬೇರೆ ಭಾಷೆಯ ವ್ಯಾಕರಣಗಳಲ್ಲಿ ಕಂಡು ಬರುವ ಸಾಮಾನ್ಯ ಅಂಶಗಳತ್ತ ಗಮನ ಸೆಳೆದನು. ಮುಂದೆ ಸವ್ಯದ ಅಧ್ಯಯನಗಳಲ್ಲಿ ಅರ್ಥವನ್ನು (meaning) ನಿರ್ಲಕ್ಷಿಸೋಣ ಎಂದು ಹೇಳಿದ್ದ, ಅರ್ಥವನ್ನು ಉತ್ಪಾದಕ (Generative) ರೀತಿಯದು ಎಂದು ವಿವರಿಸಿದ ಜನರೇಟಿವ್ ಸಿಮ್ಯಾಂಟಿಕ್ಸ್ ಪಂಥದವರು Presupposition, Causatives ಮುಂತಾದ ಅಧ್ಯಯನಗಳ ಮೂಲಕ ಭಾಷೆಯ ಸಿಮ್ಯಾಂಟಿಕ್ ಮತ್ತು ಪ್ರಾಗ್‌ಮ್ಯಾಟಿಕ್ ಹಂತದ ಅರ್ಥವನ್ನು ಕುರಿತು ಚರ್ಚಿಸಿದರು.

ಇದೇ ಸಂದರ್ಭದಲ್ಲಿ ಈ ಭಾಷಾವಿಜ್ಞಾನದ ಯೋಜನಾಕ್ರಮಗಳನ್ನು ಸಾಂಸ್ಕೃತಿಕ ಮಾನವಸಾಸ್ತ್ರ ಮತ್ತು ಜಾನಪದಗಳಿಗೆ ಅನ್ವಯಿಸುವ ಪ್ರಯತ್ನಗಳನ್ನು

ಸಾಮಾಜಿಕ ಭಾಷಾವಿಜ್ಞಾನಿಗಳು ಮತ್ತು ಮಾನವಶಾಸ್ತ್ರಜ್ಞರು ಮಾಡಿದರು. ಭಾಷೆ ಒಂದು ಸಾಂಸ್ಕೃತಿಕ ಸಂವಹನ ಪ್ರಕ್ರಿಯೆಯಾಗಿದ್ದು ಅದರ ಹಿಂದೆ ನಿರ್ದಿಷ್ಟವಾಗಿ ಪ್ರದರ್ಶಿಸುವ ವ್ಯಾಕರಣವೊಂದಿರುವುದರಿಂದ, ಸಂಸ್ಕೃತಿಯ ಎಲ್ಲ ಸಂವಹನ ಮಾಧ್ಯಮಗಳ ಹಿಂದೆ ಅಂತಸ್ಥವಾಗಿ ಪ್ರವರ್ತಿಸುತ್ತಿರುವ ನಿಯಮಗಳನ್ನು ಗುರುತಿಸಲು ಸಾಧ್ಯವೆಂದು ತೋರಿಸಿದರು. ಇದರಿಂದಾಗಿ ಜಾನಪದದಲ್ಲಿ ಸಂದರ್ಭ (Context)ದತ್ತ ಗಮನ ಹರಿಸಲು ಅವಕಾಶವಾಗಿ ಸಂದರ್ಭ, ಪ್ರದರ್ಶನ (Performance), ಸಂವಹನ (Communication) ಮುಂತಾದ ಹೊಸ ಹೊಸ ಪರಿಕಲ್ಪನೆಗಳು ಮೂಡಿಬಂದಿವೆ.[1] ಜನಪದ ರೂಪಗಳ ಹಿಂದೆ ಪ್ರದರ್ಶಿಸುತ್ತಿರುವ ವ್ಯಾಕರಣಗಳನ್ನು ಗುರುತಿಸುವ ಪ್ರಯತ್ನಗಳು ನಡೆದಿವೆ.

ಜನಪದ ಕಥೆ, ಪುರಾಣ, ಒಗಟು ಇತ್ಯಾದಿಗಳಲ್ಲಿ ರಾಚನಿಕ ನಿಯಮಗಳನ್ನು ಗುರುತಿಸುವ ಪ್ರಯತ್ನಗಳನ್ನು ಅದು ಯಾವುದೇ ಅಧ್ಯಯನ ಕ್ರಮದ್ದಾಗಿದ್ದರೂ ರಾಚನಿಕ ಪಂಥ ಎಂದೇ ಜಾನಪದದಲ್ಲಿ ನಿರ್ದೇಶಿಸಲಾಗಿದೆ. ಜನಪದ ಕಥೆ ಮತ್ತು ಪುರಾಣಗಳನ್ನು ಒಟ್ಟಾಗಿ ಕಥಾನಕ (Narratives) ಎಂದು ಕರೆದು ಅವುಗಳ ರಾಚನಿಕ ಘಟಕಗಳು ಕಥಾರಚನೆಯಲ್ಲಿ ಏರ್ಪಡಿಸಿಕೊಳ್ಳುವ ಆಂತರಿಕ ಸಂಬಂಧ ಮತ್ತು ರಚನಾಕ್ರಮಗಳನ್ನು ಕುರಿತಾದ ಅಭ್ಯಾಸವನ್ನು ಇಲ್ಲಿ ಮಾಡಲಾಗಿದೆ. ಅದರಲ್ಲಿ ಕೆಲವು ಪ್ರಮುಖ ವಿಧಾನಗಳನ್ನು ಹೆಸರಿಸಿ ಅವುಗಳ ಅಧ್ಯಯನ ಕ್ರಮದ ಸ್ಥೂಲವಾದ ಪರಿಚಯವನ್ನು ಮಾಡಿಕೊಡಲಾಗಿದೆ. ಅವುಗಳು ಕೆಳಕಂಡಂತಿವೆ :

(i) ಆರ್ನೆ‌ಆಂಟಿಯ ವರ್ಗ (Type)
(ii) ಸ್ಟಿತ್ ಥಾಮ್ಸನ್‌ನ ಆಶಯ (Motif)
(iii) ಪ್ರಾಪ್‌ನ ನಿಯೋಗ (Function)
(iv) ಲೆವಿ-ಸ್ಟ್ರಾಸ್‌ನ ಮಿಥೀಮ್ (Mytheme)
(v) ಅಲೆನ್ ಡಂಡೆಸ್‌ನ ಮೋಟಿಫೀಮ್ (Motifeme)
(vi) ಮರಾಂಡರ ರಾಚನಿಕ ಮಾದರಿಗಳು.
(vii) ಬೆಂಜಿಮಿನ್ ಕೋಲ್‌ಬಿಯ Eidones

---

1 ಇದರ ಬಗ್ಗೆ ಇನ್ನಷ್ಟು ವಿವರಗಳನ್ನು ಇದೇ ಲೇಖಕನ ಕೆಳಕಂಡ ಲೇಖನಗಳಲ್ಲಿ ನೋಡಬಹುದು

(i) 'ಜಾನಪದದಲ್ಲಿ ಕ್ಷೇತ್ರಕಾರ್ಯ : ಕೆಲವು ವಿಚಾರಗಳು' ಕರ್ನಾಟಕ ಭಾರತಿ, ಸಂಪುಟ. 11, ಸಂಚಿಕೆ. 3, ಪು. 51-72.

(ii) 'ಸಾಹಿತ್ಯ ಮತ್ತು ಪೌರಾಣಿಕ ಆಶಯಗಳು : ಒಂದು ಟಿಪ್ಪಣಿ', ಆಲೋಕ, ಪ್ರಾಯೋಗಿಕ ಸಂಚಿಕೆ 2, ಜುಲೈ-1979. ಪು. 12-17.

ಆರ್ನೆ ಆಟಿಯ ವರ್ಗ ಮತ್ತು ಥಾಮ್ಸನ್‌ನ ಆಶಯಗಳು ಬಿಹೇವಿಯರಿಸಂ ಪಂಥದ ಸಂಶೋಧನಾ ಕ್ರಮದಲ್ಲಿ ರೂಪುಗೊಂಡವುಗಳಾದ್ದರಿಂದ ರಾಚನಿಕವಾಗಿ ಆಂತರಿಕ ಸಂಘಾತಗಳನ್ನು ಗಮನಿಸದೆ ಮಾಡಿದ ಸೂಚಿಗಳಾಗಿವೆ. ಕಥೆಯ ಅಂತ್ಯದಲ್ಲಿ ಆಸಹಜ ಅಂಶವನ್ನು ಆಶಯವೂ ಸಾರಾಸಗಟಾದ ವಿಂಗಡನೆಯನ್ನು ವರ್ಗವೂ ಸೂಚಿಸುತ್ತದೆಂಬುದನ್ನು ಬಿಟ್ಟರೆ ರಾಚನಿಕವಾಗಿ ಅವುಗಳಿಗೆ ಮಹತ್ವವಿಲ್ಲ. ಆಶಯ ಕಥೆಯಲ್ಲಿ ವಿಶೇಷ್ಯಾತ್ಮಕವಾದ (Substantive) ಘಟಕ ಮಾತ್ರವಾಗಿದ್ದು ಕಥೆಯ ಕ್ರಿಯೆಯ ಮೇಲೆ ಯಾವ ಬಗೆಯ ಹತೋಟಿಯನ್ನೂ ಪಡೆದಿಲ್ಲ. ಕಥೆಯಲ್ಲಿ ಬರುವ ಪಾತ್ರಗಳ ವಿವರಗಳನ್ನು ಅಲಂಕರಿಸುವ (Decorate) ಅಂಶಗಳಾಗಿ ಉಳಿದಿವೆ. ಆಶಯ ಮತ್ತು ವರ್ಗಸೂಚಿಗಳು ರಾಚನಿಕ ಮಾದರಿಗಳನ್ನು ಗುರುತಿಸುವುದಕ್ಕಿಂತ ಹೆಚ್ಚಾಗಿ ವರ್ಗೀಕರಣದ ಪ್ರಯತ್ನಗಳಾದುದು ಅವುಗಳ ಈ ಮಿತಿಗೆ ಕಾರಣವಾಯಿತು.

ಪ್ರಾಪ್‌ನ ನಿಯೋಗಗಳೂ ಅಲೆನ್ ಡಂಡೆಸ್‌ನ ಮೋಟಿಫೀಮ್‌ಗಳೂ ಒಂದೇ ರೀತಿಯ ಘಟಕಗಳಾಗಿದ್ದು ಕಥೆಯ ಕ್ರಿಯಾಸರಣಿಯ ದೃಷ್ಟಿಯಿಂದ ಮಹತ್ವವಾದ ನಾಟಕೀಯ ಕ್ರಿಯೆಗಳು ಎಂದು ಕರೆಯಲಾಗುತ್ತದೆ. ಸುಮಾರು 32 ನಿಯೋಗಗಳನ್ನು ಗುರುತಿಸಿ ಅವುಗಳ ನಿರ್ದಿಷ್ಟ ಆಂತರಿಕ ಸಂಯೋಜನೆಯಿಂದ ಕಥೆ ರೂಪುಗೊಳ್ಳುತ್ತದೆಂದೂ ಪ್ರಾಪ್ ತೋರಿಸಿಕೊಟ್ಟಿದ್ದಾನೆ. ಕಥೆಯ ಪಠ್ಯದ ರೂಪ ಸಂಯೋಜನೆ ಸರಳ ರೇಖಾತ್ಮಕ (Linear) ವಾಗಿರುತ್ತದೆ. ಅಂದರೆ ಪಠ್ಯದ ರೂಪ ಸಂಯೋಜನೆ Syntagmatic ಆದುದು ಎಂದು ಅವನ ಅಭಿಪ್ರಾಯ. ಲೆವಿ ಸ್ಟ್ರಾಸ್, ಮರಾಂಡರ ಹಾಗೂ ಕೋಲ್‌ಬಿಯ ಅಧ್ಯಯನಗಳು ಪ್ರಾಪ್‌ನ ನಿಯೋಗಗಳ ಪರಿಕಲ್ಪನೆಯನ್ನು ಮಾರ್ಪಡಿಸಿ ಹಾಗೂ ಉತ್ತಮಗೊಳಿಸಿ ನಡೆಸಿದವುಗಳಾಗಿವೆ ಹಾಗೂ Syntagmatic ಹಾಗೂ Paradigmatic ಸಂಬಂಧಗಳನ್ನು ಕುರಿತಾದದ್ದಾಗಿವೆ.[2] ಲೆವಿಸ್ಟ್ರಾಸನ ಮಿಥೀಮ್ ಪರಿಕಲ್ಪನೆಯನ್ನು ವಸ್ತು–ರಾಚನಿಕ

---

2 Syntagmatic ಮತ್ತು Paradigmatic ಸಂಬಂಧಗಳ ಬಗ್ಗೆ ವಿವರವಾಗಿ ತಿಳಿಯಬಯಸುವವರು ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ನೋಡಬಹುದು. Syntagmatic ಸಂಬಂಧವನ್ನು ಸರಳರೇಖಾತ್ಮಕವಾದದ್ದು ಹಾಗೂ ವಾಕ್ಯಾತ್ಮಕವಾದದ್ದು ಎಂದು ವಿವರಿಸಲಾಗುತ್ತದೆ. ಅಂದರೆ ವಾಕ್ಯವೊಂದರ Categories ಗಳ (ನಾಮ ಪದ, ಕ್ರಿಯಾಪದ ಇತ್ಯಾದಿ) ನಡುವೆ ಬರುವ ಆಯ್ಕೆಯ ಮಿತಿ (Selectional restrictions) ಯಿಂದಾಗಿ ಏರ್ಪಡುವ ಸಂಬಂಧವನ್ನು Syntagmatic ಸಂಬಂಧ ಎಂದು ಸ್ಥೂಲವಾಗಿ ಹೇಳಬಹುದು. ಇಂಥ ಪ್ರತಿಯೊಂದು ನಾಮ ಪದ, ಕ್ರಿಯಾಪದ ಇತ್ಯಾದಿ Categories ಗಳಲ್ಲಿ ಸಾಧ್ಯವಿರುವ ಆಯ್ಕೆ (Choice) ಯ ಸಾಧ್ಯತೆಯನ್ನು Paradigmatic ಸಂಬಂಧ ಎಂದು ವಿವರಿಸಬಹುದು. ಇದು ಲಂಬರೇಖಾತ್ಮಕವಾದ (Vertical) ಸಂಬಂಧ.

ಘಟಕ (Contentual-Structural unit) ಎಂದು ಕರೆಯಬಹುದು. ಪುರಾಣವೊಂದರ ಪಠ್ಯದಲ್ಲಿನ ಕರ್ತೃ (Subject) ಮತ್ತು ಅಂಥಾ ವಿಶೇಷಣಗಳ (Predi– cate) ಸಂಬಂಧವನ್ನು ಕುರಿತಾದ ರಾಚನಿಕ ಸಂಬಂಧವನ್ನು ಗುರುತಿಸುವುದು ಇದರ ಉದ್ದೇಶ. ಇಲ್ಲಿನ ಅಧ್ಯಯನ ಕೇವಲ ರಾಚನಿಕ ಸಂಬಂಧವಷ್ಟೇ ಅಲ್ಲದೆ ಆ ಘಟಕಗಳ ಅರ್ಥದಲ್ಲಿನ ಪರಸ್ಪರ ಸಂಬಂಧಗಳನ್ನು ಕುರಿತಾದ ವಿಶ್ಲೇಷಣೆಯೂ ಆಗಿದೆ. ಪುರಾಣಗಳು ಸಂಸ್ಕೃತಿಯುಲ್ಲಿನ ಪರಸ್ಪರ ವಿರುದ್ಧವಾದ ತಾರ್ಕಿಕ ವೈರುಧ್ಯಗಳ (Logical oppositions) ಮತ್ತು ಅವುಗಳ ಮಧ್ಯವರ್ತಿಗಳ (Mediators) ಸಂಬಂಧಗಳು ಅಭಿವ್ಯಕ್ತಗೊಂಡಿರುವ ವಾಹಕ ಎಂದು ಭಾವಿಸಲಾಗುತ್ತದೆ. ಇದರಿಂದಾಗಿ ಪೌರಾಣಿಕ ರಚನೆ ಅನುರೂಪಗಳು (Compatilities) ಮತ್ತು ವೈರುಧ್ಯಗಳ ಸಂಯೋಜನೆಯಿಂದಾದ ಕ್ರಮಯೋಜಿತ ಮೇಳವೃಂದ (Permuted ensembles) ಎನಿಸಿಕೊಳ್ಳುತ್ತದೆ. ಜನಾಂಗದ ಪೌರಾಣಿಕಪ್ರಜ್ಞೆ ತಾರ್ಕಿಕ ವೈರುಧ್ಯಗಳ ನಡುವೆ ಮಧ್ಯವರ್ತಿತನವನ್ನು ಮಾಡುವುದರ ಮೂಲಕ ಈ ವೈರುಧ್ಯಗಳ ನಡುವೆ ಒಂದು ರೀತಿಯ ರಾಜಿಸೂತ್ರವನ್ನು (Conciliation) ಏರ್ಪಡಿಸುತ್ತಿರುತ್ತದೆ. ಲೆವಿ ಸ್ಟ್ರಾಸ್ ಈ ಮಾದರಿ ಸಾರ್ವತ್ರಿಕವಾಗಿ ದೇಶಕಾಲಗಳ ಭೇದವಿಲ್ಲದೆ ಜಗತ್ತಿನ ಪುರಾಣಗಳಲ್ಲಿ ಕಂಡುಬರುವುದನ್ನು ಗುರುತಿಸುತ್ತಾನೆ.

ಪ್ರಾಪ್ ಮತ್ತು ಲೆವಿಸ್ಟ್ರಾಸರು ತಮ್ಮ ಅಧ್ಯಯನಗಳಲ್ಲಿ ಕಥೆ ಮತ್ತು ಪುರಾಣಗಳನ್ನು ಸೃಷ್ಟಿಸಿದ ಸಾಮಾಜಿಕ ಪರಿಸರ ಯಾವುದೇ ಆಗಿದ್ದರೂ, ಅವುಗಳಲ್ಲಿ ಒಂದೇ ರೀತಿಯ ಸಾರ್ವತ್ರಿಕ ರಚನಾಮಾದರಿ ಕಂಡು ಬರುತ್ತದೆ ಎಂದು ವಾದಿಸುತ್ತಾರೆ. ಒಂದು ಜನಾಂಗದಲ್ಲಿ ಕಥೆಯನ್ನು ರೂಪಿಸುವ ಮನೋಧರ್ಮಕ್ಕೆ ಮೂಲತಃ ಕಾರಣವಾಗುವ ಸಾಂಸ್ಕೃತಿಕ ಸಾರ್ವತ್ರಿಕ ಅಂಶಗಳ (Cultural Universals) ನಿಯೋಗಾತ್ಮಕ ಪ್ರಭಾವವನ್ನು ಇದರಿಂದ ತಿರಸ್ಕರಿಸಿದಂತಾಗುತ್ತದೆ. ಹೀಗಾಗಿ ಈ ಪಂಥ ಕಥೆ ಮತ್ತು ಪುರಾಣಗಳ ಹಿನ್ನೆಲೆಯಲ್ಲಿ ಗುರುತಿಸುವ ಏಕೈಕ ಮಾನಸಿಕ ಮಾದರಿಯನ್ನು ಒಪ್ಪುವುದು ಕಷ್ಟವಾಗುತ್ತದೆ.

ಮರಾಂಡರ (Elli Kongas Maranda ಮತ್ತು Pierre Maranda) ಅಧ್ಯಯನಗಳು ಲೆವಿ ಸ್ಟ್ರಾಸ್‌ನ ಅಧ್ಯಯನ ಕ್ರಮದ ಮುಂದುವರಿದ ರಚನಾ ಮಾದರಿಗಳಾಗಿವೆ. ಜನ ಭಾಷೆಯಲ್ಲಿನ ಪುರಾಣಗಳನ್ನು ಕಂಪ್ಯೂಟರ್ ಭಾಷೆಗೆ ಪರಿವರ್ತಿಸಿ ಅವುಗಳ ಗುಣಾತ್ಮಕ (qualitative) ಮತ್ತು ಪರಿಗಣನಾತ್ಮಕ (quantitative) ವಿಶ್ಲೇಷಣೆಗಳನ್ನು ಕಂಪ್ಯೂಟರ್ ಆವರ್ತಾಂಕಗಳನ್ನು ಆಧರಿಸಿ ಮಾಡಿದ್ದಾರೆ. ಇವರ ಅಧ್ಯಯನಗಳು ಮೂಲಭೂತವಾಗಿ ಭಾಷಾ ವಿಜ್ಞಾನದ ವಿಶಿಷ್ಟಾಂಶ (Distin– ctive features) ತತ್ವವನ್ನು ಆಧರಿಸಿವೆ. ಲೆವಿ ಸ್ಟ್ರಾಸನ ಮಿಥೀಮ್ ಗಳಿಗಿಂತ ಭಿನ್ನವಾದ ಆದರೆ ಸರಳವಾದ ದ್ವಂದ್ವ (dichotomy)ಗಳು ವೈರುಧ್ಯಗಳು ಮತ್ತು

ನಿಯೋಗಗಳನ್ನು ಮೂಲ ಘಟಕಗಳನ್ನಾಗಿಟ್ಟುಕೊಂಡು ಕಥೆಯಲ್ಲಿ ಕ್ರಿಯಾತ್ಮಕ ಮತ್ತು ನಿಯೋಗಾತ್ಮಕವಾಗಿ ಪ್ರವರ್ತಿಸುವ ಸಕರ್ಮಕ/ಅಕರ್ಮಕ ಚಲನೆ (Transitive/Intransitive motion), ಅಂತರ್ಮುಖಿ/ ಬಹಿರ್ಮುಖಿ ರೂಪಾಂತರಗಳು (Intrinsic/ Extrinsic Transformations) ಈ ರೀತಿಯ ವಿಶಿಷ್ಟಾಂಶಗಳನ್ನು ಅಧ್ಯಯನ ಮಾಡುತ್ತಿರುವ ಕಥಾವಸ್ತುವಿಗೆ ಅನುಗುಣವಾಗಿ ಗುರುತಿಸುತ್ತಾ ಹೋಗುತ್ತಾರೆ. ಈ ರೀತಿಯ ವೈರುಧ್ಯಗಳ ಸಂಬಂಧವನ್ನು ಪ್ರತಿಸ್ಥಾಪಿಸುವ ಮಧ್ಯವರ್ತಿಯನ್ನು ಅದರ ರಾಚನಿಕ ವಿವರಗಳನ್ನೂ ಗುರುತಿಸಿ ಅವುಗಳನ್ನು ಸಾಂಸ್ಕೃತಿಕವಾಗಿ ವಿಶ್ಲೇಷಿಸುತ್ತಾರೆ. ಇದನ್ನು ಅವರ ಮಾತುಗಳಲ್ಲಿ ನೋಡಬಹುದು : 'We thus consider the structure as a matricial form and content as a repertoire of socio-historically conditioned terms capable of filling it'[3] ಜನಪದ ಕಥೆ ಮತ್ತು ಪುರಾಣಗಳ ಹಿಂದಿನ ರಾಚನಿಕ ಮಾದರಿಗಳನ್ನಷ್ಟೇ ಅಲ್ಲದೆ ಇತರ ಜನಪದ ರೂಪಗಳಿಂದ ಒಗಟು, ನಂಬಿಕೆ, ಗಾದೆ ಮುಂತಾದವುಗಳಿಗೂ ಕೂಡ ಈ ತತ್ವ ಅನ್ವಯಿಸುತ್ತದೆ ಎಂದು ತೋರಿಸಿದ್ದಾರೆ.

ಪ್ರಾಪ್, ಲೆವಿಸ್ಟ್ರಾಸ್, ಮರಾಂಡರು ಪುರಾಣ ಮತ್ತು ಜನಪದ ಕಥೆಗಳು ಏಕೈಕ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ರಾಚನಿಕ ಮಾದರಿಗಳ ಮೇಲೆ ರಚನೆಗೊಂಡಿವೆ ಎಂದು ವಾದಿಸಿದರೆ ಬೆಂಜಮಿನ್ ಕೋಲ್‌ಬಿ ಪ್ರತಿಯೊಂದು ಭಾಷೆಗೂ ಅದರದೇ ಆದ ವ್ಯಾಕರಣವಿರುವಂತೆ (ಈ ವ್ಯಾಕರಣ ಭಾಷಾ ಸಾರ್ವತ್ರಿಕ ಅಂಶಗಳಿಂದ ರೂಪುಗೊಂಡಿದ್ದರೂ ಸಹ) ಪ್ರತಿಯೊಂದು ಜನಾಂಗದ ಪಾರಂಪರಿಕವಾದ ಸಾಹಿತ್ಯ ಪ್ರಭೇದವೂ (Genere) ತನ್ನದೇ ಆದ ವ್ಯಾಕರಣ ಅಥವಾ ಅದಕ್ಕೆ ಸಮೀಪವಾಗಬಲ್ಲ ಒಂದು 'recall system'ನ್ನು ಪಡೆದಿರುತ್ತದೆ ಎಂದು ಅಭಿಪ್ರಾಯ ಪಡುತ್ತಾನೆ. ಭಾಷೆ ಮತ್ತು ಅದರ ನಿಯಮಗಳು ಮಗುವಿನಲ್ಲಿ ಪರಿಸರದೊಡನೆ ಸಂಪರ್ಕದಿಂದ ಅಂತಸ್ಥಗೊಳ್ಳುವಂತೆಯೇ ಜನಪದ ರೂಪಗಳ ವ್ಯಾಕರಣ ಕೂಡ ವಕ್ತೃ ಮತ್ತು ಕೇಳುಗನಲ್ಲಿ ಬೇರೆ ಬೇರೆ ರೀತಿಯಾಗಿ ಅಂತಸ್ಥಗೊಳ್ಳುತ್ತದೆ ಎಂಬುದು ಈ ವಾದದ ತಿರುಳಾಗಿದೆ. ಟ್ರಾನ್ಸ್‌ಫರ್ಮೇಷನ್-ಜನರೇಟಿವ್ ವ್ಯಾಕರಣ ಹಲವಾರು ಮಿತಿಗಳನ್ನುಳ್ಳದ್ದು ಎಂದು ಭಾವಿಸುವ ಈ ಪಂಥ ಸಾಮಾಜಿಕ ಮತ್ತು ಮಾನಸಿಕ ಭಾಷಾ ವಿಜ್ಞಾನಿಗಳು ಭಾಷೆಯ ಸಿಮ್ಯಾಂಟಿಕ್ ಮತ್ತು ಪ್ರ್ಯಾಗ್‌ಮ್ಯಾಟಿಕ್ ಹಂತಗಳಲ್ಲಿನ ಅರ್ಥವನ್ನು ಕುರಿತು ನಡೆಸಿದ ಸಂಶೋಧನೆಯಿಂದ ರೂಪುಗೊಂಡಿದೆ.

---

[3] Elli Kongas Maranda and Pierre Maranda, Structural Models in Folklore and Transformational Essays (Paris, Mouton, 1971), P. 31.

Eidochronic ಪಂಥ ಎಂದು ಕರೆಯಲಾಗುವ ಈ ಅಧ್ಯಯನ ಕ್ರಮದಲ್ಲಿ ಕಥೆಗಳ ಮೂಲ ಘಟಕವನ್ನು 'Eidon' (ಅಂದರೆ idea ಅಥವಾ form ಎಂಬ ಅರ್ಥವಿದೆ) ಎಂದು ಕರೆಯಲಾಗುತ್ತದೆ. ಈ ಘಟಕಗಳಲ್ಲಿ ಕೆಲವು ಇತರ ಪಂಥದ ನಿಯೋಗಗಳಾಗಿದ್ದರೆ ಮತ್ತೆ ಕೆಲವು ಅದಕ್ಕಿಂತ ಸಂಕೀರ್ಣ ಸ್ವರೂಪದ, ಪದಗುಚ್ಛ ಮತ್ತು ವಾಕ್ಯ ಮಟ್ಟದ (syntactic) ಘಟಕಗಳಾಗಿವೆ.

ಕೋಲ್‌ಬಿಯ ಅಧ್ಯಯನ ಕ್ರಮದಲ್ಲಿ ಕಥಾ ರಚನೆಯ ಜೋಡಣಾಕ್ರಮವನ್ನು ಅದರ ಸಮಾನ ರೂಪಗಳಾದ 'Eidones' ಅಥವಾ 'chunks'ಗಳಿಗೆ ಪರಿವರ್ತಿಸಲಾಗುತ್ತದೆ. ಈ ಬಗೆಯ ಸಂದರ್ಭ ಮತ್ತು ಕ್ರಿಯೆಗಳ ಜೋಡಣಾ ಕ್ರಮಕ್ಕೆ 'ನರೇಟಿವ್ ವ್ಯಾಕರಣ' ಎಂದು ಕರೆಯಲಾಗುತ್ತದೆ. ಪ್ರತಿಯೊಂದು ಕಥೆಯನ್ನೂ ಮೂರು ಪ್ರಮುಖ ಮತ್ತು ಸಮಭಾಗಗಳನ್ನಾಗಿ ಒಡೆಯಲಾಗುತ್ತದೆ. ಕಂಪ್ಯೂಟರ್‌ನ ಆಧಾರದಿಂದ ಎಲ್ಲ ಕಥೆಗಳ ಮೊದಲ ಭಾಗವನ್ನು ತೆಗೆದುಕೊಂಡು ಅಲ್ಲಿನ 'ಮಹತ್ವ ಪೂರ್ಣ ಸಮಾಚಾರ'ವನ್ನು ನೀಡುವ ಪದ, ಪದಗುಚ್ಛ ಮತ್ತು ವಾಕ್ಯಗಳನ್ನು ಪಟ್ಟಿಮಾಡಲಾಗುತ್ತದೆ.[4] ನಂತರ ಕ್ರಮವಾಗಿ ಎರಡು ಮತ್ತು ಮೂರನೆಯ ಭಾಗ ಇಂತಹ 'ಮಹತ್ವಪೂರ್ಣ ಸಮಾಚಾರ' ಘಟಕಗಳನ್ನು ಕಂಡುಹಿಡಿಯಲಾಗುತ್ತದೆ. ಇವುಗಳ ರಾಚನಿಕ ವ್ಯಾಕರಣವನ್ನು ನಂತರ ಗುರುತಿಸಲಾಗುತ್ತದೆ. ಕೇವಲ ರಚನಾತ್ಮಕ ಮಟ್ಟದಲ್ಲಿ ಮಾತ್ರವಲ್ಲದೆ ಕಾವ್ಯಾತ್ಮಕ, ನಾಟಕೀಯ, ಭಾಷಾ ವೈಜ್ಞಾನಿಕ ಹಾಗೂ ಸಾಂಕೇತಿಕ ಅಂಗಗಳಲ್ಲಿ (components) ಅಡಗಿರುವ ರಾಚನಿಕ ಮಾದರಿ ಮತ್ತು ಅರ್ಥವನ್ನು ಹಂತ ಹಂತವಾಗಿ ಅಧ್ಯಯನ ಮಾಡಲಾಗು

---

[4] 'ಮಹತ್ವಪೂರ್ಣ ಸಮಾಚಾರ' ಎಂಬುದನ್ನು Significant Information ಎಂಬ ಅರ್ಥದಲ್ಲಿ ಬಳಸಲಾಗಿದೆ. Information Theory ಯಲ್ಲಿ ಒಂದು ಬರಹದಲ್ಲಿ ಅತ್ಯಂತ ಹೆಚ್ಚು ಬಾರಿ ಹಾಗೂ ಅತ್ಯಂತ ಕಡಿಮೆ ಬಾರಿ ಕಂಡುಬರುವ ಪದಗಳು ಅತ್ಯಂತ ಹೆಚ್ಚಿನ ಸಮಾಚಾರ (Information content) ವನ್ನು ಒಳಗೊಂಡಿರುತ್ತವೆ. ಎಂದು ಭಾವಿಸಲಾಗುತ್ತದೆ. ಕಥೆಯೊಂದರಲ್ಲಿ ಅತಿ ಹೆಚ್ಚು ಬಾರಿ ಪ್ರಸ್ತಾಪಿಸುವ ಕಥಾ ನಾಯಕ ಸಾಂಸ್ಕೃತಿಕವಾಗಿ ಹೆಚ್ಚು ಮಹತ್ವಪೂರ್ಣ ಸಮಾಚಾರವನ್ನು ಸಂವಹನಿಸುತ್ತಿರುತ್ತಾನೆ. ಹಾಗೇ ಭಾರತೀಯ ಕಥೆಯಲ್ಲಿ ಬರುವ 'ಸೀಲ್' ಅಥವಾ ಹಿಮಕರಡಿಯ ಪ್ರಸ್ತಾಪ ಒಂದೇ ಬಾರಿ ಬಂದಿದ್ದರೂ ಅದು ಸಾಂಸ್ಕೃತಿಕವಾಗಿ ಹೆಚ್ಚು ಮಹತ್ವಪೂರ್ಣ ಸಮಾಚಾರವನ್ನು ಸಂವಹನಿಸುತ್ತಿರುತ್ತದೆ ಎಂದು ಭಾವಿಸಲಾಗುತ್ತದೆ.

ತ್ತದೆ.[5] ಕೋಲ್‌ಬಿ ಈ ರೀತಿ ಎಸ್ಕಿಮೋ ಮತ್ತು ಜಪಾನಿ ಕಥೆಗಳಲ್ಲಿನ ವ್ಯಾಕರಣವನ್ನು ಗುರುತಿಸಿ ಆ ರಚನೆಗಳಿಗೂ ಅದರ ಸಾಂಸ್ಕೃತಿಕ ಮುಖಕ್ಕೂ ಇರುವ ಅನೇಕ ಸಂಬಂಧಗಳನ್ನು ತೋರಿಸಿದ್ದಾನೆ.

ಇಲ್ಲಿನತನಕ ಮಾಡಿದ ರಾಚನಿಕ ಪಂಥದ ವಿವಿಧ ಪ್ರಯತ್ನಗಳ ಪರಿಚಯವನ್ನು ಮುಂದೆ ಮಾಡಿರುವ ರಾಚನಿಕ ಅಧ್ಯಯನ ಪ್ರಯತ್ನಕ್ಕೆ ಸೂಕ್ತಹಿನ್ನೆಲೆಯನ್ನು ಕಲ್ಪಿಸುವ ಉದ್ದೇಶದಿಂದ ಮಾಡಲಾಯಿತು.

3. ಕಪೋತಾಖ್ಯಾನದ ವಿಶ್ಲೇಷಣೆ :

(i) ನಾಯಕ-ಪ್ರತಿನಾಯಕರು

ಜನಪದ ಕಥೆಗಳಲ್ಲಿನ ಕ್ರಿಯೆ ಸಾಮಾನ್ಯವಾಗಿ ಯಾವುದಾದರೂ ಒಂದು ಬಗೆಯ ಅತಿಮಾನುಷ ಕ್ರಿಯೆಯಾಗಿರುತ್ತದೆ. ಕಥೆಯೊಂದರಲ್ಲಿ ಇಂತಹ ಪ್ರಧಾನ ಕ್ರಿಯೆಯೂ ಇದಕ್ಕೆ ಆನುಷಂಗಿಕವಾಗಿ ಕೆಲವು ಉಪಕ್ರಿಯೆಗಳೂ ಇರಬಹುದು. ಈ ಕ್ರಿಯೆ ಎರಡು ಪ್ರಮುಖ ಪಾತ್ರಗಳ ನಡುವೆ ನಡೆಯುವ 'ಸವಾಲ್-ಜವಾಬ್' ರೂಪದ ಕ್ರಿಯೆಯಾಗಿರುತ್ತದೆ. ಆದ್ದರಿಂದ ಈ ಎರಡು ಪ್ರಮುಖ ಪಾತ್ರಗಳನ್ನು ಸವಾಲನ್ನು ಹಾಕುವವ ಮತ್ತು ಅದನ್ನು ಬಿಡಿಸುವವ ಎಂದು ಕರೆಯಬಹುದು. ಆದರೆ ಇವು ಕ್ರಮವಾಗಿ ಪ್ರತಿನಾಯಕ ಮತ್ತು ನಾಯಕರ ಪಾತ್ರಗಳೇ ಆಗಿವೆ. ಆದ್ದರಿಂದ ನಾಯಕ-ಪ್ರತಿನಾಯಕರನ್ನು ಕಥೆಯ ಪ್ರಮುಖ ಪಾತ್ರಗಳು ಎಂದು ಪರಿಗಣಿಸಬಹುದು. ಈ ಪಾತ್ರಗಳು ಕಥೆಯಿಂದ ಕಥೆಗೆ ಬೇರಾಗಬಹುದು ಅಥವಾ ಒಂದೇ ಕಥೆಯ ಬೇರೆ ಬೇರೆ ಪಾತ್ರಗಳಲ್ಲಿ ಬೇರೆ ಬೇರೆ ವ್ಯಕ್ತಿಗಳು, ಪಾತ್ರಗಳು ನಾಯಕ ಪಾತ್ರವನ್ನು ವಹಿಸಬಹುದು. ಬಹಳಷ್ಟು ಕಪೋತಾಖ್ಯಾನಗಳಲ್ಲಿ ಕಪೋತ ದಂಪತಿಗಳು ನಾಯಕ ಮತ್ತು ಬೇಡನು ಪ್ರತಿನಾಯಕರಾಗಿ ಕಂಡು ಬಂದರೂ, ದುರ್ಗಸಿಂಹನಲ್ಲಿ ಕಪೋತ ಮಾತ್ರ ನಾಯಕನಾಗುತ್ತದೆ. ಲೇಯಾಸ್ ದೇಶದ ಪಂಚತಂತ್ರದಲ್ಲಿ ಮುನಿಯೊಬ್ಬ ನಾಯಕನಾಗುತ್ತಾನೆ. ಚಾಮರಾಜೋಕ್ತಿವಿಲಾಸ ರಾಮಾಯಣದಲ್ಲಿ ಬೇಡನ ಪಾತ್ರದ ಬದಲಿಗೆ ಗಿಡುಗ ಪ್ರತಿನಾಯಕನಾಗುತ್ತದೆ.

(ii) **ಕ್ರಿಯಾತ್ಮಕ ಘಟಕಗಳು :-** ಮೇಲೆ ಹೇಳಿದ ನಾಯಕ-ಪ್ರತಿನಾಯಕ ಪಾತ್ರಗಳ ಹೆಸರು, ವ್ಯಕ್ತಿಗಳು ಬದಲಾಗುತ್ತಾ ಹೋದರೂ ಇವೆಲ್ಲವೂ ಒಂದೇ

---

5 ಹೆಚ್ಚಿನ ವಿವರಗಳಿಗೆ ನೋಡಿ, Benjimin N Colby and Rodger Knaus Men, Grammar and Machines, A new direction for the Study of Man in 'On Language, Culture and Religion' in honour of Eugene A Nida(ed) Matthew Black and William A Surally, (Paris, Mouton, 1974)

ಕಥೆಯು ಭಿನ್ನಪಾಠಗಳು ಎಂದು ಗುರುತಿಸಲು ಕಾರಣವಾಗುವ ಅಂಶವೊಂದಿದ್ದು ಅದನ್ನು ಕಥೆಯ ಪ್ರಧಾನ ಕ್ರಿಯೆ ಎಂದು ಭಾವಿಸಬಹುದು. ಈ ರೀತಿಯ ಎಲ್ಲ ಕಥೆಗಳನ್ನು ಸಾರಾಸಗಟಾಗಿ ಗುಂಪುಗೂಡಿಸಲು ಇವೆಲ್ಲವನ್ನೂ 'ಆತ್ಮತ್ಯಾಗ'ವನ್ನು ಪ್ರಧಾನ ಕ್ರಿಯೆಯನ್ನಾಗಿರುವ ಕಥೆಗಳು ಎನ್ನಬಹುದು. ವಿವರವಾಗಿ ಪರಿಶೀಲಿಸಿ ಇಲ್ಲಿನ ಪ್ರಧಾನ ಕ್ರಿಯೆಯನ್ನು 'ಅಗತ್ಯವಸ್ತುವಿನ ಪರಿತ್ಯಾಗ' (sacrifice of the subsistance stuff) ಎಂದಿಟ್ಟುಕೊಂಡರೆ ಇದರಿಂದ ಸ್ಪಂದನಗೊಳ್ಳುವ ಸಾಂಸ್ಕೃತಿಕ ಮೌಲ್ಯಗಳು ಸಾರ್ವಕಾಲಿಕವಾಗುತ್ತವೆ. ಯಾವುದೇ ಪ್ರಧಾನ ಕ್ರಿಯೆ ಒಂದಕ್ಕೊಂದು ತಾರ್ಕಿಕವಾಗಿ ಕೊಂಡಿಯಂತೆ ಬೆಸೆದುಕೊಂಡಿರುವ ಸಣ್ಣಸಣ್ಣ ಕ್ರಿಯಾತ್ಮಕ ಘಟಕಗಳಿಂದ ಆಗಿದ್ದು ಈ ಕ್ರಿಯಾತ್ಮಕ ಘಟಕಗಳೇ ಕಥೆಯ ರಾಚನಿಕ ಘಟಕಗಳೂ ಆಗಿವೆ. ಒಂದು ಕಥೆಯ ಕ್ರಿಯೆಗಳ ಜೋಡಣೆಯಲ್ಲಿ ಸ್ಥಿರಾಂಶ ಮತ್ತು ಚರಾಂಶಗಳೆರಡೂ ಇದ್ದು ಸ್ಥಿರಾಂಶಗಳು ಮಾತ್ರ ಕಥೆಯಲ್ಲಿ ನಿಯೋಗಾತ್ಮಕವಾಗಿ ವರ್ತಿಸಿ ಅದರ ರಾಚನಿಕ ಚೌಕಟ್ಟನ್ನು ನಿರ್ಧರಿಸುತ್ತವೆ. ಚರಾಂಶಗಳು ಕ್ರಿಯಾತ್ಮಕವಾದರೂ ರಾಚನಿಕವಾಗಿ ನಿಯೋಗಾತ್ಮಕವಾಗುವುದಿಲ್ಲವಾದ್ದರಿಂದ ಅವುಗಳನ್ನು • ರಾಚನಿಕ ಘಟಕಗಳೆನ್ನಲು ಬರುವುದಿಲ್ಲ. ಆದರೆ ಒಂದು ಕಥೆಯ ಕ್ರಿಯಾತ್ಮಕ ಘಟಕಗಳು ಎಲ್ಲಕಥೆಗಳ ಕ್ರಿಯಾತ್ಮಕ ಘಟಕಗಳೂ ಆಗುತ್ತವೆಂದೂ ಹೇಳುವಂತಿಲ್ಲ. ಪ್ರತಿಯೊಂದು ಕಥೆಯೂ ತನ್ನದೇ ಆದ ಕ್ರಿಯಾತ್ಮಕ ಘಟಕಗಳನ್ನು ಹೊಂದಿದ್ದು ಇವುಗಳ ಅಂತರಿಕ ಜೋಡಣಾ ಕ್ರಮದಲ್ಲಿ ಒಂದು ಬಗೆಯ 'ಆಯ್ಕೆಯ ಮಿತಿ' (selectional restrictions) ಕಂಡುಬರುತ್ತದೆ. ಮತ್ತು ಎರಡು ಕ್ರಿಯಾತ್ಮಕ ಘಟಕಗಳಲ್ಲಿ ಪರಸ್ಪರ 'ತಾರ್ಕಿಕ ಹೊಂದಾಣಿಕೆ' ಇರಬೇಕಾಗುತ್ತದೆ. ಕಪೋತಾಖ್ಯಾನವನ್ನೇ ನಿದರ್ಶನವಾಗಿ ತೆಗೆದುಕೊಂಡರೆ ಗಂಡು ಕಪೋತವು ಬೆಂಕಿಯನ್ನು ತಂದುಕೊಡುವುದಕ್ಕೂ ಮೊದಲೇ ಅದರಲ್ಲಿ ಕಪೋತನ ಆತ್ಮಾರ್ಪಣೆ ಸಾಧ್ಯವಿಲ್ಲ. ಮತ್ತು ಕಪೋತನ ಆತ್ಮಾರ್ಪಣೆ ಕ್ಷುದ್ಬಾಧೆಯ ಬೇಡಿಕೆಯನ್ನು ಹಿಂಬಾಲಿಸಿಯೇ ಆಗಬೇಕಾಗುತ್ತದೆ. ಈ ರೀತಿಯ ಆಯ್ಕೆ ಮಿತಿ ಮತ್ತು ತಾರ್ಕಿಕ ಹೊಂದಾಣಿಕೆ ಕ್ರಿಯಾತ್ಮಕ ಘಟಕಗಳ ಹಂತದಿಂದ ಕಥೆಯ ಸಿಮ್ಯಾಂಟಿಕ್ ಮತ್ತು ಪ್ರಾಗ್‌ಮ್ಯಾಟಿಕ್ ಹಂತಗಳಿಗೆ ಅನ್ವಯಿಸುವುದರ ಮೂಲಕ ಸಂವಹನ ಸಂದರ್ಭದಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಳ್ಳುವುದರಿಂದ, ಅವುಗಳ ಜೋಡಣಾಕ್ರಮದ ಹಿಂದೆ ಪ್ರವರ್ತಿಸುತ್ತಿರುವ ನಿಯಮ ಮತ್ತು ಅರ್ಥಗಳನ್ನು ಒಟ್ಟಿಗೆ ನೋಡಬೇಕಾಗುತ್ತದೆ. ಪಟ್ಟಿ 1 ರಲ್ಲಿ ಕಪೋತಾಖ್ಯಾನಗಳ ಕ್ರಿಯೆಗಳನ್ನು ನೀಡಿ ಕ್ರಿಯಾತ್ಮಕ ಘಟಕಗಳನ್ನು ಮಾತ್ರ * ಈ ಗುರುತಿನೊಂದಿಗೆ ನೀಡಲಾಗಿದೆ. (ಪುಟ 32 ಮತ್ತು 33ರ ನಡುವೆ ನೋಡಿ).

ಕಪೋತಾಖ್ಯಾನದಲ್ಲಿ ಈ *ಗುರುತಿನೊಂದಿಗೆ ನೀಡಲಾಗಿರುವ ಕ್ರಿಯಾತ್ಮಕ ಘಟಕಗಳ ಮಾತ್ರ ಸ್ಥಿರಾಂಶಗಳಾಗಿದ್ದು ಉಳಿದವು ಚರಾಂಶಗಳಾಗುತ್ತವೆ. ಮತ್ತು ಈ

ಸ್ಥಿರಾಂಶಗಳ ಜೋಡಣಾಕ್ರಮದ ಆಧಾರದ ಮೇಲೆಯೇ ಕಪೋತಾಖ್ಯಾನದ ಎಲ್ಲ ಕಥೆಗಳು ನಾಯಕ–ಪ್ರತಿನಾಯಕರ ಹೆಸರು ಮತ್ತು ವ್ಯಕ್ತಿತ್ವದಲ್ಲಿ ಬದಲಾದರೂ ಸಹ ಒಂದೇ ಗುಂಪಿನ ಕಥೆಗಳು ಎಂದು ಗುರುತಿಸಲು ಸಾಧ್ಯವಾಗುತ್ತದೆ. ವಾಸ್ತವಿಕವಾಗಿ ಜನಪದ ಕಥೆ, ಗಾದೆ, ಒಗಟು ಇತ್ಯಾದಿಗಳಲ್ಲಿ ಮೂಲ ರಾಚನಿಕ ಮಾದರಿ ಒಂದೇ ಆಗಿದ್ದು ಅವುಗಳ ಪಾತ್ರಗಳ ಹೆಸರು ವ್ಯಕ್ತಿತ್ವದ ವಿವರಗಳಲ್ಲಿ ಕಾಲ–ದೇಶಗಳಲ್ಲಿ ವ್ಯತ್ಯಾಸ ಕಂಡು ಬರುವುದರ ಹಿಂದಣ ಗುಟ್ಟು ಇದೇ ಆಗಿದೆ.[6]

ಒಂದು ಕಥೆಯು ಸ್ಥಿರಾಂಶ ಮತ್ತು ಚರಾಂಶಗಳಲ್ಲಿ ಸ್ಥಿರಾಂಶಗಳ ಲಕ್ಷಣವೇನೆಂಬುದನ್ನು ಮೇಲೆ ವಿವರಿಸಲಾಯಿತು. ಈಗ ಚರಾಂಶಗಳನ್ನು ಕುರಿತು ಯೋಚಿಸಬಹುದು. ಈ ಪರಿಕಲ್ಪನೆಯನ್ನು ಭಾಷಾ ವಿಜ್ಞಾನದಿಂದ ತೆಗೆದುಕೊಳ್ಳಲಾಗಿದೆಯಾದ್ದರಿಂದ ಅದರ ಬಗ್ಗೆ ವಿವರಿಸುವ ಅಗತ್ಯವಿದೆ. ಚರಾಂಶಗಳನ್ನು (variables) ಭಾಷಾ ವಿಜ್ಞಾನದಲ್ಲಿ 'Variables are simply symbols which range over all possible sequences of modes including the empty sequence' ಎಂದು ವಿವರಿಸಲಾಗುತ್ತದೆ. ಅಂದರೆ ಸ್ಥೂಲವಾಗಿ ಒಂದೇ ರೀತಿಯ ರಚನೆಯುಳ್ಳ ಚೌಕಟ್ಟನ್ನುಳ್ಳ ವಾಕ್ಯಗಳಲ್ಲಿ ಬದಲಾಗುತ್ತಾ ಹೋಗುವ ಹಾಗೂ ರೂಪಾಂತರದ (Transformatin) ದೃಷ್ಟಿಯಿಂದ ಅನಗತ್ಯ ಎನಿಸುವ ಭಾಗಗಳನ್ನು ನಿರ್ದೇಶಿಸುವ ಯಾದೃಚ್ಛಿಕ ಸಂಕೇತಗಳನ್ನು ಚರಾಂಶಗಳು ಎನ್ನಬಹುದು! ನಿದರ್ಶನಕ್ಕಾಗಿ ಕೆಳಗಿನ ವಾಕ್ಯಗಳನ್ನು ಗಮನಿಸಿ :

1) ಪದ್ಮ ಕಾಲೇಜಿಗೆ ಹೋಗುತ್ತಾಳೆ
2) ರತ್ನಮ್ಮನ ಮಗಳು ಪದ್ಮ ಕಾಲೇಜಿಗೆ ಹೋಗುತ್ತಾಳೆ
3) ಸುಬ್ಬಣ್ಣ ಮತ್ತು ರತ್ನಮ್ಮರ ಮಗಳು ಪದ್ಮ ಮಲ್ಲೇಶ್ವರದ ಕಾಲೇಜಿಗೆ ಹೋಗುತ್ತಾಳೆ
4) ಸುಬ್ಬಣ್ಣ ಮತ್ತು ರತ್ನಮ್ಮರ ಮಗಳು ಪದ್ಮ ಮಲ್ಲೇಶ್ವರದ ಎಂ. ಇ. ಎಸ್. ಕಾಲೇಜಿಗೆ ಹೋಗುತ್ತಾಳೆ.

---

6 ಇಲ್ಲಿ ಇನ್ನೊಂದು ಸಣ್ಣ ಚರ್ಚೆಯನ್ನು ಮಾಡಬಹುದು. ಕಥೆಯ ಪಾತ್ರಗಳು ಕಥೆಯ ರಾಚನಿಕ ಮಾದರಿಯ ಮೇಲೆ ನೇರವಾದ ಹತೋಟಿಯನ್ನೂ ಪಡೆದಿಲ್ಲ ಎಂಬುದು ಸ್ಪಷ್ಟವಾಗುವುದರಿಂದ ಜನಪದ ಕಥೆಗಳ ಹೆಸರನ್ನು ಅವುಗಳ ನಾಯಕರ ಹೆಸರಿನಿಂದ ಕರೆಯುವ ನಮ್ಮ ಪದ್ಧತಿಯ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ ಕಥೆಯನ್ನು ಹೇಳುವವರು ವಾಸ್ತವವಾಗಿ ಅದಕ್ಕೊಂದು ಹೆಸರನ್ನು ಕೊಡುತ್ತಾರೆಯೇ ? ಹಾಗಿದ್ದಲ್ಲಿ ಅದು ಕ್ರಿಯೆಯ ಆಧಾರದ ಮೇಲೋ ಅಥವಾ ಪಾತ್ರಗಳ ಆಧಾರದ ಮೇಲೋ ಎಂಬುದನ್ನು ಗುರುತಿಸಬೇಕಾಗಿದೆ. ಕಥೆಯ ಪಾತ್ರಕ್ಕೂ ಅದರ ಹೆಸರು ನಾಯಕನನ್ನು ಅಥವಾ ಕ್ರಿಯೆಯನ್ನು ಆಧರಿಸಿರುವುದಕ್ಕೂ ಸಂಬಂಧವಿರುವಂತೆ ಕಾಣುತ್ತದೆ. ಇದರ ಪ್ರಸರಣವನ್ನು ಗುರುತಿಸಿದಲ್ಲಿ ಕುತೂಹಲಕಾರಿ ಅಂಶಗಳು ಗೋಚರವಾಗಬಹುದು.

ಮೇಲಿನ ನಾಲ್ಕು ವಾಕ್ಯಗಳು ಮೇಲು ನೋಟಕ್ಕೆ ಬೇರೆ ಬೇರೆಯಾಗಿ ಕಂಡರೂ ಅರ್ಥ ಮತ್ತು ರಚನೆಯ ದೃಷ್ಟಿಯಿಂದ ಒಬ್ಬ ವ್ಯಕ್ತಿಯು ಮಾಡುತ್ತಿರುವ ಕ್ರಿಯೆಯನ್ನು ಕುರಿತಾಗಿವೆ. ಇದನ್ನು S → NP-VP ಎಂಬ ರಚನೆಯಲ್ಲಿ ಸಮರ್ಪಕವಾಗಿ ತೋರಿಸಬಹುದು.[7] ಎರಡು, ಮೂರು ಮತ್ತು ನಾಲ್ಕನೆಯ ವಾಕ್ಯಗಳ ರತ್ನಮ್ಮನ ಮಗಳು ಮತ್ತು ಸುಬ್ಬಣ್ಣ ಮತ್ತು ರತ್ನಮ್ಮನ ಮಗಳು ಎಂಬ ಪದಗುಚ್ಛಗಳು ಪದ್ಮಳ ವಿಶೇಷಣಗಳಾಗಿದ್ದು ಇಂತಹ ಗುಣವಾಚಕ ರೂಪದ ವಿಶೇಷಣಗಳನ್ನು ಸೇರಿಸುತ್ತಾ ಹೋಗುವ ಸಾಧ್ಯತೆ ಇದೆ. ಹಾಗೆಯೇ ಮೂರು ಮತ್ತು ನಾಲ್ಕನೆಯ ವಾಕ್ಯಗಳ ಮಲ್ಲೇಶ್ವರದ ಮತ್ತು ಮಲ್ಲೇಶ್ವರದ ಎಂ.ಇ.ಎಸ್. ಎಂಬ ಪದಗುಚ್ಛಗಳೂ ಕಾಲೇಜು ಎಂಬ ನಾಮಪದದ ವಿಶೇಷಣಗಳಾಗಿದ್ದು ಇಂಥವುಗಳನ್ನೂ ಸೇರಿಸುತ್ತಾ ಹೋಗುವ ಸಾಧ್ಯತೆ ಇದೆ. ರಚನೆ ಮತ್ತು ರೂಪಾಂತರಗಳ ದೃಷ್ಟಿಯಿಂದ ಮಹತ್ವದವಲ್ಲ ಎನ್ನಿಸುವ ಇಂತಹ ವಿಶೇಷಣಗಳನ್ನು ಚರಾಂಶಗಳು ಎಂದು ಕರೆದು ಅವುಗಳನ್ನು X,Y,Z, ಇತ್ಯಾದಿ ಸಂಕೇತಗಳಿಂದ ಸೂಚಿಸಬಹುದು ಕೆಳಗಿನ ನಿದರ್ಶನ ಇದನ್ನು ಸ್ಪಷ್ಟಪಡಿಸುತ್ತದೆ.

	X	NP	Y	VP
1.	ϕ	ಪದ್ಮ	ϕ	ಕಾಲೇಜಿಗೆ ಹೋಗುತ್ತಾಳೆ
2.	ರತ್ನಮ್ಮನ ಮಗಳು	ಪದ್ಮ	ϕ	ಕಾಲೇಜಿಗೆ ಹೋಗುತ್ತಾಳೆ
3.	ಸುಬ್ಬಣ್ಣ ಮತ್ತು ರತ್ನಮ್ಮನ ಮಗಳು	ಪದ್ಮ	ಮಲ್ಲೇಶ್ವರದ	ಕಾಲೇಜಿಗೆ ಹೋಗುತ್ತಾಳೆ
4.	ಸುಬ್ಬಣ್ಣ ಮತ್ತು ರತ್ನಮ್ಮನ ಮಗಳು	ಪದ್ಮ	ಮಲ್ಲೇಶ್ವರದ ಎಂ.ಇ.ಎಸ್.	ಕಾಲೇಜಿಗೆ ಹೋಗುತ್ತಾಳೆ

S = ವಾಕ್ಯ (Sentence), NP = ನಾಮಪದ ಗುಚ್ಛ (Noun phrase); VP = ಕ್ರಿಯಾಪದ ಗುಚ್ಛ (Verb Phrase), ϕ = ಶೂನ್ಯ (Zero Node) ; X ಮತ್ತು Y = ಚರಾಂಶಗಳು (Variables)

ಈಗ S → NP – VP ಎಂಬ ಮೇಲಿನ ನಾಲ್ಕು ವಾಕ್ಯಗಳ ಹಾಗೂ ಅಂತಹ ರಚನೆಯುಳ್ಳ ಅಸಂಖ್ಯಾತ ವಾಕ್ಯಗಳ ರಚನೆಯ ಸಾಧ್ಯತೆಯನ್ನು

S → X – NP – Y – VP

7. *ಈ ನಾಲ್ಕೂ ವಾಕ್ಯಗಳ underlying representationsನ್ನೂ ಅವುಗಳ ರೂಪಾಂತರಗಳನ್ನೂ, embedings ಗಳನ್ನೂ, ವಿವರಿಸಲು ಇಲ್ಲಿ ಸಾಧ್ಯವಿಲ್ಲ. ಕೇವಲ ನಿದರ್ಶನಕ್ಕೆಂದಷ್ಟೇ ಈ ಉದಾಹರಣೆಗಳನ್ನು ವಿವರಿಸಲಾಗಿದೆ.

ಎಂಬ ರಾಚನಿಕ ಮಾದರಿಯ ಮೂಲಕ ಸಮರ್ಥವಾಗಿ ಸೂಚಿಸಬಹುದು. ಹೀಗೆ X ಮತ್ತು Y ಗಳು ಭಾಷೆಯಲ್ಲಿ ಸಾಧ್ಯವಾಗುವ ಅನಿಯತವಾದ ವಿಶೇಷಣಗಳ ಪಟ್ಟಿಯನ್ನು ಸಾಂಕೇತಿಕವಾಗಿ ಸೂಚಿಸಬಲ್ಲದು.

ಈ ರೀತಿ ಭಾಷೆಯ ಪ್ರಕ್ರಿಯೆಯಲ್ಲಿ ಕಂಡು ಬರುವ ಸ್ಥಿರಾಂಶ ಮತ್ತು ಚರಾಂಶಗಳ ಸಂಯೋಜನೆಯಿಂದ ರೂಪುಗೊಳ್ಳುವ ನಿಯಮ ಮತ್ತು ರಾಚನಿಕ ಮಾದರಿಗಳು ಕಥೆಯೊಂದರ ರಚನೆಯಲ್ಲೂ ಇರುತ್ತವೆ. ಕಥೆಯೊಂದನ್ನು ನೆನಪಿನಲ್ಲಿಡಲು ಸಾಧ್ಯವಾಗುವಂತಹ ಅಥವಾ ಅದರ ಬೇರೆ ಬೇರೆ ಪಾಠಗಳನ್ನು ಒಂದೇ ಕಥೆಯ ಭಿನ್ನ ಪಾಠಗಳು ಎಂದು ಗುರುತಿಸಲು ಸಾಧ್ಯವಾಗುವಂತಹ ಸಾಮರ್ಥ್ಯ, ಕಥೆಯ ಸ್ಥಿರಾಂಶಗಳ ಜೋಡಣೆಯಲ್ಲಿನ ರಾಚನಿಕ ಕ್ರಮ ಮತ್ತು ಅವುಗಳ ಅದ್ವಿತೀಯ ಮಿತಿ ಹಾಗೂ ತಾರ್ಕಿಕ ಹೊಂದಾಣಿಕೆಯಿಂದ ಉಂಟಾಗುತ್ತದ, ಕಥೆಯ ಚರಾಂಶಗಳು ಸೇರ್ಪಡೆಯಾಗುವ ಹಾಗೂ ಲೋಪವಾಗುವ ಪ್ರಕ್ರಿಯೆಯಿಂದಾಗಿ ಕಥೆಯ ಪಾಠಬೇಧಗಳು ತಲೆದೋರುತ್ತವೆ. ಈ ಅಂಶಗಳು ಲಿಪಿಬದ್ಧ ಪಾಠಬೇದಗಳು ಏರ್ಪಡುವ ಗ್ರಂಥಸಂಪಾದನೆ ಮತ್ತು ವಾಕ್‌ಸಂಪ್ರದಾಯದ ಜನಪದ ಕಥಾ ವಿಶ್ಲೇಷಣೆಗೆ ಒಂದೇ ರೀತಿ ಅನ್ವಯಿಸುತ್ತವೆ.

ಒಂದು ಕಥೆಯ ಸ್ಥೂಲ ರೂಪರೇಷೆ ಅದರ ಹಿಂದೆ ಪ್ರವರ್ತಿಸುತ್ತಿರುವ ನಿಯಮದಲ್ಲಿ ಅಡಗಿದೆಯಾದ್ದರಿಂದ ಅದನ್ನು ಬರೆಯುವವ ಅಥವಾ ನಿರೂಪಕ ಕಥೆಯನ್ನು ನೆನಪಿನಲ್ಲಿಟ್ಟುಕೊಳ್ಳುವ ಹಾಗೂ ಅದು ಬೇರೆಯೇ ಕಥೆ ಆಗಿಬಿಡದಂತೆ ಉಳಿಸುವ ತಾಂತ್ರಿಕ ಕಾರ್ಯವನ್ನೂ ಈ ನಿಯಮ ಮಾಡುತ್ತದೆ. ಹಾಗೂ ಈ ನಿಯಮ ಕೇವಲ ಕವಿ ವಕ್ತೃವಿನ ಹಂತಕ್ಕಷ್ಟೇ ಸೀಮಿತವಾಗದೆ ಆ ಕಥೆ ಪ್ರಚಲಿತವಿರುವ ಸಾಂಸ್ಕೃತಿಕ ಪರಿಸರದಲ್ಲೂ ಅಂತಸ್ಥಗೊಂಡಿರಬೇಕಾಗುತ್ತದೆ. ಕಥೆಯಲ್ಲಿ ಹಲವಾರು ಪಾಠಭೇದಗಳು ಕಂಡುಬಂದರೂ ಸಂವಹನ ಸಂದರ್ಭದಲ್ಲಿ ಇವೆಲ್ಲವನ್ನೂ ಮೂಲಭೂತವಾಗಿ ಒಂದೇ ಕಥೆ ಎಂದು ಗುರುತಿಸಬಲ್ಲ ಸಾಮರ್ಥ್ಯವನ್ನೂ ಓದುಗರು ಅಥವಾ ಕೇಳುಗರು ಪಡೆದಿರುವುದು ಇದನ್ನು ಸಮರ್ಥಿಸುತ್ತದೆ. ಆದ್ದರಿಂದ ಕಥೆಯ (i) ಚರಾಂಶಗಳಲ್ಲಿ ಎಷ್ಟೇ ಬದಲಾವಣೆ, ಸೇರ್ಪಡೆ ಮತ್ತು ಲೋಪಗಳಾದರೂ, (ii) ಪಾತ್ರದ ಹೆಸರು-ವ್ಯಕ್ತಿತ್ವಗಳು ಬದಲಾದರೂ, ಮತ್ತು (iii) ಪಾತ್ರಗಳೇ ಬದಲಾದರೂ ಅದರ ರಾಚನಿಕ ನಿಯಮ ಉಲ್ಲಂಘನೆಯಾಗದಿರುವ ತನಕ ಸಂವಹನ ಸಂದರ್ಭದಲ್ಲಿ ಕಥೆ ವಕ್ತೃ ಮತ್ತು ಶ್ರೋತೃ ಇಬ್ಬರಿಂದಲೂ ಸಮರ್ಥವಾಗಿ ಗುರುತಿಸಲ್ಪಡುತ್ತದೆ.[8]

---

8 ಈ ಅಂಶ ನಮ್ಮನ್ನು ಮತ್ತೊಂದು ಪ್ರಶ್ನೆಗೆ ಸೆಳೆದೊಯ್ಯಬಹುದು. ಕವಿಯ ಸೃಜನಶೀಲತೆಯ (creativity) ಮೂಲವನ್ನು ಕಥೆಯಲ್ಲಿ ಹುಡುಕಬೇಕಾದರೆ ಅದನ್ನು ಕಥೆಯೊಂದರ ರಾಚನಿಕ ನಿಯಮವಾದ ಸ್ಥಿರಾಂಶಗಳನ್ನು ಜೋಡಣೆಯಲ್ಲಿ ಹುಡುಕಬೇಕೇ ಅಥವಾ ಚರಾಂಶಗಳಲ್ಲಿ ಹುಡುಕಬೇಕೆ ಎಂಬ ಸಮಸ್ಯೆ ಏಳುತ್ತದೆ. ಅಥವಾ ಇವೆರಡರಲ್ಲೂ ಸೃಜನಶೀಲತೆ ಕಾರ್ಯಪ್ರವೃತ್ತವಾಗುತ್ತದೆಯೇ ಎಂಬ ಪ್ರಶ್ನೆಯೂ ಏಳುತ್ತದೆ ಇದರಬಗ್ಗೆ ಇನ್ನಷ್ಟು ವಿಶದವಾದ ಚರ್ಚೆಗೆ ಅವಕಾಶವಿದೆ.

ಪಟ್ಟಿ–1ರಲ್ಲಿ *ಈ ಗುರುತಿನೊಡನೆ ಕೊಡಲಾಗಿರುವ ಸ್ಥಿರಾಂಶಗಳ ಜೋಡಣೆಯಲ್ಲಿ ಹೆಚ್ಚು ಏರುಪೇರಾಗದೆ ಉಳಿದಿರುವುದನ್ನು ಕಾಣಬಹುದು. ಉಂಟಾಗಿರುವ ಒಂದೆರಡು ರೂಪಾಂತರಗಳು ಒಂದು ನಿರ್ದಿಷ್ಟ ಸ್ಥಾನದಲ್ಲಿ ಮಾತ್ರ ನಡೆದಿವೆ. ಕಥೆಯ ಅತಿಹೆಚ್ಚು ಪಾಠಗಳಲ್ಲಿ ಬೇಡನಿಗೆ ಕಪೋತದ ಆತ್ಮಾರ್ಪಣೆಯಾದ ನಂತರ ಕಪೋತಿನಿಯ ಬಿಡುಗಡೆ ಮತ್ತು ಸಹಗಮನ ಕಂಡುಬಂದರೆ ಧರ್ಮಸಂಪಾದನೆ ಮತ್ತು ಕಪೋತವಾಕ್ಯಗಳಲ್ಲಿ ಮೊದಲು ಕಪೋತಿನಿಯ ಮುತ್ತೈದೆ ಮರಣದನಂತರ ಕಪೋತನ ಆತ್ಮಾರ್ಪಣೆ ಬಂದಿದೆ. ಪಟ್ಟಿಯ ಮೊದಲನೆ ಕಾಲಂನಲ್ಲಿ ಕಥೆಯ ಸಂದರ್ಭವಿದ್ದು ಅದೊಂದು ಚರಾಂಶ ಎಂದುದು ಸ್ಪಷ್ಟವಿದೆ. ಎರಡನೆಯ ಕಾಲಂನಲ್ಲಿ ನಾಯಕ-ಪ್ರತಿನಾಯಕರಾದ ಕಪೋತ(ಕಪೋತಿನಿ)—ಬೇಡರಿದ್ದಾರೆ. ಈ ಎರಡು ಪಾತ್ರಗಳು ಸ್ಥಿರಾಂಶಗಳಾದರೂ ಅವುಗಳ ವಿವರಗಳು ಬದಲಾಗಬಲ್ಲವು. ಪಂಚತಂತ್ರದಲ್ಲಿ ಕೇವಲ ಕಪೋತನ ಪಾತ್ರಮಾತ್ರ ಕಂಡುಬಂದು ಕಪೋತಿನಿಯ ಪ್ರಸ್ತಾಪವೇ ಬರುವುದಿಲ್ಲ. ಲೇಯಾಸ್‌ದೇಶದ ಪಂಚತಂತ್ರದಲ್ಲಿ 'ಅತಿಥಿಗೆ ತನ್ನ ಮಾಂಸವನ್ನು ಕೊಟ್ಟ ಮುನಿಯ ಕಥೆ' ಕಪೋತಾಖ್ಯಾನವನ್ನೇ ಹೋಲುತ್ತಿದ್ದು ಕಪೋತನ ಪಾತ್ರದ ಬದಲಿಗೆ ಮುನಿಯ ಪಾತ್ರ ಬಂದಿದೆ.[9] ಚಾಮರಾಜೋಕ್ತಿ ವಿಲಾಸ ರಾಮಾಯಣದಲ್ಲಿ ಬೇಡನ ಪಾತ್ರದ ಬದಲಿಗೆ ಗಿಡುಗನ ಪಾತ್ರ ಬಂದಿದೆ.

ಮೇಲಿನ ಚರ್ಚೆಯನ್ನು ಕ್ರೋಡೀಕರಿಸಿ ಕಪೋತಾಖ್ಯಾನದ ಕಥಾ ನಿಯಮವನ್ನು ಕೆಳಕಂಡಂತೆ ಬರೆಯಬಹುದು.

T—ನಾಯಕ—ನಾಯಕಿ— U — ನಾಯಕಿಯ— V — ಪ್ರಕೃತಿವಿಕೋಪ
ಪ್ರತಿನಾಯಕ ಸೆರೆ ಪ್ರತಿನಾಯಕನಿಗೆ —W—
ನಾಯಕನ ಆಶ್ರಯ

—ಬೆಂಕಿಯಿಂದ—
ಅತಿಥಿಸತ್ಕಾರ ಪ್ರತಿನಾಯಕನ ಕ್ಷುದ್ಬಾಧೆ { (ನಾಯಕನ ಆತ್ಮಾರ್ಪಣೆ–ನಾಯಕಿಯ ಸಹಗಮನ) (ನಾಯಕಿಯ ಮುತ್ತೈದೆಮರಣ-ನಾಯಕನ ಆತ್ಮಾರ್ಪಣೆ) } —

X—ಪ್ರತಿನಾಯಕನ ಆತ್ಮಾರ್ಪಣೆ—Y.

ಇಲ್ಲಿ T, U, V, W, X, Y... ಗಳನ್ನು ಚರಾಂಶಗಳನ್ನು ಸಂಕೇತಿಸಲು ಉಪಯೋಗಿಸಲಾಗಿದೆ.

---

9 ವಿವರಗಳಿಗೆ ನೋಡಿ. ಅ. ವೆಂಕಟಸುಬ್ಬಯ್ಯ : 'ಲೇಯಾಸ್ ದೇಶದ ಪಂಚತಂತ್ರ' ಪ್ರಬುದ್ಧಕರ್ನಾಟಕ, ಸಂಪುಟ, 41, ಸಂಚಿಕೆ-1 (1957).

ಇಲ್ಲಿ ಉಪಯೋಗಿಸಲಾಗಿರುವ {} ಸಂಕೇತ ಭಾಷಾವಿಜ್ಞಾನದ Braces notation ಆಗಿದ್ದು ಅದು ಅಲ್ಲಿರುವ ಎರಡು ಸಂಯೋಜನೆಗಳಲ್ಲಿ ಯಾವುದಾದರೂ ಒಂದರ ಆಯ್ಕೆಮಾತ್ರ ಒಂದು ಬಾರಿಗೆ ಸಾಧ್ಯ (They are mutually exclusives) ಎಂದು ಸೂಚಿಸುತ್ತದೆ.

ನಿಯಮದಲ್ಲಿನ T=ಯಮಧರ್ಮನ ಆಸ್ಥಾನದಲ್ಲಿನ ಸಂವಾದ/ಶಿವನ ಒಡ್ಡೋಲಗದಲ್ಲಿನ ಸಂವಾದ/ಭೀಷ್ಮ-ಯುಧಿಷ್ಠಿರ ಸಂವಾದ/ರಾಮ-ಸುಗ್ರೀವರ ಸಂವಾದ/ಜಿಂಹ್ವಾಕ್ಷನಿಂದ ನಿರೂಪಿತ ಇತ್ಯಾದಿ.

U = ದಂಪತಿಗಳ ಸೆರೆ / ನಾಯಕ ತಪ್ಪಿಸಿಕೊಂಡು ನಾಯಕಿ ಅಲ್ಲೇ ಉಳಿಯುವಿಕೆ ಇತ್ಯಾದಿ V = ಭಾರ್ಯಾವಿಲಾಪ /ಸ್ತ್ರೀ ನೀತಿವರ್ಣನೆ / ಮುತ್ತೈದೆ ಮರಣದ ಹೆಗ್ಗಳಿಕೆ ಇತ್ಯಾದಿ.

W = ನಾಯಕಿಯ ಸಲಹೆ ಇತ್ಯಾದಿ

X = ಪ್ರತಿನಾಯಕನ ಪಶ್ಚಾತ್ತಾಪ ಇತ್ಯಾದಿ.

Y = ಪುಷ್ಪಕಾಗಮನ / ನಾಯಕ ನಾಯಕಿ ಮತ್ತು ಪ್ರತಿನಾಯಕರಿಗೆ ಸದ್ಗತಿ ಇತ್ಯಾದಿ.

ನಾಯಕಿಯ ಪಾತ್ರ ಕಂಡುಬರದ ಕಥಾಪಾಠಗಳೂ ಇರುವುದರಿಂದ ಅವುಗಳಿಗಾಗಿ ಇನ್ನಷ್ಟು ಸರಳಗೊಳಿಸಿದ ನಿಯಮವನ್ನು ಸೂಚಿಸಬಹುದು :

T–ನಾಯಕ–	–U–ಪ್ರಕೃತಿವಿಕೋಪ	ಬೆಂಕಿಯಿಂದ	ನಾಯಕನ
ಪ್ರತಿನಾಯಕ	ಪ್ರತಿನಾಯಕನಿಗೆ	–V–ಅತಿಥಿಸತ್ಕಾರ	–W–
	ನಾಯಕನ ಆಶ್ರಯ	ಪ್ರತಿನಾಯಕನ	ಆತ್ಮಾರ್ಪಣೆ
		ಕ್ಷುದ್ಬಾಧೆ	

ಇಲ್ಲಿನ ಚರಾಂಶಸಂಕೇತಗಳು ಹಿಂದೆ ಸೂಚಿಸಿದ ನಿಯಮದ ಚರಾಂಶಗಳಿಗಿಂತ ಭಿನ್ನವಾದ ಚರಾಂಶಗಳನ್ನು ಸೂಚಿಸುತ್ತವೆ.

ಜನಪದ ಗೀತೆ ಮತ್ತು ಕಥೆಗಳ ಸಂಗ್ರಹಣೆಯಲ್ಲಿ ವಕ್ತೃ ಪ್ರತಿಬಾರಿ ಅದನ್ನು ನಿರೂಪಿಸಿದಾಗಲೂ ಅದರಲ್ಲಿ ಕೆಲವು ವ್ಯತ್ಯಾಸಗಳಾಗುವುದನ್ನು ತೋರಿಸಿದ್ದುಂಟು. ಜನಪದ ಗೀತೆಗಳಲ್ಲಿ ಈ ಒಂದು ತ್ರಿಪದಿಯ ಅಲಂಕರಣಗಳ (decorations) ಬೇರೆ ಬೇರೆ ಪಾಠಗಳನ್ನು ತೋರಿಸಿ ಜನಪದ ಗಾಯಕ/ಗಾಯಕಿ ಪರಂಪರೆಯನ್ನು

ಮುಂದುವರೆಸುತ್ತಿರುವಂತೆಯೇ ಹೊಸ ಹೊಸ ಸೃಷ್ಟಿಯನ್ನೂ ಮಾಡುತ್ತಿರುತ್ತಾನೆ/ಳೆ ಎಂಬ ಅಭಿಪ್ರಾಯವನ್ನು ಚಂದ್ರಶೇಖರ ಕಂಬಾರರೂ[10] ಜನಪದ ಕಥೆಯೊಂದನ್ನು ಒಬ್ಬನೇ ವಕ್ತೃವಿನ ಎರಡು ನಿರೂಪಣೆಗಳಲ್ಲಿ ಕಂಡು ಬರುವ ಬದಲಾವಣೆಗಳನ್ನು ಆಶಯದ ಮಟ್ಟದಲ್ಲಿ ವೀರಣ್ಣನವರೂ[11] ಗುರುತಿಸಿದ್ದಾರೆ. ಪ್ರಸ್ತುತ ಅಧ್ಯಯನ ಕೇವಲ ಅಲಂಕರಣ ಮತ್ತು ಆಶಯಗಳ ಮಟ್ಟದಲ್ಲಿ ಮಾತ್ರವಲ್ಲದೆ ಕ್ರಿಯೆಯ ಮಟ್ಟದಲ್ಲಿ ಕೂಡ ಇಂತಹ ಪಾಠಭೇದಗಳು ತಲೆದೋರಬಲ್ಲವು ಎಂಬುದನ್ನು ತೋರಿಸಿದೆ. ಅಲ್ಲದೆ ಎಲ್ಲಿಯ ತನಕ ಕಥೆಯ ಸ್ಥಿರಾಂಶಗಳು ಆಯ್ಕೆಯ ಮಿತಿ ಮತ್ತು ತಾರ್ಕಿಕ ಹೊಂದಾಣಿಕೆಗಳ ಉಲ್ಲಂಘನೆಯಾಗುವುದಿಲ್ಲವೋ ಅಲ್ಲಿಯ ತನಕ ಚರಾಂಶಗಳ ರೂಪದಲ್ಲಿ ಈ ಕ್ರಿಯೆಗಳು ಸೇರುತ್ತಾ ಮತ್ತು ಲೋಪವಾಗುತ್ತಾ ಹೋಗಲು ಅವಕಾಶ ಉಂಟು ಎಂಬುದು ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಕಥೆಯೊಂದರಲ್ಲಿ ಆಗಬಹುದಾದ ವ್ಯತ್ಯಾಸ ಮತ್ತು ಬದಲಾವಣೆಗಳಿಗೆ ತೀರ ಸ್ಪಷ್ಟವಾದ ಮಿತಿಗಳನ್ನು ಗುರುತಿಸಲು ಸಾಧ್ಯವಿದೆ.[12]

ಮೇಲೆ ವಿವರಿಸಿದಂತಹ ನಿಯಮವೊಂದು ಕಥೆಯ ಹಿಂದೆ ಪ್ರದರ್ಶಿಸುತ್ತಿದೆ ಎಂಬುದು ಈ ದಿಸೆಯಲ್ಲಿ ಇನ್ನೂ ಹಲವಾರು ಹೊಸಚಿಂತನೆಗಳಿಗೆ ಅವಕಾಶವನ್ನೊದಗಿಸುತ್ತದೆ. ಪ್ರತಿಯೊಂದು ಜನಪದ ರೂಪದ ಹಿಂದೆಯೂ ಇಂತಹ ವ್ಯಾಕರಣ ನಿಯಮಗಳಿದ್ದು ಅವುಗಳನ್ನು ಗುರುತಿಸಲು ಸಾಧ್ಯವಿದೆ. ಪ್ರತಿಯೊಬ್ಬ

10. ಚಂದ್ರಶೇಖರ ಕಂಬಾರ (ಸಂ) 'ಮಾತಾಡು ಲಿಂಗವೇ' (ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟನೆ, 1973) ಪು. xviii-xx.

11. ಸಿ. ವೀರಣ್ಣ (ಸಂ): ಒಬ್ಬನೇ ಹೇಳಿದ 22 ಜನಪದ ಕಥೆಗಳು. (ಬೆಂಗಳೂರು, ವಿಶ್ವವಿದ್ಯಾಲಯ ಪ್ರಕಟನೆ, 1974) ಪು. 71-73

12. ಕಥೆಯೊಂದರ ಸಂವಹನೆಗೆ ತೀರ ಅಗತ್ಯವಾದ ಅಂಶ ಅದರ ಸ್ಥಿರಾಂಶಗಳ ರಾಚನಿಕ ನಿಯಮವಾಗಿದ್ದು ಚರಾಂಶಗಳ ಆಯ್ಕೆಯಲ್ಲಿನ ವೈವಿಧ್ಯತೆ ಮತ್ತು ಸಾಧ್ಯತೆ ಗ್ರಂಥ ಸಂಪಾದನೆಯಂತಹ ಶಿಸ್ತೊಂದರಲ್ಲಿ ಪಾಠಾಂತರಗಳ ನಿರ್ಧರಣೆಗೆ ನಾವು ಪಡುವ ಶ್ರಮದ ಅಗತ್ಯತೆಯ ಬಗ್ಗೆ ಸಂದೇಹವನ್ನು ಎಬ್ಬಿಸುತ್ತದೆ. ಗ್ರಂಥ ಸಂಪಾದನೆ ಸೂಕ್ಷ್ಮ (Micro) ಸ್ತರದ ಅಕೆಡೆಮಿಕ್ ಅಧ್ಯಯನವಾಗಿದ್ದು ಸಾಹಿತ್ಯ ಕೃತಿಯೊಂದರ ಅರ್ಥಗ್ರಹಣ ಸ್ಥೂಲ(Macro)ಸ್ತರದ್ದಾಗಿದೆ. ಅಂದರೆ ಒಟ್ಟಿನಲ್ಲಿ ಕಾವ್ಯ ಹೇಳುತ್ತಿರುವುದೇನು ಎಂಬುದೇ ಸಾಂಸ್ಕೃತಿಕ ಸಂದರ್ಭ ಮತ್ತು ಸಂವಹನಗಳಲ್ಲಿ ಪ್ರಧಾನವಾಗುತ್ತದೆ. ಹೀಗೆ ಕಥೆ ರೂಪಾಂತರಗಳನ್ನು ಪಡೆದುಕೊಂಡೇ ಸಂವಹನವಾಗಬಹುದಾದರೆ ಪಾಠಾಂತರಗಳ ಬಗ್ಗೆ ನಾವು ತಳೆದುಕೊಳ್ಳುತ್ತಿರುವ ಕಾಳಜಿ ದೃಷ್ಟಿಯಿಂದ ಅಷ್ಟು ಮಹತ್ವವಾದ ಅಂಶವಾಗಲಾರದು ಎನಿಸುತ್ತದೆ. ಅರ್ಥಸಂದಿಗ್ಧತೆ ಇರುವ ಕಡೆಯಲ್ಲಿ ಬಿಟ್ಟರೆ ಮಿಕ್ಕಕಡೆ ಪಾಠಾಂತರಗಳ ಬಗ್ಗೆ ಸಾಮಾನ್ಯವಾಗಿ ನಾವು ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ ಎಂಬುದನ್ನು ಈ ಸಂಧರ್ಭದಲ್ಲಿ ಗಮನಿಸಬೇಕು. ಇದರ ಬಗ್ಗೆ ಇನ್ನಷ್ಟು ವಿವರವಾದ ಚರ್ಚೆಗೆ ಆಸ್ಪದವಿದೆ.

ಕಥಾವಸ್ತುವು ಸುಮಾರು 20–30 ಕಥೆ ಅಥವಾ ಕಥನ ಕವನಗಳನ್ನು ನಿರೂಪಿಸ ಬಲ್ಲ ಎಂದಾದರೆ ಅವುಗಳ ಹಿಂದೆ ವಾಸ್ತವಿಕವಾಗಿ 20–30 ರಷ್ಟು ನಿಯಮಗಳೇ ಇರಬೇಕಾಗಿಲ್ಲ. ತೀರ ಕಡಿಮೆಯಾದ ಬೆರಳೆಣಿಕೆಯಷ್ಟು ನಿಯಮಗಳನ್ನಿಟ್ಟು ಕೊಂಡು ಅವುಗಳ ವಿಕಲ್ಪಗಳಿಂದ (combinations) ಅತ ಈ ಕಥೆಗಳನ್ನು ನೆನಪಿಟ್ಟುಕೊಂಡು ನಿರೂಪಿಸಬಲ್ಲ; ಇದರ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ಸಾಧ್ಯವಿದೆ. ಇದೇ ರೀತಿ ಇಡಿಯ ಕನ್ನಡ ಸಂಸ್ಕೃತಿಯು ವಿವಿಧ ಅಭಿವ್ಯಕ್ತಿ ಮಾಧ್ಯಮಗಳ ಹಿಂದೆಯೂ ಪ್ರದರ್ಶಿಸುತ್ತಿರುವ ವ್ಯಾಕರಣಗಳನ್ನು ಗುರುತಿಸುವ ಸಾಧ್ಯತೆ ಇದೆ. ಇಂತಹ ಅಗಾಧ ಗಾತ್ರದ ಕಾರ್ಯಗಳೆಡೆಗೆ ಇಟ್ಟ ಮೊದಲ ಹೆಜ್ಜೆ ಈ ಪ್ರಯತ್ನವಾಗಿದೆ.

4. **ಕೆಲವು ಸಾಂಸ್ಕೃತಿಕ ಅಂಶಗಳು :** ಯಾವುದೇ ಸಾಹಿತ್ಯರೂಪ ಪರಿಸರದ ಸಾಮಾಜಿಕ ನಿಯೋಗಗಳಿಂದ ಅಂತರಕ್ರಿಯೆಗೆ ಒಳಪಟ್ಟು ಅಭಿವ್ಯಕ್ತಿ ಯಾಗುವುದರಿಂದ ಸಾಂಸ್ಕೃತಿಕ ಅಂಶಗಳು ಸಾಹಿತ್ಯರೂಪದಲ್ಲಿ ಗೋಚರವಾಗ ಬಹುದು. ಪಟ್ಟಿ 1 ರಲ್ಲಿ ನೀಡಿರುವ ವಿವರಗಳನ್ನು ಗಮನದಲ್ಲಿಟ್ಟುಕೊಂಡು ಕಪೋತಾಖ್ಯಾನಕ್ಕೆ ಸಂಬಂಧಿಸಿದಂತೆ ಕೆಲವು ಕುತೂಹಲಕಾರಿ ಅಂಶಗಳನ್ನು ಗಮನಿಸಲಾಗಿದೆ.

(i) ಪಂಚತಂತ್ರ ಮತ್ತು ರಾಮಾಯಣಗಳಲ್ಲಿ ಕಪೋತಗಳಿಗಾಗಲಿ ಅಥವಾ ಬೇಡನಿಗಾಗಲಿ ಸದ್ಗತಿದೊರೆಯಿತೆಂಬ ಬಗ್ಗೆ ಪ್ರಸ್ತಾಪವೇ ಇಲ್ಲ.[13] ಕನ್ನಡದಲ್ಲಿ ರಚನೆಯಾದ ಕೃತಿಗಳಲ್ಲಿ ಮಾತ್ರ ಸದ್ಗತಿಯ ಪ್ರಸ್ತಾಪ ಬಂದಿದೆ. ಮಹಾಭಾರತ ದಲ್ಲಿನ ಸದ್ಗತಿಪ್ರಾಪ್ತಿ ಪ್ರಕ್ಷಿಪ್ತವಾಗಿ ನಂತರ ಸೇರಿರಲೂ ಸಾಧ್ಯವಿದೆ. ಈ ಮೂರು ಕನ್ನಡೇತರ ಕೃತಿಗಳೂ ಚಾರಿತ್ರಿಕವಾಗಿ ಭಿನ್ನಕಾಲದಲ್ಲಿ ರಚನೆಗೊಂಡವು. ಅಲ್ಲದೆ ಈ ಕೃತಿಗಳು ಕ್ಷಾತ್ರಧರ್ಮ ಪ್ರತಿಪಾದನೆ ಹಾಗೂ ರಾಜನೀತಿ ಬೋಧನೆಯ ಮೌಲ್ಯಗಳೊಡನೆ ಹುಟ್ಟಿದವು. ಈ ಕೃತಿಗಳ ಸಾಂದರ್ಭಿಕ ಮಹತ್ವ ಶರಣಾಗತ ರಕ್ಷಣೆಯಾಗಿದ್ದು ಅದರ ಕಡೆಗೆ ಗಮನ ನೀಡಲಾಯಿತೇ ಹೊರತು ಸದ್ಗತಿ ಪ್ರಾಪ್ತಿಯ ಕಡೆಗಲ್ಲ. ಕ್ಷತ್ರಿಯ ಧರ್ಮಕ್ಕೆ ಪ್ರವೃತ್ತರಾಗಿಸಬೇಕಾದ ಕೃತಿಗಳು ಸದ್ಗತಿಯ ಮೌಲ್ಯ ಪ್ರತಿಪಾದನೆ ಮಾಡಲು ಹೊರಡಬೇಕಾದ ಅವಶ್ಯಕತೆ ಆಗ ಇರಲಿಲ್ಲ.

ಆದರೆ ಅದಕ್ಕಿಂತ ಭಿನ್ನವಾದ ಸಾಂಸ್ಕೃತಿಕ ಪರಂಪರೆಯಲ್ಲಿ ಬಂದ ಕನ್ನಡ ಕಪೋತಾಖ್ಯಾನಗಳಿಗೆ ಈ ಸದ್ಗತಿ ಪ್ರಾಪ್ತಿ ಮತ್ತು ಅತಿಥಿ ಸತ್ಕಾರಗಳು ಪ್ರಧಾನ

13. ದುರ್ಗಸಿಂಹನ ಪಂಚತಂತ್ರ ತನ್ನ ಮೂಲ ಆಧಾರದ ವಸುಭಾಗ ಭಟ್ಟನ ಕಥಾ ಪಾಠವನ್ನು ಅನುಸರಿಸಿದೆ ಎಂದು ಇಲ್ಲಿ ಭಾವಿಸಲಾಗಿದೆ

ಮೌಲ್ಯಗಳಾದವು. ಕಾವ್ಯವನ್ನು ತಮ್ಮ ಧಾರ್ಮಿಕ ಮೌಲ್ಯಗಳ ಪ್ರಸರಣಕ್ಕಾಗಿ ಉಪಯೋಗಿಸಿಕೊಳ್ಳಲು ಹೊರಟ ಬ್ರಾಹ್ಮಣ ಮತ್ತು ವೀರಶೈವ ಧರ್ಮಗಳಲ್ಲಿ ಸ್ವರ್ಗ/ಕೈಲಾಸ ಪ್ರಾಪ್ತಿಗಳು ಅನಿವಾರ್ಯವಾದ ಭಾಗಗಳಾದವು. ಎರಡು ಧರ್ಮಗಳೂ ತಮ್ಮ ತಮ್ಮ ಹೆಚ್ಚಳವನ್ನು ಸಾರಲು ಈ ಕಥೆಯನ್ನು ಧಾರಾಳವಾಗಿ ಬಳಸಿಕೊಂಡಿವೆ. ಮೂಲತಃ 'ಶರಣಾಗತ ರಕ್ಷಣೆ'ಯ ಸಾಂದರ್ಭಿಕ ಮಹತ್ವವನ್ನೊಳಗೊಂಡಿದ್ದ ಈ ಕಥೆ ಕನ್ನಡ ವೈದಿಕ ಪರಂಪರೆಯಲ್ಲಿ ಅದೇ ಸಂದರ್ಭದಲ್ಲಿ ಬಂದಾಗಲೂ ಅತಿಥಿ ಸತ್ಕಾರ, ಸತೀನೀತಿ, ಮುತ್ತೈದೆ ಮರಣ, ಸದ್ಗತಿ ಇಂತಹ ಮೌಲ್ಯಗಳನ್ನು ಕಥೆಯುದ್ದಕ್ಕೂ ಪ್ರತಿಪಾದಿಸಿದೆ. ವೀರಶೈವ ಪರಂಪರೆಯ ಕೃತಿಗಳೂ ಇದಕ್ಕೆ ಅಪವಾದವಾಗದೇ ಅದೇ ಮೌಲ್ಯಗಳನ್ನು ಪ್ರತಿಪಾದಿಸಿವೆ. ಧರ್ಮಸಂಪಾದನೆಯಂತೂ "ಅದು ಕಾರಣ ಭಿಕ್ಷಾನ್ನವನಿಕ್ಕುವ ಸದುಭಕ್ತನೆ ಮೋಕ್ಷಾರ್ಥಿಯು" ಎಂದು ದಾಸೋಹವನ್ನೇ ಪ್ರಧಾನ ಮೌಲ್ಯವನ್ನಾಗಿ ಮಾಡಿತು. ವೆಂಕಟಾಚಲವಾಸಾಂಕಿತ ಕಪೋತಚರಿತೆಯಲ್ಲಂತೂ ಬೇಡನ ಆತ್ಮಾರ್ಪಣೆಯ ಪ್ರಸಂಗ ಕೂಡ ಬರುವುದಿಲ್ಲ. ಸಶರೀರನಾಗಿ, ಬಂಧು, ಸತಿ, ಸುತಾದಿಗಳ ಜೊತೆ ಹರಿಪದ ಸಲ್ಲುತ್ತದೆ. ಇಂತಹ ಭಾವನೆಗಳು ತುಂಬಾ ಅಪ್ಯಾಯಮಾನವಾಗಿ ಕಾಣಿಸಿ ಈ ಕಥೆ ಜನಪ್ರಿಯಗೊಂಡದ್ದು ಆಶ್ಚರ್ಯವೇನಲ್ಲ.

(ii) ಹನ್ನೆರಡನೆಯ ಶತಮಾನದ ಗಂಡು-ಹೆಣ್ಣುಗಳು ಸಮಾನರೆಂಬ ಅಂಶವನ್ನು ಪ್ರತಿಪಾದಿಸಿದ ವೀರಶೈವಧರ್ಮದ ಈ ಬಿರುಸು ಬಹುಬೇಗ ಇಳಿದು ಹೋಯಿತು. ಗಂಡು ಹೆಣ್ಣಿಗಿಂತ ಮೇಲೆಂಬ ಧೋರಣೆ ಮತ್ತೆ ಪ್ರಜಲಿತಗೊಂಡಿತು. ಹೆಣ್ಣು ಗೃಹಸ್ಥಾಶ್ರಮದಲ್ಲಿ ಗಂಡಿಗೆ 'ಅನುಕೂಲೆ'ಯಾಗಿ ನಡೆದುಕೊಳ್ಳಬೇಕು ಎಂಬ ಆಶಯ ಪ್ರತೀತವಾಯಿತು. 'ಹದಿಬದೆಯ ಧರ್ಮ'ದಂತಹ ಕೃತಿಗಳು ಹುಟ್ಟಿದವು. ಗಂಡನಿಗೆ ಅನುಕೂಲೆಯಾಗಿ ಬಾಳಬೇಕೆನ್ನುವ, ಮುತ್ತೈದೆ ಮರಣದ ಹೆಗ್ಗಳಿಕೆಯನ್ನು ಸಾರುವ, ಕಡೆಗೆ ಸುರತದಲ್ಲಿ ಹೆಂಡತಿ ಹೇಗೆ ನಡೆದುಕೊಳ್ಳಬೇಕೆಂಬ ನೀತಿ ಪಾಠವೂ ಕಪೋತಾಖ್ಯಾನದ ಒಂದು ಭಾಗವಾಗಿ ಸೇರಿಕೊಂಡಿತು. ಬ್ರಾಹ್ಮಣ ಪರಂಪರೆಯ ಕಾವ್ಯಗಳಲ್ಲಿ ಮಾತ್ರವಲ್ಲದೆ ಮಾದಣ್ಣನ ನನ್ನಯ್ಯಗಳ ಚಾರಿತ್ರ ಹಾಗೂ ನಂಜನ ಕಪೋತ ವಾಕ್ಯಗಳಲ್ಲಿ ಕೂಡ ಈ ಮೌಲ್ಯಗಳನ್ನು ಕಾಣಬಹುದು.

(iii) ಸಂಸ್ಕೃತ ಪರಂಪರೆಯಲ್ಲಿ ಕಾಣುವ ಶರಣಾಗತ ರಕ್ಷಣೆಗೆ ಪರ್ಯಾಯವಾಗಿ ಕನ್ನಡ ಪರಂಪರೆಯಲ್ಲಿ ದಾಸೋಹ-ಅತಿಥಿಸತ್ಕಾರಗಳಿಗೆ ಒತ್ತುಬದ್ದಿರುವುದನ್ನು ಹಿಂದೆಯೇ ಹೇಳಲಾಗಿದೆ. ಕಥೆಯ ಪ್ರಮುಖ ಕ್ರಿಯೆಯಾದ 'ಅಗತ್ಯವಸ್ತುವಿನ ಪರಿತ್ಯಾಗ'ವೇ ಪ್ರಧಾನ ಆಶಯವಾಗಿದ್ದು ಅತಿಥಿಸತ್ಕಾರವನ್ನೂ ಅದರ ಫಲವನ್ನೂ ಕನ್ನಡ ಕೃತಿಗಳಲ್ಲಿ ವೈಭವೀಕರಿಸಲಾಗಿದೆ. ಈ ಸಂದರ್ಭದಲ್ಲಿ ಗಿಡುಗ-ಕಪೋತಗಳ ಸಂಬಂಧಕ್ಕಿಂತ ಬೇಡ-ಕಪೋತರ ಸಂಬಂಧ ಸಾಂಸ್ಕೃತಿಕವಾಗಿ ಸ್ಪಂದನ-ಮರುಸ್ಪಂದನ

ಗೊಳ್ಳುವ ಸಾಧ್ಯತೆ ಅದರೊಳಗೆ ಆಂತರಿಕವಾಗಿ ಅಡಗಿದ್ದು ಈ ಕಥೆ ಜನಪ್ರಿಯವಾಗಲು ಕಾರಣವಾಗಿದೆ.

(iv) ಅಗತ್ಯವಸ್ತುವಿನ ಪರಿತ್ಯಾಗ ಯಾವುದೇ ಸಂಸ್ಕೃತಿಯಲ್ಲಿ ಮಹತ್ವದ ಮೌಲ್ಯ. ತೀರಾ ಅಮೂಲ್ಯವೆನಿಸಿದ ವಸ್ತುವನ್ನು ದಾನಕೊಟ್ಟು ದಾನಶೂರನೆನಿಸಿಕೊಳ್ಳುವುದು ಅತಿಮಾನುಷವಾದ ಕ್ರಿಯೆಯೇ ಹೌದು. ಅಂದರೆ ತನ್ನ ಜೀವವನ್ನೇ ಕೊಡಬೇಕಾದಂಥ, ಬದುಕು ಮತ್ತು ಸಾವುಗಳ ನಡುವಣ ದ್ವಂದ್ವದಲ್ಲಿ ಸಾವನ್ನು ತಾವಾಗಿ ಆಹ್ವಾನಿಸುವಂಥ ಹಾಗೂ ಅತಿಥಿಗೆ ಆಹಾರ ನೀಡುವುದಕ್ಕಾಗಿ ತಾನೇ ಆಹಾರವಾಗುವ ಈ ಕಲ್ಪನೆ ಜನಪ್ರಿಯವಾಗಿದ್ದಲ್ಲಿ ಆಶ್ಚರ್ಯವೇನಿಲ್ಲ. ಬಹುಶಃ ಸದ್ಗತಿಯ ಸೇರ್ಪಡೆ ಅನಿವಾರ್ಯವಾದುದೂ ಇದರ ಪ್ರಭಾವದಿಂದಲೇ.

ಈ ಕೃತಿಯ ಜನಪ್ರಿಯತೆಯನ್ನು ಕಾಣಬೇಕಾದರೆ ಅತಿಥಿಸತ್ಕಾರದ ಮೌಲ್ಯದೊಂದಿಗೆ ಬ್ರಾಹ್ಮಣ ಮತ್ತು ವೀರಶೈವ ಕವಿಗಳಿಂದ ಇದು ಎಲ್ಲ ಛಂದೋರೂಪಗಳಲ್ಲೂ ಮತ್ತೆ ಮತ್ತೆ ರಚನೆಗೊಂಡಿರುವುದನ್ನು ಗಮನಿಸಬೇಕು. ಚಂಪೂಶೈಲಿಯಲ್ಲಿ ದುರ್ಗಸಿಂಹ ಮಾದಣ್ಣರೂ, ಭಾಮಿನೀಷಟ್ಪದಿಯಲ್ಲಿ ತಿಮ್ಮಣ್ಣ, ನಿತ್ಯಾತ್ಮ, ವೆಂಕಟಾಚಲವಾಸಾಂಕಿತರೂ, ಪರಿವರ್ಧಿನೀ ಷಟ್ಪದಿಯಲ್ಲಿ ಚಿಕ್ಕಮಲ್ಲಿಕಾರ್ಜುನನೂ, ಸಾಂಗತ್ಯದಲ್ಲಿ ನಂಜ ಮತ್ತು ಪರ್ವತದೇವರೂ ಕಪೋತಾಖ್ಯಾನವನ್ನು ರಚನೆ ಮಾಡಿದ್ದಾರೆ. ಇದಲ್ಲದೆ ಯಕ್ಷಗಾನದಂತಹ ಪ್ರಭಾವಕಾರಿ ರಂಗಮಾಧ್ಯಮದಲ್ಲೂ ಈ ಕಥೆ ಅಭಿವ್ಯಕ್ತಿಗೊಳ್ಳುತ್ತಿದೆ ಎಂದರೆ ಈ ಕಥೆಯ ಸಾಂಸ್ಕೃತಿಕ ಅಂತರ್‌ಕ್ರಿಯೆಯ ಪ್ರಭಾವವನ್ನು ಅರಿಯಬಹುದು.

(v) ವೆಂಕಟಾಚಲವಾಸಾಂಕಿತ ಕಪೋತಚರಿತೆ ಪಶ್ಚಾತ್ತಾಪ ಮತ್ತು ಸನ್ಮಾರ್ಗ ಪ್ರವೃತ್ತಿಗಳೇ ಮೋಕ್ಷಸಾಧನೆಯನ್ನು ಮಾಡಬಲ್ಲವು ಎಂದು ಪ್ರತಿಪಾದಿಸಲು ಹೊರಡುತ್ತದೆ. ಕೇವಲ ಬೇಡ ಮಾತ್ರವಲ್ಲದೆ ಅವನ ಪರಿವಾರಕ್ಕೆಲ್ಲ ಮೋಕ್ಷ ಸಂಪಾದನೆಯನ್ನು ಮಾಡಿಕೊಡುವ ಈ ಪಶ್ಚಾತ್ತಾಪ ವಾಸ್ತವವಾಗಿ ಕನ್ನಡ ಕಾವ್ಯದಲ್ಲಿ ಅಪರೂಪವಾದ ಆದರೆ ಇತ್ತೀಚೆಗೆ ಸೇರಿಕೊಂಡಿರುವ ಮೌಲ್ಯವಾಗಿದ್ದು ಅದರ ಬಗ್ಗೆ ವಿವರವಾಗಿ ಯೋಚಿಸಲು ಅವಕಾಶವಿದೆ.

ಮೇಲೆ ವಿವರಿಸಲು ಯತ್ನಿಸಿರುವ ಸಾಂಸ್ಕೃತಿಕ ಮುಖಗಳು ತಪ್ಪೇ-ಒಪ್ಪೇ ಎಂಬ ಮೌಲ್ಯನಿರ್ಣಯ ಮಾಡಹೊರಡುವುದು ಅಥವಾ ಅದಕ್ಕೆ ಕರೆಕೊಡುವುದು ಇಲ್ಲಿನ ಉದ್ದೇಶವಲ್ಲ. ಕಥೆ ಮತ್ತು ಅದರ ಮೌಲ್ಯಗಳು ಬೇರೆ ಬೇರೆ ಸಾಂಸ್ಕೃತಿಕ ಸಂದರ್ಭದಲ್ಲಿ ಹೇಗೆ ಸ್ಪಂದನ-ಮರುಸ್ಪಂದನಗೊಳಗಾಗುತ್ತಾ ಹೋಗುತ್ತವೆ ಎಂಬುದು ಇಲ್ಲಿನ ಉದ್ದೇಶವಾಗಿದೆ. ಕಥೆಯೊಂದನ್ನು ಅದು ಸೃಷ್ಟಿಯಾದ ಪರಿಸರದಲ್ಲಿಟ್ಟು ಅದು ಸಾಂಸ್ಕೃತಿಕ dynamics ನಲ್ಲಿ ವಹಿಸಿದ ಪಾತ್ರವನ್ನು ಕುರಿತಾದ ಚರ್ಚೆ ಸಾಧ್ಯ ಎಂಬುದನ್ನು ತೋರಿಸಲು ಈ ಪ್ರಯತ್ನವನ್ನು ಮಾಡಲಾಗಿದೆ.

ಮರೆಯಲಿ ಹೇಗೆ

ಕಟಾವೀರನಹಳ್ಳಿ ಜನ್ನಪ್ಪ

ಒಲವಿನೋಕುಳಿಯು
ಮುತ್ತುಗಳು ಮೆತ್ತನುಂಡೆಯಾಗಿದ್ದುದ;
ಹೆಮ್ಮರದ ಕತ್ತಲೆಗೆ
ಹಗಲ ಕಾಣುವ ತವಕವಾಗಿದ್ದುದ;
ಹಲವು ರಾತ್ರಿಗಳ
ಸ್ವಪ್ನದಲ್ಲಿ ಬಯಕೆಗಳ ಮುದ್ದೆಯಾಗಿದ್ದುದ;
ಮರೆಯಲಿ ಹೇಗೆ.

ಮನದ ಚಿತ್ರಗಳ ಮುತ್ತುಗಳಿಗೆ ನಾರುಗಳ ಗಂಟು
ವಿರಹವುರಿಯುಲಿ ಮಂದ ಹಾಸದ ಚಿಗುರು,

ತಾರುಣ್ಯದಮಲಿನ ನಲಿವಿಗೆ
ಮೈ ತುಂಬಿ, ಬೆವರು ಹತ್ತಿ,
ಮಾಂಸಗಳ ಮುದ್ದೆ ರಕ್ತದೊಡಗೂಡುತಿರೆ
ಯೌವನದ ವಾಸನೆಯು ಕರೆಯುತಿದೆ ಹತ್ತಿ.

ಕ್ಷಣ ಕ್ಷಣದ ಬದುಕಿನ ಚಕಿತವನೆಲ್ಲ
ಪಕಳೆ ಪಕಳೆ ಬಿಡಿಸಿ ಹೀರುವ ಬಯಕೆ ಮನಕೆ.

ಧ್ವನಿ ಅಳಲನುಲಿಯು ಬಲ್ಲುದೆ
ಎಲ್ಲದರ ಪದರ ಬಿಚ್ಚಿ;
ಕತ್ತಲೆಯು ಸ್ವಪ್ನದ ತುಂಬೆಲ್ಲ ವರ್ಣಮುಖ
ಹೀಗೊಂದು
ನೋವಿನೆಳೆಯಾಗಿ ಕಳೆದ ರಾತ್ರಿಗಳ
ಅಳಲನೆಲ್ಲವನು ಬರೆಯು ಬಲ್ಲುದೆ ಕವಿತೆ ?

ಕರ್ಣ ಕೌರವರ ನೆತ್ತ

ತಾಳ್ತಜೆ ಕೃಷ್ಣ ಭಟ್ಟ, ವಿದ್ವಾನ್

ಯುಧಿಷ್ಠಿರನು ದ್ರೌಪದಿಯನ್ನು ಪಣವಿಟ್ಟು ನೆತ್ತವಾಡಿ ಸೋತ ಕಥೆ ಎಲ್ಲರಿಗೂ ತಿಳಿದದ್ದೇ. ಅಲ್ಲಿ ತಾನು ಗೆದ್ದ ವಸ್ತುವನ್ನು ಸ್ವಾಧೀನಪಡಿಸಲು ಕೈ ಮಾಡಿದ ಕೌರವನ ಅಧಿಕಾರಬದ್ಧವಾದ ಕಾರ್ಯವು ಅನೀತಿಯೆಂದು ಅಂದಿನ ಕಾಲದಲ್ಲಿ ಪ್ರಚಾರವಾಯಿತು. ರಾಯಭಾರಿಯಾಗಿ ಬಂದು ಮರಳಲಿದ್ದ ಶ್ರೀಕೃಷ್ಣನಲ್ಲಿ ಕರ್ಣನು ತಮ್ಮೊಳಗಿನ ಒಂದು ನೆತ್ತದ ಸುದ್ದಿಯನ್ನು ವಿವರಿಸಿ ತನ್ನ ರಾಜನು ಭೂಪೋತ್ತಮನೆಂದು ಸಮರ್ಥಿಸಿ, ಪಾಂಡವರು ಬರ್ಬರರೆಂದು ಧ್ವನಿಸುವ ಒಂದು ಪದ್ಯವು ಈ ತನಕ ಅನೇಕ ವಿದ್ವಾಂಸರ ಚರ್ಚೆಗೆ ಒಳಪಟ್ಟಿದೆ. ಎಲ್ಲರೂ ತಮ್ಮ ತಮ್ಮ ಪ್ರೌಢಿಮೆಯನ್ನು ಇದರ ವಿವರಣೆಯಲ್ಲಿ ತೋರಿಸಿರುತ್ತಾರೆ. ಇವುಗಳೆಲ್ಲವನ್ನೂ ಕ್ರೋಢೀಕರಿಸಿ ಇತ್ತೀಚೆಗೆ ಶ್ರೀ ಸೇಡಿಯಾಪು ಕೃಷ್ಣಭಟ್ಟರು ತಮ್ಮ ಕ್ಲಿಷ್ಟ ಮತ್ತು ತರ್ಕಕ್ಲಿಷ್ಟವಾದ ಶೈಲಿಯಲ್ಲಿ ಒಂದು ದೀರ್ಘವಾದ ಲೇಖನವನ್ನು ಪ್ರಕಟಿಸಿರುತ್ತಾರೆ (ಪ್ರಬುದ್ಧ ಕರ್ಣಾಟಕ ಸಂಪುಟ ೫೮ ಸಂಚಿಕೆ ೩). ಅವರ ಭಾವೋದ್ರೇಕದಿಂದ ಈ ಪದ್ಯವು ಶಾಪಗ್ರಸ್ತ ಪಾಷಾಣ ಪದ್ಯವೆಂದು ಹೇಳಿ, ತಮ್ಮ ಲೇಖನವು ಆ ಪದ್ಯಕನ್ನಿಕೆಯ ಉದ್ಧಾರಕ್ಕೆಂದು ಸಮರ್ಥಿಸಿ ಪಂಪನಿಗೆ ಅಪಚಾರವನ್ನೇ ಮಾಡಿ, ಓದುಗರಲ್ಲಿ ಸಂಶಯವನ್ನು ಮೂಡಿಸಿರುತ್ತಾರೆ. ನನ್ನ ವಿದ್ವನ್ಮಿತ್ರರನೇಕರು ನಾನು ಈ ಪದ್ಯಕ್ಕೆ ಕಂಡುಕೊಂಡ ಅರ್ಥವನ್ನು ಕೇಳಿ, ಅದನ್ನು ಪ್ರಕಟಿಸಬೇಕೆಂದು ಒತ್ತೈಸಿದುದರಿಂದ ಈ ಲೇಖನವನ್ನು ಬರೆಯಬೇಕಾಯಿತು. ಈಗ ಆ ಪದ್ಯವನ್ನು ಓದುಗರು ಮೊದಲು ಅವಲೋಕಿಸಬೇಕು.

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆ ಯೇವಮಿಲ್ಲದಿವನಾವುದೊ ತಪ್ಪದೆ ಪೇೞಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳವೊಕ್ಕೊಡೆ ಬೇಡನಲ್ಲನೇ

(ಆ. ೯-೬೯)

ಈ ಪದ್ಯದಲ್ಲಿ ಯಾರು ಯಾರು ಕೂಡಿ ನೆತ್ತವಾಡಿದುದೆಂದು ಹೇಳಲಿಲ್ಲ. 'ಭಾನುಮತಿ ಸೋಲ್ತೊಡೆ' ಎಂದಿರುವುದನ್ನು ಗ್ರಹಿಸಿ ಆಡಿದವರಲ್ಲಿ ಆಕೆ ಒಬ್ಬಳೆಂದು ಎಲ್ಲವರೂ ತಿಳಿಯುವಂತಾಯಿತು. ಆಕೆಯೊಡನೆ ಆಡಿದ ಇನ್ನೊಬ್ಬನು ಕರ್ಣನೇ ಇರಬೇಕೆಂದು ಪೆಚ್ಚಿನವರು ಊಹಿಸಿದುದು ಸರಿಯೇ. ಅಲ್ಲದೆ ಈ ಸಂಗತಿಯನ್ನು ಹೇಳಿದವನೂ

ಆತನೇ ಆಗಿರುವುದರಿಂದ ಈ ಊಹೆಗೆ ಪುಷ್ಟಿ ದೊರೆಯುತ್ತದೆ. ಕೆಲವರು ಕೌರವನೇ ಪ್ರತಿಸ್ಪರ್ಧಿಯೆಂದೂ ವಾದಿಸಿದರು. ಮುಂದೆ 'ಸೋಲಮಸೀವುದು' ಎಂಬಲ್ಲಿ ಸೋತದ್ದಕ್ಕೆ ಕೊಡಬೇಕಾದ ವಸ್ತು='ಪಣವನ್ನು ಕೊಡಬೇಕು' ಎಂಬ ಅರ್ಥವನ್ನೆ ಎಲ್ಲವರೂ ತೆಗೆದುಕೊಂಡರು.6 ಮುತ್ತಿನ ಕೇಡು ಎಂಬಲ್ಲಿ ಮುತ್ತಿಗಾದ ಕೆಡುಕು ಇಲ್ಲವೆ ಉದುರಿದ ಮುತ್ತುಗಳ ಅವಸ್ಥೆ ಎಂದೂ ಬಳ್ಕುತ್ತಿರೆ ಎಂಬಲ್ಲಿ ಬಗ್ಗುತ್ತಿರೆ. ಎಂದೂ ಏವಮಿಲ್ಲದೆ = ಜಿಗುಪ್ಸೆಗೊಳ್ಳದೆ, ಇವನಾವುದೊ = ಈ ಮುತ್ತುಗಳನ್ನು ಹೆಕ್ಕಿ ಕೊಳ್ಳುವುದೊ, ಪೇಟಿಂ = ಹೇಳಿರಿ ಎಂದೇ ಹೆಚ್ಚಿನವರು ಅರ್ಥೈಸಿರುತ್ತಾರೆ.

ಶ್ರೀ ಸೇಡಿಯಾಪು ಅವರಿಗೆ ಹೊಳೆದ ಹೊಸ ಅರ್ಥವೇ ಬೇರೆ. ಅವರೆನ್ನುವಂತೆ ಕೌರವನೂ ಭಾನುಮತಿಯೂ ಸೆತ್ತವಾಡಿ ಭಾನುಮತಿ ಸೋತಳು. ಪಣಕ್ಕಾಗಿ ಕೌರವನು ಕಾಡಬೇಕಾಯಿತೆಂದಾಗ ಆ ಪಣವು ಬೇರೊಬ್ಬರ ಇದಿರಲ್ಲಿ ಕೊಡತಕ್ಕದ್ದಲ್ಲ ವಾಗಿತ್ತೆಂದು ಅವರ ತಿಳಿವಳಿಕೆ. 'ಮುಂದೆ ಮುತ್ತಿನ ಕೇಡನೆ ನೋಡಿ' ಎಂಬಲ್ಲಿ ಬರುವ ಮುತ್ತು ಶಬ್ದದಿಂದ ಅವರ ಪಣವು ತುಟಿಮುತ್ತೇ ಆಗಿರಬೇಕೆಂದು ಅವರ ನಿರ್ಣಯ. ಆದರೆ ಇನ್ನೊಬ್ಬನ ಸಮ್ಮುಖದಲ್ಲಿ ನೀಡಲಾಗದ ತುಟಿಮುತ್ತನ್ನು ಕೊಡುವ ಪಣ ಕ್ಕಾದರೂ ಲಜ್ಜಾವತಿ ಯುವತಿ ಒಪ್ಪಬಹುದೇ ಎಂಬುದು ಯೋಚನೆಯ ವಿಷಯ. ಇರಲಿ ಹೀಗೆ ತುಟಿಮುತ್ತಿಗಾಗಿ ಗೆದ್ದ ಕೌರವನು ಕಾಡುವಾಗ (ಲಂಬಣಂ=) ಮುತ್ತಿನ ಕುಚ್ಚು ಇಲ್ಲವೆ ಹಾರವು ಹರಿದು ಮುತ್ತುಗಳು ನೆಲದಲ್ಲಿ ಚೆಲ್ಲಾಪಿಲ್ಲಿಯಾದವು. ಭಾನುಮತಿಯು ಆ ಮುತ್ತುಗಳನ್ನೇ ನೋಡಿಕೊಂಡು ಮತ್ತೆಯೂ ಬಗ್ಗಿಕೊಂಡೇ ಇದ್ದುದರಿಂದ ಕೌರವನಿಗೆ ಅವಳ ತುಟಿ ಮುತ್ತು ಸಿಗುವಂತಿರಲಿಲ್ಲ. ಅದರೂ ಆತನು ಜಿಗುಪ್ಸೆಗೊಳ್ಳಲಿಲ್ಲ. 'ಆದಿಲ್ಲದಿದ್ದರೆ ಇದು' ಎಂದು ಆತನು 'ನೆಲದಲ್ಲಿ ಬಿದ್ದಿರುವ ಮುತ್ತುಗಳನ್ನು ಹೆಕ್ಕುವುದೋ ಅಂತ' ಎಂದು ಹೇಳಿರುವುದರಿಂದ ಆತನು ಭೂಪೋತ್ತ ಮನು: ಈ ರೀತಿ ಸೇಡಿಯಾಪಿನವರ ಅರ್ಥವಿವರಣೆಗೆ ಶ್ರೀ ಪಾರಿಸವಾಡರೆಂಬವರ ಭಾವನೆಯೂ ಅವರಿಗೆ ಪ್ರೇರಕವೆಂದಿದ್ದಾರೆ. ಇಲ್ಲಿ ಬರುವ 'ಪೇಟಿಂ' ಎಂಬುವಕ್ಕೆ ಹೇಳಿರಿ ಎಂದರ್ಥವಲ್ಲವಂತೆ. ಒಂದುತೆರದ ಕನ್ನಡ ಮಾತಾಡುವವರು ನಿಶ್ಚಯಾರ್ಥ ದಲ್ಲಿ ಬಳಸುವ ಶಬ್ದವಿದಂತೆ. ಶ್ರೀ ಶೆಕ್ಕುಂಜದವರೂ ತಮ್ಮ ಕೃತಿಯಲ್ಲಿ ಹೀಗೆಯೇ ವಿವರಿಸಿದ್ದಾರೆಂದು ಹೇಳಿ, ಲಕ್ಷ್ಯಕ್ಕಾಗಿ 'ಕಾಫಿ ಕೊಡುವುದೋ ಅಂತ' ಎಂಬ ಹೊಸಗನ್ನಡದ ವಾಕ್ಯಕೊಟ್ಟಿರುತ್ತಾರೆ. ಪೇಟಿಂ = 'ಅಂತ' ಎಂದು ಇವರ ನಿರ್ಣಯ. 'ಅಂತ' ಎಂಬ ಹೊಸಗನ್ನಡದ ಶಬ್ದಕ್ಕೆ ಸಮವಾದ ಹಳಗನ್ನಡದ 'ಪೇಟಿ' ಶಬ್ದದ ಮುಂದೆ ಸೊನ್ನೆ ಬರುವುದಿಲ್ಲ. ಉದಾ– 'ಅದು ಬತ್ತೂ ಪೇಟಿ ಗೊಂತಿದ್ದು.' ಪಂಪನ ಪದ್ಯದಲ್ಲಿ 'ಪೇಟಿಯೆಂಬ' ಇಲ್ಲವೆ 'ಪೇಟಿ ಎಂಬ' ಎಂದಿರು ತ್ತಿದ್ದರೆ ಈ ಮಹನೀಯರ ಮಾತಿಗೆ ಬೆಲೆಯಿತ್ತು. ಪಂಪನು– 'ಪೇಟಿಮೆಂಬ' ಎಂದು ಹೇಳಿರುವುದರಿಂದ. ಇಲ್ಲಿ ಹೇಳಿರಿ ಎಂದೇ 'ಪೇಟಿಂ' ಎಂಬ ಶಬ್ದದ ಅರ್ಥ. ಈಗ ನಾನು ತಿಳಿದಂತೆ ಇಡೀ ಪದ್ಯದ ವಿವರಣೆಯನ್ನಿಲ್ಲಿ ಕೊಡುತ್ತಿದ್ದೇನೆ.

ಹೆಟ್ಟಿನವರು ಇದುವರೆಗೆ ಈ ಪದ್ಯವನ್ನು ವಿವರಿಸುವಾಗ ಪಂಪನ ನುಡಿ ಜಾಣ್ಮೆಗಳನ್ನು ಜ್ಞಾಪಿಸಿಕೊಳ್ಳಲಿಲ್ಲ. ಕಥಾ ಸಂದರ್ಭವರಿತಿದ್ದರೂ ಅಲ್ಲಿಯ ಪಾತ್ರ ಗೌರವದ ಕುರಿತು ಯೋಚನೆ ಮಾಡಿದಂತಿಲ್ಲ. ರಾಯಭಾರಿಯಾಗಿ ಬಂದ ಶ್ರೀಕೃಷ್ಣನು ಸಂಧಿ ಕಾರ್ಯದಲ್ಲಿ ವಿಫಲನಾಗಿ ಮರಳುವಾಗ ಕರ್ಣನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ತುಸುದೂರ ಹೋಗುತ್ತಾ 'ಕರ್ಣ ! ನಿನಗಮ್ಮನಪರ್ಪತಿ, ತಾಯಿಕೊಂತಿ, ನಾನು ಮೈದುನನು, ಪಾಂಡವರು ಸಹೋದರರು. ಪಟ್ಟವು ನಿನ್ನದು. ಮುಳ್ಳನ್ನು ಮುಳ್ಳಿನಿಂದ ತೆಗೆಯಬೇಕೆಂದು ಕೌರವನು ನಿನ್ನನ್ನು ಪ್ರೀತಿಯಿಂದ ಸಾಕಿದನು. ಈಗ ನಮ್ಮ ಕಡೆಗೆ ಬಾ' ಎಂದನು. ಕರ್ಣನಿಗೆ ಕಣ್ಣಲ್ಲಿ ನೀರು ಬಂತು. ಆತನು—'ನನಗೆ ಕೌರವನ ಕೆಟ್ಟ ಗುಣವನ್ನೇ ಮೊದಲಾಗಿ ಏಕೆ ಹೇಳಿದಿರಿ ? ನನಗೆ ಕೀರ್ತಿ ಪೊಗಳಿಕೆ ಮುಂತಾದುವೆಲ್ಲಾ ಬರುವಂತೆ ಆತನು ಮಾಡಿದ್ದನ್ನೆಲ್ಲಾ ಬಿಟ್ಟು ಬಿಟ್ಟಿರಿ. ನಾನಾಗ ನಂಟುತನದ ನೆವನದಿಂದ ಪಾಂಡವರನ್ನು ಸೇರಿದರೆ ನೀವೇ ಹೇಸಲಿಕ್ಕಿಲ್ಲವೇ ?' ಎಂದು ಪ್ರಶ್ನಿಸಿ ತನ್ನ ಒಡನು 'ಭೂಪೋತ್ತಮನು', ಪಾಂಡವರು ಹಾಗಿಲ್ಲ ಎಂದು ಸಮರ್ಥಿಸುವುದಕ್ಕಾಗಿ ಈ ನೆತ್ತದ ಸುದ್ದಿಯನ್ನು ತೆಗೆದನು—

ಈಗ ಕರ್ಣನೂ ಭಾನುಮತಿಯೂ ನೆತ್ತವಾಡಿದ್ದೆಂದು ಹೇಳಿದುದಾದರೆ—ಆಕೆಯೊಡನೆ ಅಂತಃಪುರದಲ್ಲಿ ರಾಜನ ಸಮಕ್ಷಮದಲ್ಲಿ ತನಗೆ ನೆತ್ತವಾಡುವಷ್ಟು ಮಾತ್ರವಲ್ಲ ಆ ನೆತ್ತದಲ್ಲಿ ಆಕೆಯು ಸೋತಾಗ ಅವಳ ಕತ್ತಿನ ಹಾರಕ್ಕೆ ಕೈಹಾಕಿ ಎಳೆದುಕೊಳ್ಳುವಷ್ಟು ಸಲುಗೆಯಿತ್ತು. ಆ ಕಂಠಾಭರಣವು ತುಂಡಾಗಿ ಅದರ ಮುತ್ತುಗಳು ನೆಲದಲ್ಲಿ ಚೆಲ್ಲಿಹೋಗಿ ಆಕೆಯು ಕೋಪ ದುಃಖಗಳಿಂದ ಕೂಡಿದ್ದಾಗಲೂ ರಾಜನು ಏನೂ ಕೋಪಿಸದೆ 'ಈ ಮುತ್ತುಗಳನ್ನು ಹೆಕ್ಕಿಕೊಳ್ಳುವುದೋ ಹೇಳಿರಿ' ಎಂದು ಹೇಳುತ್ತಿದ್ದನು—ಎಂದಹಾಗಾಯಿತು. ಇದರಿಂದ ಕರ್ಣಕೌರವರೊಳಗಿನ ಮಿತ್ರತ್ವದ ಗಾಢತೆಯೇನೋ ವ್ಯಕ್ತವಾಗುವುದಲ್ಲದೆ ಕೌರವನು ಭೂಪೋತ್ತಮನೆಂಬುದಕ್ಕೆ ಸಮರ್ಥನೆ ಬರುವುದಿಲ್ಲ. ಒಬ್ಬ ಮಿತ್ರನ ಅಕೃತ್ಯಕ್ಕೆ ತಟಸ್ಥನಾದ ರಾಜನು ಭೂಪೋಪತ್ತಮನೆನಿಸುವುದಾದರೂ ಹೇಗೆ ?

ಇನ್ನು ಭಾನುಮತಿ ಮತ್ತು ಕೌರವನು ತುಟಿಮುತ್ತಿನ ಪಣವಿಟ್ಟು ನೆತ್ತವಾಡಿದುದೆಂದು ಅರ್ಥೈಸುವುದು ಸರಿಯೋ ನೋಡೋಣ. ಭೂಪೋತ್ತಮನೆಂದು ಸಮರ್ಥಿಸಲು ಹೊರಟ ಕರ್ಣನು ತನ್ನ ರಾಜರಾಣಿಯರ ಈ ಶೃಂಗಾರ ಚೇಷ್ಟೆಯನ್ನು ವರ್ಣಿಸಬಹುದೇ ? ಅದರಲ್ಲಿಯೂ ಮೊದಲು ಕಣ್ಣೀರು ಹರಿಸಿ ಮಾತನ್ನು ತೊಡಗಿದವನು ಶೃಂಗಾರರಸವನ್ನು ಹೊಮ್ಮಿಸಬಹುದೇ ? ಈ ಅಲ್ಪಸಂಗತಿಯನ್ನು ಆಗ ಹೇಳುವ ಸಂದರ್ಭವೇ ? ಆತನ 'ಏಜ, ಕಡುನನ್ನಿ, ಚಾಗ, ಬೀರ' ಮುಂತಾದ ಉತ್ತಮ ಗುಣಗಳನ್ನು ಚಿತ್ರಿಸಿದ ಪಂಪನ ಪಂಕ್ತಿಗೆ ಇದು ಕುಂದಾಗದೇ ? ಆದ್ದರಿಂದ ಇದು ಸಂದರ್ಭಕ್ಕೆ ಒಪ್ಪಲಾಗದಮಾತು.

ಪಂಪನ ಪ್ರಯೋಗ ಪದ್ಧತಿಗಳನ್ನು ಮೊದಲು ಮನನ ಮಾಡಿಕೊಂಡರೆ ಈ ಪದ್ಯದಲ್ಲಿ ಕವಿಯ ಆಶಯವೇನಿದ್ದಿತೆಂಬುದನ್ನು ಸುಲಭವಾಗಿ ತಿಳಿಯಬಹುದು. ವಿಭಕ್ತಿ ಪಲ್ಲಟಕ್ಕೆ ಪಂಪನು ಅಗ್ರೇಸರನು. 'ಎನ್ನ ಪೇಟ್ದ ನುಡಿ' 'ನಿನ್ನ ಗೈದ ಕೃತಿ'. ಇಲ್ಲಿ ಪ್ರಥಮೆಗೆ ಷಷ್ಠಿ ಬಂದಿದೆ. ಗದೆಗೊಳ್, ರಾಜಸೂಯಂ ಬೇಳ್ ಮೊದಲಾದೆಡೆ ದ್ವಿತೀಯೆಗೆ ಪ್ರಥಮೆ ಬಂದಿದೆ. ಹೀಗೆಯೇ ಈ ಪದ್ಯದಲ್ಲಿಯೂ 'ಭಾನುಮತಿ ಸೋಲ್ತೊಡೆ' ಎಂದಾಗ 'ಭಾನುಮತಿಯಂ' ಎಂದು ದ್ವಿತೀಯಾ ವಿಭಕ್ತಿಗೆ ಬದಲಾಗಿ ಪ್ರಥ ಮೆಬಂದುದೆಂದು ತಿಳಿದುಕೊಳ್ಳಬೇಕು. ಆಗ ಈ ಪದ್ಯದಲ್ಲಿ ಬೇರೆಲ್ಲಿಯೂ ಅರ್ಥದ ತೊಡಕಿಲ್ಲ. ಸಂದರ್ಭಕ್ಕೆ ಪಾತ್ರಗೌರವಕ್ಕೆ ಕುಂದುಂಟಾಗುವುದೂ ಇಲ್ಲ. ಭಾನುಮತಿಯನ್ನು ನೆತ್ತದಲ್ಲಿ ಸೋತಾಗ ಎಂದೊಡನೆ ಸೋತವನು ಕೌರವನು, ಭಾನುಮತಿಯೇ ಪಣವೆಂಬುದು ಸ್ಪಷ್ಟ. ಈ ಕತೆ ಹೇಳುವ ಕರ್ಣನೇ ಪ್ರತಿಸ್ಪರ್ಧಿಯೆಂಬುದೂ ಸರ್ವವಿದಿತ. ಆಮೇಲೆ ಸೋಲಿಮನೀವುದು ಎಂಬಲ್ಲಿ, ಸೋಲ, ಸೋಗಲ, ದೊಗಲೆ-ಮುಂತಾಗಿ ಮೇಲ್ಬಟ್ಟೆಗೆ ಹೆಸರಿಸಿರುವುದನ್ನು ನೆನೆದುಕೊಳ್ಳಬೇಕು. ಚೋಲಿ, ಚೋಳಿ, ಚೋಲ—ಎಂದು ರವಕೆಗೆ ಹೆಸರಿರುವುದು ನಮ್ಮ ಹೆಂಗುಸರಿಗೆ ಬಳಕೆಯ ಮಾತೇ ಆಗಿದೆ. ಪಂಪನು ಇಲ್ಲಿ ಮೇಲ್ಬಟ್ಟೆಯನ್ನೇ 'ಸೋಲ' ಎಂದಿದ್ದಾನೆ. ಆದರೆ ಭಾನುಮತಿಯನ್ನು ನೆತ್ತದಲ್ಲಿ ಗೆದ್ದುಕೊಂಡ ಕರ್ಣನು ಆಕೆಯ ಮೇಲ್ಬಟ್ಟೆಗಾಗಿ ಕಾಡಿದ್ದು ಸರಿಯೆ ಎಂಬ ಮಾತು ಬರುತ್ತದೆ. ಇದಕ್ಕೆ ಆ ಸಂದರ್ಭವನ್ನು ಮರೆಯದೆ ನೆನಪಿಟ್ಟುಕೊಳ್ಳಬೇಕು. ಕರ್ಣನಿಗೆ ತನ್ನ ಮಾತಿನಿಂದ ಆ ಹಿಂದಿನ ನೆತ್ತವನ್ನು ಅಭಿವ್ಯಕ್ತಿಸಬೇಕಿತ್ತು. ಆ ಹಿಂದಿನ ನೆತ್ತದಲ್ಲಿ ಯುಧಿಷ್ಠಿರನು ದ್ರೌಪದಿಯನ್ನು ಸೋತಿದ್ದನು ಅವಳನ್ನು ಎಳೆದು ತಂದು ಸಭೆಯಲ್ಲಿ ನಿಲ್ಲಿಸಿದವನು ದುಶ್ಶಾಸನನು. ಪಂಪನು ದ್ರೌಪದಿಯ ಮುಡಿಯನ್ನು ಹಿಡಿದೆಳೆದನೆಂದು ವರ್ಣಿಸಿದರೂ ಆತನಿಗಿಂತ ಮೊದಲಿನ ಮತ್ತು ಮತ್ತಿನ ಅನೇಕ ಕವಿಗಳು ದ್ರೌಪದಿಯ ವಸ್ತ್ರಾಪಹರಣದ ಸುದ್ದಿಯನ್ನು ಬಿತ್ತರಿಸಿದ್ದಾರೆ. ಈ ಘಟನೆಯನ್ನು ಧ್ವನಿಸುವುದಕ್ಕಾಗಿಯೇ ಈ ವರ್ಣನೆಯಾಗಿದೆ. ದ್ರೌಪದಿಯ ಮುಡಿ ಮಾತ್ರ ಬಿಚ್ಚಲ್ಪಟ್ಟರೂ ಅವಳು ರೋದಿಸಿದಾಗ ಭೀಮಾರ್ಜುನಾದಿಗಳು ಕೋಪಿಸಿ, ಬಾಯಿಗೆ ಬಂದಂತೆ ಶಪಥತೊಟ್ಟಿದ್ದರು. ಆ ಘಟನೆಗಿಂತ ದೊಡ್ಡದಾದ ಘಟನೆಯೊಂದು ಕೌರವನ ಸಮ್ಮುಖದಲ್ಲಿ ನಡೆದಿತ್ತೆಂದು ಕರ್ಣನ ಧ್ವನಿಯುಕ್ತವಾದ ಮಾತಿದು. ಇಲ್ಲಿ "ಕೌರವನು ಹೆಂಡತಿಯನ್ನು ಸೋತಾಗ ಗೆದ್ದವನಾದ ನಾನು ಭಾನುಮತಿಯ ಮೇಲ್ಬಟ್ಟೆಯನ್ನು ಕೊಡಬೇಕೆಂದು ಕಾಡಿದೆ. ಆ ಕಾಟದಲ್ಲಿ ಆಕೆಯ ಕಂಠಾಭರಣವು ತುಂಡಾಯಿತು ಮುತ್ತು ಕೆಳಗುರುಳಿತು". ಇಲ್ಲಿ ಮುತ್ತಿನಕೇಡು ಎಂದಿರುವುದು ಅರ್ಥಪೂರ್ಣವಾಗಿದೆ. ಇದರಿಂದ ತುಂಡಾದುದು ಮಂಗಲಸೂತ್ರವೆಂದು ಬೇರೆ ಹೇಳಬೇಕಾಗಿಲ್ಲ. 'ನೋಡಿ ನೋಡಿ ಬಳ್ಕುತ್ತಿರೆ,'—ಮುತ್ತೈದೆಯ ಮಂಗಳ ಸೂತ್ರವು ತುಂಡಾಗಲೇಬಾರದು ಅದರಲ್ಲಿ ಪೋಣಿಸಿರುವ ಮುತ್ತು ಕೆಳಗುದುರಿದರೆ,

ಆಕೆಯ ಮಾಂಗಲ್ಯಕ್ಕೆ ಕೇಡೆಂದು ಸಂಪ್ರದಾಯದ ನಂಬುಗೆ ಇಂದೂ ಇದೆ. ಆದ್ದರಿಂದ ಆ ಕೇಡನ್ನೇ ಯೋಚಿಸಿ ಯೋಚಿಸಿ, ಆಕೆಯು ಬಳ್ಕಿದಳು ಅಂದರೆ, 'ಹುಯ್ಲಿಟ್ಟಳು'. 'ಏಕೆಗೆ ಬಳ್ಕೊಳ್ಳೆ'–ಅಂದರೆ ಯಾಕೆ ಬೊಬ್ಬಿಡುತ್ತೀ ಎಂದು ಮನೆಮಾತಿರುವುದಂ ತಿಳಿದವ್ದೇ. ಕಳ್ಕು, ಪಳ್ಕು, ಬಳ್ಕು-ಇವು ಊಳಿಡು, ದೊಡ್ಡ ಸ್ವರದಲ್ಲಿ 'ಹೋ' ಎನ್ನು ಎಂಬ ಅರ್ಥವನ್ನು ಕೊಡುತ್ತವೆ. ಎತ್ತರಿಸಿ, ರೋದಿಸಿದಳೆಂದು ಇಲ್ಲಿ ಭಾವವು. ಹಿಂದೆ ದ್ರೌಪದಿಯೂ ಹೀಗೇ ರೋದಿಸಿದ್ದಳೆಂಬುದು ಧ್ವನಿ. ಆಗ (ಪಾಂಡವರಂತೆ) ಕೌರವನು ಜುಗುಪ್ಸೆಯನ್ನೋ ತಿರಸ್ಕಾರವನ್ನೋ ತಾಳಲಿಲ್ಲ. 'ಇವನಾವುದೋ ತಪ್ಪದೆ ಪೇಳಿಂ' ಇಲ್ಲಿ ಇವಂ + ಆವುದೋ ಎಂದು ಶಬ್ದಗಳನ್ನು ಬಿಡಿಸಿನೋಡಿ 'ಇವಂ' = ಈ ಚೆಲ್ಲಿದಮುತ್ತುಗಳನ್ನು ಎಂದು ಅರ್ಥೈಸಿ, ಆವುದೋ = ಹೆಕ್ಕುವುದೊ ಎಂದು ಅರ್ಥ ಮಾಡುವುದಾದರೆ, ಆಗ ಇವಮಾವುದೋ ಎಂದಿರಬೇಕಿತ್ತು. ಈ ಹಿಂದೆ ಏವಂ + ಇಲ್ಲದೆ ಎಂಬಲ್ಲಿ ಏವಸಿಲ್ಲದೆ ಎಂದಾಗಲಿಲ್ಲ 'ಏವಮಿಲ್ಲದೆ' ಎಂದಿದೆ. ಆದ್ದರಿಂದ ಇಲ್ಲಿ 'ಇವನಾವುದೊತಪ್ಪದೆ ಪೇಳಿಂ' ಎಂಬುದನ್ನು 'ಇವನ+ ಆವುದೊ+ ತಪ್ಪು+ ಅದೆ+ಪೇಳಿಂ' ಎಂದು ಸಂಧಿ ಬಿಡಿಸಿ ನೋಡಿ ಅರ್ಥಮಾಡಿ ಕೊಳ್ಳಬೇಕು. 'ಈ ಕರ್ಣನದ್ದೇನು ತಪ್ಪು ? ಅದೇ ಹೇಳಿರಿ ?' ಇಲ್ಲಿ ಮಹಾರಾಣಿಯನ್ನು ಬಹುವಚನ ದಲ್ಲಿ ಕರೆದಿದೆ. ಅದು ಸಂಪ್ರದಾಯವೂ ಹೌದು. ತನ್ನ ಸಮುಕ್ಷಮದಲ್ಲಿ ರಾಣಿಯ ಮಂಗಲ ಸೂತ್ರವು ತುಂಡಾಗಿ ಆಕೆಯು ರೋದಿಸುತ್ತಿರುವಾಗ ರಾಜನು ಕೋಪಿಸ ಬೇಕಿತ್ತು. ದ್ಯೂತದಲ್ಲಿ ಗೆದ್ದ ಕರ್ಣನ ಕೃತ್ಯಗಳು ನ್ಯಾಯಸಮ್ಮತವೆಂದು ಆತನು ಮನಗಂಡು ತಿರಸ್ಕಾರ ಭಾವವನ್ನು ತಾಳಲಿಲ್ಲ. ಪಾಂಡವರು ಹಾಗೆ ನ್ಯಾಯದಿಂದ ವರ್ತಿಸಲಿಲ್ಲವೆಂಬುದು ಕರ್ಣನ ಮಾತಿನ ಧ್ವನಿ. ಭೂಪೋತ್ತಮನಿಗೆ ನ್ಯಾಯ ನಿಷ್ಟುರತ್ವವು ಅತೀ ಅಗತ್ಯವೆಂಬುದೇ ಕರ್ಣನ ವಾದವಾಗಿದೆ. ಅಂತಹ ಭೂಪೋತ್ತಮನನ್ನು ಬಿಟ್ಟು ನಿಮ್ಮ ಪಕ್ಷಕ್ಕೆ ಸೇರುವವನು ಒಬ್ಬ ಬರ್ಬರನೇ ಆಗುವುದಿಲ್ಲವೇ ? ಎಂದು ಕರ್ಣನ ಹೇಳಿಕೆ. ಇಲ್ಲಿ ಕರ್ಣನು ತನ್ನನ್ನು ಅನ್ಯಪುರುಷ ಪ್ರಯೋಗದಲ್ಲಿ ಹೇಳಿರುವನೆಂದು ಭ್ರಮಿಸತಕ್ಕದ್ದಲ್ಲ. ಕೌರವನ ಉತ್ತಮ ಗುಣಗಳನ್ನು ಘಟನಾ ಬದ್ಧವಾಗಿ ವಿವರಿಸಿದಾಗ, ಅಂತಹ ಹಿಂದಿನದೊಂದು ಸಂದರ್ಭದಲ್ಲಿ ಕೃಷ್ಣನ ಕಡೆಯವರು ಇಂತಹ ಸರಳ ರೀತಿಯಲ್ಲಿರಲಿಲ್ಲವೆಂಬುದನ್ನು ಧ್ವನಿಸಿದ ಕರ್ಣನು 'ಕೌರವನನ್ನು ಬಿಟ್ಟು ನಿಮ್ಮ ಕಡೆಗೆ ಬರುವವನು ಆರೇ ಇರಲಿ ಆತನು ಒಬ್ಬ ಬರ್ಬರನು ಅಲ್ಲವೇ'– ಎಂದು ಪ್ರಶ್ನೆ ಹಾಕುತ್ತಾನೆ.

ಈ ಪದ್ಯದಲ್ಲಿ ಕೌರವನನ್ನು ಭೂಪೋತ್ತಮನೆಂದು ಹೇಳಿದ ಕರ್ಣನು ಆತನ ಪತ್ನಿಯನ್ನ 'ಭಾನುಮತಿ' ಎಂದು ಏಕವಚನದಲ್ಲಿ ಹೇಳಿದ ಔಚಿತ್ಯವೂ ಸ್ಮರಿಸಿ ಕೊಳ್ಳುವಂತಹದು. ಹಿಂದೆ ಅವಳ ತಂದೆ ಭಾನುಮಂತನ ಪಣವನ್ನು ಗೆದ್ದವನು ಕರ್ಣನು. ತನಗೆ ಲಭಿಸಬೇಕಾದ ಆಕೆಯನ್ನು ತನ್ನೊಡೆಯನಿಗೆ ಬಿಟ್ಟು ಕೊಟ್ಟಿದ್ದನು.

ಆ ರೀತಿಯಿಂದ ಆತನು ಆಕೆಗೆ ಒರಿಯುವನಂತೆ ಆಗುತ್ತಾನೆ. ಆ ಸಭೆಯಲ್ಲಿ ಕರ್ಣನ ಸಾಹಸಕ್ಕೆ ಮೆಚ್ಚಿದ ಭಾನುಮಂತನು ತನ್ನ ತಮ್ಮ ಚಂದ್ರಧ್ವಜನ ಮಗಳನ್ನು ಕರ್ಣನಿಗೆ ಮದುವೆ ಮಾಡುತ್ತಾನೆ. ಈ ಸಂಬಂಧದಿಂದ ಆತನು ಕೌರವನಿಗೆ ಸಹೋದರ ಸಂಬಂಧಿಯಾಗುತ್ತಾನೆ! ಈ ಎಲ್ಲಾ ನಣ್ಪುಗಳು ಕೃಷ್ಣನಿಗೆ ತಿಳಿಯದಿದ್ದುದೂ ಅಲ್ಲ. ಆ ಒಂದು 'ಭಾನುಮತಿ' ಶಬ್ದ ಮಾತ್ರದಿಂದ ಈ ನಂಟುತನದ ಸಂಗತಿಯನ್ನು ಧ್ವನಿಸಿ ನೆತ್ತದ ಘಟನೆಯೊಂದನ್ನು ಹೇಳಿ ಒಂದೆ ನಡೆದ ನೆತ್ತದಲ್ಲಿ ಪ್ರತಿ ಪಕ್ಷೀಯರ ದುರ್ವರ್ತನೆಯನ್ನು ಧ್ವನಿಸಿ ಕೃಷ್ಣನನ್ನು ಮುಂದೆ ಮಾತೆತ್ತದಂತೆ ಮಾಡುವುದೇ ಕರ್ಣನ ಗುರಿಯಾಗಿದ್ದಿತು. ಇದು ಪಂಪನ ಆಶಯ, ಅವನ ಪೆಂಪಿನ ಇಂಪಿನ ವಾಗ್ವಿಲಾಸಗಳು.

ತೆಲುಗಿನ ಖ್ಯಾತ ಕ್ರಾಂತಿಕವಿ ಶ್ರೀ ಶ್ರೀ ಮತ್ತು ಅವರ 'ಮಹಾಪ್ರಸ್ಥಾನಂ'

ಡಾ. ಜಿ. ಯಸ್. ಮೋಹನ್

ಶ್ರೀ ಶ್ರೀ ಎನ್ನುವ ಎರಡಕ್ಷರಗಳು ಕ್ರಾಂತಿಯ ಸಂಕೇತ, ಚೈತನ್ಯದ ಸೆಲೆಗೆ ಪ್ರತೀಕ. ತೆಲುಗಿನಲ್ಲಿ ಹೆಸರಾಂತ ಕ್ರಾಂತಿ ಕವಿಯಾದ ಶ್ರೀ ಶ್ರೀ ಯವರ ಪೂರ್ಣ ಹೆಸರು ಶ್ರೀರಂಗಂ ಶ್ರೀನಿವಾಸರಾವು. ಇವರು ಫೆಬ್ರವರಿ 1910 ರಲ್ಲಿ ವಿಶಾಖಪಟ್ನಂ ಜಿಲ್ಲೆಯಲ್ಲಿ ಜನಿಸಿದರು. ವಿಶಾಖಪಟ್ನಂ, ಮದ್ರಾಸ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಕೆಲವು ವರ್ಷಗಳು ಸೈನ್ಯದಲ್ಲಿಯೂ, ಇನ್ನು ಕೆಲವು ವರ್ಷಗಳು ಪತ್ರಕರ್ತರಾಗಿಯೂ ಕೆಲಸಮಾಡಿ ಈಗ ಚಲನಚಿತ್ರ ಕವಿಗಳಾಗಿ ಹೆಸರುವಾಸಿಯಾಗಿದ್ದಾರೆ.

ಶ್ರೀ ಶ್ರೀಯವರು ಚಿಕ್ಕವಯಸ್ಸಿನಲ್ಲಿಯೇ ಗೀತನಾಟಕ ಹಾಗೂ ಕಾದಂಬರಿಗಳನ್ನು ಬರೆದರು. 'ಸಾವಿತ್ರೀ ಸತ್ಯವಂತುಲು' ಎನ್ನುವುದು ಇವರ ಗೀತನಾಟಕ. 'ವೀರಸಿಂಹ ವಿಜಯಸಿಂಹುಲು' ಮತ್ತು 'ಪರಿಣಯ ರಹಸ್ಯಂ' ಎಂಬುವು ಇವರ ಕಾದಂಬರಿಗಳು. 1928 ರಲ್ಲಿ 'ಪ್ರಭವ' ಕಾವ್ಯ ಸಂಕಲನವನ್ನು ಹೊರತಂದರು. ಇದರಲ್ಲಿ ಪ್ರಕೃತಿಗೀತೆಗಳು, ಪ್ರಣಯಗೀತೆಗಳು ಮತ್ತು ಪ್ರಕೀರ್ಣಗೀತೆಗಳು ಎನ್ನುವ ಮೂರು ಭಾಗಗಳಿವೆ. 1929 ರಲ್ಲಿ 'ಸುಪ್ತಾಸ್ಥಿಕಲು' ಎನ್ನುವ ಕಾವ್ಯರಚನೆ ಮಾಡಿದರು. ಇವು ಪ್ರಾಚೀನ ಛಂದಸ್ಸಾಂಪ್ರದಾಯವನ್ನು ಅನುಸರಿಸಿ ಜಾತಿ, ಉಪಜಾತಿ, ವೃತ್ತಗಳ ಶೈಲಿಯಲ್ಲಿವೆ. ಹೀಗೆ ಪ್ರಾಚೀನ ಛಂದಸ್ಸಾಂಪ್ರದಾಯವನ್ನು ಹೊಂದಿದ್ದ ಶ್ರೀ ಶ್ರೀ 1933 ರಲ್ಲಿ ನವ್ಯ ಕವಿತ್ವವನ್ನು ಸ್ವೀಕರಿಸಿದರು. 1940 ರಲ್ಲಿ ಈ ನವ್ಯ ಕವಿತ್ವವೇ ಆಂದೋಲನವಾಗಿ ಪರಿಣಮಿಸಿ 'ಅಭ್ಯುದಯ ಕವಿತೆ' ಎನ್ನಿಸಿಕೊಂಡಿತು.

ಮಹಾಪ್ರಸ್ಥಾನಂ :

ಶ್ರೀ ಶ್ರೀಯವರನ್ನು ಖ್ಯಾತ ಕ್ರಾಂತಿ ಕವಿಯಾಗಿ ಮಾಡಿದ ಕವನ ಸಂಕಲನ 'ಮಹಾ ಪ್ರಸ್ಥಾನಂ'. 1933 ರಿಂದ 1947 ರ ಅವಧಿಯಲ್ಲಿ ಒಂದು ಪ್ರತ್ಯೇಕವಾದ ಲಕ್ಷ್ಯದಿಂದ ಬರೆದ 40 ಗೀತೆಗಳ ಸಂಕಲನವೇ 'ಮಹಾ ಪ್ರಸ್ಥಾನಂ'. ಈ ಕವನಗಳು ಪುಸ್ತಕ ರೂಪದಲ್ಲಿ ಹೊರಬಂದಿದ್ದು 1950 ರಲ್ಲಿ.

ಮಹಾಪ್ರಸ್ಥಾನದಲ್ಲಿರುವ ಮೂರನೆಯ ಕವನವಾದ 'ಜಯಭೇರಿ' 2-6-1933 ರಲ್ಲಿ ರಚಿತವಾದುದು. ಮಹಾಪ್ರಸ್ಥಾನ ಗೀತೆಗಳ ರಚನೆಯಲ್ಲಿ ಮೊದಲನೆಯ ದಾದರೂ, 'ಮಹಾಪ್ರಸ್ಥಾನಂ' ಕವನ ಸಂಕಲನದಲ್ಲಿನ ಆರಂಭಕವನ 'ಮಹಾ ಪ್ರಸ್ಥಾನಂ' ಇದು 12–4–34 ರಲ್ಲಿ ರಚಿತವಾಗಿದೆ. ಮಹಾಪ್ರಸ್ಥಾನಂ ನಿದ್ರಿಸುತ್ತಿರು ವರನ್ನು ಎಬ್ಬಿಸುವ ಸುಪ್ರಭಾತವಲ್ಲ; ಎಚ್ಚತ್ತಿರುವವರನ್ನು ಮುನ್ನಡೆಯಿಸುವ ಒಂದು ಸಮರಗೀತೆ; ಸಮಸಮಾಜದ ಹಾದಿಯತ್ತ ಕರೆದೊಯ್ಯುವ ಒಂದು ವೇದನಾ ಪೂರ್ಣ ಆತ್ಮೀಯ ಕರೆ. ಇದಕ್ಕೆ ಒಂದು ದೃಷ್ಟಾಂತವನ್ನು ಕೊಡಬಹುದು.

'ಮರೋ ಪ್ರಪಂಚಂ
ಮರೋ ಪ್ರಪಂಚಂ
ಮರೋ ಪ್ರಪಂಚಂ ಪಿಲಿಚಿಂದಿ
ಪದಂಡಿ ಮುಂದುಕು
ಪದಂಡಿ ತ್ರೋಸುಕು
ಪೋದಾಂ ಪೋದಾಂ ಪೈಪೈಕಿ' – ಇದು ಒಂದು 'Marching Song'

ನಂತೆ ಲಯಪ್ರಧಾನವಾಗಿ ಮುಂದುವರೆಯುವ ಗೀತೆ. ಹೊಸ ಭಾವಗಳಿಗೆ ಒಂದು ಪ್ರತೀಕ. ಅಕ್ಷರಗಳಿಂದ ಭಾವಗಳನ್ನು ಹಿಂಡಬಲ್ಲ ಶ್ರೀ ಶ್ರೀ ಒಬ್ಬ ಮಹಾಕವಿ. ಮರೋ ಪ್ರಪಂಚಂ ಎನ್ನುವ ಪುನರಾವೃತ್ತಿಯಲ್ಲಿ ಭಾವತೀವ್ರತೆ ಕಂಡು ಬರುತ್ತದೆ.

ಶ್ರೀ ಶ್ರೀ ಯವರು ಯುವಕರನ್ನು ಹೀಗೆ ಕ್ರಾಂತಿಗೆ ಆಹ್ವಾನಿಸುತ್ತಿದ್ದಾರೆ.

ಅನುವಾದ :		
ಅನುವಾದ :	'ಮೂಳೆ ಕೊಳೆತ	[ತೆ. ಎಮುಕಲು ಕ್ರುಳ್ಳಿನ
	ವಯಸು ಕಳೆದ	ವಯಸ್ಸು ಮಳ್ಳಿನ
	ಸೋಮಾರಿಗಳೇ! ಸಾಯಿರಿ!	ಸೋಮರು ಲಾರಾ! ಚಾವಂಡಿ!
	ಬಿಸಿನೆತ್ತರು ಉಕ್ಕುವ	ನೆತ್ತುರುಮಂಡೇ
	ಶಕ್ತಿಯು ತುಂಬಿದ	ಶಕ್ತುಲು ನಿಂಡೇ
	ಸೈನಿಕರೇ! ಬನ್ನಿರಿ!	ಸೈನಿಕುಲಾರಾ ರಾರಂಡಿ!]

ಶಿವಸಮುದ್ರ, ನಯಾಗರಾಗಳಂತೆ ಕ್ರಾಂತಿಯೊಳಕ್ಕೆ ಧುಮುಕಿರಿ ಎಂದು ಸಹಾ ಕರೆ ಕೊಟ್ಟಿದ್ದಾರೆ. ಶ್ರೀ ಶ್ರೀ ಯವರು ಬಯಸಿದ್ದು ಸಾಮಾಜಿಕ ಕ್ರಾಂತಿ. ಇಲ್ಲಿರುವ ಮತ್ತೊಂದು ಪ್ರಪಂಚ ಬೇರೆ ಯಾವುದೋ ಅಲ್ಲ – ಅದು ಸಮಸಮಾಜ. ಇಲ್ಲಿರುವ ಸೈನಿಕರು ವೀರಯೋಧರಲ್ಲ – ರಕ್ತ ಉಕ್ಕಿಬರುವ ವಿಶ್ವಶ್ರಾಮಿಕರು. ನಾವೆಲ್ಲರೂ ವರ್ಗ ಸಮಾಜದಲ್ಲಿ ಸಿಕ್ಕಿಕೊಂಡು ಹಾಳಾಗುತ್ತಿದ್ದೇವೆ. ಸಮಸಮಾಜ ನಮ್ಮನ್ನು ಕೈಬೀಸಿ ಕರೆಯುತ್ತಿದೆ. ಯುವಕರಾದ ನಾವು ವರ್ಗ ಸಮಾಜವನ್ನು

ಬಿಟ್ಟು ಮುನ್ನಡೆಯಬೇಕು. ಹೊಸ ಪ್ರಪಂಚವನ್ನು ಕಾಣಬೇಕು. ಸಮ ಸಮಾಜವನ್ನು ಕಟ್ಟಬೇಕು. ಇದೊಂದು ಮಹಾಪ್ರಸ್ಥಾನ – ಮಹಾ ಕ್ರಮಣ ; ಒಂದು ಹೊಸಕ್ರಾಂತಿ ಈ ಕ್ರಾಂತಿಯನ್ನು ಸಾಧಿಸಲು ಎಂತಹ ತೊಂದರೆಗಳು ಬಂದರೂ ಲೆಕ್ಕಿಸದೇ ಮುನ್ನಡೆಯಬೇಕು.

ಫ್ರೆಂಚ್‌ರ ರಾಷ್ಟ್ರಗೀತೆ, ಹರೀಂದ್ರನಾಥ ಚಟ್ಟೋಪಾಧ್ಯಾಯರ 'ಪುರೂ ಹುವಾ ಪೈ ಜಂಗ್' ಎನ್ನುವಗೀತೆ, ನಜ್ರುಲ್ ಇಸ್ಲಾಂ ಅವರ ಕ್ರಾಂತಿ ಗೀತೆಗಳು, ಎಡ್ಗಾರ್ ಎಲನ್ ಪೋ ಗೀತೆಗಳು, ಗುರಜಾಡ, ಕವಿಕೊಂಡಲ (ತೆಲುಗಿನ ಖ್ಯಾತಕವಿಗಳು) ಅವರುಗಳ ಗೀತೆಗಳು–ಇವುಗಳೆಲ್ಲವು ಈ ಕವನದ ಮೇಲೆ ಪ್ರಭಾವ ಬೀರಿದ್ದರೂ, ಇದು ಯಾವುದರ ಅನುಕರಣವೂ ಅಲ್ಲ, ಅನುಸರಣೆಯೂ ಅಲ್ಲ— ಅವುಗಳೆಲ್ಲದರ ಪ್ರಭಾವವನ್ನು ಅರಗಿಸಿಕೊಂಡು ಹೃದಯ ಮತ್ತು ಬೌದ್ಧಿಕತೆಯಿಂದ ಮೂಡಿದ್ದು. ಈ ಕವನವೇ ಮಹಾಪ್ರಸ್ಥಾನ ಕವನ ಸಂಪುಟಕ್ಕೆ ಮೊದಲನೆಯ ಗೀತೆಯಾಗಿ ಸೇರಿಸಲ್ಪಟ್ಟಿದೆ.

ಅನುವಾದ :	[ತೆ.
'ನಾನು ಕೂಡ s	ನೇನು ಸೈತಂ
ಪ್ರಪಂಚಾಗ್ನಿಗೆ	ಪ್ರಪಂಚಾಗ್ನಿ ಕಿ
ಸಮಿಧೆಯೊಂದನ್ನು ಅರ್ಪಣೆ ಮಾಡಿದ್ದೇನೆ !	ಸಮಿಧ ನೊಕ್ಕಟ ಆಹುತಿಚ್ಚಾನು !
ನಾನು ಸಹಾ	ನೇನು ಸೈತಂ
ವಿಶ್ವ ವೃಷ್ಟಿಗೆ	ವಿಶ್ವಸೃಷ್ಟಿಕಿ
ಅಶ್ರುವೊಂದನ್ನು ಸುರಿಸಿದ್ದೇನೆ !'	ಅಶ್ರುವೊಕ್ಕಟಿ ಧಾರ ವೋತಾನು

—ಛಂದಸ್ಸಿನ ದೃಷ್ಟಿಯಿಂದ ಹೊಸ ಮಾರ್ಗದಲ್ಲಿರುವ ಕವನ 'ಜಯಭೇರಿ'. ಹಿಂದೆಯೇ ಪ್ರಸ್ತಾಪಿಸಿರುವಂತೆ 'ಜಯಭೇರಿ' ಕವನ 'ಮಹಾ ಪ್ರಸ್ಥಾನಂ' ಕವನ ಸಂಪುಟದಲ್ಲಿ ಬರೆದ ಮೊದಲನೆಯ ಕವನ. ಸಾಮಾಜಿಕ ಚೈತನ್ಯಕ್ಕೆ ತಾನು ಕೂಡ ಒಬ್ಬ ಪ್ರತಿನಿಧಿಯೆಂದೂ, ಪ್ರಪಂಚವೆನ್ನುವ ಹೋಮಾಗ್ನಿಗೆ ತಾನೊಂದು 'ಸಮಿತ್ತು' ಎಂದೂ ಹೇಳುವುದರಲ್ಲಿ ಭಾವನವ್ಯತೆ, ಸಾಮಾಜಿಕ ದೃಕ್ಪಥ ಕಂಡು ಬರುತ್ತದೆ.

ಅನುವಾದ :	[ತೆ
'ಇಂದೇ	ನೇಡೇ
ಈ ದಿನವೇ, ಈ ದಿನವೇ-	ಈ ನಾಡೇ, ಈ ನಾಡೇ-
ಜಗವೆಲ್ಲಾ ಬಲಿಪೀಠ	ಜಗಮಂತಾ ಬಲಿವಿತರ್ದಿ
ನರಜಾತಿಗೆ ಪರಿವರ್ತನೆ	ನರಜಾತಿಕಿ ಪರಿವರ್ತನ !
ನವಜೀವನ ಶುಭಸಮಯ	ನವಜೀವನ ಶುಭಸಮಯಂ !
–ಅಭ್ಯುದಯ'	ಅಭ್ಯುದಯಂ !

'ಅಭ್ಯುದಯಂ' ಎನ್ನುವ ಗೀತೆ ಮಾರ್ಚ್ 37ರಲ್ಲಿ ರಚಿಸಲ್ಪಟ್ಟಿದೆ. ಇಲ್ಲಿ ಅಭ್ಯುದಯವೆಂದರೆ ಪ್ರಗತಿ, ಪುರೋಗಮನವೆಂದು ಅರ್ಥ. ಕ್ರಾಂತಿ ನಡೆಯುತ್ತಿದೆ. ಪ್ರಪಂಚವೆಲ್ಲವೂ ಬಲಿಪೀಠವಾಗಿದೆ. ಇದು ಮಾನವ ಜಾತಿಗೆ ಪರಿವರ್ತನೆಯ ಸಮಯ. ಹೊಸ ಜೀವನ ಬರುವ ಶುಭ ಸಮಯವೆಂದು ಶ್ರೀಶ್ರೀ ಸಾರಿದ್ದಾರೆ.

'ಅವತಾರಂ' ಎನ್ನುವ ಕವನ ಅಧಿಕಾರಶಾಹಿಯ ವಿರುದ್ಧವಾಗಿ ಶ್ರಮ ಜೀವಿಗಳು ಮಾಡಿದ ಕ್ರಾಂತಿಯನ್ನು ಸೂಚಿಸುವ ವ್ಯಂಗ್ಯ ರಚನೆ. ಶತಶತಮಾನ ಗಳಿಂದ ತುಳಿಯಲ್ಪಟ್ಟ ಜನರು ಈಗ ತಿರುಗಿ ಬೀಳುತ್ತಿದ್ದಾರೆ. ಹೊಸ ಸೃಷ್ಟಿ ನಡೆಯು ತ್ತಿದೆ. ಬಂಡವಾಳಶಾಹಿಯ ಪ್ರತೀಕಗಳನ್ನಾಗಿ ದೇವರುಗಳನ್ನು, ಕಾರ್ಮಿಕ ಕೃಷಿ ಕರ ಪ್ರತೀಕಗಳನ್ನಾಗಿ ದೇವರುಗಳ ವಾಹನಗಳನ್ನು ಶ್ರೀ ಶ್ರೀಯವರು ಈ ಕವನ ದಲ್ಲಿ ಸ್ವೀಕರಿಸಿದ್ದಾರೆ. ಇಲ್ಲಿ ಅವತಾರವೆಂದರೆ 'ಸಮಸಮಾಜದ ಅವತಾರ' ನೋಡಿ

ಅನುವಾದ :	[ತೆ.
'ಯಮನ ಮಹಿಷದ ಲೋಹ ಗಂಟೆಗಳು	ಯಮುನಿ ಮಹಿಷಪು ಲೋಹ ಘಂಟಲು
ಕತ್ತಲಿನ ಮರೆಯಲ್ಲಿ	ಮಬ್ಬು ಚಾಟುನ
ಘಣ ಘಣವೆಂದವು	ಖಣೇಲ್ ಮನ್ನೆಯಿ !
ನರ ಲೋಕದ ಬೇಟೆ ನಾಯಿಗಳು	ನರಲೋಕಪು ಜಾಗಿಲಮ್ಮಲು
ಸರಪಳಿಯನ್ನು ಕಿತ್ತುಹಾಕಿ	ಗೊಲುಸುತ್ರೆಂಚುಕು
ಮೇಲ್ಬಿದ್ದವು	ಉರಿಕಿ ಪಡ್ಡಾಯಿ !
... ...	... ...
... ...	... ...
... ...	ಪುಡಮಿ ತಲ್ಲಿಕಿ
ಭೂಮಾತೆಗೆ	ಪುರಿಟಿ ನೊಪ್ಪಲು
ಪ್ರಸವವೇದನೆ	ಕೊತ್ತ ಸೃಷ್ಟಿನಿ ಸ್ಫುರಿಂಪಿಂಚಾಯಿ !
ಹೊಸ ಸೃಷ್ಟಿಯನ್ನು ಸ್ಫುರಣೆಗೆ ತಂದಿತು'	

ಈ ಸಾಲುಗಳಲ್ಲಿ ಆಯಾ ದೇವರುಗಳ ವಾಹನಗಳು ಅವರಿಗೆ ತಿರುಗಿ ಬೀಳು ತ್ತಿವೆ ಎಂದು ಧ್ವನಿಸುವುದರಲ್ಲಿ ಹಳೆಯ ವ್ಯವಸ್ಥೆ ನಶಿಸಿ ಹೋಗಿ ಹೊಸ ವ್ಯವಸ್ಥೆ ಬರುವುದೆನ್ನುವ Marx ಪ್ರವಚನ ಈ ಕವನದಲ್ಲಿ ಕಂಡು ಬರುತ್ತದೆ. ಇಲ್ಲಿ ಹಳೆಯ ವ್ಯವಸ್ಥೆಯೆಂದರೆ ಬಂಡವಾಳಶಾಹಿ ವರ್ಗ. ಹೊಸ ವ್ಯವಸ್ಥೆಯೆಂದರೆ ಶ್ರಮಿಕ ವರ್ಗ ಎಂದು ಅರ್ಥ.

'ನವಕವಿತೆ' ಎನ್ನುವ ಇನ್ನೊಂದು ಕವನದಲ್ಲಿ ಶ್ರೀಶ್ರೀ ಕವಿತಾವಸ್ತುವನ್ನು, ಅದರ ಪ್ರಯೋಜನವನ್ನು ಹೀಗೆ ತಿಳಿಸಿದ್ದಾರೆ.

ಅನುವಾದ : [ತೆ.

ಕವಲುವುದು ಕದಲಿಸುವುದು,	ಕದಿಲೇದೀ ಕದಿಲಿಂಚೇದೀ ।
ಬದಲಾಗುವುದು, ಬದಲಾಯಿಸುವುದು-	ಮಾರೇದೀ ಮಾರ್ಪಿಂಚೇದೀ।
ಹಾಡುವುದು, ಹಾಡಿಸುವುದು,	ಪಾಡೇದೀ ಪಾಡಿಂಚೇದೀ ।
ಸೋಮಾರಿತನವನ್ನು ಹೋಗಲಾಡಿಸುವುದು,	ಪೆನುನಿದ್ದುರ ವದಲಿಂಚೇದೀ ।
ಮುನ್ನಡೆಯಿಸುವುದು,	ಮುನುಮುಂದುಕು ಸಾಗಿಂಚೇದೀ ।
ಪರಿಪೂರ್ಣ ಜೀವನವನ್ನು ಕೊಡುವುದು	ಪರಿ ಪೂರ್ಣಪು ಬ್ರದುಕಿಚ್ಚೇದೀ ।
ಬೇಕೋ ನವಕವನಕ್ಕೆ	ಕಾವಾಲೋಯ್ ನವ ಕವನಾನಿಕಿ]

ಎಂದು ತಿಳಿಸಿದ್ದಾರೆ. ಈ ನವಕವಿತೆಯಿಂದ ಪ್ರಜಾಚೈತನ್ಯ ಉಕ್ಕಿ ಬರಬೇಕೆಂದು ಶ್ರೀಶ್ರೀಯವರ ಆಕಾಂಕ್ಷೆಯಾಗಿದೆ. ಇದು 'ಅಭ್ಯುದಯ ಕವಿತ್ವ'ದ ನೂತನ ಲಕ್ಷ್ಯ.

'ಖುಕ್ಕಲು' ಎನ್ನುವ ಕವನದಲ್ಲಿ

[ತೆ.

'ನಾಯಿಮರಿ,	ಕುಕ್ಕಪಿಲ್ಲಾ ।
ಬೆಂಕಿ ಕಡ್ಡಿ,	ಅಗ್ಗಿಪುಲ್ಲಾ ।
ಸಾಬೂನು–	ಸಬ್ಬು ಬಿಳ್ಳಾ
ಹೀನವಾಗಿ ನೋಡಬೇಡ ಯಾವುದನ್ನು	ಹೀನಂಗಾ ಚೂಡಕು ದೇನ್ನೀ !
ಕವಿತಾಮಯಮೇ ಅವು ಎಲ್ಲಾ !'	ಕವಿತಾ ಮಯಮೇನೋಯ್ ಅನ್ನೀ !

—ಕವಿತಾವೇಶವಿದ್ದಲ್ಲಿ ಜಿಗುಪ್ಸೆಯನ್ನುಂಟುಮಾಡುವ ವಸ್ತುಗಳನ್ನು ಸಹ ಕಾವ್ಯ ವಸ್ತುಗಳನ್ನಾಗಿ ಸ್ವೀಕರಿಸಬಹುದೆಂದು ತಿಳಿಸಿದ್ದಾರೆ. ಈ ವಸ್ತುಗಳು ಸಹಾ ಕವಿತೆಗೆ ಅರ್ಹವೆಂದೂ, ಕಣ್ಣಿದ್ದರೆ ನೋಡಿ, ಮಾತಿದ್ದರೆ ಬರೆದೂ, ಆನಂದ ವನ್ನೂ, ರಸವನ್ನೂ ಪಡೆಯಬಹುದೆಂದೂ ತಿಳಿಸಿದ್ದಾರೆ.

[ತೆ

ಪ್ರಪಂಚವೂ ಒಂದು ಪದ್ಮವ್ಯೂಹ !	ಪ್ರಪಂಚ ಮೊಕ ಪದ್ಮವ್ಯೂಹಂ !
ಕವಿತೆಯು ಒಂದು ತೀರದ ದಾಹ ।'	ಕವಿತ್ವ ಮೊಕ ತೀರನಿ ದಾಹಂ !

—ಈ ಸಾಲುಗಳಲ್ಲಿ ಕವಿತಾವೇಶದ ಲಕ್ಷಣವು ಕಂಡು ಬರುತ್ತದೆ. ಈ ಲೋಕವು ಅನಂತವಾದ ಭಾವಗಳು ತಿಳಿಯದಂತೆ ಹೆಣೆದು ಸಿಕ್ಕುಸಿಕ್ಕಾದ ಚೈತನ್ಯ ಸ್ವರೂಪ. ಇಂತಹ ಪ್ರಪಂಚದಲ್ಲಿ ಭಾವನೆಗಳು ತುಂಬಿದ ಕವಿತೆಯು ಒಂದು ತೀರದ ದಾಹ.

'ಕವಿತಾ ! ಓ ಕವಿತಾ !' ಎನ್ನುವ ಕವನ ಒಂದು ವಚನ ಕವಿತೆ. ಈ ಕವನದಲ್ಲಿ ಶ್ರೀ ಶ್ರೀಯವರು ವಸ್ತು ನವ್ಯತೆಗೆ ಉದಾಹರಣೆಗಳನ್ನು ಕೊಡುವುದಲ್ಲದೇ, ಜೀವನ ಸಮಸ್ಯೆಗಳನ್ನು, ಜೀವಿತ ಸತ್ಯಗಳನ್ನು ತಿಳಿಸಿದ್ದಾರೆ. ಶ್ರೀ ಶ್ರೀ ಕವಿತಾ ವೇಶವು ಹೀಗಿದೆ.

ಅನುವಾದ :	[ತೇ.
'ನಾ ಕೇಳಿದ್ದು, ನೋಡಿದ್ದು ಹೇಳಲು	ನಾವಿನ್ನವಿ ಕನ್ನವಿ ವಿನ್ನವಿಂಚಗಾ
ಮಾತುಗಳಿಗೆ ಹುಡುಕಾಡಲು—	ಮಾಟಲಕ್ಕೈ ವೆದುಕಾಡಗ ಬೋತೇ—
ಅವು,	ಅವಿ,
ಅಮಿತವೇಗದಿಂದ	ಪುಂಖಾನು ಪುಂಖಂಗಾ
ಸ್ಮಶಾನಗಳಂತಹ ನಿಘಂಟುಗಳನ್ನು ದಾಟಿ,	ಶ್ಮಶಾನಾಲವಂಟಿ ನಿಘಂಟುವುಲ ದಾಟಿ
ವ್ಯಾಕರಣಗಳ ಸಂಕೋಲೆಗಳನ್ನು ತ್ಯಜಿಸಿ	ವ್ಯಾಕರಣಾಲ ಸಂಕೆಳ್ಳುವಿಡಿಚಿ,
ಛಂದಸ್ಸುಗಳ ಸರ್ಪ ಪರಿಷ್ವಂಗವನ್ನು ಬಿಟ್ಟು	ಛಂದುಸ್ಸುಲ ಸರ್ಪ ಪರಿಷ್ವಂಗಂಗದಲಿ
ಬೇಗ ಬೇಗ	ವಡಿಗಾ, ವಡಿವಡಿಗಾ
ಹೊರಟು ಬಂದವು, ಓಡಿ ಹೋದವು, ನನ್ನೆದೆ	ವೆಲುವಡಿನ್ನೈ,
ಯಲ್ಲಿ ನಡೆದು ಬಂದವು'	ಪರುಗಿಡಿನ್ನೈ,
	ನಾ ಎದ ನಡುಗಿಡಿನ್ನೈ]

ಶ್ರಮಜೀವಿಗಳು ಅನುಭವಿಸುತ್ತಿರುವ ಕಷ್ಟಗಳನ್ನು 'ಚೇದು ಪಾಟ' ಎನ್ನುವ ಕವನದಲ್ಲಿ ಹೇಳಿದ್ದಾರೆ.

ಅನುವಾದ :	[ತೆ.
'ನಾವೆಲ್ಲರು ಸೆರೆಯಾಳುಗಳು	ಮನಮಂತಾ ಬಾನಿಸಲಂ
ಗಾಣೆಗರು, ಶವಗಳು	ಗಾನುಗಲಂ, ಪೀನುಗುಲಂ !
ಹಿಂದೆ ಮೋಸ । ಮುಂದೆ ಮೋಸ ।	ವೆನುಕ ದಗಾ, ಮುಂದು ದಗಾ,
ಎಡ ಬಲಗಡೆಗಳಲ್ಲಿಯೂ ಮೋಸ ಮೋಸ !	ಕುಡಿ ಎಡುಮಲ ದಗಾ, ದಗಾ !
ನಮ್ಮದೂ ಒಂದು ಬಾಳೇನು ।	ಮನದೀ ಒಕ ಬ್ರದುಕೇನಾ
ನಾಯಿಗಳಂತೆ, ನರಿಗಳಂತೆ	ಕುಕ್ಕಲವಲೆ, ನಕ್ಕಲವಲೆ ।
ನಮ್ಮದೂ ಒಂದು ಬಾಳೇನು ?	ಮನದೀ ಒಕ ಬ್ರದುಕೇನಾ ?
ಸಂದಿಗಳಲ್ಲಿ ತಿರುಗಾಡುವ ಹಂದಿಗಳಂತೆ !'	ಸಂದುಲಲೋ ಪಂದುಲ ವಲೆ ।

ಹೀಗೆ ಶ್ರೀ ಶ್ರೀಯವರು ಶ್ರಮಜೀವಿಗಳ ನಿಕೃಷ್ಟವಾದ ಜೀವನವನ್ನು ಕಣ್ಣಿಗೆ ಕಟ್ಟುವಂತೆ ತೋರಿಸುತ್ತಾ ಕ್ರಾಂತಿ ಬೀಜಗಳನ್ನು ಬಿತ್ತಿದ್ದಾರೆ.

ಶ್ರೀ ಶ್ರೀಯವರ ಭಾವನಾಶಕ್ತಿ ಉನ್ನತ ಮಟ್ಟದಲ್ಲಿ ಇರುವುದು ಎನ್ನುವುದಕ್ಕೆ ಉದಾಹರಣೆ 'ಒಕರಾತ್ರಿ' ಎನ್ನುವ ಕವನ :

ಅನುವಾದ :	[ತೆ.
'ಆಕಾಶವೆನ್ನುವ ಮರಳುಗಾಡಿ	ಆಕಾಶ ಪುಟೆಡಾರಿ
ನಲ್ಲಿ ಕಾಲು ಕಡಿದ	ಲೋ ಕಾಳ್ಳು ತೆಗಿನ
ಒಂದೇ ಒಂದು ಒಂಟೆಯಂತೆ	ಒಂಟರಿ ಒಂಟೆಲಾ
ಚಂದ್ರನಿರುವನು'	ಗುಂದಿ ಜಾಬಿಲ್ಲಿ ।]

—ಎಂದು ಒಂದು ಕಲ್ಪನಾ ಚಿತ್ರವನ್ನು ಸೊಗಸಾಗಿ ನೀಡಿದ್ದಾರೆ. ಹಾಗೆಯೇ

ಅನುವಾದ :	[ತೆ.
'ಆನೆಯ ಕಳೇಬರದಂತೆ	ಕರಿ ಕಳೇಬರಮೂಲಾ
ಕದಲುವುದಿಲ್ಲ ಬೆಟ್ಟ'	ಕದಲದು ಕೊಂಡ]

—ಎಂದು ಕರಿಗಿರಿಗಳಿಗೆ ಇರುವ ಸಾದೃಶ್ಯವನ್ನು ಕೊಟ್ಟ ಅವರ ಭಾವನಾ ಶಕ್ತಿ ಅಸಾಮಾನ್ಯವಾಗಿದೆ. ಇಂತಹ ಉಪಮೆಗಳನ್ನು ಹೇಳುವುದುರಲ್ಲಿ ಒಂದು ಚಮತ್ಕಾರ ಕಂಡು ಬರುತ್ತದೆ. ಇವು ಅಂದವಾದ ಪ್ರಕೃತಿಯ ವಸ್ತುಗಳು ಸಹ ಭಯಂಕರವಾಗಿವೆ, ಎಂದು ಧ್ವನಿಸುತ್ತವೆ.

ಶ್ರೀ ಶ್ರೀಯವರು ಬರೆದ ಮಹಾಪ್ರಸ್ಥಾನ ಕವನ ಸಂಪುಟದಲ್ಲಿ ಅತಿ ಪ್ರಧಾನವಾದ ಕವನ 'ದೇಶ ಚರಿತ್ರಲು'

ಅನುವಾದ :	[ತೆ.
ಯಾವದೇಶ ಚರಿತ್ರೆ ನೋಡಿದರೂ	ಏದೇಶ ಚರಿತ್ರ ಚೂಚಿನಾ
ಏನಿದೆ ಅಂತಹ ಗರ್ವಕ್ಕೆ ಕಾರಣ	ಏಮುನ್ನದಿ ಗರ್ವಕಾರಣಂ ?
ನರಜಾತಿ ಚರಿತ್ರೆ ಎಲ್ಲವೂ	ನರಜಾತಿ ಚರಿತ್ರ ಸಮಸ್ತಂ
ಪರಪೀಡನ ಪರಾಯಣತ್ವ'	ಪರಪೀಡನ ಪರಾಯಣತ್ವಂ]

—ಎಂದು ದೇಶ ಚರಿತ್ರೆಗಳಲ್ಲಿರುವ ನಿಗೂಢಾರ್ಥವನ್ನು ಸ್ಪಷ್ಟಪಡಿಸಿದ್ದಾರೆ. ಇನ್ನೂ ಸ್ಪಷ್ಟಪಡಿಸುತ್ತಾ

ಅನುವಾದ :	[ತೆ.
'ಯಾವ ಯುದ್ಧ ಯಾಕೆ ನಡೆಯಿತೋ ?	ಏಯುದ್ಧಂ ಎಂದುಕು ಜರಿಗೆನೋ
ಯಾವ ರಾಜ್ಯ ಎಷ್ಟು ದಿನಗಳಿತ್ತೋ ?	ಏರಾಜ್ಯಂ ಎನ್ನಾಳ್ಳುಂದೋ ?
ದಿನಾಂಕ ದಾಖಲೆ ಪತ್ರಗಳು	ತಾರೀಖುಲು, ದಸ್ತಾವೇಜುಲು
ಇವುಗಳಲ್ಲವೂ ಚರಿತ್ರೆಗೇ ಅರ್ಥ'	ಇವಿ ಕಾವೋಯ ಚರಿತ್ರಕರ್ಥಂ]

ಕೇವಲ ದಾಖಲೆಗಳು ಹೇಳುವ ಇತಿಹಾಸ ಇತಿಹಾಸವಲ್ಲ; ನಾವು ಗಮನಿಸಬೇಕಾದದ್ದು ;

ಅನುವಾದ :	[ತೆ.
ನೈಲುನದೀ ನಾಗರಿಕತೆಯಲ್ಲಿ	ನೈಲು ನದೀ ನಾಗರಿಕತಲೋ
ಸಾಮಾನ್ಯನ ಜೀವನ ಹೇಗಿತ್ತು	ಸಾಮಾನ್ಯುನಿ ಜೀವನಮೆಟ್ಟಿದಿ ?
ತಾಜಮಹಲಿನ ನಿರ್ಮಾಣಕ್ಕೆ	ತಾಜಮಹಲ್ ನಿರ್ಮಾದಾನಿಕಿ
ಕಲ್ಲುಎತ್ತಿದ ಕೂಲಿಗಳು ಯಾರು ?	ರಾಳ್ಳೆತ್ತಿನ ಕೂಲೀ ಲೆವ್ವರು ?]

—ಎಂದು ಎಚ್ಚರಿಸಿ

	[ತೆ.
'ಪರಸ್ಪರ ಸಂಘರ್ಷಿಸಿದ	ಪರಸ್ಪರಂ ಸಂಘರ್ಷಿಂಚಿನ
ಶಕ್ತಿಗಳಲ್ಲಿ ಚರಿತ್ರೆ ಹುಟ್ಟಿತು'–	ಶಕ್ತುಲಲೋ ಚರಿತ್ರಪುಟ್ಟಿನು]

ಎಂದು ತಿಳಿಸಿದ್ದಾರೆ. ಈ ಸಾಲುಗಳಲ್ಲಿ ಮಾರ್ಕ್ಸಿಸ್ಟ್ ಸಿದ್ಧಾಂತದ ಸಾರವು ಒಂದೇ ಮಾತಿನಲ್ಲಿ ಹೇಳಲ್ಪಟ್ಟಿದೆ. ಮಾನವ ಜಾತಿ ಚರಿತ್ರೆಯೆಲ್ಲವೂ ಸಂಘರ್ಷದ ಫಲಿತವೆಂದು ಸ್ಪಷ್ಟವಾಗುತ್ತದೆ.

ಅನುವಾದ :	[ತೆ.
'ಬಲವಂತರು ದುರ್ಬಲ ಜಾತಿಯನ್ನು	ಬಲವಂತುಲು ದುರ್ಬಲ ಜಾತಿನಿ
ಸೆರೆಯಾಳುಗಳನ್ನಾಗಿ ಮಾಡಿದರು :	ಬಾನಿಸಲನು ಕಾವಿಂಚಾರು :
ನರಹಂತರು ಧರಾಧಿಪತಿಗಳಾಗಿ	ನರಹಂತುಲು ಧರಾಧಿಪತುಲೈ
ಚರಿತ್ರೆಯಲ್ಲಿ ಪ್ರಸಿದ್ಧಿ ಪಡೆದರು !'	ಚರಿತ್ರಮುನ ಪ್ರಸಿದ್ಧಿ ಕೆಕ್ಕಿರಿ.
'ರಣರಂಗವಿಲ್ಲದ ಸ್ಥಳ ಭೂ	ರಣರಂಗಂ ಕಾನಿಚೋಟು ಭೂ
ಪ್ರದೇಶವೆಲ್ಲ ಹುಡುಕಿದರೂ ಕಾಣುವುದಿಲ್ಲ	ಸ್ಥಲಮಂತಾ ವೆದಕಿನ ದೊರಕದು
ಗತವೆಲ್ಲಾ ನೆನೆದಿತು ರಕ್ತದಲ್ಲಿ	ಗತಮಂತಾ ತಡಿಸೆ ರಕ್ತಮುನ
ಇಲ್ಲದಿದ್ದರೆ ಅಶ್ರುಧಾರೆಯಿಂದ' –	ಕಾಕುಂಟೇ ಕನ್ನೀಳುಲತೋ]

—ಇಲ್ಲಿ ರಕ್ತವು ದೌರ್ಜನ್ಯಕ್ಕೆ, ಕಣ್ಣೀರು ಬಡತನಕ್ಕೆ ಸಂಕೇತಗಳು.

ಬಂಡವಾಳ ಶಾಹಿಗಳನ್ನೂ ತೀವ್ರವಾಗಿ ವಿಡಂಬಿಸುತ್ತಾ

ಅನುವಾದ :	[ತೆ.
'ಧನವಂತರ ಅಕ್ರಮಗಳು	ಧನವಂತುಲ ಪನ್ನಗಾಲೂ
ಇನ್ನೂನಾ ! ಇನ್ನ ಮೇಲೆ ನಡೆಯುವುದಿಲ್ಲ'	ಇಂಕಾನಾ ! ಇಕಪೈ ಚೆಲ್ಲವು]

ವೆಂದು ಸ್ಪಷ್ಟಪಡಿಸಿದ್ದಾರೆ.

ಶ್ರೀ ಶ್ರೀ ಯವರ ಪ್ರಸಿದ್ಧವಾದ ಮತ್ತೊಂದು ಕವನ 'ಜಗನ್ನಾಥುನಿ ರಥ ಚಕ್ರಾಲು'. ಶ್ರೀಶ್ರೀ ಯವರು ಜಗನ್ನಾಥನ ರಥವನ್ನು ಸಮಾಜಕ್ಕೆ ಸಂಕೇತವನ್ನಾಗಿ ಸ್ವೀಕರಿಸಿದ್ದಾರೆ. ಇದಕ್ಕೆ ಕಾರಣ — ಪುರಿ ಜಗನ್ನಾಥ ಕ್ಷೇತ್ರದಲ್ಲಿ ರಥೋತ್ಸವದಿನ ಎಲ್ಲ ವರ್ಣದವರು ಕಲೆತು ಊಟಮಾಡುತ್ತಾರೆ. ಬಡವರನ್ನು ಕಂಡು ಅವರೆಲ್ಲರನ್ನು ತಮ್ಮ ಕವಿತ್ವದಿಂದ ಕ್ರಾಂತಿಗೆ ಉನ್ಮುಖರನ್ನಾಗಿ ಮಾಡಿ, ಕ್ರಾಂತಿ ನಡೆಯುತ್ತಿದೆ ಎಂದೂ, ಕ್ರಾಂತಿಯನಂತರ ಸಮಸಮಾಜ ಏರ್ಪಟ್ಟಿದೆ ಎಂದೂ, ಶ್ರಮಿಕರನ್ನು ರಾಜ್ಯಪಾಲನೆಗಾಗಿ ಆಹ್ವಾನಿಸುತ್ತಾರೆ.

ಅನುವಾದ :	[ತೆ.
'ಪತಿತರೇ !	ಪತಿತುಲಾರ !
ಭ್ರಷ್ಟರೇ !	ಭ್ರಷ್ಟುಲಾರ !
ಬಾಧಾಸರ್ಪದ್ರಷ್ಟರೇ !	ಬಾಧಾಸರ್ಪದಷ್ಟುಲಾರ !
....	....
..................'	..................']

ಎಂದು ಬಡವರನ್ನು ಸಂಬೋಧಿಸುತ್ತಾ ಕೊನೆಯಲ್ಲಿ

ಅನುವಾದ :	[ತೆ.
'ಮೋಸಹೋದ ತಮ್ಮಂದಿರೇ	ದಗಾಪಡಿನ ತಮ್ಮುಲಾರ,
ಅಳಬೇಡಿರಿ ಅಳಬೇಡಿರಿ	ಏಡವಕಂಡೇಡವಕಂಡಿ,
ಬಂದೇ ಬಿಟ್ಟವು ಬಂದೇಬಿಟ್ಟವು	ವಚ್ಚೇಶಾಮ್,
ಜಗನ್ನಾಥ	ಜಗನ್ನಾಥ.
ಜಗನ್ನಾಥ	ಜಗನ್ನಾಥ,
ಜಗನ್ನಾಥ ರಥ ಚಕ್ರಗಳು	ಜಗನ್ನಾಥ ರಥ ಚಕ್ರಾಲ್
ಜಗನ್ನಾಥನ ರಥ ಚಕ್ರಗಳು	ಜಗನ್ನಾಥುನಿ ರಥ ಚಕ್ರಾಲ್
ರಥ ಚಕ್ರಗಳು	ರಥ ಚಕ್ರಾಲ್
ರಥ ಚಕ್ರಗಳು	ರಥ ಚಕ್ರಾಲ್
ರಥ ಚಕ್ರಗಳು, ರಥ ಚಕ್ರಗಳು	ರಥ ಚಕ್ರಾಲ್, ರಥ ಚಕ್ರಾಲ್
ಬನ್ನಿರೋ ! ಬನ್ನಿ ! ಬನ್ನಿರಿ	ರಾರಂಡೊ ! ರಂಡೋ ! ರಂಡಿ !
ಈ ಲೋಕವು ನಿಮ್ಮದೆ	ಈ ಲೋಕಂ ಮೀದೇನಂಡಿ
ನಿಮ್ಮ ರಾಜ್ಯವ, ನೀವೇ ಆಳಿರಿ'	ಮೀರಾಜ್ಯಂ ಮೀರೇಂಲಡಿ]

—ಎಂದು ಆಹ್ವಾನಿಸಿದ್ದಾರೆ.

ಶ್ರೀಶ್ರೀ ಯವರ ಸಂಪೂರ್ಣ ಸಾಹಿತ್ಯ ವ್ಯಕ್ತಿತ್ವವು ನಮಗೆ ಮಹಾಪ್ರಸ್ಥಾನದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಕವನ ಸಂಪುಟದಲ್ಲಿ ವೀರರೌದ್ರರಸಭರಿತವಾದ ಕವನಗಳೇ ಹೆಚ್ಚು. ಇವುಗಳೆಲ್ಲವೂ ಮಾರ್ಕ್ಸಿಸ್ಟ್ ದೃಕ್ಪಥಕ್ಕೆ ಒಳಪಟ್ಟಿರುವುವು. ಶಬ್ದಗಳನ್ನು ಆರಿಸಿಕೊಂಡು ಪ್ರಯೋಗ ಮಾಡುವುದರಲ್ಲಿಯೂ, ಅನುಪ್ರಾಸ, ಅಂತ್ಯಪ್ರಾಸಗಳನ್ನು ಹಾಕುವುದರಲ್ಲಿಯೂ ಇವರಿಗೆ ಇವರೇ ಸಾಟಿ ಎನ್ನಿಸಿಕೊಂಡಿದ್ದಾರೆ.

ಶ್ರೀಶ್ರೀ ಯವರು ಸೃಷ್ಟಿಸಿದ ಪದಬಂಧಗಳು, ಉಪಮಾನಗಳು ತಮ್ಮದೇ ಆದ ಒಂದು ವೈಶಿಷ್ಟ್ಯವನ್ನು ತೋರಿಸುತ್ತವೆ. ಉದಾ : ಬೆಟ್ಟವನ್ನು ಆನೆಯ ಕಳೇಬರಕ್ಕೂ, ಬದುಕನ್ನು ಬಡಿಸಿದ ಊಟದ ಎಲೆಗೂ ಹೋಲಿಸಿದ್ದಾರೆ. ಹೀಗೆ ಹೇಳುತ್ತಾ ಹೋದರೆ ಶ್ರೀಶ್ರೀ ಯವರ ಸಾಹಿತ್ಯ ಚೈತನ್ಯಕ್ಕೆ ಎಣೆಯಿರುವುದಿಲ್ಲ.

ಪ್ರಾರಂಭದೆಸೆಯಲ್ಲಿ 'ಭಾವಕವಿ' ಯಾದ ಶ್ರೀಶ್ರೀ 'ಅಭ್ಯುದಯ ಕವಿ'ಯಾಗಿ 'ಕ್ರಾಂತಿ ಕವಿ' ಯಾಗಿ ಎಲ್ಲಕ್ಕಿಂತಲೂ ಹೆಚ್ಚಾಗಿ 'ಮಹಾಕವಿ'ಯಾಗಿ ಆಂಧ್ರ ಜನರ ಹೃದಯಗಳಲ್ಲಿ ಸ್ಥಾನವನ್ನು ಪಡೆದಿದ್ದಾರೆ.

ಆಧಾರ ಗ್ರಂಥಗಳು :

1. ಆಧುನಿಕಾಂಧ್ರ ಕವಿತ್ವಮು - ಸಂಪ್ರದಾಯಮುಲು : ಪ್ರಯೋಗಮುಲು —ಡಾ. ಸಿ. ನಾರಾಯಣರೆಡ್ಡಿ
2. ಶ್ರೀಶ್ರೀ ಕವಿತಾ ಪ್ರಸ್ಥಾನಂ - ಶ್ರೀ ಅದ್ದೇಪಲ್ಲಿ ರಾಮಮೋಹನರಾವು ಇನ್ನೂ ಕೆಲವು ತೆಲುಗು ಮಾಸ ಪತ್ರಿಕೆಗಳು.

ಸಂಧಿ ರಚಕಗಳು

ಎ. ಶಿವಾನಂದ

‘ಆಕೃತಿಮಾಗಳು ಪರಸ್ಪರ ಸೇರುವಾಗ ಅಲ್ಲಿ ಆಗುವ ಧ್ವನಿಮಾಗಳ ಕೂಡುವಿಕೆಯೇ ಸಂಧಿ.’[1] ಆದರೆ ಇಲ್ಲಿ ಧ್ವನಿಮಾಗಳು ಮಾತ್ರ ಕೂಡುತ್ತವೆಯೇ ? ಒಮ್ಮೊಮ್ಮೆ ಧ್ವನಿಮಾವ್ಯಾಪ್ತಿಗೂ ಮೀರಿದ ಕೆಲವೊಂದು ಆಕೃತಿಮಾ, ಉಪ ಆಕೃತಿಮಾ, ಅನುಸರ್ಗ ಮೊದಲಾದವು ಸಹ ಪ್ರತ್ಯಯ ಘಟಕಗಳಾಗಿ ಸೇರಿ ಸಂಧಿ ಕಾರ್ಯ ನಡೆಯುವಂತೆ ತೋರುವುದಿಲ್ಲವೆ ? ಸಂಧಿ ರಚನೆಯಲ್ಲಿ ಧ್ವನಿಮಾಗಳ ಕೂಡುವಿಕೆಯನ್ನು ಮತ್ತು ಅದರ ಪರಿಣಾಮವಾಗಿ ನಡೆಯುವ, ಲೋಪ, ಆಗಮ, ಆದೇಶಾದಿ ಪ್ರಕ್ರಿಯೆ (Processes) ಗಳೆಲ್ಲವನ್ನೂ ಒಂದು ದೃಷ್ಟಿಯಿಂದ ಸಂಧಿ ಕಾರ್ಯವೆನ್ನಬಹುದಲ್ಲ. ಸಂಧಿಕಾರ್ಯಕ್ಕಿಂತ ಸಂಧಿ ಸಂಘಟಿಸುವುದಕ್ಕೆ ಕಾರಣವಾಗುವ ಸಂದರ್ಭಗಳಾವುವು ? ಪ್ರೇರಕಗಳಾವುವು ? ಇದನ್ನು ಹ. ಗ. ವೈಯಾಕರಣಿ ಕೇಶಿರಾಜ ಆಲೋಚಿಸಿರುವಂತಿದೆ.

“ಪ್ರಕೃತಿ–ಪ್ರತ್ಯಯಂ ಒದವಿದ ಪದಯುಗದ ಬೆರಕೆ ಬೇಡಿರ್ಪುದಱಿಂ”[2] ಶ. ಮ. ದ. ದ ‘ಎರಡು ಪಲವುಂ ವರ್ಣಂ’ ಕೂಡುವದು ಸಂಧಿ ಎಂಬ ಸೂತ್ರಕ್ಕೆ ಬರೆದ ವೃತ್ತಿ ಕೂಡ ಭಿನ್ನವಾಗಿಯೇ ಇದ್ದು ‘ಎರಡು ಪದನುಂ, ಪಲವು ಪದನುಂ ತಮ್ಮೊಳ್ ಕೂಡುವುದು ಸಂಧಿ’ (ಸೂ 52) ಎನ್ನುವಲ್ಲಿ ಇಲ್ಲಿನ ಕೂಡುವಿಕೆಯಲ್ಲಿ ವರ್ಣಗಳಿಗಿಂತ ಪದಯುಗದ ಬೆರಕೆಯೇ ಮುಖ್ಯವಾಗಿ ಸಂಧಿಗೆ ಕಾರಣವಾಗಿರುವಂತೆಯೂ ಇದೆ. ಈ ‘ಬೆರಕೆ’ಯನ್ನು ಧ್ವನಿಮಾಗಳ ಕೂಡುವಿಕೆಯ ಮಟ್ಟದಲ್ಲಿ ಮಾತ್ರವಲ್ಲದೆ, ಪ್ರಕೃತಿ–ಪ್ರತ್ಯಯಗಳ ಪದ, ಪದಗಳ ಸಂಲಗ್ನತೆಯ ಮಟ್ಟದಲ್ಲಿಯೂ ಕೇಶಿರಾಜನ ಆಲೋಚನೆ ಮುಂದುವರಿದಂತಿದೆ. ಇದಕ್ಕೆ ಪೂರಕವಾಗಿ ‘ಸಂಧಿ

---

1 ವಿಲ್ಯಂ ಮಾಡ್ತ, ಕ. ಭಾ. ರೂ. ಪು. 42. ‘ಧ್ವನಿಮಾಗಳ ಕೂಡುವಿಕೆಯೇ ಸಂಧಿ’ ಎಂಬ ಆಧುನಿಕರ ವಾಖ್ಯೆ ಹೊಸದೇನೂ ಅಲ್ಲ. ‘ಪರಃ ಸನ್ನಿಕರ್ಷಃ ಸಂಹಿತಃ–ಪಾಣಿನಿ 1-4-19.’ ಎರಡುಂ ಪಲವುಂ ವರ್ಣಂ ಪರಸ್ಪರ ಕೂಡುವಂದಮದು ಸಂಧಿವಲಂ’– ಕೇಶಿರಾಜ. ಇದನ್ನು ಸಿ. ಎಫ್ ಹಾಕೆಟ್ ಕೂಡ ಉಲ್ಲೇಖಿಸುತ್ತಾನೆ. “Sandhi in English, literally means ‘a placing together’ was used by the ancient Hindu grammarians’– A cource in modern linguistics p. 277.

2. ಶ. ಮ. ದ. ಸೂ. 53. (ಮದ್ರಾಸ್ ಪ್ರತಿ).

ವಿಷಯು'ಗಳು 'ಪದ ಮಧ್ಯಂ ಪದದಂತ್ಯ' ಎಂದು 'ಎರಡಕ್ಕುಂ' ಎಂಬ ಮಾತು ಗಮನಾರ್ಹವಾಗಿದೆ. (ಸೂತ್ರ 53) ಇದರೆ ಇಲ್ಲಿ 'ವಿಷಯು' ಪದ ಸಂಧಿ ಕಾರ್ಯವೇ ? ಈ ಚರ್ಚೆಯಿಂದ ಒಟ್ಟಿನಲ್ಲಿ 'ಸಂಧಿ'ಯು ಅಧ್ಯಯನ ಅಥವಾ ಅದರ ವಿಭಜನಾಕ್ರಮ ವರ್ಣ ಸಂಯೋಜನೆಯ ಮೇಲಿಂದ ಸಾಧ್ಯವೇ ಅಥವಾ ಸಾಧುವೇ ? ಇಲ್ಲವೆ ಪ್ರಕೃತಿ–ಪ್ರತ್ಯಯ ಪದ–ಪದಗಳ ಬೆರಕೆಯ ಮೇಲಿಂದಲೋ ಎಂಬುದು ಈಗಿನ ಸಮಸ್ಯೆ. ಇದುವರೆಗಿನ ಪ್ರಾಚೀನ ಮತ್ತು ಆಧುನಿಕರ ಸಂಧಿ ವಿಭಜನಾ ಕ್ರಮಗಳು ಇಂತಿವೆ :

ಪ್ರಾಚೀನ ರೀತಿ :

I (i) ಸ್ವರ ಲೋಪ (ii) ಯಕಾರಾಗಮ (ii) ವಕಾರಾಗಮ (iv) ಆಗಮ ನಿಷೇಧ (v) ವಿಕಲ್ಪ.

II ವ್ಯಂಜನ ಸಂಧಿ[3] (i) ಆದೇಶ (ii) ದ್ವಿತ್ವ

ಆಧುನಿಕ ರೀತಿ : (i) ಅಂತಸ್ಸಂಧಿ (ii) ಬಹಿಸ್ಸಂಧಿ (ಅ) ವಿಭಕ್ತ್ಯಕ (ಬ) ವಿಭಕ್ತ್ಯೇತರ[4]

ಪ್ರಾಚೀನ ರೀತಿಯಲ್ಲಿ ಪ್ರತಿಯೊಂದು ವರ್ಣಘಟಕಗಳ ಸೇರುವಿಕೆಯಿಂದಾಗುವ ಬದಲಾವಣೆ (Alternations) ಗಳನ್ನು ಲೆಕ್ಕವಿಡುವುದು ಕಷ್ಟ. ಅಲ್ಲದೆ ಒಂದೊಂದಕ್ಕೂ ಒಂದೊಂದು ಸೂತ್ರ, ನಿಯಮಗಳನ್ನು ಳವಡಿಸುವುದು ಕ್ಲೇಶಕರ. ಆಧುನಿಕ ರೀತಿಯ ವಿಭಜನೆಯಲ್ಲಿ ಅಂತಸ್ಸಂಧಿ, ಬಹಿಸ್ಸಂಧಿಗಳೆರಡಲ್ಲಿಯೇ ಹಿಂದಿನವರು ಹೇಳಿದ ಸಂಧಿಯ ನಿಯಮಗಳನ್ನು ಅಳವಡಿಸಲು ಸಾಧ್ಯವಾದರೂ ಸಹ ವಿಭಕ್ತ್ಯಕ, ವಿಭಕ್ತ್ಯಕೇತರಗಳಲ್ಲಿ ನಡುವೆ ಸೇರಿಕೊಳ್ಳುವ ಆಗಮ ಪ್ರತ್ಯಯಗಳು ಈ ಪ್ರತ್ಯಯಗಳಿಗಾಗಿಯೇ ಒಂದೊಂದು ನಿಯಮವನ್ನು ಹೇಳುವ ಪ್ರಯಾಸ ಅಲ್ಲದೆ ಪ್ರಾಚೀನ ರೀತಿಯಂತೆಯೇ ವರ್ಣಗಳ ಪರಸ್ಪರ ಸೇರುವಿಕೆಯನ್ನು ಅನುಲಕ್ಷಿಸುವಂತಹ ಬಗೆಯಿಂದಾಗಿ ಇವೆರಡೂ ಸುಲಭವೆನ್ನಿಸವು. ಕಾರಣ ಈಗ ಇವುಗಳ ಓದಿನಲ್ಲಿ ಒಂದು ಸುವರ್ಣ ಮಾಧ್ಯಮವನ್ನು ಅಳವಡಿಸಿಕೊಳ್ಳಬಹುದೆಂದು ಕಾಣುತ್ತದೆ. ಅದೆಂದರೆ ಸಂಧಿ ರಚಕಗಳ ಅಭ್ಯಾಸ. ಎಂದರೆ ಸಂಧಿರಚನೆಯಲ್ಲಿ ಭಾಗವಹಿಸುವ ಒಟ್ಟು ಘಟಕಗಳನ್ನೇ ಮುಖ್ಯವಾಗಿಟ್ಟುಕೊಂಡು ಸಂಧಿಯನ್ನು ಪುನಾರಚಿಸುವದು. ಈ ಅಧ್ಯಯನದಲ್ಲಿ ಸಮಾವೇಶವಾಗುವ ಸಂಧಿ ರಚಕಗಳು ಇಂತಿವೆ.

---

3. ಕೇಶಿರಾಜನ ಶಬ್ದಮಣಿ–ದರ್ಪಣ 53-4. ವಿಲ್ಯಂ ಮಾಡ್ರ, ಕ. ಭಾ. ರೂ ಪು. 43-48.

4. ವಿಲ್ಯಂ ಮಾಡ್ರ, ಕ.ಭಾ.ರೂ. ಪು. 43–48.

ಸಂಧಿ ರಚಕಗಳು

1. ಆಕೃತಿ–ಧ್ವನಿಮಾ ರಚಕಗಳು (Morpho–phonemic Parts of Sandhi)
2. ಧ್ವನಿಮಾತ್ಮಕ ರಚಕಗಳು (Phonological Parts of Sandhi)
3. ಆಕೃತಿಮಾತ್ಮಕ ರಚಕಗಳು (Morphological parts of Sandhi)
4. ವಾಕ್ಯ ಮಟ್ಟದ ರಚಕಗಳು (Syntactical parts of Sandhi)

I ಆಕೃತಿ–ಧ್ವನಿಮಾದ ಸಂಧಿ ರಚನೆಗಳು.

ಕೇವಲ ಒಂದು ಆಕೃತಿಮಾದ ಪರಿಸರದಲ್ಲಿ ಮಾತ್ರ ನಡೆಯುವ ಧ್ವನಿ ವ್ಯತ್ಯಾಸಗಳನ್ನು (Phonemic Variations) ಇಲ್ಲಿ ಪಟ್ಟಿ ಮಾಡಬಹುದು.[5] ನಿದರ್ಶನಕ್ಕೆ ಕೆಲವು.

(i) ಉ/ಒ — ಕುಡು > ಕೊಡು

(ii) ಇ/ಉ — ಬಿಡು > ಬುಡು

(iii) ಉ→ϕ — ಬರವು > ಬರು. ತೆರವು > ತೆರು.

(iv) ϕ→ಉ — ಗಿಡ > ಗಿಡವು. ಉಚ್ಚಾರಣಾರ್ಥಕ ಅರ್ಧ‘ಉ’ಕಾರ (Enunciative)

ಈ ಮೊದಲಾದ ಧ್ವನಿ ವ್ಯತ್ಯಾಸ, ಉಚ್ಚಾರಣಾರ್ಥಕ ಸ್ವರಾಗಮಗಳಲ್ಲದೆ ನಡೆಸು ~ ನಡಿಸು ~ ನಡಸು ~ ನಡುಸು ಎಂಬಲ್ಲಿನ ಎ/ಇ/ಅ/ಉ ಮೊದಲಾದ ಸ್ವರಧ್ವನಿಮಾಗಳ ಸಮರೂಪಧಾರಣೆ ಮುಂತಾದ ಧ್ವನಿ ಪ್ರಭೇದಗಳೆಲ್ಲವೂ ಒಂದು

---

5. ಇಲ್ಲಿ ಆಕೃತಿ-ಧ್ವನಿಮಾಕ್ಕಿಂತ ‘ಸಂಧಿ’ಯ ಅರ್ಥ ವ್ಯಾಪಕವೆಂಬುದನ್ನರಿಯಬೇಕು. ‘Eventhough Sandhi and Morpho–phonemics are considered in some sense, to mean the same thing it must be noted that ‘Sandhi’ includes something more than Morpho–phonemics’–P. Kothandraman “Studies in Tamil Linguistics” p. 56.

ನಿರ್ದಿಷ್ಟ ಆಕೃತಿಮಾದ ಸೀಮಿತ ಪರಿಸರದಲ್ಲಿ ನಡೆಯುವುದರಿಂದ ಇವನ್ನು ಆಕೃತಿ–ಧ್ವನಿಮಾದ ರಚಕಗಳೆಂದು ವಿಶ್ಲೇಷಿಸಬಹುದು.[6]

II ಧ್ವನಿಮಾತ್ಮಕ ರಚಕಗಳು.

ಇಲ್ಲಿ ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ಆಕೃತಿಮಾಗಳು ಪರಸ್ಪರ ಸಂಧಿಸುವಾಗ ವರ್ಣವ್ಯತ್ಯಾಸಗಳು ನಡೆದಿರುತ್ತವೆ. ಲೋಪ, ಆಗಮ, ಆದೇಶ, ಪ್ರಕೃತೀಭಾವ ಮೊದಲಾದ ಸಂಧಿಕಾರ್ಯಗಳೆಲ್ಲವೂ ಈ ಪರಿಸರದಲ್ಲಿ ನಡೆಯುವ ಧ್ವನಿವ್ಯತ್ಯಾಸ ತತ್ವಗಳಿಗೆ ನಿಬದ್ಧವಾಗಿರುತ್ತವೆ. ಕೆಲವೊಂದನ್ನಿಲ್ಲಿ ಉದಹರಿಸಿದೆ.

1. ಬಿತ್ + ಉಣ್ಕೆ = ಬಿತ್ತುಣ್ಕೆ
2. ಕಡ್ + ಕೋಲ = ಕಡಗೋಲ
3. ಕರ + ಇನ = ಕರುವಿನ
4. ಬೇಸಿಗಿ + ಆಗ = ಬೇಸಿಗ್ಯಾಗ ~ ಬ್ಯಾಸ್ಯಾಗ
5. ಅನ್ + ಅದು = ಅಂಬುದು
6. ಸಿವ್ + ಪಡಿಸು = ಸಿಂಬಡ್ಸು

ಕೊನೆಯವೆರಡರಲ್ಲಿನ ಬಿಂದುವಿನ ಉಪಧ್ವನಿಯೂ, ಪರಿಸರಗಳೂ ಇಲ್ಲಿ ಪರಿಗಣಿತವಾಗುತ್ತವೆ. ಅವನ್ನಿಲ್ಲಿ ಹೇಳಿದೆ.

ಬಿಂದು
ಅನ್ನು/ [{ನ್}] – ದಂತ್ಯ ಅನುನಾಸಿಕ
+ ಅದು = ಅನ್ನೋದು
ಸಿವ್/ [{ವ್}] – ಉಭಯೋಷ್ಠ್ಯ ಸ್ಪರ್ಶ ಅನುನಾಸಿಕ
+ ಪಡಿಸು = ಸಿಂಬಡಿಸು

ಮೇಲಿನ ಉದಾಹರಣೆಗಳಲ್ಲಿ ಸಂಧಿಯಾಗುವ ಬಗೆಗಳನ್ನು ಹಿಂದಿನ ವ್ಯಾಕರಣದ ನಿಯಮದಲ್ಲಿ ತಿಳಿಯಬಹುದಾದ್ದರಿಂದ ಅವನ್ನಿಲ್ಲಿ ವಿವರಿಸಹೋಗಿಲ್ಲ. ಆದರೆ ಇಲ್ಲಿ ಎರಡು ಆಕೃತಿಮಾಗಳು (ಪ್ರಕೃತಿ + ಪ್ರತ್ಯಯ/ಪದ) ಪರಸ್ಪರ ಸಂಧಿಸುವಲ್ಲಿ ಧ್ವನಿವ್ಯತ್ಯಾಸಗಳೇರ್ಪಡುತ್ತವೆ.

---

6. ಡಾ॥ ಹಾ. ಮಾ. ನಾಯಕ್ ಅವರು ಸಂಧಿ ನಿಯಮಗಳಿಗೆ ಅನುಸರಿಸಿದ ಸೂತ್ರಗಳು ಆಕೃತಿ-ಧ್ವನಿಮಾ ಶಾಸ್ತ್ರದ ಹಿನ್ನೆಲೆಯಲ್ಲಿವೆ. Kannada Literary and Colloquial P. 69 ಈ ಹಿನ್ನೆಲೆಯ ಗ್ರಂಥಗಳು A Phonological grammar of Spanish by Suporta & Helas ; Contrears, Phonology in Generative Grammar and Word by Hall C. M etc.

ಕನ್ನಡದಲ್ಲಿ ಸಂಧಿ ನಡೆಯುವ ಸೀಮಾಪ್ರದೇಶ (Boundary line) ಸಾಮಾನ್ಯವಾಗಿ ಪೂರ್ವ ಆಕೃತಿಯಾದ ಅಂತ್ಯ ಮತ್ತು ಪರ ಆಕೃತಿಯಾಗಳ ಪೂರ್ವ ಇಲ್ಲಿ ಪಾಲ್ಗೊಳ್ಳುವ ಆಕ್ಷರಗಳನ್ನು ಸ್ವರ ಮತ್ತು ವ್ಯಂಜನಗಳ ಮೇಲಿಂದ ಬಿಟ್ಟು ನಾಲ್ಕು ವಿಭಾಗ ಮಾಡಬಹುದು.

1. ಸ್ವ + ಸ್ವ   3. ವ್ಯ + ವ್ಯಂ
2. ಸ್ವ + ವ್ಯ   4. ವ್ಯ + ಸ್ವ

ಮೇಲಿನ ಸ್ವರ—ವ್ಯಂಜನಗಳನ್ನು ಮಾತ್ರವಲ್ಲದೆ ಇಲ್ಲಿನ ವರ್ಣಸಂಯೋಜನೆಯಲ್ಲಿ ಆಯಾ ಆಕ್ಷರಗಳ ಸ್ವರೂಪ (Syllabieity) ವೂ ಕೂಡ ಅಷ್ಟೇ ಮಹತ್ವದ್ದಾಗುತ್ತದೆ.

1. ಹೊಲ + ಎಲ್ಲ = ಹೊಲವೆಲ್ಲ.
2. ಕಲ್ + ಎಲ್ಲ = ಕಲ್ಲೆಲ್ಲ[7]

ಮೇಲಿನ ನಾಮ ಪ್ರಕೃತಿಗಳಲ್ಲಿ ಒಂದು CVCV ಮಾದರಿಯದು. ಇನ್ನೊಂದು ಆಕೃತಿಮೀಯ CVC ಮಾದರಿಯದು. ಮುಂದೆ 'ಎಲ್ಲ' ಎಂಬ ಪ್ರತ್ಯಯ ಎರಡರಲ್ಲೂ ಸಾಮಾನ್ಯವಾಗಿದ್ದರೂ ಕೂಡ ಮೊದಲನೆಯದಕ್ಕೆ ದ್ವಿತ್ವವಿಲ್ಲ. ಎರಡನೆಯದಕ್ಕೆ ದ್ವಿತ್ವವಿದೆ. ಕೇಶಿರಾಜನು ಇನ್ನೂ ಹಲವಾರು ಉದಾಹರಣೆಗಳನ್ನಿಲ್ಲಿ ವಿವೇಚಿಸಬಹುದು.

(i) ಪೂರ್ವ ಪದಾಂತ್ಯ ಲಘು + ಪರ ಪದಾದಿ ದ್ವಿತ್ವ ; ಉದಾ : ಬರಿಸಿ ಪ್ರಧಾನರಂ

(ii) ಶಿಥಿಲ ದ್ವಿತ್ವ—ಕಾದಲರ್ + ಗಳ್ = ಕಾದಲರ್ಗಳ್

(iii) ಪದಾದಿ ಹ್ರಸ್ವ + ನ್/ಣ್/ಲ್/ಯ್/ಳ್ = ದ್ವಿತ್ವ ; ಕಣ್ಣಂ; ಪೊನ್ನಂ ನಿಲ್ಲುಂ, ಮೆಯ್ಯ

(iv) ಪದಾದಿ ದೀರ್ಘ + ನ್/ಣ್/ಲ್/ಯ್/ಳ್ = ಅದಿತ್ವ ; ಕಾಣಿಸಿ, ಕೋಲ, ಈಯಲು ತೋಳಾಟಂ

(v) ಣ + ನ → ಣ = ಕಣ್ + ನೀರ್ = ಕಣ್ಣೀರ

(vi) ರೇಫೆ + ರೇಫೆ = ಬಂದರ್ರಾಮರ್

---

[7] ತಮಿಳಿನಿಂದಲೂ ಇದಕ್ಕೆ ಕೆಲವು ನಿದರ್ಶನಗಳನ್ನೀಯಬಹುದು. 1. ಕಳ್ + ಅಯ್ = ಕಳ್ಳೈ (ಸುರೆ) 2. ಮಗಳ್ + ಅಯ್ = ಮಗಳೈ

iii. ಆಕೃತಿಮಾ ರಚಕಗಳು

ಇಲ್ಲಿ ಎರಡು ಆಕೃತಿಮಾಗಳು ಪರಸ್ಪರ ಸೇರುವಾಗ ನಡುವೆ ಧ್ವನಿಮಾಗಳಿಗೆ ಮಹತ್ವ ಬಂದಿರದೆ, ಪ್ರತ್ಯಯ ಅದು ವ್ಯಕ್ತ ಅಥವ ಶೂನ್ಯ ಯಾವುದೇ ಮಟ್ಟದಲ್ಲಿರಬಹುದು. ಆ ಇಡೀ ಪದಕ್ಕೆ ಪ್ರಾಧಾನ್ಯವಿರುತ್ತದೆ. ಉದಾ :

(i) ಹೋಗು + ಇತು

(ii) ಮಾಡು + ಆನೆ

(iii) ಬರು + ಇಲ್ಲ

ಭಾಷೆಯ ರಚನೆಯನ್ನೇ ಗಮನಿಸಿದರೆ ಮೇಲಿನವುಗಳನ್ನು/ಹೋಗಿತು/ಮಾಡಾನೆ/ಮತ್ತು/ಬರಿಲ್ಲ/ಎಂದು ಸಂಧಿ ಮಾಡುವಲ್ಲಿ ಯಾವ ದೋಷವಿದೆ? ವ್ಯಾಕರಣ ನಿಯಮಗಳಿಂದ ಇದು ಸಮಂಜಸವೆನ್ನಿಸಬಹುದಾದರೂ ಅರ್ಥದೃಷ್ಟಿಯಿಂದ ಮಾತ್ರ ಅಪಾರ ನಷ್ಟ ಸಂಭವಿಸುತ್ತದೆ. ಇದರ ಸರಿಯಾದ ರೂಪಗಳು ಹೀಗಿವೆ.

(i) ಹೋಗು + ಇದ್ + ಇತು = ಹೋಯಿತು.

(ii) ಮಾಡು + ಉತ್ತ + ಆನೆ = ಮಾಡುತ್ತಾನೆ

(iii) ಬರು + ಅಲ್ + ಇಲ್ಲ = ಬರಲಿಲ್ಲ

ಮೇಲಿನ ಸಂಧಿ ಪ್ರಕ್ರಿಯೆಯಲ್ಲಿ ಧ್ವನಿಮಾಗಳ ಕೂಡುವಿಕೆಗೆ ಮಹತ್ವವಿರದೆ ನಡುವೆ ಬಂದು ಸೇರಿರುವ ಪ್ರತ್ಯಯಗಳ ರಚನೆಗೆ ಬೆಲೆಯಿದೆ. ಇವುಗಳ ಸ್ವರೂಪವನ್ನು ತಿಳಿಯದಿದ್ದರೆ ಸಂಧಿಕಾರ್ಯ ಸಫಲವಾಗುವುದಿಲ್ಲ. ಮೇಲಿನ ಉದಾಹರಣೆಗಳಲ್ಲಿ ಸೇರಿರುವ ಸಂಧಿಯ ರಚಕಗಳನ್ನೀಗ ಹೀಗೆ ವಿವರಿಸಬಹುದು.

(i) {।ಇದ್।} ಭೂತಕಾಲ ಪ್ರತ್ಯಯ

(ii) {।ಉತ್ತ।} ವರ್ತಮಾನಕಾಲ ಪ್ರತ್ಯಯ

(iii) {।ಅಲ್।}—ಕೃದಂತಾವ್ಯಯ

ಹೀಗೆ ರಚಕಗಳು ಬಂದು ಸೇರುವಲ್ಲಿ ನಾವು ಗಮನಿಸಬಹುದಾದ ಪದಗಳೆಷ್ಟೋ ಇವೆ. ಉದಾ :–

(1) ನಾಮ + ನಾಮ
(2) ನಾಮ + ಕ್ರಿಯೆ
(3) ಕ್ರಿಯೆ + ನಾಮ
(4) ವಿಶೇಷಣೆ + ನಾಮ
(5) ನಾಮ + ಅವ್ಯಯ
(6) ಕ್ರಿಯೆ + ಕಾಲಪ್ರತ್ಯಯ
(7) ನಾಮ + ವಿ. ಪ್ರತ್ಯಯ
(8) ಕ್ರಿಯೆ + ಆ. ಪ್ರತ್ಯಯ
(9) ಕ್ರಿಯಾವಿಶೇಷಣ + ಪೂ. ಪ್ರತ್ಯಯ. ಮುಂ.

ಮೇಲೆ ಪ್ರಯುಕ್ತವಾದ ಪದಗಳಲ್ಲಿ ಸಂಧಿ ಕಾರ್ಯದಲ್ಲಿ ಉಪಯುಕ್ತವಾಗುವ ರೂಪಕಗಳೆಂದರೆ ಪ್ರತ್ಯಯಗಳು. ಇವನ್ನಿಲ್ಲಿ ಉಲ್ಲೇಖಿಸಿ ಆಯಾಕ್ರಮದಲ್ಲಿ ಅನ್ವಯವಾಗುವ ಸಂಧಿಯ ರಚಕ ಅಥವಾ ಪ್ರತ್ಯಯಗಳು ಯಾವುವು ಎಂಬುದನ್ನು ಮುಂದೆ ವಿವರಿಸಿದೆ.

(1) ನಾಮವಿಭಕ್ತಿ ಪ್ರತ್ಯಯಗಳು
(2) ಸರ್ವನಾಮದ ವಿಭಕ್ತಿ ಪ್ರತ್ಯಯಗಳು
(3) ಬಹುವಚನ ಪ್ರತ್ಯಯಗಳು
(4) ವಿಶೇಷಣದ ವಿಭಕ್ತಿರೂಪಗಳು
(5) ಲಿಂಗ ವಿಶೇಷಣಗಳು
(6) ಲಿಂಗ ಸೂಚಕಗಳು
(7) ಗುಣವಾಚಿಗಳು
(8) ಕ್ರಿಯಾ ವಿಭಕ್ತಿಗಳು
(9) ಕೃದಂತ/ತದ್ಧಿತ/ಪ್ರೇರಣಾರ್ಥಕಗಳು
(10) ಆಖ್ಯಾತ ಪ್ರತ್ಯಯಗಳು
(11) ಪುರುಷಾರ್ಥಕಗಳು
(12) ಕಾಲವಾಚಿಗಳು
(13) ನಿಷೇದಾರ್ಥಕ/ವಿಧ್ಯರ್ಥಕ/ಸಂಶಯಾರ್ಥಕ
(14) ಭೂತಕಾಲದ ವಿಕೃತ್‌ರೂಪಗಳು
(15) ವಿಕೃತ ವಿಧಿಕ್ರಿಯಾರೂಪಗಳು

(16) ಅವ್ಯಯ ಕ್ರಿಯಾರೂಪಗಳು
(17) ನಿಪಾತಗಳು
(18) ವಿಭಕ್ತ್ಯಪ್ರತ್ಯಯಗಳು
(19) ಸಂಬೋಧಕಾವ್ಯಯಗಳು
(20) ಕ್ರಿಯಾವಿಶೇಷಣಗಳು
(21) ಕೃದಂತನ್ಯಾಸ
(22) ಪಕ್ಷಾರ್ಥಕ
(23) ಅವ್ಯಯ ಕ್ರಿಯಾಪ್ರತ್ಯಯಗಳು
(24) ಕೃದಂತ ಭಾವನಾಮ ಪ್ರತ್ಯಯಗಳು
(25) ಕೃದಂತ ಧಾತು
(26) ಸಮುಚ್ಚಯಕಗಳು
(27) ಕ್ರಮವಾಚಿ
(28) ಆವೃತ್ತಿವಾಚಿ
(29) ತದ್ಧಿತಾಂತ ಭಾವನಾಮಗಳು
(30) ತದ್ಧಿತಾಂತ ಅನ್ವರ್ಥಗಳು
(31) ತದ್ಧಿತ ಧಾತು
(32) ಸಮಾಸಾಂತರ್ಗತ ಪ್ರತ್ಯಯಗಳು
(33) ಕೆಲವು ಆಡುನುಡಿಗಳ ಪ್ರತ್ಯಯ ವಿಚಾರ
(34) ಪ್ರತ್ಯಯಿಕ ಪ್ರವೃದ್ಧಿಗಳು
(35) ಅನುಸರ್ಗಪ್ರತ್ಯಯಗಳು
(36) ವಾಕ್ಯಮಟ್ಟದಲ್ಲಿನ ಸಂಧಿ ವಿಚಾರ.

ಮೇಲೆ ಹೇಳಿದವುಗಳಷ್ಟರಿಂದಲೇ ಒಂದು ಭಾಷೆಯ ಸಂಧಿರಚಕಗಳು ಮುಗಿದುವೆಂದೇನೂ ಅಲ್ಲ. ಅಲ್ಲದೆ ಈ ರಚಕಗಳ ರೀತಿ ಒಂದು ಭಾಷೆಯಿಂದ ಇನ್ನೊಂದು ಭಾಷೆಯ ವ್ಯವಸ್ಥೆಯಲ್ಲಿ ಬದಲಾಗಬಹುದು. ಇಲ್ಲಿ ಕನ್ನಡದಲ್ಲಿ ವ್ಯವಹೃತವಾಗುವ ಹೆಚ್ಚುಹೆಚ್ಚಿನ ಸಂಧಿರಚಕಗಳನ್ನು ಒಂದೆಡೆಗೆ ಶೇಖರಿಸಲು ಪ್ರಯತ್ನಿಸಿದೆ. ಈ ವಿಧಾನದಿಂದ ಸಂಧಿ ಪ್ರಕರಣಕ್ಕೆ ಮಾತ್ರ ಇದರ ಅಭ್ಯಾಸ ಮುಗಿಯಿತು ಎಂಬ ಸೀಮಿತದೃಷ್ಟಿ ಇಲ್ಲದಾಗಿ ನಾಮ, ಸಮಾಸ, ಆಖ್ಯಾತ, ತದ್ಧಿತ, ಕೃದಂತ, ಅವ್ಯಯ ಮೊದಲಾದ ಭಾಷೆಯ ಸಮಗ್ರ ಘಟಕಗಳಲ್ಲೂ ಸಂಧಿ ವಿಷಯ ಹೇಗೆ ಅನ್ವಯವಾಗುತ್ತದೆಯೆಂಬುದನ್ನು ತಿಳಿಯಲು ಸಾಧ್ಯ.

ಸಂಧಿ ರಚಕಗಳು :

ವಿಭಕ್ತಿ ಪ್ರತ್ಯಯಗಳು	ಇನಾಗಮ*
ನಾಮವಿಭಕ್ತಿ ಪ್ರತ್ಯಯಗಳು	ಪ್ರಕೃತಿ [ಇನ] ವಿ. ಪ್ರ.
ಪ್ರ. ವಿ — ಉ	ಉ
ದ್ವಿ. ವಿ — ಅನ್ನು/ಅ	ಊ
ತೃ. ವಿ — ಇಂದ	ಋ
ಚ. ವಿ — ಕೆ/ಅಕ್ಕೆ/ಕೆ/ಗೆ/ಇಗೆ	ೠ
ಪಂ. ವಿ — ಇಂದ	ಔ
ಷ. ವಿ — ಅ	ಐ
ಸ. ವಿ — ಒಳಗೆ/ಅಲ್ಲಿ	

ಸರ್ವನಾಮದ ವಿಭಕ್ತಿ ಪ್ರತ್ಯಯಗಳು

ನಾನು —	ನನಗೆ	ನನ್
ನೀನು —	ನಿನಗೆ	ನಿನ್
ತಾನು —	ತನಗೆ	ತನ್
	ಚತುರ್ಥಿಯಲ್ಲಿ	ಉಳಿದೆಡೆಗಳಲ್ಲಿ

ಪುರುಷವಾಚಕ ಸರ್ವನಾಮಗಳ ರಚನೆ

ಈ | ಇ + {ಅವ್} > ವ ಆಗಮ = ಅವನು† / ಇವನು

ವಿಶೇಷಣದ ವಿಭಕ್ತಿರೂಪಗಳು

ಸಂಖ್ಯಾವಾಚಿ ವಿಶೇಷಣಗಳು

ಒಂದು – ಒರ್ – ಒಬ್ಬ

ಎರಡು – ಇರ್ – ಇಬ್ಬ

ಮೂರು – ಮೂ – ಮೂವ

ನಾಲ್ಕು – ನಾಲ್ – ನಾಲ್ವ

ಐದು – ಐ – ಐವ.

---

* ಇದನ್ನು ಸಂಧಿ ಪ್ರಕರಣದಲ್ಲಿಯೇ ಕೇಶಿರಾಜ ಸೇರಿಸಬಹುದಿತ್ತು ಎಂದು ಡಾ॥ ಕೆ. ಕುಶಾಲಪ್ಪಗೌಡ ಹೇಳುತ್ತಾರೆ.

† ಕೇಶಿರಾಜನು ಹೇಳುವ 'ಅದು', 'ಇದು' ಎಂಬವು ಪು. ವಾ. ಸರ್ವನಾಮದ ಮೂಲ ರೂಪಗಳೆಂಬುದನ್ನು ಆಧುನಿಕರು ಒಪ್ಪುವದಿಲ್ಲ. ಅ + ಅವ್ = ಅವಂ ಆಗಬಹುದು. ಆದರೆ ಅದು + ಅವ್ ಎಂಬಲ್ಲಿ 'ದ' ಲೋಪದ ಸಾಧ್ಯತೆಯಿಲ್ಲ. ಡಾ॥ ಕೆ. ಕುಶಾಲಪ್ಪ ಗೌಡರ 'ದರ್ಪಣ' ವಿಚಾರಗಳು.

ಪ್ರಮಾಣವಾಚಿ

ಪ್ರಮಾಣ / ಸಂಖ್ಯೆ { ಬ } | > ವ ಆಗಮ

ಲಿಂಗ ವಿಶೇಷಣಗಳು

ಪು – ಅ

ಸ್ತ್ರೀ – ಇ | ಐ | ಇಲ್ |

ಲಿಂಗ ಸೂಚಕಗಳು

ಪು – ನ್

ಸ್ತ್ರೀ – ಳ್

ನ – ದ್

ಬಹುವಚನ ಪ್ರತ್ಯಯಗಳು

ಇವನ್ನು ಆಯಾ ಸಂದರ್ಭಗಳ ಮೇಲಿಂದ ಹೀಗೆ ವರ್ಗೀಕರಿಸಬಹುದು.

ಭಾಗ 1

1. ಗಳು / ಅರು } ಮಹತ್ ವರ್ಗ { ಪು / ಸ್ತ್ರೀ }

2. ಅವು – ಅಮಹತ್ ವರ್ಗ

ಭಾಗ 2

'ಗಳು' ವಿನ	ಇರು	
ವಿಕಲ್ಪ-	ಅರು	
ಗಳು	ದಿರು	

ಭಾಗ 3

ಸಾಂದರ್ಭಿಕ :

ಗಳು – ಅಮಹತ್

ಅರು – ಅಮಹತ್

[ಗಳು] – ಮಹತ್ ವರ್ಗವ ಸೇರಿದವಾಚಿ

ಗುಣವಾಚಿಗಳು

ಒಳ್, ಮೆಲ್, ಬೆಟ್, ತೆಳ್ | ತು | → ಯು
ಬಿಸಿ, ಅಸಿ, ತಡಿ, ನಿಡಿ > | ದು |

ದೊಡ್ಡದು → ವ

ಹೊಸತು → ಬ

ಹಿರಿದು → ಯು

ಕ್ರಿಯಾಪದ ರಚಕಗಳು

ಸಾಧಿತ ಧಾತುಗಳು.

ಕೃದಂತ — ಸು । ಹು । ವು । ಚು । ಪು
ತದ್ಧಿತ — ಇಸು । ಚು
ಪ್ರೇರಣಾರ್ಥಕ — ಇಸು

ಆಖ್ಯಾತ ಪ್ರತ್ಯಯಗಳು

ಪುರುಷಾರ್ಥಕ ಪ್ರತ್ಯಯಗಳು

	ಏ ವ	ಬ. ವ
ಪ್ರ. ಪು ÷	ಏನೆ.	ಏವೆ
ಮ. ಪು ÷	ಈ	ಇ
ತೃ. ಪು ÷	ಪು – ಅನು / ಸ್ತ್ರೀ – ಅಳು } ಅರು	
	ನ – ಅದೆ – ಅವೆ	

ಕಾಲವಾಚಕ ಪ್ರತ್ಯಯಗಳು

ಸಂಭಾವಾರ್ಥಕಗಳು.

ವ. ಕಾ – ಉತ್ತ । ಉತ
ಭೂ. ಕಾ – ಇದ
ಭ. ಕಾ – ಉವ
ನಿಷೇಧಾರ್ಥಕ – ಅ
ಸಂಶಯಾರ್ಥ – ಏ
ವಿಧ್ಯರ್ಥಕ – ಅಲಿ

ಭೂತಕಾಲದ ವಿಕಾರೀ ರೂಪಗಳು.

ಇವನ್ನು ಈ ಕೆಳಗಿನಂತೆ ವಿಭಾಗಿಸಬಹುದು.

(1)	'ದ' ವರ್ಗ	(5)	'ತ್ತ' ವರ್ಗ
(2)	'ಇದ' ವರ್ಗ	(6)	'ಟ' ವರ್ಗ
(3)	'ನ್ದ' ವರ್ಗ	(7)	'ಚ' ವರ್ಗ
(4)	'ತ' ವರ್ಗ	(8)	'ಕ್ಕ' ವರ್ಗ

ಉದಾ :

'ದ' ವರ್ಗ :

ಅನ್
ಆಗು
ಏಳು + { ದ + ಅನು } =
ಹೋಗು
ನಡೆ

'ಇದ' ವರ್ಗ :

ಕೇಳು
ಹೇಳು + { ಇದ + ಅನು } =

'ತ' ವರ್ಗ :

ಸೀನ್
ನೋನ್ + { ತ + ಅನು } =
ಬಾ

'ತ್ತ' ವರ್ಗ :

ಹೊರ್
ನಿಲ್
ಕೀಳ್ + { ತ್ತ + ಅನು } =
ಸಾಯ್
ಅಳ್

'ಟ್' ವರ್ಗ :

ಇಡು
ಕೊಡು + { ಟ + ಅನು } =

'ಣ್ಡ' ವರ್ಗ :

ಉಣ್
ಕೊಳ್ { ಣ್ಡ + ಅನು } =

'ಕ್ಕ' ವರ್ಗ :

ನಗು
ಸಿಗು + { ಕ್ಕ + ಅನು } =
ಪೊಗು

ವಿಕೃತ ವಿಧಿಕ್ರಿಯಾ ರೂಪಗಳು.

/ಕೊ/

ಅವ್ಯಯ ಪದಗಳು

ಸಕರ್ಮಕ ಕ್ರಿಯಾಧಾತು ಅಲ್ + ಪಡು
ನಿಪಾತಗಳು : ಆ / ಊ / ಏ / ಓ

ವಿಭಕ್ತ್ಯವ್ಯಯಗಳು :

ಓಸುಗ / ಆಗಿ / ಇಂದ / ಅಂತರ

ಸಂಬೋಧಕಾವ್ಯಯಗಳು :

ಅರೆ / ಎ / ಏ / ಎಲೆ / ಓ / ಆ

ಕೃದಂತ ವಿಶೇಷಣಗಳು :

ಉವ—(ವ. ಕೃ / ಭ. ಕೃ)
ಇದ— (ಭೂ ಕೃ)
ಅದ—(ನಿ ಕೃ)

ನಾಮ ವಿಶೇಷಣ :

ಆದ / ಉಳ್ಳ /

ಕ್ರಿಯಾ ವಿಶೇಷಣ : ಆಗಿ / ಉದಸ್ನ

ಕೃದಂತ ನ್ಯೂನ

/ ಇ /

ಪಕ್ಷಾರ್ಥಕ

/ ಅರೆ /

ಕೃದಂತ ಭಾವನಾಮ ಪ್ರತ್ಯಯಗಳು :

ಇಕೆ / ಗೆ / ಟ / ಇತ / ತ / ವಳಿಕೆ / ಅವು / ಪು / ಎ / ಕೆ / ಗೆ / ತೆ / ಪು

ಕೃದಂತ ಧಾತು :

ಇಸು / ಸು /

ಸಮುಚ್ಚಯ ವಾಚಿಗಳು :

ಊ / ಮತ್ತು

ಕ್ರಮವಾಚಿಗಳು

/ ಅನೆಯ /

ಆವೃತ್ತಿವಾಚಕಗಳು

/ ವ /

ತದ್ಧಿತಾಂತ ಭಾವನಾಮ ಪ್ರತ್ಯಯಗಳು :

ಅಡಿಗ / ಇಗ / ಕಾರ / ಕೋರ / ಗಾರ / ವಂತ / ವಾಳ / ಇಷ್ಟ / ಇ /
ಆರ / ಸ್ಥ

ತದ್ಧಿತ ಧಾತು :

ಇಸು

ತದ್ಧಿತಾಂತದ ಅವ್ಯಯ :

ಒಮ್ಮೆ

ಸಮಾಸಾಂತರ್ಗತ ಪ್ರತ್ಯಯಗಳು.

ದ್ವಂದ್ವ—ಊ
ಕರ್ಮಧಾರಯ—ಆದ
ಬಹುವ್ರೀಹಿ—ಅ, ಇ
ಗಮಕ—ಅ, ಈ

ಕ್ರಿಯಾಸಮಾಸ :

ಅನ್ನು—ದ್ವಿ. ವಿ > ϕ
ಇಂದ—ತೃ. ವಿ > ϕ
ಕ್ಕೆ—ಚ. ವಿ > ϕ
ಇಂದ—ಪಂ. ವಿ > ϕ
ಅಲ್ಲಿ—ಸ. ವಿ > ϕ

ಕೆಲವು ವ್ಯಾವಹಾರಿಕ ಭಾಷೆಯ ಪ್ರತ್ಯಯಗಳು.

ಬಹುವಚನ ಪ್ರತ್ಯಯಗಳು

ಗಳು > ಗೋಳು

ದಿರು > ದೇರು ~ ದ್ಯಾರು

ಅಂದಿರು > ಅ್ಯಂದು

ಕ್ರಿಯಾನ್ಯೂನ ರೂಪಗಳು

ಕೇಸಿ / ಕೇರಿ (ಕಾಲವಾಚಕ)

ಕೊಂತಲ ~ ಕೋತ (ರೀತಿವಾಚಕ)

ಅನುಸರ್ಗಾವ್ಯಯಗಳು (Post Positions)

ಇಂದ > ಲಿಂದ—ದ್ಲಿಂದ

ವಿಭಕ್ತಿ ಪೂರ್ವಾಗಮಗಳು

ಮಾಡಿದುದು + { ಇಂದ } > ಅರ ಆಗಮ.

ಪ್ರಾತ್ಯಯಿಕ ಪ್ರವೃದ್ಧಿಗಳು (Inflexonal increment)

ಕೆಲವು ಉದಾಹರಣೆಗಳು :

ಪ್ರಕೃತಿ	ಪ್ರಕೃತ್ಯಂತ ಸ್ವರ	ವಿಭಕ್ತಿ ಪ್ರಕ್ರಿಯೆ
ಒಕ್ಕಲಿಗ	ಅ → ಅ್ಯ	ಒಕ್ಕಲ್ಯಾಗ, ಒಕ್ಕಲ್ಯಾಗ್ಯನಿಂದ
ಹೊಲ	ಅ → ಅ (ಲ)	ಹೊಲದ, ಹೊಲದಿಂದ, ಹೊಲಕ
ನೀರು	ಉ → ಇನ	ನೀರಿಗಿ, ನೀರಿನಿಂದ, ನೀರಿನ
ಕಟ್ಟಿ	ಇ → ಅ್ಯ / ಯ	ಕಟ್ಯಾನ, ಕಟ್ಟೆಯ
ಮುತ್ಯಾ	ಅ → ಅ್ಯ	ಮುತ್ಯಾ, ಮುತ್ಯಾನಿಂದ, ಮುತ್ಯಾನ

ವಾಕ್ಯಮಟ್ಟದಲ್ಲಿ ಸಂಧಿ ವಿಚಾರ:

ಇಲ್ಲಿ ಪ್ರತ್ಯಯ ರಚಕಗಳು ಮಹತ್ವವೆನ್ನಿಸದೆ ಇಡೀ ವಾಕ್ಯ ಇಲ್ಲವೆ ಒಂದೊಂದು ಪದಪುಂಜಗಳ ಸಂಯೋಜನೆ ಮುಖ್ಯವಾಗಿರುತ್ತದೆ.

ವರ್ಗ (1) ಕ್ರಿಯಾರ್ಥಕಾವ್ಯಯಗಳು :

ಉಂಟು – ಇಲ್ಲ / ಹೌದು – ಅಲ್ಲ / ಬೇಕು – ಬೇಡ / ಸಾಕು + ಆಗು /

ವರ್ಗ (II) ನಾಮ + ನಾಮವರ್ಗ

ಗಿಡ—ಗಂಟಿ
ಹೊಲ—ಮನೆ
ಕಾಳು—ಕಡ್ಡಿ

ಈವರೆಗೆ ಯಾವ ಯಾವ ಪ್ರತ್ಯಯ ರಚಕಗಳು ಸೇರಿ ಸಂಧಿಯಾಗುವಲ್ಲಿ ನೆರವಾಗುತ್ತವೆ ಎಂಬುದನ್ನು ಸಮಾಲೋಚಿಸಲಾಗಿದೆ. ಇಲ್ಲಿ ಎಷ್ಟೋ ಅನ್ಯತ್ರ ರೂಪಗಳೂ ನಮಗೆ ಸಿಕ್ಕಬಹುದು. ಆ ಎಲ್ಲ ಘಟಕಗಳನ್ನು ನಾವು ಭಾಷೆಯಲ್ಲಿ ಸಶಾಸ್ತ್ರೀಯವಾಗಿ ಹೊಂದಿಸುವದು ಸಾಧ್ಯ.

ಒಟ್ಟಿನಲ್ಲಿ ಸಂಧಿ ಅಧ್ಯಯನದಲ್ಲಿ ಕೇವಲ ಧ್ವನಿಮಾಗಳ ಕೂಡುವಿಕೆಯೊಂದೇ ಲಕ್ಷಿಸುವ ವಿಷಯವಲ್ಲ. ಈ ಎಲ್ಲ ಘಟಕಗಳನ್ನು ಅದರ ಚಾರಿತ್ರಿಕ ಸ್ವರೂಪದ ಮೇಲಿಂದ ವಿಶ್ಲೇಷಿಸಿ ಸಂಧಿತತ್ವಗಳನ್ನು ರೂಪಿಸಬಹುದು. ಇದರಿಂದ ಸಂಧಿಯಲ್ಲಿ ಬಾಹ್ಯ ಸಂಧಿ ಆಂತರಿಕ ಸಂಧಿ ಎಂಬ ಸೀಮಿತ ಚೌಕಟ್ಟು ಕಡೆಗಾಗಿ ಈ ಪ್ರಕ್ರಿಯೆ ಧ್ವನಿಮಟ್ಟದಿಂದ ವಾಕ್ಯಮಟ್ಟದವರೆಗೂ ಹೇಗೆ ವ್ಯವಹರಿಸಬಲ್ಲದೆಂಬ ಅಂಶ ಸ್ಪಷ್ಟವಾಗುತ್ತದೆ.

ಗುಟ್ಟು

ಕೆ. ಎಂ. ಮುನಿಕೃಷ್ಣಪ್ಪ

ಸಿಕ್ಕ ಬೆಂಡನು ಹಿಡಿದು ಅಷ್ಟು ದೂರ ಹೋದಾಗ
ತೆರೆಯು ಹೊಡೆತ, ಮುಳುಗಿ ತೇಲಿ ಉಪ್ಪು ನೀರು ಕುಡಿದು
ಬಾಯಿ ಬಿಡುತಿದ್ದರೂ ಮುಳುಗಲಿಚ್ಛಿಸದವನ ಅಮ್ಮ,
ಜೀವನ ಕಡಲಲಿ ಈಜನು ಕಲಿಸದೆ ಗುರುತನು
ಉಳಿಸದೆ ಯಾವೂರ ದಾರಿ ಹಿಡಿದು ನೀನಡೆದೆ.

ಏಳು ಸಮುದ್ರಗಳ ಈಜಾಡಿ ಬರಬೇಕು ; ಆಳ—
ಕ್ಕಿಳಿದು ಮುತ್ತುರತ್ನಗಳ ಹೊತ್ತುತರಬೇಕು ;
ತಿಮಿಂಗಿಲವಾಗಿ ಬೆಳೆದು ಹೋರಾಡಬೇಕು ;
ಆಸೆಗಳ ಕನಸುಗಳ ಮೂಟೆ ಹೊತ್ತಿರುವವನ
ಮೀನುಗಳು ಮೊಸಳೆಗಳು ಏನೇನೊ ಪ್ರಾಣಿಗಳು
ಮುತ್ತಿಡುವ ನೆಪದಲ್ಲಿ ಮೆತ್ತನೆಯ ಮಾಂಸ ಖಂಡ
ಕಿತ್ತು ತಿನ್ನುತಿದ್ದರೂ ಬೆಳೆಯುತ್ತಿರುವ ಇವನಿಗೆ—

ಬಿರುಗಾಳಿ, ಅಪ್ಪಳಿಸುವ ತೆರೆ, ಒಂಟಿತನಗಳು
ಈಜು ಕಲಿಸುತಿವೆ ಒಟ್ಟಾಗಿ ಗುಟ್ಟಾಗಿ ಗೊತ್ತೇನು ?

ಪೆಣ್ಬುಯ್ಯಲ್–ಒಂದು ವಿಶ್ಲೇಷಣೆ*

ನಾ. ಗೀತಾಚಾರ್ಯ

ಅಬ್ಬಲೂರಿನ ಎರಡು ವೀರಗಲ್ಲುಗಳು ಶಿಲ್ಪದ ದೃಷ್ಟಿಯಿಂದ ವಿಶಿಷ್ಟವಾಗಿದ್ದು, ಆ ಶಿಲ್ಪದ ಹಿನ್ನಲೆಯಲ್ಲಿ 'ಪೆಣ್ಬುಯ್ಯಲ್' ಪಾರಿಭಾಷಿಕ ಪದದ ಅರ್ಥವನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.

ಪೆಣ್ಬುಯ್ಯಲ್ ಎಂಬುದು ಶಾಸನ ವ್ಯಾಸಂಗದಲ್ಲಿ ವೀರಗಲ್ಲುಗಳ ಒಂದು ಪ್ರಭೇದವನ್ನು ಸೂಚಿಸಲು ಬಳಸಲಾಗುತ್ತಿರುವ ಪಾರಿಭಾಷಿಕ ಪದ. ತುರುಗೋಳ್ (ಶತ್ರುಗಳು ದನಗಳನ್ನು ಅಪಹರಿಸುತ್ತಿದ್ದಾಗ ರಕ್ಷಣೆಗಾಗಿ ಮಾಡುತ್ತಿದ್ದ ಯುದ್ಧ), ಎಱೆವೆಸ ಅಥವ ಜೋಳದ ಪಾಳಿ (ಸ್ವಾಮಿ ಕಾರ್ಯಕ್ಕಾಗಿ ಮಾಡುತ್ತಿದ್ದ ಯುದ್ಧ), ಊರಳಿವು (ಗ್ರಾಮಗಳ ರಕ್ಷಣೆಗಾಗಿ ಮಾಡುತ್ತಿದ್ದ ಯುದ್ಧ) ನಂಟನೆಡಱ್ (ಸಂಬಂಧಿಗಳ ಮತ್ತು ಸ್ನೇಹಿತರ ರಕ್ಷಣೆಗಾಗಿ ಮಾಡುತ್ತಿದ್ದ ಯುದ್ಧ) ಗಳಂತೆಯೇ ಪೆಣ್ಬುಯ್ಯಲ್ ಒಂದು. ಪೆಣ್ಬುಯ್ಯಲ್ ಎಂದರೆ ಪೆಣ್ + ಪುಯ್ಯಲ್ ಅಥವ ಹೆಣ್ಣಿನ ಹುಯ್ಯಲು, ಹೆಣ್ಣಿನ ಕೂಗು, ಸ್ತ್ರೀಯ ಆಕ್ರಂದನ. ಹೆಣ್ಣಿಗೆ ಮುಖ್ಯವಾದ ಮಾನ ಪ್ರಾಣಗಳಿಗೆ ಅಪಾಯ ಸಂಭವಿಸಿದಾಗ ಆಕೆ ತನ್ನ ರಕ್ಷಣೆಗಾಗಿ ಹುಯ್ಯಲಿಡುತ್ತಾಳೆ. ಇಂತಹ ಸಂಗತಿಗಳನ್ನು ತಿಳಿಸುವ ಶಾಸನಗಳು ಅನೇಕ ವಿದ್ದರೂ ಅವುಗಳಲ್ಲಿ ಈ ಪದದ ಉಲ್ಲೇಖವಿಲ್ಲ. ಬದಲಾಗಿ ಪೆಂಡಿರುಡೆಯುರ್ಚಿ[1], ಪೆಂಡಿರ ಪೆಱಗಿಕ್ಕಿ[2], ಪೆಂಡಿರುಡೆಯುಚ್ಚಿ[3], ಮೊದಲಾದ ಪ್ರಯೋಗಗಳು ವಿಪುಲವಾಗಿ ದೊರೆಯುತ್ತವೆ. ರನ್ನನು ಗದಾ ಯುದ್ಧದಲ್ಲಿ ಪೆಣ್ಬುಯ್ಯಲ್‌ನಲ್ಲಿ ಹೋರಾಡದ ವೀರರನ್ನು ಷಂಡನೆಂದೇ ಕರೆದಿದ್ದಾನೆ.[4] ಜನ್ನನ ಅನಂತನಾಥ ಪುರಾಣದಲ್ಲಿಯೂ ಈ ಪದದ ಪ್ರಯೋಗವಿದ್ದು ಸ್ವಲ್ಪ ವಿವರಣೆಯೂ ದೊರೆಯುತ್ತದೆ.[5]

ನಾಗಚಂದ್ರನು ತನ್ನ ಪಂಪ ರಾಮಾಯಣದಲ್ಲಿ ಪೆಣ್ಬುಯ್ಯಲನ್ನು ಕೇಳಿಯೂ ಹೋಗಿ ಹೋರಾಡದವನು ಅಪಖ್ಯಾತಿಗೀಡಾಗುತ್ತಾನೆಂದಿದ್ದರೆ[6] ಅಗ್ಗಳನು ಚಂದ್ರ

---

* ದಿನಾಂಕ 7–3–1980 ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನಾ ವಿಭಾಗ ಏರ್ಪಡಿಸಿದ್ದ ವಿಚಾರ ಸಂಕಿರಣವಲ್ಲಿ ಶಾಸನತಜ್ಞರ ಸಮ್ಮುಖದಲ್ಲಿ ಮಂಡಿಸಲ್ಪಟ್ಟ ಲೇಖನ. ಈ ಲೇಖನವನ್ನು ಸಿದ್ಧ ಪಡಿಸುವಲ್ಲಿ ಹಲವು ರೀತಿಯಲ್ಲಿ ನೆರವಾದ ಗುರುಗಳಾದ ಸರ್ವ ಶ್ರೀ ಡಾ॥ ಆರ್. ಶೇಷಶಾಸ್ತ್ರಿ, ದೇವರ ಕೊಂಡಾರೆಡ್ಡಿ ಮತ್ತು ಕೆ. ಆರ್. ಗಣೇಶ್ ಅವರಿಗೆ ನನ್ನ ಕೃತಜ್ಞತೆಗಳು.

ಪ್ರಭ ಪುರಾಣದಲ್ಲಿ ಪೆಣ್ಬುಯ್ಯಲನ್ನು ಅಲಕ್ಷಿಸುವುದು ಪುರುಷತ್ವಕ್ಕೆ ತಕ್ಕುದಲ್ಲವೆಂದಿದ್ದಾನೆ.[7] ಮಲ್ಲಿನಾಥ ಪುರಾಣಕಾರನೂ ಪೆಣ್ಬುಯ್ಯಲನ್ನು ಉಪೇಕ್ಷಿಸುವುದು ಕ್ಷತ್ರಿಯನಿಗೆ ಉಚಿತವಲ್ಲವೆಂದಿದ್ದಾನೆ.[8] ಭರತೇಶ ಚರಿತೆ[9], ವರ್ಧಮಾನ ಪುರಾಣಗಳಲ್ಲಿಯೂ[10] ಈ ಪದದ ಪ್ರಯೋಗವಿದೆ. ಕುಮುದೇಂದು ರಾಮಾಯಣದಲ್ಲಿ 'ಪೆಂಬುಯ್ಯಲ್'[11] ಎಂದೂ ಭಾಗವತದಲ್ಲಿ 'ಹೆಣ್ಬುಯ್ಯಲ್' ಎಂದೂ ಉಲ್ಲೇಖಿಸಿದೆ.[12] ಕಿಟ್ಟೆಲ್‌ಕೋಶದಲ್ಲಿಯೂ ಈ ಪದ ಉಲ್ಲೇಖವಾಗಿದ್ದು ಚಂದ್ರಪ್ರಭ ಪುರಾಣ ಮತ್ತು ಪಂಪ ರಾಮಾಯಣಗಳಲ್ಲಿ ಪ್ರಯೋಗವಾಗಿರುವುದನ್ನು ಹೆಸರಿಸಲಾಗಿದೆ.[13] ಕನ್ನಡ ಸೋದರ ಭಾಷೆಗಳಾದ ತಮಿಳು, ಮಲೆಯಾಳಂ, ತೋಡ, ಕೊಡಗ ಮೊದಲಾದ ದ್ರಾವಿಡ ಭಾಷೆಗಳಲ್ಲಿ ಕನ್ನಡದ 'ಪುಯ್ಯಲ್' ಪದದ ಬೇರೆ ಬೇರೆ ರೂಪಗಳು ಕಂಡು ಬರುತ್ತವೆ[14] ತಮಿಳಿನಲ್ಲಿ 'ಪೂಚಲ್' ಎಂದಿದ್ದು ಅದಕ್ಕೆ A battle, Clamour, Wailing ಎಂದು ಅರ್ಥೈಸಲಾಗಿದೆ.[15] ಪೆಣ್ಬುಯ್ಯಲ್ ಪದದ ಪ್ರಯೋಗ ಬೇರಾವ ಭಾಷೆಗಳಲ್ಲೂ ಇರದೆ ಕನ್ನಡದಲ್ಲಿ ಮಾತ್ರ ಬಳಕೆಯಿದ್ದ ಅಚ್ಚ ಕನ್ನಡ ಪದವಾಗಿದೆ.*

ಆಧುನಿಕ ಶಾಸನ ತಜ್ಞರೂ ಈ ಬಗ್ಗೆ ಉತ್ತಮ ವಿವರಣೆಗಳನ್ನು ನೀಡಿದ್ದಾರೆ ಡಾ॥ ಎಂ. ಚಿದಾನಂದ ಮೂರ್ತಿಯವರು 'ಕಳ್ಳರು ತುರುಗಳನ್ನು ಕದಿಯುವಾಗ ಕದಿಯುವುದರ ಜೊತೆಗೆ ಆ ಊರಿನ ಸ್ತ್ರೀಯರನ್ನೂ ಅವಮಾನ ಗೊಳಿಸುತ್ತಿದ್ದರು. ಆಗ ಸ್ತ್ರೀಯರು ತಮ್ಮ ರಕ್ಷಣೆಗಾಗಿ ಪುಯ್ಯಲಿಡುತ್ತಿದ್ದರು. ಎಂದರೆ ಕೂಗಿಕೊಳ್ಳುತ್ತಿದ್ದರು. (ಆದ್ದರಿಂದಲೇ ಅದನ್ನು ಪೆಣ್ಬುಯಲ್ ಎಂದು ಕರೆದಿರುವುದು.) ಸ್ತ್ರೀಯರ ವಸ್ತ್ರಗಳನ್ನು ಅಪಹರಿಸುವುದರ ಮೂಲಕ (ಪೆಣ್ಣುಡೆಯುರ್ಚಿ) ಅವರ ಮಾನಭಂಗ ಮಾಡುತ್ತಿದ್ದರು. ಸುಮಾರು 1000 ದಲ್ಲಿ ಜಕ್ಕ ಎಂಬಾತನು ಸ್ತ್ರೀಯರ ವಸ್ತ್ರಗಳನ್ನು ಅಪಹರಿಸುವ ಹುಯ್ಯಲನ್ನೂ, ತುರುಗಳು ಅಪಹೃತವಾದ ವಿಷಯವನ್ನೂ ಕೇಳಿ ಬಂದು ಹೋರಾಡಿ ಮಡಿದನು (EC XII· Si-43). ಒಮ್ಮೊಮ್ಮೆ ಕೇವಲ ಸ್ತ್ರೀಯರನ್ನು ಅಪಮಾನ ಗೊಳಿಸುವ ಉದ್ದೇಶದಿಂದಲೂ ದಾಳಿಕಾರರು ಬರುತ್ತಿದ್ದರು (EC V ; 360 ; C. 1120AD ; BKI. I. 184, C. 1101 AD). ತ ಬುವ ವ.ಗುಜ್ಚಿ ಪೆಂಡಿರ ಪೆಜಿಗಿಕ್ಕಿ ಕಾದಿಸತ್ತಂ. (MAR 1944, P. 58, 1036 AD). ಈ ಶಾಸನ ತುರುಗಳ ಜೊತೆ ಸ್ತ್ರೀಯರನ್ನೂ ಅಪಮಾನಿಸುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.'' ಎಂದು ವ್ಯಾಖ್ಯಾನಿಸಿ

---

* ಈ ಆಕರಗಳನ್ನೊದಗಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನ ಉಪಸಂಪಾದಕರಾದ ಶ್ರೀ ಹಿ. ಚಿ. ಶಾಂತವೀರಯ್ಯ ಅವರು ಸಹಕರಿಸಿ ಉಪಕರಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ಸ್ಪಷ್ಟ ನಿದರ್ಶನಗಳನ್ನು ಕೊಟ್ಟು ಸಮರ್ಥಿಸಿದ್ದಾರೆ[16]. ಶ್ರೀ ಬಿ. ಆರ್. ಹಿರೇಮಠ್ ಅವರೂ ಇದೇ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ.[17]

ಆದರೆ ಶ್ರೀ ಸಿ. ಟಿ. ಎಸ್. ಕೊಟ್ರಯ್ಯ ಅವರು ಈ ಹೆಸರಿನ ಶಾಸನಗಳಲ್ಲಿ ಬರುವ 'ಪೆಂಡಿಱುಡೆ ಯುರ್ಚಿ' ಪದಗಳನ್ನು ವಿಶ್ಲೇಷಿಸುತ್ತಾ ಬೇರೊಂದು ರೀತಿಯ ವ್ಯಾಖ್ಯಾನವನ್ನು ಕೊಡುತ್ತಾರೆ.[18] ಪೆಂಡಿರ=ಹೆಂಡಂದಿರ, ಉಡಿ=ಮಡಿಲು, ಉರ್ಚಿ=ತೆಗೆದು ಎಂದರೆ ಆ ಮಾತಿಗೆ 'ವೈಧವ್ಯಪ್ರಾಪ್ತಿ' ಎಂಬರ್ಥ ನೀಡಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಮುತ್ತೈದೆಯರಿಗೆ ಮಡಿಲು ತುಂಬುವುದು ಸುಮಂಗಲತ್ವದ ಲಕ್ಷಣ. ಮದುವೆಯಾದಾಗ ಅವಳ ಸೀರೆಯ ಸೆರಗಿಗೆ (ಮಡಿಲಿಗೆ) ಅಕ್ಕಿ ಕೊಬರಿ, ಹಣ್ಣು, ತಂಬಿಟ್ಟು, ರವಿಕೆಯ ಕಣ ಇತ್ಯಾದಿ ಪದಾರ್ಥಗಳನ್ನು ತುಂಬಿ ಅವಳನ್ನು ಮುತ್ತೈದೆ ಎಂದು ಘೋಷಿಸುತ್ತಾರೆ. ಅನಂತರ ಅವಳು ಯಾವುದೇ ಶುಭ ಸಾಮೂಹಿಕ ಸಮಾರಂಭಗಳಲ್ಲಿ ಭಾಗವಹಿಸಿದರೂ ಅವಳಿಗೆ ಮಡಿಲು ತುಂಬುತ್ತಿರುತ್ತದೆ. ಆದರೆ ಇದು ಅವಳ ಗಂಡನಿರುವ ವರೆಗೆ ಮಾತ್ರ. ಅವನು ಸತ್ತೊಡನೆ ಅವಳಿಗೆ ಈ (ಮಡಿಲು ತುಂಬಿಸಿಕೊಳ್ಳುವ) ಅವಕಾಶವಷ್ಟೇ ಅಲ್ಲದೆ ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶವೂ ತಪ್ಪುತ್ತದೆ. ಜೊತೆಗೆ ಅರಿಶಿನ, ಕುಂಕುಮ, ಬಳೆ ಆಭರಣಾದಿಗಳೆಲ್ಲವೂ (ಮುಡಿಯೂ ಸಹ) ತ್ಯಾಜ್ಯವಾಗುತ್ತವೆ. ಈ ಅರ್ಥದ ಹಿನ್ನೆಲೆಯಲ್ಲಿ ಶ್ರೀಯುತರು ಶಾಸನದಲ್ಲಿಯ ಪೆಂಡಿಱುಡೆಯುರ್ಚಿ ಪದವನ್ನು, ಯುದ್ಧದಲ್ಲಿ ವೀರರು ಕೊಲ್ಲಲ್ಪಟ್ಟಾಗ ಹೆಂಡಂದಿರಿಗೆ ಉಡಿಯನ್ನು (ಮಡಿಲು) ತೆಗೆದು ವೈಧವ್ಯ ಪ್ರಾಪ್ತವಾಯಿತೆಂಬ ಅರ್ಥದಲ್ಲಿ ಬರುವ ಪಾರಿಭಾಷಿಕ ಪದವೆಂದಿದ್ದಾರೆ. ಅಂದರೆ ವೀರರು ಶತ್ರುಗಳೊಡನೆ ಯುದ್ಧ ಮಾಡಿ ಮಡಿಯುವುದರಿಂದ ಹೆಂಡಂದಿರು ತಮ್ಮ ಸುಮಂಗಲಿ ತನವನ್ನು ಕಳೆದುಕೊಂಡು ವಿಧವೆಯರಾಗುತ್ತಿದ್ದರು, ಎಂಬುದನ್ನು ಸೂಚಿಸುವ ಪದ. ಅವರ ಮಾತಿನಲ್ಲೇ ಹೇಳುವುದಾದರೆ

"The expression 'udiyucchi' should be taken to mean that the concerned ladies lost their 'Sumangali'-hood and became widows and resultantly unfit for 'udi-tumbu' function any loger. After that, they might have performed 'sati' or not which fact can be verified by studying the sculptural reprsentations on the slabs bearing the inscriptions containing the above terms and phrases. The subsequent or earlier fight might have resulted in the death of the persons and this might have led to the erection of the memorial"[19] ಎಂದಿದ್ದಾರೆ ಈ ಅರ್ಥ ಸರಿಹೊಂದಲಾರದು. ಇದನ್ನು ಪುಷ್ಟೀಕರಿಸುವ ರೀತಿಯಲ್ಲಿ ಶಾಸನಗಳು ಅರ್ಥೈಸಲಾರವು. ಅವರೇ ಕೊಟ್ಟಿರುವ ಉದಾಹರಣೆಗಳೂ ಸಹ ಅವರ ಅಭಿಪ್ರಾಯಗಳನ್ನು ಸಮರ್ಥಿಸಲಾರವೆನ್ನಬಹುದು. ಉದಾಹರಣೆಗೆ "ಕೇಶಿಮಯ್ಯನು ಸಂತಳಿಗ


ನಾಡಬಳಿಯ ಬಾಡದ ಅಳಹೂರನಿಱಿದು ಪೆಂಡಿರುಡಿಯುರ್ಚಿಕೊಂಡು ಪೋಪಲ್ಲಿ" ಇದಕ್ಕೆ ಅವರು ಕೊಟ್ಟಿರುವ ಹೇಳಿಕೆ 'one Kesimayya attacked or raided the village called Alahura and carried away the 'Sumangalihood of many wives ('pendirudi-uchchikondu-hohalli') by killing their husbands in the fight that might have taken place''.[20] ಇದೇರೀತಿ ಹಲವಾರು ಶಾಸನಗಳನ್ನು ಉದಾಹರಿಸುತ್ತ — the term 'udi' is suggestive of sumangalihood only and not merely the garment ('sari') ಎಂದು ಖಚಿತವಾಗಿ ಹೇಳಿದ್ದಾರೆ.[21]

ಅವರ ಎಲ್ಲ ವ್ಯಾಖ್ಯಾನಗಳಲ್ಲೂ ಶತ್ರುಗಳು ಊರನ್ನು ಮುತ್ತಿದಾಗ ಅಂದರೆ ಯುದ್ಧಕ್ಕೆ ಬಂದಾಗ ಆಕ್ರಮಿಸಲ್ಪಟ್ಟ ಪ್ರದೇಶದಲ್ಲಿ ವೀರರು ಮೊದಲೇ ಸಿದ್ಧರಾಗಿದ್ದು ಶತ್ರುಗಳು ಬಂದೊಡನೆ ಯುದ್ಧ ಮಾಡಿ ಮಡಿಯುತ್ತಿದ್ದರು ಎಂದು ಧ್ವನಿಸುತ್ತದೆ. ಹಾಗಾಗಿರಲು ಸಾಧ್ಯವಿಲ್ಲ. ಏಕೆಂದರೆ ಇಂತಹ ಯುದ್ಧಗಳು (ತುರುಗೋಳ, ಪೆಣ್ಬುಯ್ಯಲ್ ಇತ್ಯಾದಿ) ಮುನ್ಸೂಚನೆ ಇಲ್ಲದೆ ಇದ್ದಕ್ಕಿದ್ದಂತೆ ಆಗುವಂತಹವು. ಈ ಅಂಶವನ್ನು ಮಹಾಭಾರತದಲ್ಲಿ ಬರುವ ಗೋಗ್ರಹಣವೇ ನಿರ್ದೇಶಿಸುತ್ತದೆ: ದುರ್ಯೋಧನನು ವಿರಾಟರಾಜನಿಗೆ ಯಾವ ಮುನ್ಸೂಚನೆಯನ್ನೂ ಕೊಡದೆ ಅವನಿಗೆ ಸೇರಿದ ತುರುಗಳನ್ನು ಅಪಹರಿಸುತ್ತಾನೆ. ಈ ಸುದ್ದಿ ಕೇಳಿದ ನಂತರವೇ ವಿರಾಟ ರಾಜ ಯುದ್ಧ ಮಾಡಿ ಗೋವುಗಳನ್ನು ಬಿಡಿಸಿಕೊಳ್ಳುತ್ತಾನೆ. ಅಂದರೆ ತುರುಗೋಳ್ ಪೆಣ್ಬುಯ್ಯಲ್‌ಗಳು ಮುಂದಾಗುವ ಯುದ್ಧಕ್ಕೆ ಸೂಚನೆಗಳು ಮತ್ತು ಕಾರಣಗಳು. ಶಾಸನಗಳಲ್ಲಿಯ ಎಲ್ಲ ವ್ಯಾಖ್ಯಾನಗಳೂ ಈ ಅರ್ಥವನ್ನೇ ಅನುಮೋದಿಸುತ್ತವೆ. (ಮೇಲೆ ಉದಾಹರಿತ ವಾಕ್ಯವೂ ಸಹ).


ಇಲ್ಲಿ ಬರುವ 'ಉಡಿ' ಪದಕ್ಕೆ 'ಮಡಿಲು', 'ವಸ್ತ್ರ' ಎಂಬ ಎರಡು ಅರ್ಥಗಳಿದ್ದು ಅವು ಸಂದರ್ಭೋಚಿತವಾಗಿಬರುತ್ತವೆ. ಪೆಂಡಿಱುಡೆಯುರ್ಚಿ ಪದದಲ್ಲಿ ಮಡಿಲು ಅರ್ಥ ಬರಲು ಸಾಧ್ಯವೇ ಇಲ್ಲ. ಏಕೆಂದರೆ 'ಹೆಂಡಂದಿರ ಸುಮಂಗಲಿತನವನ್ನು ತೆಗೆದುಕೊಂಡು ಹೋದನು' (carried away the sumangali-hood of many wives— pendirudi uchichikondu hohalli) ಎಂದಾಗ ಮೊದಲೇ ಯುದ್ಧ ನಡೆದಿದ್ದು ವೀರರು ಸತ್ತಿರಬೇಕು. ಆದರೆ ಚರಿತ್ರೆಯಲ್ಲಿ ಯಾವ ರಾಜನೂ ಈಗಿನಂತೆ ಗಡಿ ಪ್ರದೇಶಗಳಲ್ಲಿ ಸಜ್ಜಾದ ಸೈನ್ಯವನ್ನು ಸಿದ್ಧಗೊಳಿಸಿಡುತ್ತಿರಲಿಲ್ಲವೆಂಬುದನ್ನು ಓದುತ್ತೇವೆ. ಹಾಗಾದರೆ ಶತ್ರು ಮುತ್ತಿಗೆ ಹಾಕಿದರೆ ಯಾರೊಡನೆ ಹೋರಾಡುತ್ತಾನೆ ? ಯುದ್ಧ ಮಾಡದೆ ವೀರರು ಸಾಯುವುದು ಹೇಗೆ ? ವೀರರು ಸಾಯದೆ ಹೆಂಡಂದಿರ ಸುಮಂಗಲಿತ್ವವನ್ನು ಶತ್ರು ಒಯ್ಯುವುದು ಹೇಗೆ ? ಸಾಧ್ಯವಿಲ್ಲವಾದ್ದರಿಂದ ಇಲ್ಲಿ 'ಉಡಿ' ಎಂಬುದಕ್ಕೆ ವಸ್ತ್ರ ಎಂದು ವ್ಯಾಖ್ಯಾನಿಸುವುದೇ ಸೂಕ್ತವೂ, ಖಚಿತವೂ ಆದ ಅರ್ಥವಾಗುತ್ತದೆ. ಆಗ

ಶತ್ರುಗಳು ಹೆಂಡಂದಿರ ವಸ್ತ್ರಗಳನ್ನಪಹರಿಸಿ ಮಾನಹರಣ ಮಾಡಲುದ್ಯಗಿಸಿದಾಗ ಸ್ತ್ರೀಯರು ತಮ್ಮ ರಕ್ಷಣೆಗಾಗಿ ಹುಯ್ಯಲಿಡುತ್ತಾರೆ. ಈ ಹುಯ್ಯಲನ್ನು ಕೇಳಿದ ವೀರರು ಬಂದು ಶತ್ರುಗಳೊಡನೆ ಯುದ್ಧಮಾಡಿ ಹೆಂಡಂದಿರನ್ನು ರಕ್ಷಿಸುತ್ತಾರೆ, ಮಡಿಯುತ್ತಾರೆ. ಪೆಂಡಿಱುಡೆಯುರ್ಚಿ ಕೊಂಡು ಪೋಹಲ್ಲಿ[22], ಪೆಂಡಿಱುಡೆಯುರ್ಚಿದರೆಂಬ,[23] ಪೆಂಡಿಱುಡೆಯುರ್ಚಲು,[24] ಪೆಂಡಿರುಡಿಯುರ್ಚುವಾಗಳ್,[25] ಇತ್ಯಾದಿ ಎಲ್ಲ ಪ್ರಯೋಗಗಳಲ್ಲೂ ವಸ್ತ್ರಾಪಹರಣದ ಸ್ಪಷ್ಟತೆಯಿದೆ. ಶಾಸನ ಸಂಪುಟಗಳೂ ಇದೇ ಅರ್ಥ ಬರುವಂತೆ ಅನುವಾದಿಸಿವೆ. 'stripped off the clothes of its women.'[26] ಶಾಸನ ತಜ್ಞರೂ ಇವೇ ಅರ್ಥವನ್ನು ಅನುಮೋದಿಸಿದ್ದಾರೆ. ಡಾ॥ ಎಂ. ಚಿದಾನಂದಮೂರ್ತಿಯವರ ವ್ಯಾಖ್ಯಾನವೇ ಸರಿಯಾಗಿದ್ದು ಈ ಅರ್ಥವನ್ನು ಇನ್ನೂ ಸ್ಪಷ್ಟಗೊಳಿಸುವಂಥ, ಖಚಿತಗೊಳಿಸುವಂಥ ನಿದರ್ಶನವನ್ನು ಕೆಳಗಿನ ವೀರ ಗಲ್ಲುಗಳ ಶಿಲ್ಪದಲ್ಲಿ ನೋಡಬಹುದು.

ಅಬ್ಬಲೂರಿನಲ್ಲಿರುವ ಬ್ರಹ್ಮೇಶ್ವರ (ಈಗಿನ ಬಸವೇಶ್ವರ) ದೇವಾಲಯದ ಬಳಿ ಮೂರು ವೀರಗಲ್ಲುಗಳಿವೆ. ಅವುಗಳಲ್ಲಿ ಎರಡು ವೀರಗಲ್ಲುಗಳ ಶಿಲ್ಪ ಗಮನಾರ್ಹ ವಾಗಿದೆ. ಒಂದನೇ ವೀರಗಲ್ಲಿನಲ್ಲಿ ಮೂರು ಭಾಗಗಳಿದ್ದು ಕೆಳಗಿನ ಯುದ್ಧಭಾಗ ಉಳಿದೆರಡು ಭಾಗಗಳಿಗಿಂತ ಸ್ವಲ್ಪದೊಡ್ಡದಾಗಿದೆ. ಈ ಯುದ್ಧಭಾಗದಲ್ಲಿ ಇಬ್ಬರು ವೀರರು (ಶಾಸನ ಪಾಠದ ಪ್ರಕಾರ ಸಹೋದರರು) ಯುದ್ಧ ಮಾಡುತ್ತಿರುವಂತೆ ಶಿಲ್ಪವನ್ನು ಬಿಡಿಸಲಾಗಿದೆ. ಅವರ ಸೊಂಟದಲ್ಲಿ ಕತ್ತಿ ಮತ್ತು ತಲೆಯ ಮೇಲೆ ಛತ್ರಿಯಿದೆ. ಈ ವೀರಗಲ್ಲಿನಲ್ಲಿ ಒಂದು ವಿಶೇಷತೆಯೆಂದರೆ ವೀರರು ತಮ್ಮ ತಲೆ ಗೂದಲನ್ನು ಕಟ್ಟದೆ ಹಿಂದೆ ಬಿಟ್ಟಿದ್ದಾರೆ. ಸಾಮಾನ್ಯವಾಗಿ ಎಲ್ಲ ವೀರಗಲ್ಲುಗಳಲ್ಲೂ ವೀರರು ಮುಡಿ (ಗಂಟು) ಕಟ್ಟಿರುತ್ತಾರೆ. ಒಬ್ಬೊಬ್ಬ ವೀರರ ಹಿಂಬದಿಯಲ್ಲೂ ಕೆಳಗೆ ಮೂವರು ಸ್ತ್ರೀಯರನ್ನು ಮೇಲೆ ನಾಲ್ಕು ಹಸುಗಳನ್ನು (ಕೆಳಗಿನ ವೀರರ ಹಿಂಬದಿಯಲ್ಲಿರುವ ಹಸುಗಳು ಕರುಗಳಂತೆ ಭಾಸವಾಗುತ್ತವೆ. ಕೊಂಬು ಮತ್ತು ಕಿವಿಗಳು ಸ್ಪಷ್ಟತೆಯಿಲ್ಲ) ಪ್ರತ್ಯೇಕವಾಗಿ ಕೆತ್ತಿದ್ದಾರೆ. ಈಸ್ತ್ರೀಯರಲ್ಲಿ ಮೇಲಿ ನವರು ಸಂಪೂರ್ಣ ಬೆತ್ತಲಾಗಿದ್ದಾರೆ ಮತ್ತು ಕೆಳಗಿನವರು ಅರೆ ಬೆತ್ತಲಾಗಿದ್ದಾರೆ (ಸೊಂಟದ ಕೆಳಕ್ಕೆ ಉಡುಪಿದೆ). ಮತ್ತು ವೀರರ ಹಿಂದೆ ನಿಂತಿರುವ ಮೊದಲ ಸ್ತ್ರೀಯರು ಕಂಕುಳಲ್ಲಿ ಮಗುವನ್ನು ಹಿಡಿದಿದ್ದಾರೆ. ಶತ್ರುಗಳಲ್ಲಿ ಕೆಲವರು ಶರಣಾಗತ ರಾಗಿದ್ದಾರೆ, ಇನ್ನು ಕೆಲವರು ಸತ್ತಿದ್ದಾರೆ; ಮತ್ತೆ ಕೆಲವರು ಯುದ್ಧ ಮಾಡುತ್ತಿರು ವಂತಿದೆ. ತಮ್ಮ ಕೋಟೆಯೊಳಕ್ಕೆ ನುಗ್ಗಿದ ಶತ್ರುಗಳನ್ನು ವೀರರು ಹೊರಕ್ಕೆ ಓಡಿಸುತ್ತಿರುವಂತೆ ಕೋಟೆಯ ಬಾಗಿಲನ್ನು ಶಿಲ್ಪದಲ್ಲಿ ಬಿಡಿಸಲಾಗಿದೆ. ಒಟ್ಟಿನಲ್ಲಿ ಶತ್ರುಗಳು ವಿಶೇಷ ಹಾನಿಗೊಳಗಾಗಿ (ಶಿಲ್ಪದಲ್ಲಿ ಬಾಣಗಳು ನಾಟಿರುವುದನ್ನೂ, ಗಾಯಗಳ ಗುರುತನ್ನೂ ಬಿಡಿಸಿದ) ಸೋತಿದ್ದಾರೆಂಬುದನ್ನು ಸೂಚಿಸುವ ಚಿತ್ರಣ ದಲ್ಲಿದೆ.



ಸಾಧನೆ



ಎರಡನೇ ವೀರಗಲ್ಲಿನಲ್ಲಿ ಮೊದಲನೇ ವೀರಗಲ್ಲಿನಲ್ಲಿರುವಂತೆ ಸ್ಪಷ್ಟವಾದ ಯುದ್ಧ ಚಿತ್ರಣವಿಲ್ಲ. ಮೇಲೆ ಕೆಳಗೆ ಇಬ್ಬಿಬ್ಬರು ಶತ್ರುವೀರರು ವೀರನ ಮುಂದೆ ಗುರಾಣಿ ಈಟಿಧಾರಿಗಳಾಗಿ ನಿಂತಿರುವ ಭಂಗಿಯಿದೆ. ವೀರನೂ ಸಹ ಅದೇ ಭಂಗಿಯಲ್ಲಿ ನಿಂತಿರುವಂತಿದೆ. ಇದರ ಹಿಂದೆ ಒಂದನೇ ವೀರಗಲ್ಲಿನಲ್ಲಿರುವಂತೆಯೇ ಮೂವರು ಸ್ತ್ರೀಯರು, ನಾಲ್ಕು ಹಸುಗಳನ್ನು ಕೆತ್ತಲಾಗಿದೆ. ಈ ವೀರಗಲ್ಲಿನ ಸ್ತ್ರೀಯರಲ್ಲಿ ಸ್ವಲ್ಪಭಿನ್ನತೆಯಿದೆ. ತಮ್ಮ ಮಾನವನ್ನು ಕೈಗಳಿಂದ ರಕ್ಷಿಸಿಕೊಳ್ಳುವ ಭಂಗಿಯಲ್ಲಿ ಬಿಡಿಸಲಾಗಿದ್ದು, ಒಂದನೇ ಶಿಲ್ಪಕ್ಕೆ ಸೊಂಟದಿಂದ ಕೆಳಕ್ಕೆ ಉಡುಪಿದ್ದರೆ ಎರಡನೇ ಶಿಲ್ಪ ಪೂರ್ತಿ ನಗ್ನವಾಗಿದೆ. ಮೂರನೇ ಶಿಲ್ಪಭಿನ್ನವಾಗಿದ್ದರೂ ನಗ್ನತ್ವವನ್ನೇ ಧ್ವನಿಸುವಂತಿದೆ. ಮತ್ತು ಒಂದು ಮಗುವಿದೆ. (ಮಗುವಿನ ಶಿಲ್ಪ ಸ್ತ್ರೀಯ ಶಿಲ್ಪದ ಪಕ್ಕದಲ್ಲಿ ಕೈ ಹಿಡಿದುಕೊಂಡು ನಿಂತಿರುವ ಭಂಗಿಯಲ್ಲಿ ಬಿಡಿಸಲಾಗಿದೆ).

ಶಿಲ್ಪದ ದೃಷ್ಟಿಯಿಂದ ಎರಡೂ ವೀರಗಲ್ಲುಗಳಲ್ಲೂ ಸಾಮ್ಯತೆಯಿದೆ. ಒಂದೇ ರೀತಿಯ ನಿಲುವು, ಭಂಗಿ, ಉಡುಪು, ಅಪ್ಸರೆಯರ ಆಭರಣಗಳು, ಎಲ್ಲವೂ ಒಂದನ್ನೊಂದು ಹೋಲುತ್ತವೆ. ಇದರಿಂದ ಇವೆರಡೂ ಏಕಕಾಲದಲ್ಲಿ ಒಂದೇ ವ್ಯಕ್ತಿಯಿಂದ ನಿರ್ಮಿಸಲ್ಪಟ್ಟಿರುವಂತೆ ತೋರುತ್ತದೆ. ಲಿಪಿಯೂ ಒಂದೇ ರೀತಿ ಇರುವುದರಿಂದ (ಎರಡರಲ್ಲೂ ಅಸ್ಪಷ್ಟವಿದೆ) ಆ ಭಾವನೆಯನ್ನು ಸರಿದೂಗಿಸುತ್ತದೆ—ಎರಡೂ ವೀರಗಲ್ಲುಗಳು ಪ್ರಾಯಶಃ ಸಮಕಾಲೀನವಾಗಿದ್ದು ಒಂದೇ ಸಂದರ್ಭದಲ್ಲಿ ಹಾಕಿಸಿದ್ದಾಗಿರಬಹುದು.

ಒಂದನೇ ವೀರಗಲ್ಲನ್ನು ಜೆ. ಎಫ್. ಫ್ಲೀಟ್ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ.[27] ಈ ವೀರಗಲ್ಲಿನ ಸಂಪೂರ್ಣ ವಿವರಣೆಯನ್ನು ಫ್ಲೀಟ್ ಅವರು ನೀಡಿಲ್ಲ. ಮೇಲಿನ ಎರಡು ಹಂತಗಳನ್ನು ಮಾತ್ರ ವಿವರಿಸಿ ಮುಖ್ಯವಾಗಿರುವ ಯುದ್ಧ ಭಾಗವನ್ನು ಕೈಬಿಟ್ಟಿದ್ದಾರೆ. ಈ ಶಾಸನದ ಕಾಲವಾದ ಕ್ರಿ. ಶ. 1219 ರಲ್ಲಿ ದೇವಗಿರಿಯ ಸಿಂಘಣದೇವರಸನು ಬನವಾಸಿ 1200 ವನ್ನು ಆಳುತ್ತಿರುವಾಗ ಅಬ್ಬಲೂರಿನಲ್ಲಿ ಬೀರಗಾವುಂಡನು ಸಾಮಂತನಾಗಿದ್ದನು. ಆಗ ಬೆಳಗುತ್ತಿಯ ಈಶ್ವರದೇವನು ಸಾಮಂತರು ಮತ್ತು ಸಂತಳಿಗೆ ನಾಯಕರೊಡಗೂಡಿ ಅಬ್ಬಲೂರನ್ನು ಮುತ್ತಿ ಅಲ್ಲಿಯ ದನಗಳನ್ನು (ಮತ್ತು ಹೆಂಡಂದಿರನ್ನು) ಸೆರೆ ಹಿಡಿಯುತ್ತಾನೆ. ಆಗ ಅವನನ್ನು ಎದುರಿಸಲು ಬೀರಗಾವುಂಡನ ಅಪ್ಪಣೆಯಂತೆ ಬಡಗಿ ಕೇತೋಜನ ಮಕ್ಕಳಾದ ಮಾಚ ಮತ್ತು ಗೋಮ ಎಂಬ ಇಬ್ಬರು ಸೋದರ ವೀರರು ಹೋರಾಡಿ ಮಡಿದು ಸ್ವರ್ಗಸ್ಥರಾದ ವಿಷಯವನ್ನು ತಿಳಿಸುತ್ತದೆ. ಎರಡನೇ ವೀರಗಲ್ಲಿನ ಪಾಠವು ನನಗೆ ದೊರೆತಿಲ್ಲವಾದರೂ ಅದೂ ಸಹ ಇದರ ಸಮಕಾಲೀನವಾಗುತ್ತದೆಂದು ಹೇಳಬಹುದು.

ಒಂದನೇ ಶಾಸನದಲ್ಲಿ ಪತ್ತನೇ ಸಾಲಿನಲ್ಲಿರುವ "ಹಿಂಡುಸೆರೆ ತುರುವಂ ಕೊಂಬಲ್ಲಿ ಯಾ ತುರುವಂ ಹಿಂದಿಕ್ಕಿ" ಎಂಬ ವಾಕ್ಯಕ್ಕೆ ಫ್ಲೀಟ್ ಅವರು 'ದನಗಳ ಹಿಂಡನ್ನು ಸೆರೆ ಹಿಡಿದರು.' ಎಂದು ಅರ್ಥೈಸಿದ್ದಾರೆ. ಈ ಅರ್ಥ ಪಾಠದ ದೃಷ್ಟಿಯಿಂದ ಸಮ್ಮತವೆನಿಸಿದರೂ ಶಿಲ್ಪದ ದೃಷ್ಟಿಯಿಂದ ಅಸಮ್ಮತ ವೆನಿಸುತ್ತದೆ. ಏಕೆಂದರೆ ಶಿಲ್ಪದಲ್ಲಿ ಸ್ತ್ರೀಯರ ಚಿತ್ರಣ ಸ್ಪಷ್ಟವಿದ್ದು ಅವರು ವಸ್ತ್ರರಹಿತರಾಗಿ ಅಪಮಾನಿತರಾಗಿ ನಿಂತಿರುವಂತಿದೆ. ಆದರೆ ಪಾಠದಲ್ಲಿ ಆ ಬಗ್ಗೆ ಒಂದು ಪದವೂ ಇಲ್ಲದಿರುವುದು ಶೋಚನೀಯ. ಇರುವ ಶಿಲ್ಪದ ಆಧಾರದಿಂದಲೇ ಪಾಠವನ್ನು ಹೀಗೆ ಅರ್ಥೈಸಬಹುದಾಗಿದೆ. 'ಸೆರೆ' ಎಂಬುದನ್ನು ಕೇವಲ ದನಗಳನ್ನಷ್ಟೇ ಅಲ್ಲ ಸ್ತ್ರೀಯರನ್ನು ಬಂಧಿಸಲೂ ಉಪಯೋಗಿಸುತ್ತಿದ್ದರು. ಶಿಲ್ಪದಲ್ಲಿ ಎರಡು ರೀತಿಯ ಬಂಧನ (ಸೆರೆ)ಗಳಿವೆ. ಒಂದು ಸ್ತ್ರೀಯರದು, ಮತ್ತೊಂದು ದನಗಳದ್ದು. ಪಾಠದಲ್ಲಿ ತುರುಗಳ ಬಂಧನದ ಉಲ್ಲೇಖ ಮಾತ್ರ ಇರುವುದರಿಂದ ಸೆರೆ ಎಂಬುದನ್ನು ಸ್ತ್ರೀಯರ ಬಂಧನವೆಂದು ಸ್ವೀಕರಿಸಬಹುದು. ಆಗ 'ಸ್ತ್ರೀಯರ ಮತ್ತು ದನಗಳ ಹಿಂಡನ್ನು ಕೊಂಬಲ್ಲಿ' ಎಂದಾಗುತ್ತದೆ. ಅಥವ 'ಹಿಂಡು' ಎಂಬುದನ್ನು 'ಹೆಂಡಿರ' ಎಂದು ಮಾಡಿಕೊಳ್ಳ ಬಹುದು (ಇಲ್ಲಿ ಹೆಂಡಿರ ಎಂಬ ಮೂಲಪಾಠವೇ ಲಿಪಿಕಾರನ ದೋಷದಿಂದ ಹಿಂಡು ಆಗಿರಬಹುದು. ಏಕೆಂದರೆ 'ಡು' ಎಂಬುದು 'ಡ' ಮತ್ತು 'ರ' ಗಳಾಗಿ ಮಾರ್ಪಡುವ ಸಾಧ್ಯತೆ ಬರವಣಿಗೆಗಳ ವ್ಯತ್ಯಾಸದಿಂದಾಗುತ್ತದೆ. ಇಲ್ಲಿ ಅವೆರಡರ ಸಂಯೋಗದಿಂದು 'ಡು' ಆಗಿರಲೂಬಹುದು.) ಆಗ ಹೆಂಡಿರ ಸೆರೆ (ಹೆಂಡಂದಿರನ್ನು ಸೆರೆ ಹಿಡಿದು) ತುರುವಂ ಕೊಂಬಲ್ಲಿ ಎಂದಾಗುತ್ತದೆ.

ಹೇಗೇ ಅರ್ಥೈಸಿದರೂ ಇಲ್ಲಿ ಪೆಂಡಿರುಡೆಯುರ್ಚಲ್‌ಪಟ್ಟಿದೆ. ಶಿಲ್ಪದಲ್ಲಿ ಹೆಣ್ಣುಗಳು ಪುಯ್ಯಲಿಟ್ಟು ತಮ್ಮ ಬಂಧನವನ್ನು ಮಾನಹಾನಿಯನ್ನು ಅಸಹಾಯಕ ಸ್ಥಿತಿಯಲ್ಲಿ ಸಾರುತ್ತಿವೆ. ಆದ್ದರಿಂದ ಈ ವೀರಗಲ್ಲುಗಳು ತುಱುಗೋಳ್ ಮತ್ತು ಪೆಣ್ಬುಯ್ಯಲ್‌ಗೆ ಸಂಬಂಧಿಸಿದವೆಂದು ಖಚಿತವಾಗಿ ಹೇಳಬಹುದು. ಇಲ್ಲಿ ನಡೆದಿರುವ ಸಂಗತಿಯ ಬಗ್ಗೆ ಆ ಸಂದರ್ಭದಲ್ಲೇ ಸೃಷ್ಟಿಯಾದ ಸ್ಪಷ್ಟವಾದ ಚಿತ್ರಗಳೇ ಇರುವುದರಿಂದ ಅವಕ್ಕೆ ಪ್ರತ್ಯೇಕವಾದ ವ್ಯಾಖ್ಯಾನದ ಅವಶ್ಯಕತೆಯೂ ಇರಲಾರದು. ಪಾಠದಲ್ಲಿರುವ 'ಹಿಂಡು' ಎಂಬುದನ್ನು ಈ ಸ್ತ್ರೀ ಶಿಲ್ಪಗಳೇ 'ಹೆಂಡಿರು' ಎಂದು ಕೂಗಿ ಹೇಳುತ್ತಿವೆ. ಆದ್ದರಿಂದ ಈ ವೀರಗಲ್ಲುಗಳಲ್ಲಿ ಪೆಣ್ಬುಯ್ಯಲ್ ಸ್ಪಷ್ಟವಾಗಿದೆ, ಅದರ ಅರ್ಥ ಇದೇ ಎಂದು ನಿರ್ದಿಷ್ಟವಾಗಿ, ನೇರವಾಗಿ ಹೇಳಬಹುದಾಗಿದೆ.

ಇಂಥ ಶಿಲ್ಪವಿವರಗಳು ಅಪರೂಪ. ಪೆಣ್ಬುಯ್ಯಲ್‌ಗೆ ಸಂಬಂಧಿಸಿದ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ. ಪಾಠದಲ್ಲೇ ಆ ವಿಷಯವನ್ನು ಹೇಳುತ್ತಿದ್ದವೇ ವಿನಾ ಶಿಲ್ಪಗಳಲ್ಲಿ ದೊರೆತಿರುವ ನಿದರ್ಶನಗಳಿಲ್ಲವೆಂದೇ ಹೇಳಬಹುದು. ಈ ವೀರ

ಗಲ್ಲುಗಳಲ್ಲಿ ಸ್ತ್ರೀಯರೊಡನೆ ಮಕ್ಕಳೂ ಇರುವುದು ಪೆಣ್ಬುಯ್ಯಲ್ ಪದದ ಅರ್ಥಕ್ಕೆ ಇನ್ನೂ ಹೆಚ್ಚಿನ ಸ್ಪಷ್ಟತೆಯನ್ನು ಒದಗಿಸುತ್ತದೆ ಮತ್ತು ಉತ್ತಮ ಸಂದರ್ಭ ಚಿತ್ರಣವನ್ನೊಳಗೊಂಡಿದೆ. ಶತ್ರುಗಳು ಇದ್ದಕ್ಕಿದ್ದಂತೆ ದಾಳಿಮಾಡಿದಾಗ ಸ್ತ್ರೀಯರು ಸಹಜವಾಗಿ ತಮ್ಮ ಮಕ್ಕಳೊಡನೆ ದೈನಂದಿನ ಜೀವನದಲ್ಲಿ ನಿರತರಾಗಿರುತ್ತಿದ್ದರು. ಸ್ತ್ರೀಯರ ಮಕ್ಕಳೊಡನಿದ್ದರೂ ಬಿಡದೆ ಶತ್ರುಗಳು ಅವರ ವಸ್ತ್ರಗಳನ್ನು ಅಪಹರಿಸಿದರು, ಅವಮಾನಗೊಳಿಸಿದರು, ಎಂಬ ದಾರುಣ ಸಂಗತಿಯನ್ನು ಪಾಠದಲ್ಲಿ ಬರೆಯಲು ಮನಸ್ಸು ಬಾರದೆ ಶಿಲ್ಪದಲ್ಲಿ ಬಿಡಿಸಿರಲೂಬಹುದು. ಪಾಠದಲ್ಲಿ ಬಂದಿರುವ ಯುದ್ಧ ವರ್ಣನೆಯೂ ಈ ಸಂಗತಿಗೆ ಉತ್ತೇಜನ ಕೊಡುವಂತಿದೆ. ಶಾಸನದ 11-12 ನೇ ಸಾಲಿನಲ್ಲಿ ಬರುವ ಈ ಕಂದವನ್ನು ನೋಡಿ

ಘಟ್ಟಿಸಿ ನೂಕಿಂದವಾಜಿಯ
ಥಟ್ಟಂ ಕಟ್ಟಾಳು ಬಡಗಿ ಮಾಚಂತಾಗಲು ।
ಸಿಟ್ಟಿಸಿ ಗೋಮನುಯಿಸೆ ಪಡ
ಲಿಟ್ಟುದು ತತುಕ್ಷಣದಿ ವೈರಿಬಳವೆನಿತನಿತುಂ ॥

ಇಷ್ಟು ಭಯಂಕರವಾಗಿ ವೀರಾವೇಶದಿಂದ ವೀರ ಸೋದರರು ಹೋರಾಡಲು ಕಾರಣ ತಮ್ಮ ಊರಿನ ಹೆಂಗಸರ ಮಾನಹರಣದ ಗೋಳಿನ ಚೀರಾಟವೇ ವಿನಾ ಆಗಿಂದಾಗ್ಗೆ ಆಗುತ್ತಿದ್ದಂತಹ, ಕೇವಲ ತುರುಗಳ ಅಪಹರಣವಲ್ಲವೆನ್ನಬಹುದಲ್ಲವೇ ?

ಅಬ್ಬಲೂರಿನ ಈ ವೀರಗಲ್ಲುಗಳು ಎಲ್ಲ ದೃಷ್ಟಿಯಿಂದಲೂ ವಿಶಿಷ್ಟವಾಗಿದ್ದು ಶಾಸನ ಪ್ರಪಂಚದಲ್ಲಿ ವಿಶೇಷತೆಯನ್ನು ಪಡೆಯುತ್ತವೆ. ಅವರಲ್ಲೂ ಪೆಣ್ಬುಯಲ್ ಪಾರಿಭಾಷಿಕ ಪದದ ಅರ್ಥವನ್ನು ಸ್ಪಷ್ಟಗೊಳಿಸಿ ನಿಖರವಾದ ವಿವರಣೆಯನ್ನು ನೀಡಬಲ್ಲ ಅತ್ಯುತ್ತಮ ನಿದರ್ಶನಗಳಾಗುತ್ತವೆ.

ಅಡಿಟಿಪ್ಪಣಿಗಳು

೧. EC, Vol-VII, ಶಿಕಾರಿಪುರ ನಂ. 205, ಪು 294

೨. MAR, Vol-VIII. ಶಿಕಾರಿಪುರ

೩. EC, Vol-VII, ಶಿಕಾರಿಪುರ

೪. ತುಱು ಗೋಳೊಳ್ ಪೆಣ್ಬುಯ್ಯಲೊ
ಳೆಱೆ ವಸದೊಳ್ ನಂಟನೆಡಱೊಳೂರಟ್ಟುವಿನೊಳು ।
ತಱಿಸಂದು ಗಂಡುತನಮನೆ
ನೆಱಪದವಂ ಗಂಡನಲ್ಲ ನೆಂತುಂಪಂಡಂ ॥

—ಗದಾಯುದ್ಧ 2-24

೫. ಎನ್ನಿನೆಯಂಗೆಯ್ದಿ ಸಿ ಮೂರನಾಡಜನಮೀ ಪೆಣ್ಬುಯ್ಯಲಂ ಹಾವಸುಷೇಣ ನೃಪ
ಹಾನೃಪ ನೀಂಬಿನೆಂದಬಲೆ ಬಾಯ್ದಿಟ್ಟಬ್ಬಿ ಹುಯ್ಯಲ್ಬಿದಳ್
—ಅನಂತನಾಥಪುರಾಣ 11-45

೬. ಪೆಣ್ಬುಯ್ಯಲಂ ಶ್ರುತಿಕಯ್ಕೊಂಡುದು ಕೇಳ್ದಿದಂ ತೆವಳೆ
ಗಂಡಂದೆನ್ನ ವಿಖ್ಯಾತಿ ದೂಷಿತಮಕ್ಕುಂ—ಪಂಪರಾಮಾಯಣ, 9-144

೭. ಪಾರಿವದ ಕೊರಲುಲಿಯ ದಳವುಳವನಾಲಿಸಿ ಪೆಣ್ಬುಯ್ಯಲ
ಸಾರಯ್ಕ ದೋಸರಿಪುದೆನ್ನ ಗಂಡುಗೂಸುತನಕ್ಕೆ ಪಸುಗೆಯಲ್ತೆಂದು
—ಚಂದ್ರಪ್ರಭ ಪುರಾಣ 8-66

೮. ನಿಜ ಕ್ಷತ್ರಿಯ ಪವಿತ್ರನೆಂದ ಪೆರ್ಮೆಗೆ
ಪೆಣ್ಬುಯ್ಯಲನುಪೇಕ್ಷಿಸುವುದುಚಿತಮಲ್ತೆಂದು ನುಡಿಯುತಿರ್ಪನಂ
—ಮಲ್ಲಿನಾಥ ಪುರಾಥ, 7-94

೯. ಪೆಣ್ಬುಯ್ಯಲೆದ್ದುದು ಪುರದೊಳಗೆ
—ಭರತೇಶ ಚರಿತೆ, 76-88

೧೦. ಕೇಳ್ದು ಪೆಣ್ಬುಯ್ಯಲಂ ವಿಚಾರಿಸದೆ ಪುರುಷಂ
ಪೋಗಲಾಗದೆಂದು ತತ್ಸಮೀಪಯನೆಯ್ದಿ
—ವರ್ಧಮಾನ ಪುರಾಣ 16-58

೧೧. ಪೆಂಬುಯ್ಯಲನಾಗಳೆಕೇಳ್ದಾ ಖಚರಂ ಸಿಡಿಮಿಡಿಯೋಗಿ
—ಕುಮುದೇಂದು ರಾಮಾಯಣ 9-56

೧೨. ಹೆಣ್ಬುಯ್ಯಲನು ತಾಕೇಳಿ ಸಾಕ್ಷಾದ್ವಿಷ್ಣು ಬಂದವತರಿಸಿದನು ಧರೆಗೆ
—ಭಾಗವತ, 10-25-20

೧೩. ಕಿಟ್ಟಲ್‌ಕೋಶ, ಪುಟ 1069

೧೪. D. E. D. 35 68

೧೫. ತಮಿಳು ನಿಘಂಟು ಪುಟ 2824

೧೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ 284

೧೭. "ಧಾಳಿಕಾರರು ಊರಗಳ ಮೇಲೆ ಧಾಳಿಮಾಡಿ ಆಕಳುಗಳನ್ನು ಕದಿಯುವುದರೊಂದಿಗೆ ಸ್ತ್ರೀಯರ ಅರಿವೆಗಳನ್ನೂ ಬಿರ್ಚಿ (ಉಡೆಯುರ್ಚಿ) ಅಪಮಾನಿಸುತ್ತಿದ್ದರು. ಇಂಥ ಪ್ರಸಂಗಗಳಲ್ಲಿ ಸ್ತ್ರೀಯರು ತಮ್ಮ ಮಾನರಕ್ಷಣೆಗಾಗಿ ಪುಯ್ಯಲಿಡುತ್ತಿದ್ದರು (ಕೂಗಿಕೊಳ್ಳುತ್ತಿದ್ದರು). ಇದಕ್ಕೆ ಪೆಣ್ಬುಯ್ಯಲ್ ಎಂದು ಹೆಸರು"
ವೀರಗಲ್ಲುಗಳು ಪು. 22

೧೮. 'A note on term udiyuchchi of the Kannda Incriptions' Studies in Indian Epigraphy, Vol III, page 129

೧೯. ಅದೇ ಪುಟ 136

೨೦. ಅದೇ ಪುಟ 134

೨೧. ಅದೇ ಪುಟ 132

೨೨. E C vol-vii ಶಿಕಾರಿಪುರ, ನಂ. 181, ಪು. 272

೨೩. E C vol-vii, ಶಿಕಾರಿಪುರ, 153, ಪು 170

೨೪. E C vol—x ಮುಳಬಾಗಿಲು ನಂ. 161, ಪು. 137

೨೫. E C vol—viii ಸೊರಬ, ನಂ. 141, ಪು. 61

೨೬. E C vol—iii ಪು. 642

೨೭. EI vol-v, ಪು. 263

ಇಂಗಳಗಿ ಗ್ರಾಮದ ಶಾಸನ

ಡಾ॥ ವಿ. ಎಸ್. ಕುಲಕರ್ಣಿ

ಇಂಗಳಗಿ ಗ್ರಾಮವು ಕಲಬುರ್ಗಿ ಜಿಲ್ಲೆಯ ಚಿತಾಪೂರ ತಾಲ್ಲೂಕದಲ್ಲಿ, ವಾಡಿ ಜಂಕ್ಷನಿನಿಂದ ಸುಮಾರು ಮೂರು ಮೈಲು ಅಂತರದಲ್ಲಿದೆ. ಈ ಗ್ರಾಮವು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಪ್ರಸಿದ್ಧವಾಗಿತ್ತು. ಚಾಲುಕ್ಯಕಾಲದ ಕೋಟೆಕೊತ್ತಳದ ಭಗ್ನಾವಶೇಷಗಳು ಹಲವಾರು ಶೈವ ಹಾಗು ಜೈನ ಮಂದಿರಗಳಿಂದ ಕೂಡಿವೆ. ಈ ಸ್ಥಳವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿತ್ತು. ಈ ಸ್ಥಳದಲ್ಲಿ ಹಲವಾರು ಶಾಸನಗಳಿದ್ದು ಅವುಗಳು ತತ್ಕಾಲಿಕ ಐತಿಹಾಸಿಕ ಹಾಗು ಸಾಂಸ್ಕೃತಿಕ ಸಂಗತಿಯನ್ನೂ ತಿಳಿಸುತ್ತವೆ.

ಪ್ರಸ್ತುತ ಶಾಸನವು ಶಕನೃಪ ವರ್ಷದ 1131ನೆಯ ಅಂಗೀರಸ ಸಂವತ್ಸರದ ಆಶ್ವಯಜ ಶುದ್ಧ ತ್ರಯೋದಶಿ ಸೋಮವಾರದ್ದಾಗಿದೆ. ಅದರ ಪ್ರಕಾರ ಸೆಪ್ಟೆಂಬರ್ 13 ಇ.ಸ. 1209 ಆಗುತ್ತದೆ. ಈ ಸಮಯದಲ್ಲಿ ಚಾಲುಕ್ಯ ರಾಜ್ಯವು ಕಳೆದು ಹೋಗಿ ಅವರ ಸ್ಥಾನವಲ್ಲಿ ದೇವಗಿರಿಯ ಸೇಉಣ (ಯಾದವ) ರಾಜನಾದ ಸಿಂಘಣನು ಆಳುತ್ತಿದ್ದನು. ಈತನನ್ನು ಪ್ರತಾಪ ಚಕ್ರವರ್ತಿ ಸಿಂಘಣದೇವನೆಂದು ಉಲ್ಲೇಖಿಸಲಾಗಿದೆ. ಕನ್ನಡ ಪ್ರದೇಶದ ಅಧಿಕಾರಿಯಾಗಿ ಲಕ್ಷ್ಮೀದೇವ ದಂಡನಾಯಕನು ಆಳುತ್ತಿದ್ದನು. ಶಾಸನವು ಆತನನ್ನು "ಮಹಾಪ್ರಧಾನ ಯಾದವರಾಜ್ಯ ಸಮುದ್ಧರಣಂ" ಎಂದು ಉಲ್ಲೇಖಿಸಿರುವುದರಿಂದ ಆತನು ಕನ್ನಡ ಪ್ರದೇಶದಲ್ಲಿ ಸೇಉಣ ರಾಜರ ಪರವಾಗಿ ಕಾರ್ಯಮಾಡಿ ಚಾಲುಕ್ಯರ ವಿರುದ್ಧವಾಗಿ ನಡೆದುಕೊಂಡು ಯಾದವರ ರಾಜ್ಯವನ್ನು ಸುಸ್ಥಿರವಾಗಿ ಸ್ಥಾಪಿಸಲು ಸಹಾಯ ಮಾಡಿದನೆಂದು ತೋರುತ್ತದೆ. ಇದಲ್ಲದೆ ಆತನನ್ನು ಶ್ರೀ "ಸಿಂಗಣದೇವರ ದಕ್ಷ ದಕ್ಷಿಣ ಭುಜಾದಂಡ" ಎಂಬ ಬಿರುದಾಂಕಿತದಿಂದ ಉಲ್ಲೇಖಿಸಲಾಗಿದೆ. ಇದರಿಂದ ಲಕ್ಷ್ಮೀದೇವರಸ ದೇವಗಿರಿಯ ಸಿಂಘಣದೇವನಿಗೆ ದಕ್ಷಿಣದೇಶದ ದಕ್ಷನಾದ ರಕ್ಷಕನಾಗಿದ್ದನೆಂದು ಹೇಳಬಹುದು. ಈತನು ಗಮನಾರ್ಹವಾದ ಕರ್ನಾಟಕ ಪ್ರದೇಶವನ್ನು ತನ್ನ ಪ್ರಭಾವದಲ್ಲಿಟ್ಟುಕೊಂಡು ಯಾದವರಾಜರ ಪ್ರತಿನಿಧಿಯಾಗಿ ಆಳುತ್ತಿದ್ದನೆಂದು ಗೊತ್ತಾಗುತ್ತದೆ. ಆದರೆ ಈತನ ಆಳುವ ಕೇಂದ್ರ ಯಾವುದೆಂಬುದು ತಿಳಿದಿಲ್ಲ.

ಇಂಗಳಗಿ ಗ್ರಾಮವನ್ನು ಅಂದು ಅರಲು ಮೂನೂರಿನ ಹೈಹಯವಂಶದ ಮಹಾಮಂಡಲೇಶ್ವರರು ಆಳುತ್ತಿದ್ದರು. ಅರಲು ಮೂನೂರು ಇಂದು ಕಲಬುರ್ಗಿ

ಜಿಲ್ಲೆಯ ಸೇಡಂ ತಾಲ್ಲೂಕದ ಓರೇ ಅಲ್ಲೂರು ಗ್ರಾಮವೆಂದು ಗುರುತಿಸಲಾಗಿದೆ. ಇ.ಸ. 1209 ರಲ್ಲಿ ಈ ಮನೆತನದ ಬಿಜ್ಜರಸನೆಂಬವನು ಮಹಾಮಂಡಳೇಶ್ವರನಾಗಿ ಆಳುತ್ತಿದ್ದನು. ಈತನ ತಂದೆಯ ಹೆಸರು ಮಹಾಮಂಡಳೇಶ್ವರ ಆನೆಗದೇವ ನೆಂದಿತ್ತು. ಅರಲೂರಿನ ಹೈಹಯ ವಂಶಾವಳಿಯ ಪ್ರಕಾರ ಮಹಾಮಂಡಳೇಶ್ವರ ನಾಲ್ಕನೆಯ ವೀರಬಿಜ್ಜರಸನಾಗುತ್ತಾನೆ. ಈತನು ನಾಲ್ಕನೆಯ ಆನೆಗದೇವನ ಮಗನು. ಈ ಆನೆಗದೇವನು ಆನೆಮರಸನೆಂದು ಸಹ ಕರೆಯಲ್ಪಟ್ಟಿದ್ದಾನೆ. ಈತನ ಮಗನಾದ ವೀರಬಿಜ್ಜರಸನು ಅನೇಕ ವರ್ಷಗಳವರೆಗೆ ಅರಲುಮುನೂರರಲ್ಲಿ ಆಳಿದಂತೆ ತೋರುತ್ತದೆ. ಇ.ಸಿ. 1221ರ ಶಾಸನವೊಂದರಲ್ಲಿ ಈತನ ಉಲ್ಲೇಖ ಬರುತ್ತದೆ. ಈ ಹೈಹಯ ಮನೆತನದ ಮಹಾಮಂಡಳೇಶ್ವರನು ದೇವಗಿರಿಯ ಸೇಉಣ (ಯಾದವ)ರ ಅಧೀನರಾಗಿದ್ದು ತಮ್ಮ ಪ್ರದೇಶವನ್ನು ಆಳುತ್ತಿದ್ದರು. ಲಕ್ಷ್ಮೀ ದೇವರಸನು ಇವರ ಮೇಲ್ವಿಚಾರಕನಾಗಿದ್ದನೆಂದು ತೋರುತ್ತದೆ.

ಈ ಶಾಸನವು ಹಲವಾರು ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಹೈಹಯ ಮನೆತನವು ಶೈವಮತಾವಲಂಬಿಯಾಗಿದ್ದು ಕಾಳಾಮುಖದ ಅನುಯಾಯಿಗಳಾಗಿದ್ದರ. ಅವರ ಆಳಿಕೆಯ ಕಾಲದಲ್ಲಿ ಅನೇಕ ಮಂದಿರಗಳು ಅರಲು ಮುನೂರು ನಾಡಿನಲ್ಲಿ ನಿರ್ಮಿತವಾಗಿದ್ದವು. ಅವರು ನಿರ್ಮಿಸಿದ ಈ ಮಂದಿರಗಳಲ್ಲಿ ಅನೇಕವು ಇನ್ನೂ ಸುಸ್ಥಿರವಾಗಿದ್ದು ಉಳಿದವುಗಳು ಭಗ್ನಾವಸ್ಥೆಯಲ್ಲಿವೆ. ಇಂಗಳಗಿಯ ಈ ಶಾಸನದಲ್ಲಿ ಕಾಳಾಮುಖ ಮುನಿಗಳ ಉಲ್ಲೇಖ ಬರುತ್ತದೆ. ಅಂದು ಅಲ್ಲಿ ಎಲ್ಲ ಶಿವಾಲಯಗಳು ಕಾಳಾಮುಖ ಆಚಾರ್ಯರ ಮೇಲ್ವಿಚಾರಣೆಯಲ್ಲಿದ್ದವು. ಆದರೆ ಮುಂದೆ ಬಸವಣ್ಣನವರ ಧರ್ಮಕ್ರಾಂತಿಯ ಫಲವಾಗಿ ಸಾವಕಾಶವಾಗಿ ಕರ್ನಾಟಕದಲ್ಲಿ ವೀರಶೈವ ಮತವು ಹರಡಿಕೊಳ್ಳತೊಡಗಿತು. ದೇವಗಿರಿಯ ಸೇಉಣರ ಕಾಲ ದಲ್ಲಿಯೇ ಅಲ್ಲಲ್ಲಿ ಇಂತಹ ವೀರಶೈವ ಪರಂಪರೆಯು ಪ್ರಾರಂಭವಾಗಿತ್ತೆಂಬುದು ಸ್ಪಷ್ಟ ವಾಗುತ್ತದೆ. ಮಹಾವೀರ ಗಣಂಗಳ ಉಲ್ಲೇಖವು ಶಾಸನದಲ್ಲಿ ಬರುತ್ತದೆ. ಬಹುಶಃ ಇಂಗಳಗಿಯ ಕಾಳಾಮುಖ ಮಠಗಳು ಕಾಲಾಂತರದಲ್ಲಿ ಪರಿಸ್ಥಿತಿಗನುಸಾರವಾಗಿ ವೀರಶೈವ ಮಠಕ್ಕೆ ಪರಿವರ್ತನೆ ಹೊಂದಿದವೆಂಬುದು ಸ್ಪಷ್ಟವಾಗುತ್ತದೆ. ಶಿವಶರಣರು ತಮ್ಮ ಧರ್ಮಭೋಧನೆಯ ಚಟುವಟಿಕೆಯನ್ನು ನಿಷ್ಠೆಯಿಂದ ನಡೆಸಿದ್ದರು. ಇಂಗಳಗಿಯ ಹಲವಾರು ಪ್ರಮುಖರು ಇ.ಸ. 1209 ರಷ್ಟರಲ್ಲಿಯೇ ವೀರಶೈವ ಮತದ ಅನುಯಾಯಿಗಳಾಗಿದ್ದರು. ಮಹಾಮಂಡಳೇಶ್ವರ ಬಿಜ್ಜರಸರು ಇಂಗಳಗಿಯ ಪ್ರಭು ನಾಗರಸ, ಹೆಗ್ಗಡೆ ಬಸವಯ್ಯ, ಅಲ್ಲಿಯ ಪಂಚಮಠದವರು ಮುಂತಾದವರು, ಒಟ್ಟಾಗಿ ಸೇರಿ ಅಲ್ಲಿಯ ಮೂಲಸ್ಥಾನದೇವರ ಪಾದಾರಾಧಕರಾದ, ಕ್ಷೇತ್ರಸಂನ್ಯಾಸಿ ಹಾಗು ಮಹಾನುಭಾವರಾದ ಚಲವ್ವೆಗಳ ಕಾಲನ್ನು ತೊಳೆದು ಹಲವಾರು ದತ್ತಿ ಗಳನ್ನು ಹಾಕಿಕೊಟ್ಟರು. ನಾಲ್ಕುಮನೆಯ ನಿವೇಶನವನ್ನು ಕೊಡಲಾಯಿತು.

ಶ್ರೀ ಮೂಲೇಶ್ವರ ದೇವರ ದೇಗುಲದ ಸುತ್ತಲೂ ಹಲವಾರು ಚಿಕ್ಕ ಚಿಕ್ಕ ಗುಡಿಗಳಲ್ಲಿ ಲಿಂಗಗಳನ್ನು ಸ್ಥಾಪಿಸಲಾಗಿದೆ. ಇವೆಲ್ಲ ಲಿಂಗಗಳು ಅದೇ ಕಾಲದಲ್ಲಿ ಸ್ಥಾಪಿತವಾಗಿದ್ದು ಹಲವಾರು ನಾಮದಿಂದ ಕರೆಯಲ್ಪಟ್ಟಿವೆ. ಅಂದು ಸೊನ್ನಲಿಗೆಯ (ಇಂದಿನ ಸೊಲ್ಲಾಪುರ) ಸಿದ್ಧರಾಮನು ಶಿವಶರಣರಲ್ಲಿ ಗಣಿಸಲ್ಪಡುತ್ತಿದ್ದನು. ಆತನ ಹೆಸರಿನಲ್ಲಿ ಅಂದಿನ ಕಾಲದಲ್ಲಿಯೇ ಅನೇಕ ಮಂದಿರಗಳು ಸೊನ್ನಲಿಗೆಯ ಪ್ರದೇಶದಲ್ಲಿ ನಿರ್ಮಿತವಾಗಿದ್ದವು. ಇಂಗಳಗಿಯಲ್ಲಿಯೂ ಶ್ರೀ ಸಿದ್ಧರಾಮನ ಹೆಸರಿನಲ್ಲಿ ಲಿಂಗ ಸ್ಥಾಪನೆಯಾಗಿತ್ತು. ಇದಲ್ಲದೆ ಶ್ರೀ ರೇವಣೇಶ್ವರ ಮಂದಿರವು ರೇವಣಸಿದ್ಧನ ಹೆಸರಿನಿಂದ ಸ್ಥಾಪಿತವಾಗಿತ್ತು. ಇವುಗಳಲ್ಲಿ ಇಂಗಳಗಿಯ ಪ್ರಭು ನಾಗರಸನು ಬಹುಶಃ ತನ್ನ ಹೆಸರಿನಲ್ಲಿ ಸ್ಥಾಪಿಸಿದ ನಾಗೇಶ್ವರ ಮತ್ತು ಕಂನ್ನೇಶ್ವರ ಎಂಬ ಎಲ್ಲ ದೇವರಿಗೆ ಶ್ರೀ ಗುಡ್ಡವ್ವೆಗಳು ಮುಂತಾದವರು ಹಲವಾರು ವೃತ್ತಿಗಳನ್ನು ದಾನವಾಗಿ ಹಾಕಿಕೊಟ್ಟರು.

ಶಾಸನದಲ್ಲಿ ಮಂದಿರದ ಹರಿಕಾರರಿಗೆ ನಾಲ್ಕು ಕಾಲಡಿಯಮಳ್ತರು, ದಕ್ಷಿಣದ ಕೋಟೆಯ ಕೆಳಗೆ ಇದ್ದ ಹೂದೋಟ ಒಂದು ಮತ್ತರು, ನಂದಾದೀಪಕ್ಕೆ ಸರ್ವ ಸಮಸ್ತವಾದ ಗಾಣವನ್ನು ಕೊಟ್ಟರು. ಎಲೆಯಹೇರಿನ ಸುಂಕವನ್ನು ದೇವರಿಗೆ ಸಲ್ಲಿಸುವ ವ್ಯವಸ್ಥೆ ಮಾಡಿದರು. ತೊನಸೆಯಹಳ್ಳಿ, ಮೇಳಕುಂದೆ, ತಳಲಹಳ್ಳಿ ಮುಂತಾದ ಗ್ರಾಮಗಳ ಹೆಸರು ಶಾಸನದಲ್ಲಿ ಬರುತ್ತವೆ. ಇವೆಲ್ಲ ಹಳ್ಳಿಗಳು ಇಂದು ಚಿತಾಪೂರ ತಾಲ್ಲೂಕದಲ್ಲಿದ್ದು ಕ್ರಮವಾಗಿ ತೊನಸಳ್ಳಿ, ಮೇಳಕುಂದೆ, ತಳ್ಳಳ್ಳಿಗಳಾಗಿವೆ. ಮಹಾನುಭಾವೆಯಾದ ಚಲವ್ವೆಯು ಮೂಲೇಶ್ವರ ಮಂದಿರದ ಎಲ್ಲ ವ್ಯವಸ್ಥೆಯನ್ನೂ ನೋಡಿಕೊಳ್ಳುತ್ತಿದ್ದಳು.

ಅಂದಿನ ಕಾಲದಲ್ಲಿ ಪುರುಷರು ಸಾಧಾರಣವಾಗಿ ಮಠಾಧಿಪತಿಗಳಾಗುತ್ತಿದ್ದು ತಮ್ಮ ಮಠದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಸ್ತ್ರೀಯರು ತಮ್ಮ ಮಠದ ವ್ಯವಸ್ಥೆಯನ್ನು ನೋಡಿಕೊಳ್ಳುವ ಉದಾಹರಣೆಗಳು ಬಹಳ ವಿರಳವಾಗಿ ದೊರಕುತ್ತವೆ. ಚಲವ್ವೆಯನ್ನು ಮೂಲದೇವರ ಪಾದಾರಾಧಕಿ ಎಂದೂ, ಕ್ಷೇತ್ರ ಸಂನ್ಯಾಸಿ ಎಂದೂ, ಮಹಾನುಭಾವೆ ಎಂದೂ ಸಂಭೋಧಿಸಲಾಗಿದೆ. ಅವಳು ವೈರಾಗ್ಯ ಜೀವನದನ್ನು ಧಾರಣಮಾಡಿ ಪರಮವಿರಕ್ತಳಾಗಿದ್ದಳೆಂದು ತೋರುತ್ತದೆ. ಮಹಾನುಭಾವೆ ಎಂದರೆ ಅಂದಿನ ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿದ್ದ ಮಹಾನುಭಾವ ಪಂಥಕ್ಕೂ ಇವಳಿಗೆ ಯಾವ ಸಂಬಂಧವನ್ನು ಕಲ್ಪಿಸಲು ಸಾಧ್ಯವಿಲ್ಲ. ಕೇವಲ ಮರ್ಯಾದೆಯ ಸೂಚಕವಾಗಿ ಅವಳನ್ನು ಈ ಶಬ್ದದಿಂದ ಉಲ್ಲೇಖಿಸಲಾಗಿದೆ.

ದೇವಗಿರಿಯ ಸೇಉಣ (ಯಾದವ)ರ ಕಾಲದಲ್ಲಿ ಎಂದರೆ. ಕಲ್ಯಾಣದ ಕಲಚುರಿಗಳ ಕಾಲದ ತರುವಾಯ ವೀರಶೈವ ಪಂಥವು ಸಾವಕಾಶವಾಗಿ ತನ್ನ ಮತದ ಪ್ರಚಾರ ಕಾರ್ಯವನ್ನು ಪ್ರಾರಂಭಮಾಡಿದುದು ಗೋಚರವಾಗುತ್ತದೆ. ಗಣಮಠ

ಗಳು ಸ್ಥಾಪಿತವಾಗಿ ಜಂಗಮರು ತಮ್ಮ ಪ್ರಚಾರ ಕಾರ್ಯವನ್ನು ಹೇಗೆ ಮುಂದು ವರಿಸಿದರು, ಕಾಳಾಮುಖಿ ಯತಿಗಳು, ಆಚಾರ್ಯರು ಮುಂತಾದವರು ತಮ್ಮ ಮೂಲ ಸತ್ವವನ್ನು ಕಳೆದುಕೊಂಡು ಸಾವಕಾಶವಾಗಿ ವೀರಶೈವ ಮತಕ್ಕೆ ಹೇಗೆ ಪರಿವರ್ತನೆ ಹೊಂದುತ್ತಿದ್ದರೆಂಬುದು ಇದರಿಂದ ತಿಳಿದುಕೊಳ್ಳಬಹುದಾಗಿದೆ.

ಶಾಸನಪಾಠ ಇಂತಿದೆ :

ದಿನಾಂಕ ಸಪ್ಟೆಂಬರ್ 13, ಇ. ಸ. 1209.

ರಾಜ : ಸೇಉಣ ಸಿಂಘಣ (ದೇವಗಿರಿಯ)

1. ಶ್ರೀ ಓಂ ನಮಃಶಿವಾಯಃ ॥ ನಮಸ್ತುಂಗ ಶಿರಶ್ಚುಂಬಿ
2. ಚಂದ್ರಚಾಮರ ಚಾರವೇ । ತ್ರೈಳೋಕ್ಯನಗರಾರಂಭಮೂ
3. ಲಸ್ತಂಭಾಯ ಶಂಭವೆ ॥ ಸ್ವಸ್ತಿ ಸಮಸ್ತ ಭುವನಾಶ್ರಯಂ
4. ಶ್ರೀ ಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪ್ರ
5. ತಾಪ ಚಕ್ರವರ್ತಿ ತ್ರಿಭುವನಮಲ್ಲ ಸಿಂಗಣದೇವರ ವಿಜ
6. ಯರಾಜ್ಯ ಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನ ಮಾ
7. ಚಂದ್ರಾರ್ಕ ತಾರಂಬರಂ ಸಲುತಮಿರೆ, ದೇವಗಿರಿಯ
8 ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂ
9. ಗೆಯ್ಯುತ್ತಮಿರೆ ಶ್ರೀಮನ್ಮಹಾಪ್ರಧಾನಂ ಯಾದ
10. ವರಾಜ್ಯ ಸಮುದ್ಧರಣಂ ಸೇಉಣರಾಯ ಶ್ರೀ
11. ಸಿಂಗಣದೇವರ ದಕ್ಷ ದಕ್ಷಿಣ ಭ ಜಾದಂಡ ನಾ
12. ಯಕನಾರಾಯಣಂ ಲಕ್ಷ್ಮೀದೇವರಸ ದಂಡನಾಯ ಕರು
13. ಅನೇಕ ದೇಶಾದೇಶಗಳಂ ಆಳುತ್ತ ಸತ್ಯಧರ್ಮ್ಮಧರ್ಮ್ಮಂ
14. ಗಳಿಂ ಪ್ರತಿಪಾಳಿಸುತ್ತಮಿರೆ ಶ್ರೀ ಸ್ವಸ್ತಿ ಸಮಧಿಗ
15. ತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಮಾಹಿಷ್ಮತಿ
16. ಪುರವರಾದೀಶ್ವರಂ ಅಹಿಹಯ ವಂಶೋದ್ಭವಂ
17. ವಿವೇಕ ವನಜೋದ್ಭವಂ ದಾಯಗಗಿರಿವಜ್ರದಂಡ ನರ
18. ನಂಕ ಸೂಸೆಗಾಱ ದಳದಂಕಕಾಱ ವೈರಿಮಂಡಳಿಕ ಗಣ್ಡಗೋ
19 ಪಾಳ ಶ್ರೀ ಲೋಕನಾಥದೇವರ ದಿವ್ಯಪಾದಾರಾಧಕ
20 ನುಂ ಮಹಾಮಂಡಳೇಶ್ವರಂ ಅನೆಗದೇವಪ್ರಿಯ ಪುತ್ರನುಂ
21. ಗಂಡಭೂರಿಸ್ತವನುವಪ್ಪ ವೀರಬಿಜ್ಜರಸರು ಮಾಡಿದ ಧರ್ಮ
22. ಮಂ ಸಮಸ್ತ ಲೋಕಾಲೋಕ ಚಕ್ರವರ್ತಿಯುಂ ಸಾಸ್ವತ
23. ಐಶ್ವರ್ಯ ಮೂರ್ತಿಯುಮಪ್ಪ ಶ್ರೀಮಹಾಲಿಂಗ
24. ದೇವರ ಮುರಿಜ್ವಾಳೆಂದುವಯಿ

25. ಸಿದ ಮಹಾವೀರಗಣಂಗಳಸಂಖ್ಯಾತಕ ಮಹಿಮೆ
26. ಯುಂದೊಡೆ॥ ಕಂದ ॥ ಕರಕರಸುಂ ಸೆಂಡಾಡುವರು
27. ರಗಪನಂ ಕಿಲಿಲಿಟ್ಟು ಬಿಟ್ಟಿಕ್ಕುವೆರಾಗಿರಿ ಕುಳವುಂ ಕಿತ್ತೆತ್ತುವು
28. ರುಯುಱ್ ಪರಿವೈರಿಯುನಾಡು ತಿರ್ಪ್ಪರು ಸರಣ
29. ರು॥ ಸ್ವಸ್ತಿ ಶ್ರೀಶಕನೃಪವರ್ಶದ ಆಶ್ವಯುಜ ಸುದ್ಧತ್ರ
30. ಯೋದಸಿ ಸೋಮವಾರದನ್ದು ಶ್ರೀಮನ್ಮಹಾ
31. ಮಂಡಳೇಶ್ವರಂ ಬಿಜ್ಜರಸರು ಅರಲು ಮುಂನೂಱಿರಬ
32. ಟಿಯ ಬಾಡಯಿಂಗುಳಿಗೆಯ ಪ್ರಭುನಾಗರಸ ಪೆರ್ಗ್ಗಡೆ
33. ಬಸವಯ್ಯನಲ್ಲಿಯು ಪಂಚ ಮಠಯಿಂತಿವರೇಕಸ್ತರಾಗಿ ಶ್ರಿ
34. ಮೂಲಸ್ತಾನ ದೇವರ ಪಾದಾರಾಧಕಿಯರಪ್ಪ ಕ್ಷೇತ್ರ ಸಂಸ್ಥಾ
35. ಸಿಮಹಾನುಭಾವೆಯುನುಮಪ್ಪ ಜಲವ್ವೆಗಳ ಕಾಲುಂ ತೊ
36. ಳೆದು ಧಾರಾಪೂರ್ಬ್ಬಕಂ ಮಾಡಿ ಶ್ರೀ ಸಿದ್ಧರಾಮನಾಥ
37. ದೇವರ್ಗೆಂದಸಗಣ ಸಿಂಗಿದೇವ ಬಿಜ್ಜೇಶ್ವರ ದೇವರು
38. ರೇವಣೇಶ್ವರ ಕಂಸೇಶ್ವರ ಕೇದಾರ ದೇವರು ನಾಗೇಶ್ವರ ಯಿಂ
39. ತೀಸಕಳ ಲಿಂಗದೇವರಿಗೆ ಶ್ರೀಗುಡ್ಡವ್ವೆಗಳು ಮುಖ್ಯ
40. ವಾಗಿ ಗಣಮಠಕ್ಕೆ ಕೊಟ್ಟವೃತ್ತಿ ಮನೆಯು ನಿವೇಶಣ
41. ನಾಲ್ಕು, ಮೂಡಣಹೊಲದಲು ಹಿರಿಯಕೋಲಮತ್ತರು ೨
42. ಬಡಗಣಹೊಲದಲು ಹಱಿಕಾಱಿರಿಗೆ ಕಾಲಡಿಯ ಮತ್ತರು ೪.
43. ಬಡಗಲು ಕೋಟೆಯ ಕೆಳಗೆ ಹೂದೋಟ ಮತ್ತರು ೧ ದೀವಿಗೆಗೆ
44. ಸರ್ಬನಮಸ್ಯಗಾಣ ೧ ಪೂರೊಳಗಣ ಗಾಣದಲು ಗಾಣಾ
46. ಮಲೆ ಸೊಲಿಸ ೧, ದೇವದೊಱಗರಾಸಿಯಲು ಕೊಳಗ ೧
47. ಯಲೆಯ ಹೇಱಿನ ಸುಂಕ ಪೋಡಪಗಟ್ಟೊಳಗಾಗಿ ದೇವರಿಗೆ ಸ
48. ಲಿಸುವರು ॥ ಶ್ರೀ ತೊನಸೆಯ ಹಳ್ಳಿಯಲು ಮೇಲಕುಂದೆ ಈಗ್ಡು
49. ದಂ ಬೋವನು ಗಣಮಠಕ್ಕೆ ಕೊಟ್ಟ ಭೂಮಿ ತಳಿಲ ಹಳ್ಳಿಯ
50. ಕಾಚೆವ್ವೆ ಮಾರಗೌಡ ಮುಖ್ಯವಾಗಿ ಧಾರಾಪೂರ್ಬ್ಬಕ್ಕಂ
51. ಮಾಡಿ ಬಿಟ್ಟಕಾಲಡಿಯ ಮತ್ತರು ನಾಲ್ಕು ಪಾನಿಂಕಂ
52. ಯ್ಯನಿವೇಶಣ ೧, ಯಿಂತೀಧರ್ಮವ ಜಲವ್ವೆಗಳುಮಂ ಮಾದೇವಯ್ಯ
53. ಗೆಮಸಂಖ್ಯಾತರು ಕೂರ್ತು ತೊತ್ತಗೆಲಸಮಂ ಬೆಸ
54. ಸಿಕೊಟ್ಟು ಸಿರಪಟ್ಟವಂ ಕಟ್ಟಿ ಆಚಂದ್ರಾರ್ಕ ತಾರಂಬರಂ
55. ಕಾರುಣ್ಯಂಗೆಯ್ದು ಸ್ತಿರಂ ಜೀವಿಯೆಂದು ಮಾಡಿದಮಂ
56. ಗಳ ಮಹಾಶ್ರೀ ॥ ಯೀಧರ್ಮ್ಮವಂ ಪ್ರತಿಪಾಳಿಸಿದವ
57. ರು : ಗಣಂಗಳು ಕೂರ್ಪರು ಯೀಧರ್ಮಕ್ಕೆ ಪ್ರತಿ
58. ಕೂಲರಾದವರು ಶಿವದ್ರೋಹರುಗಣಂಗಳು ಮುನಿವರು
59. ಕುಲಕುಂದೆಯ ಪ್ರಭುನಾಗರಸ ಬರೆದ ಸಾಸನ ॥

ನಮ್ಮ ಶಿಕ್ಷಣದಲ್ಲಿ ಅಧ್ಯಾತ್ಮ

ಬಿ. ಎಸ್. ಸತ್ಯನಾರಾಯಣ

ಭಾರತದ ಅಧ್ಯಾತ್ಮ ಪರಂಪರೆ ಅತಿ ಪ್ರಾಚೀನ. ಅನೇಕ ಶತಮಾನಗಳಿಂದ ಇಲ್ಲಿನ ಚಿಂತಕರು, ತತ್ವವೇತ್ತರು, ಋಷಿಗಳು ಹಾಗೂ ಮಹಾ ಮೇಧಾವಿಗಳು ಜೀವನದ ನಿಗೂಢ ಪ್ರಶ್ನೆಗಳನ್ನು ಚರ್ಚಿಸಿ ಅಗಾಧವಾದ ಗ್ರಂಥರಾಶಿಯನ್ನೇ ಅಲ್ಲದೆ, ತಮ್ಮದೇ ಆದ ಅಧ್ಯಾತ್ಮ ಪರಂಪರೆಯನ್ನೇ ಬಿಟ್ಟು ಹೋಗಿದ್ದಾರೆ. ಭಾರತದಲ್ಲಿನ ವೇದ, ಉಪನಿಷತ್ತು, ಧರ್ಮಶಾಸ್ತ್ರಗಳು, ಪುರಾಣ, ಇತಿಹಾಸ, ಸಾಹಿತ್ಯ, ತತ್ವಶಾಸ್ತ್ರಗಳ ಅಪಾರ ಗ್ರಂಥ ರಾಶಿ, ದರ್ಶನ ಪರಂಪರೆಯ ಸಾಹಿತ್ಯ ಭಂಡಾರ—ಇವುಗಳಷ್ಟೆ ಅಲ್ಲದೆ, ಅನೇಕ ಆಚಾರ್ಯರು, ಮಠಾಧೀಶರು, ಸಮಾಜ ಸುಧಾರಕರು, ಕವಿಗಳೂ, ಯೋಗಿಗಳು ಮೊದಲಾದವರು ತಮ್ಮ ತಮ್ಮ ರೀತಿಯಲ್ಲಿ, ಈ ಅಧ್ಯಾತ್ಮ ಪರಂಪರೆಯನ್ನು ಬೆಳಸಿಕೊಂಡು ಬಂದಿದ್ದಾರೆ. ಈ ರೀತಿಯ ಬೇರೆ ಬೇರೆ ಆಚಾರ್ಯ ಪರಂಪರೆಯಲ್ಲಿ ಆಗಿರುವ ಕೃಷಿ ನಮ್ಮ ಅಧಾತ್ಮ ಸಾಹಿತ್ಯವನ್ನು ಅತ್ಯಂತ ಶ್ರೀಮಂತವಾಗಿ ಮಾಡಿದೆ.

ವೇದಗಳಲ್ಲಿನ ದ್ರಷ್ಟಾರರು, ಉಪನಿಷತ್ತಿನ ಋಷಿಗಳು, ಬಾದರಾಯಣ, ಶಂಕರಾಚಾರ್ಯ, ರಾಮಾನುಜ, ಆನಂದತೀರ್ಥ, ಮತ್ತು ಇವರ ಪರಂಪರೆಯಲ್ಲಿ ಬಂದಿರುವ ಪ್ರಾಚೀನ ಹಾಗೂ ಅರ್ವಾಚೀನ ಆಚಾರ್ಯರಸಾಲು, ಅನೇಕ ಮತ ಪ್ರವರ್ತಕರಾದ ಭಗವಾನ್ ಬುದ್ಧ, ಮಹಾವೀರ, ಬಸವಣ್ಣ, ಮೊದಲಾದವರು, ಹಠಯೋಗ ಪರಂಪರೆಯಲ್ಲಿ ಬಂದ ಗೋರಖನಾಥ, ಅಲ್ಲಮ ಮುಂತಾದವರು ಮತ್ತು ಅರ್ವಾಚೀನ ಹಿಂದೂ ಧರ್ಮದ ಪುನರುತ್ಥಾನಕ್ಕಾಗಿ ಅವತರಿಸಿದ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮೀ ವಿವೇಕಾನಂದ ಮುಂತಾದವರ ವಿಚಾರಧಾರೆ, ಬ್ರಹ್ಮಜ್ಞಾನದ ಮೂರ್ತಿವತ್ತಾಗಿ ಅನೇಕ ಸಾಧಕರಿಗೆ ಸ್ಫೂರ್ತಿದಾಯಕರಾಗಿದ್ದ ಭಗವಾನ್ ರಮಣ ಮಹರ್ಷಿ, ಹಾಗೂ ರಾಜಕೀಯರಂಗದಲ್ಲಿ ಅಧ್ಯಾತ್ಮ ನಿಷ್ಠೆಯಿಂದ ಸ್ಫೂರ್ತಿನೀಡಿದ ಮಹಾತ್ಮಾ ಗಾಂಧೀಜೀ, ಇವರೆಲ್ಲರ ಋಜುಜೀವನದ ಮತ್ತು ಅಧ್ಯಾತ್ಮ ಬಾಳಿನ ಪ್ರಭಾವ ನಮ್ಮ ಸನಾತನ ಧರ್ಮದ ಪರಂಪರೆಯ ಮೇಲೆ ಅನೇಕ ರೀತಿ ಆಗಿರುವುದೇ ಅಲ್ಲದೆ, ಇಂದಿಗೂ ಅವರ ನುಡಿಗಳು ನಮ್ಮೆಲ್ಲರಿಗೂ ಸ್ಫೂರ್ತಿದಾಯಕವಾಗಿರುವುದರಲ್ಲಿ ಸಂಶಯವಿಲ್ಲ. ಇಂದಿಗೂ ಸಹ ಅನೇಕ ಮಹನೀಯರು ನಮ್ಮೊಡನೆಯೇ ಇದ್ದು, ಸನಾತನ ಧರ್ಮದ ಸನಾತನತೆಯ ಜೊತೆಗೆ, ಅದು ಇಂದಿಗೂ ನಮ್ಮ ಋಜು ಜೀವನ

ದಲ್ಲಿ ಎಷ್ಟು ಅವಶ್ಯಕ ಹಾಗೂ ಸಮಂಜಸ ಎನ್ನುವುದನ್ನು ನಿರೂಪಿಸುವ ಜೀವಂತ ನಿದರ್ಶನವಾಗಿದ್ದಾರೆ.

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ

ನಮ್ಮ ನಾಡಿನಲ್ಲಿ ಈಗ ಉಂಟಾಗುತ್ತಿರುವ ನವೀನೀಕರಣದ ದೃಷ್ಟಿಯಿಂದ ನೋಡಿದಾಗ, ನಮ್ಮ ದೇಶದಲ್ಲಿನ ಆಚಾರ ವಿಚಾರಗಳು, ಶಿಕ್ಷಣ ಪದ್ಧತಿ, ಸಾಮಾಜಿಕ ನಡವಳಿಕೆಗಳು, ಸಂಘ ಜೀವನದಲ್ಲಿ ಉಂಟಾಗಿರುವ ಬದಲಾವಣೆಗಳು, ಇವೇ ಮೊದಲಾದುವು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಆಧುನಿಕತೆಯತ್ತ ನಡೆಯುತ್ತ, ನಮ್ಮ ಆಧ್ಯಾತ್ಮ ಪರಂಪರೆಯನ್ನು ಅರ್ಥಮಾಡಿಕೊಳ್ಳದೆ, ಅದು ಬರಿಯ ಮೌಢ್ಯವೆಂದೂ, ಅದರಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಬಗೆದು ಅವೆಲ್ಲವನ್ನೂ ಮರೆತು, ತಮ್ಮ ಜೀವನವನ್ನು ಬರಡು ಮಾಡಿಕೊಳ್ಳುತ್ತಿರುವ ನಮ್ಮ ಇಂದಿನ ಕಲಿತ ಜನಾಂಗದ ಬಗ್ಗೆ ಅನೇಕ ಶಿಕ್ಷಣ ತಜ್ಞರು ತಮ್ಮ ಆತಂಕವನ್ನು ವ್ಯಕ್ತ ಪಡಿಸುತ್ತಲೇ ಬಂದಿದ್ದಾರೆ. ಜೊತೆಗೆ ನಮ್ಮ ಇಂದಿನ ಶಿಕ್ಷಣ ಪದ್ಧತಿಯಲ್ಲಿರುವ ಅನೇಕ ನ್ಯೂನತೆಗಳಿಂದಾಗಿ, ಕಲಿತ ಹಾಗೂ ಕಲಿಯದ ಜನರ ಮಧ್ಯೆ ಅಂತರ ಹೆಚ್ಚಾಗುತ್ತ ಪಟ್ಟಣ ಮತ್ತು ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರಲ್ಲಿ ಸಂಪರ್ಕವೇ ತಪ್ಪಿಹೋಗಿ ಅವರ ನಡುವೆ ಅನವಶ್ಯಕವಾದ ಮಾನಸಿಕ ಗೋಡೆಗಳು ಏಳುತ್ತಲೇ ಇವೆ. ಒಂದು ಕಡೆ ಸುಮಾರು ಶೇಕಡ ಮೂವತ್ತರಷ್ಟು ಕಲಿತವರು ತಮ್ಮದೇ ಧೋರಣೆಯನ್ನು ಅನುಸರಿಸುತ್ತಿರುವ ಒಂದು ವರ್ಗ ; ಇನ್ನೊಂದು ಕಡೆ ಕಲಿಯದಿರುವ ಹಾಗೂ ಅನಕ್ಷರಸ್ಥರಾಗಿರುವ ಶೇಕಡ ಎಪ್ಪತ್ತರಷ್ಟು ಜನ ತಮ್ಮ ಮೌಢ್ಯದಲ್ಲಿಯೇ ಮುಳುಗಿರುವ ಇನ್ನೊಂದು ವರ್ಗ. ಜೊತೆಗೆ ಇಂದಿನ ಅಸಮರ್ಪಕ ಶಿಕ್ಷಣದಿಂದಾಗಿ ಹೆಚ್ಚುತ್ತಿರುವ ಪರಸ್ಪರ ಅಂತರ. ಈ ಅಂತರವನ್ನು ಸೇರಿಸಲಾರದೆ, ಅದನ್ನು ಬೆಸೆಯಲು ಪ್ರಯತ್ನಿಸುತ್ತಿರುವ ಕೆಲವರು. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಸಮಾಜವಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತಿರುವುದು ಅತ್ಯಂತ ಸಹಜವೇ ಆಗಿದೆ.

ಆಂಗ್ಲ ಶಿಕ್ಷಣವು ನಮ್ಮ ದೇಶದಲ್ಲಿ ಸಾಮಾಜಿಕ, ರಾಜಕೀಯ ಹಾಗೂ ವೈಜ್ಞಾನಿಕ ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿ, ಔದ್ಯೋಗಿಕ ಪ್ರಗತಿಗೆ ಬಹಳಷ್ಟು ಸಹಾಯಕ ವಾಗಿದ್ದರೂ ಸಹ, ನೈತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಯಿಂದ ಈ ಶಿಕ್ಷಣ ಅಪೂರ್ಣವೇ ಸರಿ. ಇದನ್ನು ಇಂದಿನ ಎಲ್ಲ ಶಿಕ್ಷಣ ತಜ್ಞರೂ ಸಹ ಒಪ್ಪಿದ್ದಾರೆ. ಈ ನ್ಯೂನತೆಯಿಂದಾಗಿ ನಮ್ಮ ಜೀವನಕ್ಕಾಗಲಿ, ಮುಂದಿನ ಪೀಳಿಗೆಯ ಜೀವನಕ್ಕಾಗಲಿ, ಯಾವ ಮಹತ್ವವೂ ಇಲ್ಲದಂತಾಗಿದೆ. ಅದರಿಂದ ವ್ಯಕ್ತಿಯು ನಿಜ ಜೀವನದಲ್ಲಿ ಹಾಗೂ ಸಮಾಜದಲ್ಲಿ ಶಾಂತಿ ಇಲ್ಲದಂತಾಗಿದೆ.

ಇಂದಿನ ಶಿಕ್ಷಣ ಔಪಚಾರಿಕವಾಗಿ ನಡೆಯುತ್ತಿದ್ದು ಅದರಲ್ಲಿ ಯಾವ ಸತ್ವವೂ ಇಲ್ಲದಂತಾಗಿದೆ.

ಜೀವಂತ ಶಿಕ್ಷಣ

ನಮ್ಮ ನಿತ್ಯ ಜೀವನ ಅರ್ಥಪೂರ್ಣವಾಗಬೇಕಾದರೆ, ನಮ್ಮ ನಿಜ ಶಿಕ್ಷಣ ಜೀವಂತವಾಗಬೇಕು. ನಮ್ಮ ಶಿಕ್ಷಣ ಜೀವಂತ ವಾಗಬೇಕಾದರೆ ಅದು ಆಧ್ಯಾತ್ಮ ವಿದ್ಯೆಯಿಂದ ಸ್ಫೂರ್ತಿ ಪಡೆದು ತನ್ನಲ್ಲಿ ಆಧ್ಯಾತ್ಮ ದೃಷ್ಟಿಯನ್ನು ಬೆಳಸಿಕೊಳ್ಳ ಬೇಕು. ಇಲ್ಲವಾದರೆ ಶಿಕ್ಷಣ ಶುಷ್ಕವಾಗುತ್ತದೆ. ಜೀವನ ಅರ್ಥಹೀನವಾಗುತ್ತದೆ. ವ್ಯಕ್ತಿಯ ಬಾಳು ಚರಿತ್ರಹೀನವಾಗುತ್ತದೆ. ಆಧ್ಯಾತ್ಮ ದೃಷ್ಟಿಯನ್ನು ಪಡೆಯಬೇಕಾದರೆ ವೇದಾಂತ ವಿಚಾರ ವಿನಿಮಯ ಶಿಕ್ಷಣದಲ್ಲಿ ಬೆರೆತು ಬರಬೇಕಾಗುತ್ತದೆ. ಬೆಳೆಯುವ ಮಕ್ಕಳಿಗೆ, ಅವರ ಗ್ರಹಣಶಕ್ತಿಗನುಗುಣವಾಗಿ ವೇದಾಂತ ವಿಚಾರಗಳನ್ನು ಕಲಿಸಿ, ಅವರ ಮನಸ್ಸು ಹಾಗೂ ಬುದ್ಧಿ ವಿಕಾಸಗೊಳ್ಳುವಂತೆ ಮಾಡಬೇಕಾಗುವುದೇ ಅಲ್ಲದೆ, ಅವರಲ್ಲಿ ತಮ್ಮ ಇಡೀ ಜೀವನದ ಬಗ್ಗೆ ವೇದಾಂತ ದೃಷ್ಟಿಯನ್ನು ಬೆಳಸಬೇಕಾಗಿರುವುದು ಇಂದಿನ ಶಿಕ್ಷಣ ಪ್ರಣಾಳಿಯ ಒಂದು ಅವಿಭಾಜ್ಯ ಅಂಶವಾಗುವುದು ಅತ್ಯಂತ ಅವಶ್ಯಕ ಹಾಗೂ ಅನಿವಾರ್ಯ ಎನಿಸುತ್ತದೆ.

ತತ್ವ ಅಥವಾ ವೇದಾಂತ ಎಂಬ ಪದವನ್ನು ಕೇಳಿದ ಒಡನೆಯೇ ನಮ್ಮ ಮನಸ್ಸಿಗೆ ಗೋಚರವಾಗುವ ಅಂಶವೆಂದರೆ ನಾವು ನಮ್ಮ ಉದ್ಯೋಗದಿಂದ ನಿವೃತ್ತಿ ಹೊಂದಿದ ನಂತರ, ವಯಸ್ಸಾದ ಮೇಲೆ ಮಾಡಲು ಬೇರೆ ಏನೂ ಕೆಲಸವಿಲ್ಲದಿರುವಾಗ, ನಾವು ಸಮಾಜಕ್ಕೆ ಅಪ್ರಯೋಜಕರಾಗಿರುವಾಗ ನಮ್ಮ ಒಂಟಿತನವನ್ನು ಹೋಗಲಾಡಿಸಲು ಕೈಗೊಳ್ಳಬಹುದಾದ ಒಂದು ಕಾರ್ಯಕ್ರಮ! ನಮ್ಮಂತೆಯೇ ಇರುವ ಅನೇಕ ಜನರು ಒಂದೆಡೆ ಸೇರಿ ಆ ಇಳಿ ವಯಸ್ಸಿನಲ್ಲಿ ಚರ್ಚಿಸುವ ಒಂದು ಶುಷ್ಕ ಗೋಷ್ಠಿ !! ಇದು ನಮ್ಮಲ್ಲಿ ಬಹು ಜನರಿಗೆ ಇರಬಹುದಾದ ಭಾವನೆ. ಹಾಗಾಗಿ, ಸಹಜವಾಗಿಯೇ ಚಿಕ್ಕವಯಸ್ಸಿನಲ್ಲಿ ಈ ವಿಚಾರದತ್ತ ಮನಸ್ಸು ಹಾಯುವುದು ಕಷ್ಟ. ನಮ್ಮ ಜೀವನದಲ್ಲಿ ಅಷ್ಟೊಂದು ಆಕರ್ಷಕ ವಿಷಯಗಳಿರುವಾಗ ಇಂತಹ ಗೊಡ್ಡು ವಿಚಾರಗಳಿಗೇಕೆ ಮನಸ್ಸು ಕೊಡಬೇಕು ಎಂದು ಚಿಂತಿಸುವುದು ಕೂಡ ಸಹಜವೇ ! ಆದರೆ ನಿಜವಾಗಿಯೂ ನೋಡಿದರೆ ಆಧ್ಯಾತ್ಮ ಎನ್ನುವುದು ಜೀವನದಲ್ಲಿ ಉಳಿದಾದ ಕೊನೆಯ ಸಮಯವನ್ನು ಕಳೆಯಲು ನಡೆಸುವ ಅಪ್ರಯೋಜಕ ಕಾರ್ಯಕ್ರಮವೇನೂ ಅಲ್ಲ! ಬದಲು, ಆಧ್ಯಾತ್ಮವಿದ್ಯೆ ಪ್ರತಿಯೊಬ್ಬವ್ಯಕ್ತಿಗೂ ತನ್ನ ಜೀವನನನ್ನು ಸರಿಯಾದ ರೀತಿಯಲ್ಲಿ ರೂಪಿಸಿಕೊಳ್ಳುವ ಸಲುವಾಗಿ, ಮಾನಸಿಕವಾಗಿ ಅನುವು ಮಾಡಿಕೊಳ್ಳಬೇಕಾಗಿರುವ ಅಗತ್ಯವಾಗಿರುವ ಜೀವಂತ ಶಿಕ್ಷಣ.

ನಾವು ಜೀವನವನ್ನು ನೋಡುವ ದೃಷ್ಟಿ ನಮ್ಮ ಅನುಭವಗಳ ವ್ಯಾಪಕತೆಗೆ ಒಳಪಟ್ಟಿರುತ್ತದೆ. ನಮ್ಮ ಅನುಭವಪರಿಧಿ ವಿಶಾಲವಾಗದಿದ್ದಾಗ, ನಮ್ಮಲ್ಲಿ ಸಂಕುಚಿತೆಗೆ ಹಾಗೂ ಕ್ಲಿಷ್ಟತೆಗೆ ಅನುವು ಮಾಡಿಕೊಟ್ಟಂತಾಗುತ್ತದೆ. ನಮ್ಮ ಅನುಭವಗಳಿಂದ ನಾವು ಸರಿಯಾದ ಪಾಠವನ್ನು ಕಲಿಯದಿದ್ದರೆ. ನಮ್ಮ ಜೀವನ ನಿಜವಾಗಿಯೂ ವ್ಯರ್ಥ ವಾಗುತ್ತದೆ. ಈ ರೀತಿಯ ಮಾನಸಿಕ ಆಲಸ್ಯವನ್ನು ಮೃತ್ಯುವೆಂದು ಕರೆದಿದ್ದಾರೆ ನಮ್ಮ ಋಷಿಗಳು. [ಪ್ರಮಾದಂ ವೈ ಮೃತ್ಯುರಹಂ ಬ್ರವೀಮಿ,-ಸನತ್ಸುಜಾತೀಯಂ, 4]. ಈ ದೃಷ್ಟಿಯಿಂದ ಉಪನಿಷತ್‌ನ ಋಷಿಗಳು ತಮ್ಮ ಜೀವನದಲ್ಲಿ ಕಲಿತ ಮತ್ತು ತಮ್ಮ ಅನುಭವಕ್ಕೆ ತಂದುಕೊಂಡ ಒಂದು ಸತ್ಯವನ್ನು ನಮ್ಮ ಅನುಭವಕ್ಕೂ ಸಹ ತಂದು ಕೊಡುವುದರಲ್ಲಿ ನಮಗೆ ಮಾರ್ಗ ದರ್ಶನ ಮಾಡುವುದರಲ್ಲಿ ಸದಾ ನಿರತರಾಗಿದ್ದಾರೆ. ಈ ಸತ್ಯ ನಮ್ಮ ಈ ಜೀವನದಲ್ಲಿಯೇ ನಮ್ಮ ನೇರವಾದ ಅನುಭವಕ್ಕೆ ಬಂದಾಗ ನಮ್ಮ ಜೀವನಕ್ಕೆ ಒಂದು ಹೊಸ ಅರ್ಥ ಬರುತ್ತದೆ. ನಮ್ಮ ಬಾಳು ಸಾರ್ಥಕ ವಾಗುತ್ತದೆ. ಇಲ್ಲದಿದ್ದರೆ ಅದು ವ್ಯರ್ಥವಾಗುತ್ತದೆ (ನಚೇದಿ ಹಾವೇದೀನ್ಮಹತೀ ವಿನಷ್ಟಿಃ-ಕೇನೋಪನಿಷತ್ 2-5].

ಉಪನಿಷತ್‌ಗಳು ಪ್ರತಿಯೊಬ್ಬ ಜೀವಿಯೂ ಸಹ ಮೂಲತಃ ಬ್ರಹ್ಮ ಸ್ವರೂಪವೇ ಸತ್ಯಸ್ವರೂಪವೇ ಎಂದು ಸಾರುತ್ತಿವೆ. ವೇದಾಂತ ವಾಙ್ಮಯದಲ್ಲಿ ಈ ವಿಚಾರವನ್ನೇ ಮುಖ್ಯವಾಗಿ ಮೇಲೆ ಮೇಲೆ ಮಥಿಸಲಾಗಿದೆ. ಯಾವುದೇ ಜನಾಂಗದ ಸಾಹಿತ್ಯವನ್ನು ಅವಲೋಕಿಸಿದರೆ ಅದರ ಸಂಸ್ಕೃತಿಯನ್ನು ಪರಿಶೀಲಿಸಿದರೆ, ಅವುಗಳ ಮೂಲದಲ್ಲಿ ಇದೇ ಅನ್ವೇಷಣೆಯ ತೀವ್ರ ಆಕಾಂಕ್ಷೆ ಕಂಡು ಬರುತ್ತದೆ. ಬೇರೆ ಬೇರೆ ಭಾಷೆಗಳಲ್ಲಿ, ಅದು ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಪದಗಳಲ್ಲಿ ನಿರೂಪಿಸಲ್ಪಟ್ಟಿರಬಹುದು. "ಸತ್ಯ ಒಂದೇ ಅದರ ಹೆಸರು ಹಲವು" ಎನ್ನುವ ಉಕ್ತಿ ಈ ಅಂಶವನ್ನೂ ಸ್ಪಷ್ಟಪಡಿಸುತ್ತದೆ.

ಅತ್ಯಂತ ಗಹನವಾದ, ಆದರೆ ಜೀವನಕ್ಕೆ ಅತ್ಯಂತ ಮುಖ್ಯವಾದ ತತ್ವಗಳನ್ನು ತಮ್ಮ ವ್ಯಾಖ್ಯಾನಗಳಿಂದ ಅನೇಕ ಆಚಾರ್ಯರು ಜನರಿಗೆ ತಿಳಿಯಹೇಳಿದ್ದಾರೆ. ಆಯಾಕಾಲಕ್ಕೆ ಅನುಗುಣವಾಗಿ ಇತರ ಗುರುಗಳು, ತತ್ವವಿದರು ಮತ್ತು ಆಚಾರ್ಯರು ಮತ್ತೆ ಮತ್ತೆ ಪ್ರತಿಪಾದಿಸುತ್ತಾ ಬಂದಿದ್ದಾರೆ. ಆದರೆ, ಇಂದು ಈ ವಿಚಾರಧಾರೆ ಆಯಾ ಮಠಗಳಿಗೆ, ಆಯಾ ಪಾಠಶಾಲೆಗಳಿಗೆ ಸೀಮಿತವಾಗಿ, ಇಂದು ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಅದು ದೊರೆಯದೆ, ನಮ್ಮ ಶಿಕ್ಷಣ ಪ್ರಣಾಳಿಯಲ್ಲಿ ಇದು ಇಲ್ಲದಂತಾಗಿದೆ. ಇದಕ್ಕಾಗಿಯೇ ಶಿಕ್ಷಣ ಸಮಿತಿ (1964-66)ಯು ಈ ಬಗ್ಗೆ ತನ್ನ ಆತಂಕವನ್ನು ಬಹಳವಾಗಿ ವ್ಯಕ್ತಪಡಿಸಿ, ಇಂದಿನ ಶಿಕ್ಷಣದಲ್ಲಿ ನೈತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಅವಶ್ಯಕತೆಯನ್ನು ಮತ್ತೆ ಮತ್ತೆ ಒತ್ತಿ ಹೇಳಿದೆ.

ಇತ್ತೀಚೆಗೆ ನಮ್ಮ ಇಂದಿನ ಶಿಕ್ಷಣದ ಪರಿಮಿತಿಯನ್ನು ಮತ್ತು ಅದರ ಅಪಕ್ವತೆಯನ್ನು ಕುರಿತು ಅನೇಕ ವಿಜ್ಞಾನಿಗಳು, ಶಿಕ್ಷಣ ತತ್ವವಿದರು ಮನೋ ವಿಜ್ಞಾನ ತಜ್ಞರು ಮುಂತಾದವರೆಲ್ಲರೂ ಟೀಕಿಸುತ್ತಿದ್ದಾರೆ.

ನಮ್ಮ ಜೀವನವೆಂಬ ಸೌಧವನ್ನು ಅಧ್ಯಾತ್ಮದ ಬುನಾದಿಯ ಮೇಲೆ ನಾವು ಕಟ್ಟಿದರೆ, ನಾವು ಮಾಡುವ ಎಲ್ಲ ಕೆಲಸ ಕಾರ್ಯಗಳಿಗೂ ಒಂದು ಅರ್ಥ ಉಂಟಾಗಿ ನಮ್ಮ ಬಾಳಿನಲ್ಲಿ ಸುಖ ಸಂತೋಷ ಮತ್ತು ತೃಪ್ತಿ ದೊರಕುವುದೇ ಅಲ್ಲದೆ, ಅದಕ್ಕೊಂದು ಮೌಲ್ಯವೂ ಸಹ ಬರುತ್ತದೆ. ಇಲ್ಲದಿದ್ದರೆ ನಾವು ಬರೀ ಉಸಿರಾಡು ತ್ತಿರುತ್ತೇವೆಯೇ ಹೊರತು ನಾವು ಬದುಕುವುದಿಲ್ಲ. ಈ ಅಧ್ಯಾತ್ಮ ಬುನಾದಿ ಯನ್ನು ನಾವು ನಮ್ಮ ಶಿಕ್ಷಣದಿಂದ ಪಡೆಯಬೇಕು. ಅದಕ್ಕಾಗಿಯೇ ನಮ್ಮ ಶಿಕ್ಷಣ ನಮಗೆ ಅಕ್ಷರವನ್ನಷ್ಟು ಕಲಿಸಿ ನಮ್ಮನ್ನು ಅಕ್ಷರಸ್ಥರನ್ನಾಗಿ ಮಾಡಿದರಷ್ಟೇ ಸಾಲದು ; ನಮ್ಮ ಜೀವನದಲ್ಲಿ ನಮಗೆ ಒಂದು ಉದ್ಯೋಗವನ್ನು ಕಲ್ಪಿಸಿಕೊಳ್ಳಲು ಬೇಕಾದ ಕೌಶಲ್ಯವನ್ನಷ್ಟೆ ಕಲಿಸಿದರೆ ಸಾಲದು ; ಅಥವಾ ನಾವು ಸಮಾಜದ ಒಬ್ಬ ಉತ್ತಮ ಪ್ರಜೆಯಾಗಿರುವಂತೆ ಮಾಡಿದರೆ ಸಾಲದು ; ಹಾಗೂ ನಮ್ಮ ಮನಸ್ಸಿನ ತುಮುಲ ಗಳನ್ನು ಬಿಗಿ ಹಿಡಿದು ನಾವು ಮಾನಸಿಕ ಸ್ವಸ್ಥತೆಯಿಂದ ಇರುವಂತೆ ನಮಗೆ ಕಲಿಸಿದರೆ ಸಾಲದು. ಇವೆಲ್ಲವನ್ನೂ ಶಿಕ್ಷಣ ನಮಗೆ ಕಲಿಸುವುದು ಅಗತ್ಯ. ಅವು ಅವಶ್ಯ ಕೂಡ. ಆದರೆ ಅವಷ್ಟೇ ಸಾಲದು. ಇವೆಲ್ಲವನ್ನೂ ಸಮನ್ವಯ ಗೊಳಿಸುವುದಕ್ಕಾಗಿ, ನಮ್ಮ ಜೀವನದಲ್ಲಿ ಒಂದು ಸಮಗ್ರತೆಯನ್ನುಂಟು ಮಾಡುವ ಸಲುವಾಗಿ, ನಮಗೆ ಅತ್ಯಂತ ಮುಖ್ಯವಾಗಿ ಬೇಕಾಗಿರುವ, ನಮ್ಮ ಬುದ್ಧಿಯನ್ನು ಪಕ್ವಗೊಳಿಸುವುದರ ಜೊತೆಗೆ ನಮ್ಮ ಹೃದಯವನ್ನು ಹಸನಾಗಿಸುವಂತಹ ಸಂಸ್ಕಾರವನ್ನೂ ಸಹ ಶಿಕ್ಷಣ ನಮಗೆ ಒದಗಿಸಬೇಕು. ಸಂಗೀತ, ಶಾಸ್ತ್ರ, ಸಾಹಿತ್ಯ, ಕಲೆ ಮೊದಲಾದುವುಗಳಲ್ಲಿ ಆಸಕ್ತಿ ಇಲ್ಲದವನು ಪಶುವೇನೋ ಹೌದು, ನಿಜ. ಆದರೆ, ವಿಮುಕ್ತಿ ಯತ್ತ ಕೊಂಡೊಯ್ಯದ ವಿದ್ಯೆ ವ್ಯರ್ಥ. ಶಿಕ್ಷಣದ ಸಾರ್ಥಕತೆಯಿರುವುದು ವ್ಯಕ್ತಿಯ ಪೂರ್ಣವಿಕಾಸದಲ್ಲಿ ; ಮಾನವ, ದೈಹಿಕವಾಗಿ, ಮಾನಸಿಕವಾಗಿ, ಹಾಗೂ ಅಧ್ಯಾತ್ಮಿಕವಾಗಿ ಬೆಳೆಯಲು ಅನುವುಮಾಡಿ ಕೊಡುವುದೇ ನಿಜವಾದ ಶಿಕ್ಷಣ. ಈ ದೃಷ್ಟಿಯಿಂದ ನೋಡಿದಾಗ, ನಮ್ಮ ಇಂದಿನ ಶಿಕ್ಷಣ ಅತ್ಯಂತ ಔಪಚಾರಿಕವಾಗಿದೆ. ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಅದು ಬರಿಯ ಪದವಿಗಳನ್ನು ಪಡೆಯುವುದರಲ್ಲಿ ಮಾತ್ರ ಪರ್ಯವಸಾನವಾಗುತ್ತಿದೆ. ಅದಕ್ಕಾಗಿಯೇ ಇಂದಿನ ಶಿಕ್ಷಣದಲ್ಲಿ ಅದು ಜಿವಂತಗೊಳಿಸಲು ಅತ್ಯಂತ ಅವಶ್ಯಕವಾಗಿ ಬೇಕಾಗಿರುವ ಅಂಶವೆಂದರೆ ಅಧ್ಯಾತ್ಮ ಮತ್ತು ಜೀವನದ ಬಗ್ಗೆ ಸಮಗ್ರವಾಗಿ ವಿವೇಚನೆ ನಡೆಸಲು ವಿದ್ಯಾರ್ಥಿಗಳಲ್ಲಿ ಬೇಕಾಗಿರುವ ಪ್ರಜ್ಞೆ ಮತ್ತು ಚಿಂತನೆ—ಇವುಗಳನ್ನು ಉದ್ದೀಪನಗೊಳಿಸುವುದು.

ವ್ಯಕ್ತಿಯ ಪರಿಪಕ್ವತೆ

ಇಂದು ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು, ಯುವಕ ಯುವತಿಯರು ಯಾವ ರೀತಿಯಲ್ಲಿಯೂ ಕಳಪೆ ಯುವಶಕ್ತಿಯಲ್ಲ. ಅವರಲ್ಲಿ ಶಕ್ತಿ ಇದೆ. ಚಿಂತನಾ ಶಕ್ತಿ ಇದೆ, ಸ್ವಯಂ ಪ್ರಜ್ಞೆ ಇದೆ. ನಮ್ಮ ದೇಶದಲ್ಲಿ ಉಂಟಾಗಿರುವ ಪ್ರಗತಿಯಿಂದಾಗಿ ಅವರು ಅತ್ಯಂತ ಹೆಚ್ಚಿನ ಮಟ್ಟದ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದಾರೆ. ಆದರೆ ಅವರಿಗೆ ಈಗ ಬೇಕಾಗಿರುವುದೇನೆಂದರೆ ಜೀವನದ ಬಗ್ಗೆ, ಈ ವಿಶ್ವದ ಬಗ್ಗೆ, ಹಾಗೂ ತಮ್ಮ ಸ್ವಂತತೆಯ ಬಗ್ಗೆ ಒಂದು ಸರಿಯಾದ ನಿಲುವು. ಅದನ್ನೂ ನಮ್ಮ ಶಿಕ್ಷಣ ಅವರಿಗೆ ಒದಗಿಸಬೇಕಾಗಿದೆ.

ಪ್ರತಿಯೊಬ್ಬರೂ ಮಾಡುವ ಕೆಲಸ, ಅದು ಎಂತಹುದೇ ಆಗಿರಲಿ, ಅದು ಅವರ ಮಾನಸಿಕ ಕಲ್ಪನೆಯನ್ನವಲಂಬಿಸಿರುತ್ತದೆ. ಅವರ ಮಾನಸಿಕ ಕಲ್ಪನೆ ಅವರ ಅನುಭವ ಹಾಗೂ ತಿಳುವಳಿಕೆಯ ನೆರಳಿನಲ್ಲಿಯೇ ವಿಕಾಸಗೊಳ್ಳುತ್ತದೆ. ಹೀಗಾಗಿ, ನಮ್ಮ ಅನುಭವಗಳನ್ನು ನಾವು ವಿವೇಚಿಸಿದಾಗ, ಅದರಿಂದ ನಾವು ಸರಿಯಾದ ತಿಳುವಳಿಕೆಯನ್ನು ಸಂಪಾದಿಸಿಕೊಂಡಾಗ ಮಾತ್ರ, ನಮ್ಮ ಕೆಲಸ ಕಾರ್ಯಗಳಲ್ಲಿ ನಮಗೆ ಸಂತೋಷ ಮೂಡುತ್ತದೆ. ಇಲ್ಲದಿದ್ದರೆ ಅದು ಯಾಂತ್ರಿಕವಾಗುತ್ತದೆ. ಅಂದರೆ, ನಮ್ಮಲ್ಲಿರುವ ಅರಿವನ್ನು ನಾವು ಇಂದು ಸಂಸ್ಕರಿಸಬೇಕಾಗಿದೆ. ಈ ಅರಿವಿನ ಸಂಸ್ಕರಣವೇ ಶಿಕ್ಷಣದ ನಿಜವಾದ ಅರ್ಥ. ಇದನ್ನು ನಮ್ಮ ಶಿಕ್ಷಣ ನಡೆಸಬೇಕಾದರೆ, ಅದು ಪ್ರಪಂಚದಲ್ಲಿನ ಅನೇಕ ವಿಷಯಗಳ ಅಧ್ಯಯನ ನಡೆಸಿದರೆ ಸಾಲದು. ನಾವು ಪಡೆದಿರುವ ಹಾಗೂ ದಿನದಿನವೂ ಉಪಯೋಗಿಸುತ್ತಿರುವ ನಮ್ಮ ಅರಿವಿನ ಬಗೆಗೂ ಸಹ ಇಲ್ಲಿ ಚಿಂತನೆ ನಡೆಯಬೇಕಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ತನ್ನನ್ನು ತಾನೇ ಅಧ್ಯಯನ ಮಾಡಬೇಕಾಗಿದೆ. ವ್ಯಕ್ತಿ ಇಂದು ಕಲುಷಿತವಾದ ವಾತಾವರಣದಲ್ಲಿ ಇರುವುದಕ್ಕೆ ಕಾರಣ ಅವನ ವಾತಾವರಣ ಕಲುಷಿತವಾಗಿದೆ ಎಂದೇನೂ ಅಲ್ಲ. ಬದಲು ತನಗಿರುವ ವಾತಾವರಣ ಹಾಗೂ ಪರಿಸರವನ್ನು ತಾನೇ ಕಲುಷಿತ ಗೊಳಿಸುತಿದ್ದಾನೆ ಎಂಬ ಸತ್ಯವನ್ನು ಪ್ರತಿಯೊಬ್ಬರೂ ಅರಿಯಬೇಕಾಗಿದೆ. ಇದಕ್ಕೆ ಮೂಲ ಕಾರಣ ಪ್ರತಿಯೊಬ್ಬರ ಅರಿವೂ ಸಹ ಕಲುಷಿತವಾಗಿದೆ. ಅದು ತಿಳಿಯಾದರೆ, ಅವನ ಮನಸ್ಸು ನಿರ್ಮಲವಾಗುತ್ತದೆ. ಆಗ ಅವನ ಪರಿಸರ ಪರಿಶುದ್ಧವಾಗುತ್ತದೆ. ಆದಾದಾಗ ಮಾತ್ರ ವ್ಯಕ್ತಿ ತನ್ನ ಜೀವನದ ಸೌಧವನ್ನು ಭದ್ರಬುನಾದಿಯ ಮೇಲೆ ನಿರ್ಮಿಸಲು ಸಾಧ್ಯ. ಇಂದಿನ ಶಿಕ್ಷಣ ವ್ಯಕ್ತಿಯ ಅರಿವನ್ನು ಶುದ್ಧಿ ಮಾಡುವ ದಿಸೆಯಲ್ಲಿ ತನ್ನ ದೃಷ್ಟಿಯನ್ನು ಹರಿಸಬೇಕಾಗಿದೆ. ಅದಕ್ಕಾಗಿ ಅದು ಅಧ್ಯಾತ್ಮವನ್ನು ತನ್ನ ಕಾರ್ಯವ್ಯಾಪ್ತಿಯಲ್ಲಿ ಸೇರಿಸಿಕೊಳ್ಳಬೇಕಾಗಿದೆ.

ಬಾಳ್ಗಚ್ಚು ಒಂದು ಟಿಪ್ಪಣಿ*

ಜಿ. ಕುಮಾರ ಬಸಾಪುರ

ಬಾಳ್ಗಚ್ಚು ಎನ್ನುವ ಸಂಪ್ರದಾಯವೊಂದು ಪ್ರಾಚೀನ ದ್ರಾವಿಡ ದೇಶಗಳಲ್ಲಿ ಇದ್ದಂತೆ ಕನ್ನಡ ಶಾಸನಗಳಿಂದ ತಿಳಿದುಬರುತ್ತದೆ. ಈ ಸಮಾಸ ಪದದ ಪದಶಃ ಅರ್ಥ "ಕತ್ತಿಯನ್ನು ತೊಳೆಯುವುದು" ಎಂದು. ಕೆಲವು ಸಂದರ್ಭಗಳಲ್ಲಿ ಇದು "ಬಾಳ್ಗಳ್ಚು ಗೊಟ್ಟಂ" ಇತ್ಯಾದಿಯಾಗಿ ಪ್ರಯೋಗವಾಗಿದೆ. (E I vol. VI, p 55; II, p 23–24) ಕತ್ತಿಯನ್ನು ತೊಳೆಯುವುದು ಎನ್ನುವ ಸರಿಯಾದ ಅರ್ಥದಲ್ಲಿಯೇ ಡಾ. ಫ್ಲೀಟರು ಇದನ್ನು ಗ್ರಹಿಸಿದ್ದಾರೆ. ಈ ಸಂಪ್ರದಾಯವನ್ನು ಯಾವ ಯಾವ ಸಂದರ್ಭಗಳಲ್ಲಿ ಆಚರಿಸುತ್ತಿದ್ದರು ಮತ್ತು ಅವನ್ನು ಆಚರಿಸುತ್ತಿದ್ದ ಬಗೆಯನ್ನು ಕೆಳಗಿನ ಪ್ಯಾರಾಗಳಲ್ಲಿ ತಿಳಿಯಬಹುದು.

ತೊಲಕಾಪ್ಪಿಯಂ ಕೃತಿಯ ಪೊರುಳಧಿಗಾರಂನಲ್ಲಿರುವ, ಪುರುತ್ತಿ ನೈಯಿಯಾಳ್ ನಲಿನೆಯ ಸೂತ್ರದಲ್ಲಿ ಇದನ್ನು 'ವಾಳ್ ಮಣ್ಣುದಲ್' ಮತ್ತು 'ವಾಳ್ ಮಂಗಳಂ' ಎಂದು ಕರೆಯಲಾಗಿದೆ. ಇದನ್ನು ಕೇವಲ ವಿಜಯಿ ಮಾತ್ರ ಆಚರಿಸುತ್ತಿದ್ದನು. ಅವನು ಮುತ್ತಿಗೆ ಹಾಕಿದವನಿರಬಹುದು ಅಥವಾ ಮುತ್ತಿಗೆ ಹಾಕಿಸಿಕೊಂಡವನಿರಬಹುದು. ಮೊದಲಿನವನು ಆಚರಿಸಿದರೆ ಅದನ್ನು 'ಹೊರಗಿನವನ ಕತ್ತಿ ತೊಳೆಯುವುದು' ಎಂತಲೂ ಎರಡನೆಯವನು ಆಚರಿಸಿದರೆ, 'ಒಳಗಿನವನ ಕತ್ತಿ ತೊಳೆಯುವುದು' ಎಂತಲೂ ಕರೆಯಲಾಗುತ್ತಿತ್ತು. ಕೆಲವೊಮ್ಮೆ, ಕ್ವಚಿತ್ತಾಗಿ ಇಬ್ಬರೂ ಇದನ್ನು ಆಚರಿಸುವ ಅವಕಾಶ ದೊರಕುತ್ತಿತ್ತು. ಎರಡೂ ಕಡೆಗಳ ಸೈನ್ಯಗಳು ಯುದ್ಧದಲ್ಲಿ ತೊಡಗಿ, ಕೊನೆಯಲ್ಲಿ ಯಾರನ್ನಾದರೂ ಒಬ್ಬ ಸೋಲಿಸಿದಾಗ ಗೆದ್ದವನ ಕತ್ತಿಯಿಂದ ಶತ್ರುವಿನ ರಕ್ತದ ಹನಿ ತೊಟ್ಟಿಕ್ಕುತ್ತಿರುವಾಗಲೇ ಅದನ್ನು ದುರ್ಗಾದೇವಿಯ (ತಮಿಳಿನಲ್ಲಿ ಕೊರವೈ) ಎದುರು ಇರಿಸಿ, ತೊಳೆಯುತ್ತಿದ್ದರು. ಈ ಸಂದರ್ಭದಲ್ಲಿ ಹೂಗಳು ಸುಗಂಧದ್ರವ್ಯಗಳು ಹಾಗೂ ಧೂಪವನ್ನು ದೇವಿಗೂ, ಕತ್ತಿಗೂ ಅರ್ಪಿಸಲಾಗುತ್ತಿತ್ತು. ದೇವತೆಯ ಮೂರ್ತಿಗೆ ತುಪ್ಪವನ್ನು ಲೇಪಿಸಲಾಗುತ್ತಿತ್ತು. ಅಲ್ಲದೆ ಇದರ ಕುರುಹಾಗಿ ಹಬ್ಬವನ್ನೂ ಆಚರಿಸುತ್ತಿದ್ದರು. ಹೆಂಗಳೆಯರು ಹಾಡು ಹೇಳುತ್ತಾ ಮತ್ತು ವೀಣೆಯನ್ನು ಬಾರಿಸುತ್ತಾ ಕತ್ತಿಯನ್ನು ರಸ್ತೆಗಳಲ್ಲಿ ಮೆರವಣಿಗೆಯ ಮೂಲಕ ಪೊಳಿಗೆ ತೆಗೆದುಕೊಂಡು ಹೋಗುತ್ತಿದ್ದರು.

---

* ಇಂಗ್ಲೀಷ್ ಮೂಲ : ಟಿ. ಎ. ಗೋಪಿನಾಥನ್, ಇಂಡಿಯನ್ ಆ್ಯಂಟಿಕ್ವರಿ, 1911.

ತೊಲಕಾಪ್ಪಿಯಂ ನಂತರ, ಅದರ ವ್ಯಾಖ್ಯಾನ ರೂಪದಲ್ಲಿ ಪುರಪ್ಪೊರುಳ್ ವೆಣ್ಬಾಮಾಲೈಸಲ್ಲಿ ಪಾದನ್ ಪಾಡಲಂನ 65ನೇ ಪದ್ಯದಲ್ಲಿಯೂ ಇದನ್ನು ಮೇಲಿನ ರೀತಿಯಲ್ಲಿಯೇ ವಿವರಿಸಲಾಗಿದೆ.

ಪುರನಾನೂರು ಕೃತಿಯಲ್ಲಿ ಇದನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸಿರುವುದು ಕಂಡು ಬರುತ್ತದೆ. ಆದಿಯಮಾನ್ ನೆಡುಮಾನ್ ಅಂಜಿ ದೊರೆಯು, ಪ್ರಸಿದ್ಧ ಕವಯಿತ್ರಿ ಅವ್ವೈಯಾರಳನ್ನು ತೊಂಡೈಯಮಾನ್‌ನ ಆಸ್ಥಾನಕ್ಕೆ ರಾಯಭಾರಿಯಾಗಿ ಕಳುಹಿಸಿದ್ದನು. ಅಲ್ಲಿ ಆಕೆಗೆ ರಾಜನ ವಿಶಾಲವಾದ ಶಸ್ತ್ರಾಗಾರವನ್ನು ತೋರಿಸ ಲಾಯಿತು. ಅಲ್ಲಿ ರಾಜನ ಆಯುಧಗಳನ್ನು ಶುದ್ಧವಾಗಿ ಒರೆಸಿ, ಎಣ್ಣೆಸವರಿ, ನವಿಲುಗರಿ, ಹೂಗಳಿಂದ ಅಲಂಕರಿಸಿ ಇಡಲಾಗಿದ್ದಿತು. ಇವನ್ನು ಕಂಡು ಆಕೆ ತನ್ನ ಒಂದು ಕವನದಲ್ಲಿ ಹೀಗೆ ಹೇಳಿದ್ದಾಳೆ. ''ಸಂತತವಾಗಿ ನಡೆಯುವ ಯುದ್ಧಗಳಿಂದಾಗಿ ಆದಿಯಮಾನ್ ರಾಜನ ಆಯುಧಗಳು ಯಾವಾಗಲೂ ಮುರಿದು, ಗಮನಾರ್ಹವಲ್ಲದ ಕಮ್ಮಾರನ ಮನೆಯ ಮೂಲೆಯಲ್ಲಿ ಬಿದ್ದಿರುತ್ತವೆ''—ಹೀಗೆ ಆದಿಯಮಾನ್ ಮತ್ತು ತೊಂಡೈಯಮಾನ್ ದೊರೆಗಳಿಬ್ಬರ ಆಯುಧಗಳ ಸ್ಥಿತಿಯನ್ನು ಹೋಲಿಸುವುದರ ಮೂಲಕ ಆಕೆ ಪರೋಕ್ಷವಾಗಿ ಆದಿಯಮಾನ್‌ನನ್ನು ಹೊಗಳಿ, ತೊಂಡೈಯಮಾನ್ ನನ್ನು ದೂರಿದ್ದಾಳೆ.

ಸಮಾಜವಾದದ ಪ್ರಾಚೀನ ಪರಂಪರೆ

ಬಾಪು. ಹೆದ್ದೂರಶೆಟ್ಟಿ

"ಇಂದು ಬೆಳೆದು ನಿಂತಿರುವಂತೆ ಸಮಾಜವಾದ, ಫ್ರೆಂಚ ಕ್ರಾಂತಿ ಹಾಗೂ ಔದ್ಯೋಗಿಕ ಕ್ರಾಂತಿಗಳು ಪ್ರಾರಂಭಿಸಿದ ವಿಶಾಲ ಬೆಳವಣಿಗೆಗಳ ಪರಿಣಾಮ ಸ್ವರೂಪವಾಗಿ ಹುಟ್ಟಿದ್ದು" (1) ಎನ್ನುತ್ತಾರೆ ಅಶೋಕ ಮೆಹತಾ. ಸಮಾಜವಾದ ಒಂದು ನಿರ್ದಿಷ್ಟ ಸಿದ್ಧಾಂತವಾಗಿ, ಒಂದು ಆಂದೋಲನವಾಗಿ ಬೆಳೆದದ್ದು ಫ್ರೆಂಚ ಹಾಗೂ ಔದ್ಯೋಗಿಕ ಕ್ರಾಂತಿಗಳಿಂದಿತ್ತೀಚೆಗೆ ಎನ್ನಬಹುದಾದರೂ, ಅವುಗಳಿಗಿಂತ ಮೊದಲಿನ ಚಿಂತನೆಯುಲ್ಲಿ, ಸಮಾನತೆ, ಬಡವರ, ನಿರ್ಗತಿಕರಬಗ್ಗೆ ಕಾಳಜಿ ದೊದಲಾದ ಸಮಾಜವಾದಿ ವಿಚಾರಗಳಿಗೇನೂ ಕೊರತೆ ಇಲ್ಲ. ಇದಕ್ಕೆ ಕಾರಣ ಲೀಡ್ಲರ್ ಹೇಳು ವಂತೆ "ಸಾವಿರಾರು ವರ್ಷಗಳಿಂದ ರಾಜಕೀಯ ಹಾಗೂ ಔದ್ಯೋಗಿಕ ಶಕ್ತಿ ಇರು ವವರು ಬಡವರನ್ನು ತುಳಿಯಲು ಆ ಶಕ್ತಿಯನ್ನು ಉಪಯೋಗಿಸುತ್ತ ಬಂದಿದ್ದಾರೆ... ಹಾಗೂ ಈ ಸಾವಿರಾರು ವರ್ಷಗಳಲ್ಲಿ ಈ ದಬ್ಬಾಳಿಕೆಯನ್ನು, ಈ ನಿರಂಕುಶತೆಯನ್ನು ಈ ಅನ್ಯಾಯವನ್ನು ನೋಡಿ, ಪ್ರವಾದಿಗಳು, ಸುಖೀ ಜಗತ್ತಿನ ಕನಸು ಕಾಣುವ ವರೂ – ಅವರಲ್ಲಿ ಹಲವರು ಸಾಮಾನ್ಯಜನರ ಮಧ್ಯದಿಂದ ಬಂದವರು, ಇನ್ನೂ ಹಲವರು ಶ್ರೀಮಂತ ವರ್ಗಗಳಿಂದ ಬಂದವರು – ವ್ಯಥೆ ಪಟ್ಟಿದ್ದಾರೆ."(2)

ಮಾರ್ಕ್ಸ್ ಮತ್ತು ಎಂಗೆಲ್ಸರ 'ಕಮ್ಯುನಿಸ್ಟ ಮ್ಯಾನಿಫೆಸ್ಟೋ'ದ ಪ್ರಥಮ ವಾಕ್ಯಕ್ಕೇ ಬರೆದ ಅಡಿ ಟಿಪ್ಪಣಿಯುಲ್ಲಿ ಪ್ರಾಚೀನ ಕಾಲದಲ್ಲಿ ಆಸ್ತಿಯು ಸಾಮೂಹಿಕ ಒಡೆತನದ ಪದ್ಧತಿ ಇದ್ದುದನ್ನು ಎಂಗೆಲ್ಸ ಹೇಳುತ್ತಾನೆ. "ರಶಿಯಾದಲ್ಲಿ ಸಾಮೂ ಹಿಕ ಒಡೆತನ ಇದ್ದುದನ್ನು ಹೆಕ್ಸಥೌಸೆನ್ ತೋರಿಸಿಕೊಟ್ಟನು. ಈ ಸಾಮಾಜಿಕ ತಳಹದಿಯಿಂದಲೇ ಟ್ಯುಟಾನಿಕ್ ಜನಾಂಗದ ಇತಿಹಾಸ ಪ್ರಾರಂಭವಾಯಿತೆಂದೂ ಭಾರತದಿಂದ ಐರ್ಲೆಂಡವರೆಗಿನ ಎಲ್ಲಾ ದೇಶಗಳಲ್ಲಿ ಗ್ರಾಮಸಮುದಾಯುಗಳೇ ಸಮಾಜದ ಪ್ರಾಚೀನ ಸ್ವರೂಪವಾಗಿದ್ದುವೆಂದೂ ಮೊರರ್ ರುಜುವಾತು ಪಡಿಸಿ ದ್ದಾನೆ"(3) ಎಂದು ಎಂಗೆಲ್ಸ ವಿವರಿಸುತ್ತಾನೆ. ಸಾಮೂಹಿಕ ಒಡೆತನದ ಈ ಸ್ಥಿತಿ ಯನ್ನು ನೈಸರ್ಗಿಕಾವಸ್ಥೆ (Natural state) ಎನ್ನಬಹುದು. ಈ ಸ್ಥಿತಿಯಲ್ಲಿ

---

1. ರಿಫ್ಲೆಕ್ಷನ್ ಓನ್ ಸೋಷಲಿಸ್ಟ್ ಇರಾ — ಪುಟ 24
2. ಹಿಸ್ಟರಿ ಆಫ್ ಸೋಷಲಿಸಂ : ಪುಟ 3
3. ಮಾರ್ಕ್ಸ್ ಎಂಡ್ ಎಂಗೆಲ್ಸ್ : ಸೆಲೆಕ್ಟೆಡ್ ವರ್ಕ್ಸ್ ಪುಟ 108-9

ಪ್ರಚಲಿತವಾಗಿದ್ದ ಕಾನೂನಿಗೆ ನೈಸರ್ಗಿಕ ವಿಧಿ (Jus Naturale) ಎನ್ನಲಾಯಿತು. ಈ ಸ್ಥಿತಿಯ ನಂತರ ಬೆಳೆದ ನಾಗರಿಕ ವಿಧಿ (Jus Civile) ವೈಯಕ್ತಿಕ ಒಡೆತನವನ್ನು ಮಾನ್ಯ ಮಾಡಿದ್ದರಿಂದ ಅದೊಂದು ದಾರಿ ತಪ್ಪಿದ ವ್ಯವಸ್ಥೆ ಎಂದು ಪರಿಗಣಿಸಲಾಯಿತು. ಬರಬರುತ್ತ ವೈಯಕ್ತಿಕ ಒಡೆತನವೇ ಸಾಮಾನ್ಯ ನಿಯಮವಾಗಿ ಸಾಮೂಹಿಕ ಒಡೆತನ ಅಪವಾದವಾದಾಗ, ಸಂಪತ್ತಿನ ಅಸಮಾನ ಹಂಚಿಕೆಯಿಂದಾಗಿ ಬಡವ – ಶ್ರೀಮಂತರ ವರ್ಗಗಳು ಹುಟ್ಟಿಕೊಂಡಾಗ, ಹಾಗೂ ಸಂಪತ್ತಿನ ಆಧಾರದ ಮೇಲೆ ಶ್ರೀಮಂತರು ಬಡವರನ್ನು ಕೀಳಾಗಿ ನೋಡಲು ಪ್ರಾರಂಭಿಸಿದಾಗ, ಮಾನವನ ಮೂಲಭೂತ ಸಮಾನತೆಯಿಂದ ಪ್ರೇರಿತರಾದ ಹಲವಾರು ಪ್ರವಾದಿಗಳು ಶ್ರೀಮಂತರನ್ನು, ಸಂಪತ್ತನ್ನು ಖಂಡಿಸಿದರು, ಬಡವರ ಬಗ್ಗೆ ಕಾಳಜಿ ಮಾಡಿದರು, ಸಮಾನತೆಯನ್ನು ಬೋಧಿಸಿದರು. ಜಗತ್ತಿನಲ್ಲೆಲ್ಲ ಇಂತಹ ಪ್ರವಾದಿಗಳ, ವಿಚಾರಗಳ ವಿಶಾಲ ಪರಂಪರೆ ಇದೆ. ಆದರೆ ಪ್ರಮುಖವಾಗಿ ಗ್ರೀಕೊ-ರೋಮನ್ ಪರಂಪರೆ, ಯೆಹೂದ್ಯ-ಕ್ರಿಸ್ತ ಪರಂಪರೆ ಹಾಗೂ ಭಾರತೀಯ ಪರಂಪರೆಗಳನ್ನು ಮಾತ್ರ ಪರಿಗಣಿಸುವುದು ಸಮಾಜವಾದಿ ವಿಚಾರಗಳ ಬೆಳವಣಿಗೆಯ ಬಗ್ಗೆ ಅವಶ್ಯಕ ದೃಷ್ಟಿಕೋನವನ್ನು ನೀಡಲು ಸಾಕು ಎನ್ನಿಸುತ್ತದೆ.

ಗ್ರೀಕ್ ನಗರ–ರಾಜ್ಯಗಳಲ್ಲಿ ಸಮಾಜವಾದಿ ವ್ಯವಸ್ಥೆ ಇತ್ತು ಎಂದು ಹೇಳಲಾಗುತ್ತದೆ. ಸ್ಪಾರ್ಟಾನಲ್ಲಿ ನಾಗರಿಕರು ಸಾಮೂಹಿಕವಾಗಿ ಊಟ ಮಾಡುವುದನ್ನು ಹೇಳುತ್ತ ಮೇಬ್ಲಿ ಮೊದಲಾದವರು ಅಲ್ಲಿಯ ಸಮಾಜವಾದಿ ವ್ಯವಸ್ಥೆಯನ್ನು ಹೊಗಳಿದ್ದಾರೆ. ಇದೇ ರೀತಿ ಕ್ರೀಟ್ ಹಾಗೂ ಲೈಪಾರಾಗಳಲ್ಲಿಯೂ ಸಮಾಜವಾದಿ ವ್ಯವಸ್ಥೆಗಳಿದ್ದುವೆಂದು ಹೇಳಲಾಗುತ್ತದೆ. ಆದರೆ ಸಾಮೂಹಿಕ ಭೋಜನದ ಸಂಪ್ರದಾಯಕ್ಕೆ ಆ ನಗರ ರಾಜ್ಯಗಳು ಸೈನಿಕ–ಯಂತ್ರಗಳಂತೆ ನಿರ್ಮಿತವಾಗಿದ್ದದ್ದೇ ಕಾರಣ ಎಂದು ಅಲೆಗ್ಸಾಂಡರ ಗ್ರೇ ವಾದಿಸುತ್ತಾನೆ. ಯುದ್ಧದ ಪರಿಸ್ಥಿತಿಯಲ್ಲಿ ಸೈನಿಕರು ಸಾಮೂಹಿಕ ಭೋಜನ ಮಾಡುವುದು ವಾಡಿಕೆಯಾಗಿತ್ತು. ಆದ್ದರಿಂದ ಶಾಂತಿ ನೆಲೆಸಿದ್ದ ಸಮಯದಲ್ಲಿಯೂ ತಮ್ಮ ರಾಜ್ಯದ ಸ್ವರೂಪದ ಗುರುತಾಗಿ ಅವರು ಸಾಮೂಹಿಕ ಭೋಜನ ಮಾಡುತ್ತಿದ್ದರು. ಜೊತೆಗೆ ಹೆಲೋಟ್ ಎಂಬ ಜನ ಅಲ್ಲಿ ಗುಲಾಮರಾಗಿದ್ದುದನ್ನು ಗಮನಿಸಿ ಈ ಗ್ರೀಕ್ ನಗರ–ರಾಜ್ಯಗಳಲ್ಲಿದ್ದುದು 'ಸಾಮಂತವರ್ಗದ ಸಮಾಜವಾದ' ಎಂದು ಅಲೆಗ್ಸಾಂಡರ್ ಗ್ರೇ ವಾದಿಸುತ್ತಾನೆ.

ಗ್ರೀಕ್ ತತ್ವಜ್ಞಾನಿ ಪ್ಲೇಟೋ ತನ್ನ 'ರಿಪಬ್ಲಿಕ್'ನಲ್ಲಿ ಒಂದು ಆದರ್ಶ ಸಮಾಜವಾದಿ ವ್ಯವಸ್ಥೆಯನ್ನು ಕಲ್ಪಿಸಿದ ಎಂದು ಹೇಳಲಾಗುತ್ತದೆ. 'ರಿಪಬ್ಲಿಕ್' ವನ್ನು ಒಂದು ಪ್ರಮುಖ ನೈತಿಕ-ಧಾರ್ಮಿಕ ಯುಟೋಪಿಯ ಎಂದು ಲೀನ್ಡ್ಲರ್ ಪರಿಗಣಿಸುತ್ತಾನೆ. 'ರಿಪಬ್ಲಿಕ್'ನಲ್ಲಿ ಪ್ಲೇಟೋ ಸಮಾಜವನ್ನು ಮೂರು ವರ್ಗಗಳಲ್ಲಿ ವಿಂಗಡಿಸುತ್ತಾನೆ - ಜನ ಸಾಮಾನ್ಯರು, ರಕ್ಷಕರು ಹಾಗೂ ಆಡಳಿತಗಾರರು

ಇವರಲ್ಲಿ ರಕ್ಷಕರು ಹಾಗೂ ಆಡಳಿತಗಾರರಿಗೆ ಒಂದು ಸಮಾಜವಾದಿ ವ್ಯವಸ್ಥೆಯನ್ನು ಕಲ್ಪಿಸುತ್ತಾನೆ. ಅವರಿಗೆ ಯಾವ ಆಸ್ತಿಯೂ ಇರಬಾರದೆಂದು ಆತ ಹೇಳುತ್ತಾನೆ; ಜೊತೆಗೆ ಅವರು ತಮ್ಮ ಹೆಂಡಂದಿರನ್ನೂ ಮಕ್ಕಳನ್ನೂ ಸಾಮೂಹಿಕವಾಗಿ ಹೊಂದಿರಬೇಕೆಂದು ಹೇಳುತ್ತಾನೆ. ಆದರೆ ಈ ವ್ಯವಸ್ಥೆ ಬರಿ ಆಳುವ ವರ್ಗಕ್ಕಾಗಿ ಮಾತ್ರ ಕಲ್ಪಿತವಾಗಿತ್ತು ಜನಸಾಮಾನ್ಯರಿಗಾಗಿ ಅಲ್ಲ ಎನ್ನುವುದು ಗಮನಿಸಬೇಕಾದ ವಿಷಯ. ಇದಕ್ಕೆ ಕಾರಣ ರಾಜ್ಯ-ವ್ಯವಸ್ಥೆಯ ಬಗ್ಗೆ ಪ್ಲೇಟೋನಿಗಿದ್ದ ವಿಚಾರಗಳು. ಎಲ್ಲಾ ನಾಗರಿಕರು ಸಮಾನರು ಎಂಬ ಜನತಾಂತ್ರಿಕ ತತ್ವದಿಂದಾಗಿ ರಾಜ್ಯ-ವ್ಯವಸ್ಥೆ ಬಳಲುತ್ತಿರುತ್ತದೆ ಎಂದು ಆತ ಭಾವಿಸಿದ್ದ. ರಾಜ್ಯದ ಆಡಳಿತವನ್ನು ಜನಸಾಮಾನ್ಯರಿಗೆ ಬಿಟ್ಟುಕೊಡದೆ ಆ ಕಲೆಯಲ್ಲಿ ನಿಪುಣರಾದವರಿಗೆ ವಹಿಸಬೇಕು ಎಂದು ಆತ ವಾದಿಸುತ್ತಿದ್ದ. ಆದುದರಿಂದ ತನ್ನ 'ರಿಪಬ್ಲಿಕ್'ನಲ್ಲಿ ಅಂತಹ ಆದರ್ಶ ಆಳುವ ವರ್ಗವೊಂದನ್ನು ಆತ ನಿರ್ಮಿಸುತ್ತಾನೆ. ಆದರೆ ಪ್ಲೇಟೋನ ಈ ಕಲ್ಪನೆಯನ್ನು ಆತನ ಶಿಷ್ಯನಾದ ಅರಿಸ್ಟಾಟಲನೇ ವಿರೋಧಿಸಿದ್ದ. ಈ ವ್ಯವಸ್ಥೆಯಲ್ಲಿ ಒಂದು ರಾಜ್ಯದೊಳಗೆ ಎರಡು ರಾಜ್ಯಗಳು ಹುಟ್ಟಿಕೊಳ್ಳುತ್ತವೆ ಎಂದೂ, ಅವು ಪರಸ್ಪರ ಶತ್ರುಗಳಾಗಿರುತ್ತವೆ ಎಂದೂ ಹೇಳುವುದರ ಮೂಲಕ ವರ್ಗಸಮಾಜದಲ್ಲಿ ವರ್ಗ ಹೋರಾಟದ ಅನಿವಾರ್ಯತೆಯನ್ನು ಅರಿಸ್ಟಾಟಲ್ ಗುರುತಿಸಿದ್ದ. ಪ್ಲೇಟೋನ ಈ ವ್ಯವಸ್ಥೆಯನ್ನು ಅಲೆಗ್ಸಾಂಡರ್ ಗ್ರೇ 'ಬಡತನ ಹಾಗೂ ಸನ್ಯಾಸದ ಸಮಾಜವಾದ' ಎಂದು ಮೂದಲಿಸುತ್ತಾನೆ.

ಪ್ಲೇಟೋನ 'ರಿಪಬ್ಲಿಕ್'ಗಿಂತ ಅರಿಸ್ಟೋಫೆನೆಸ್‌ನ 'ಎಕ್ಲಿಸಿಯಾಜುಸೆ' ಇನ್ನೂ ಸ್ವಾರಸ್ಯಕರ ಕೃತಿ. ಇಲ್ಲಿ ನಾಯಕಿ ಬ್ಲೆಪಿರಸ್‌ನ ಹೆಂಡತಿ ಪ್ರಾಕ್ಸೆಗೊರಾ ಇವಳು ಒಂದು ಕ್ರಾಂತಿಯನ್ನು ಮಾಡಿ 'ಸ್ತ್ರೀ ರಾಜ್ಯ'ವನ್ನು ಸ್ಥಾಪಿಸುತ್ತಾಳೆ. ತಮ್ಮ ರಾಜ್ಯದಲ್ಲಿ ಯಾರೂ ಶ್ರೀಮಂತರೂ ಆಗಿರುವುದಿಲ್ಲ, ಯಾರೂ ಬಡವರೂ ಆಗಿರುವುದಿಲ್ಲ, ಎಲ್ಲರೂ ಸಮಾನರಾಗಿರುತ್ತಾರೆ ಹಾಗೂ ಎಲ್ಲವನ್ನೂ ಸಮನಾಗಿ ಹಂಚಿಕೊಳ್ಳುತ್ತಾರೆ ಎಂದು ಹೇಳುತ್ತಾಳೆ. ಆದರೆ ಹೊಲಗಳಲ್ಲಿ ಯಾರು ದುಡಿಯುತ್ತಾರೆ ಎಂದು ಅವಳ ಗಂಡ ಕೇಳಿದಾಗ ಅಂಥ ಕೆಲಸಗಳನ್ನು ಗುಲಾಮರಿಗೆ ಬಿಟ್ಟು ಕೊಡೋಣ ಎನ್ನುತ್ತಾಳೆ.

ಯೆಹೂದ್ಯ–ಕ್ರಿಸ್ತ ನಾಗರಿಕತೆಯಲ್ಲೂ ಸಮಾಜವಾದಿ ವಿಚಾರಗಳ ಅತ್ಯಂತ ಪ್ರಾಚೀನ ಪರಂಪರೆ ಇದೆ. ಯೆಹೂದ್ಯರು ತಮ್ಮನ್ನು ಇಸ್ರೇಲನ ಮಕ್ಕಳೆಂದು ಭಾವಿಸುತ್ತಾರೆ. ಆದುದರಿಂದ ಅವರಲ್ಲಿ ಅಣ್ಣತಮ್ಮಂದಿರ ಭಾವನೆ ಹೆಚ್ಚು. ಬಹುಶಃ ಈ ಐತಿಹಾಸಿಕ–ಧಾರ್ಮಿಕ ಕಾರಣದಿಂದಲೇ ಇಂದಿಗೂ ಅವರು ಕಿಬ್ಬುಟ್ಸ

ನಂತಹ ಸಾಮಾಜಿಕ ಘಟಕಗಳ ಮೂಲಕ ಸಮಾಜವಾದಿ ವ್ಯವಸ್ಥೆಯನ್ನು ನಿರ್ಮಿಸು ವಲ್ಲಿ ಯಶಸ್ವಿಯಾಗಿದ್ದಾರೆ ಎನ್ನಿಸುತ್ತದೆ. ಯೆಹೂದ್ಯರಲ್ಲೂ ಕಟ್ಟುನಿಟ್ಟಾದ ಸಾಮೂಹಿಕ ಸಮಾಜವ್ಯವಸ್ಥೆಯನ್ನು ರಚಿಸಿಕೊಂಡವರು ಎಸ್ಸೇನರು. 'ಗುಡಿಸಲು, ಜೀವನ, ಹಾಗೂ ಭೋಜನಗಳನ್ನು ಸಮನಾಗಿ ಹಂಚಿಕೊಳ್ಳುವುದು ಇವರ ದಿನನಿತ್ಯದ ಜೀವನದಲ್ಲಿ ದೃಢವಾಗಿ ಬೇರೂರಿತ್ತು' ಎಂದು ಫೈಲೋ ಹೇಳುತ್ತಾನೆ. ಅವರು ತಮ್ಮ ಎಲ್ಲ ಆಸ್ತಿಯನ್ನೂ, ಗಳಿಕೆಯನ್ನೂ ಸಮಾಜಕ್ಕೆ ಕೊಟ್ಟು, ಅಲ್ಲಿಂದ ತಮ ಗೆಷ್ಟು ಅವಶ್ಯಕವೋ ಅಷ್ಟನ್ನು ತೆಗೆದುಕೊಳ್ಳುತ್ತಿದ್ದರು, ಆದುದರಿಂದ ಇವರು ಸಂಪೂರ್ಣ ಸಮಾಜವಾದಿ ಜೀವನವನ್ನು ನಡೆಸುತ್ತಿದ್ದರು ಎಂದು ಹೇಳಲಾಗುತ್ತದೆ.

ಬೈಬಲ್ಲಿನಲ್ಲೇ ಹೇಳಲಾದ ತೆಕೋವಾದ ಅಮೋಸ್, ಅತ್ಯಂತ ಪ್ರಾಚೀನ ಸಾಮಾಜಿಕ ಪ್ರವಾದಿ ಎಂದು ಹೇಳಬಹುದು. ಈತ ಕ್ರಿಸ್ತನಿಗಿಂತ ಸುಮಾರು 800 ವರ್ಷಗಳ ಮೊದಲು ಬದುಕಿದ್ದ. ಶ್ರೀಮಂತರು ಬಡವರ ಶೋಷಣೆ ನಡೆಸುವು ದನ್ನು ಖಂಡಿಸುತ್ತ ಆತ "...ಸುಳ್ಳು ತಕ್ಕಡಿಯಿಂದ ಮೋಸ ಮಾಡೋಣ, ಬಡವ ನನ್ನು ಬೆಳ್ಳಿಗೂ, ನಿರ್ಗತಿಕನನ್ನು ಚಪ್ಪಲಿಗೂ ಕೊಂಡುಕೊಳ್ಳೋಣ......ಎಂದು ಕೊಂಡು ನಿರ್ಗತಿಕರನ್ನು ತುಳಿಯುವವರೇ, ದೇಶದ ದರಿದ್ರರನ್ನು ನಿರ್ಮೂಲ ಮಾಡುವವರೇ, ಕೇಳಿರಿ, ಯೆಹೋವನು ಯಾಕೋಬನ ಮಹಿಮೆಯ ಮೇಲೆ ಆಣೆ ಇಟ್ಟಿದ್ದಾನೆ. ಖಂಡಿತವಾಗಿಯೂ ನಿಮ್ಮ ಕೃತ್ಯಗಳಲ್ಲಿ ಯಾವುದನ್ನೂ, ಎಂದಿಗೂ ಆತ ಮರೆಯಲಾರ"[4] ಎಂದು ಹೇಳುತ್ತಾನೆ. ಪ್ರವಾದಿ ಇಸ್ಸೈಯ ಕೂಡಾ ಶ್ರೀಮಂತರ ಬಗ್ಗೆ ತನ್ನ ಕೋಪವನ್ನು 'ಬಡವರಿಂದ ಕೊಳ್ಳೆ ಹೊಡೆದದ್ದು ನಿಮ್ಮ ಮನೆಗಳಲ್ಲಿ ಇದೆ, ನೀವು ನನ್ನ ಜನರನ್ನು ಯಾಕೆ ಜಜ್ಜುತ್ತೀರಿ ಬಡವರ ಮುಖವನ್ನು ಯಾಕೆ ಹಿಂಡುತ್ತೀರಿ ಎಂದು ಕರ್ತನಾದ ಯೆಹೋವನು ಕೇಳುತ್ತಾನೆ'[5] ಎಂದು ವ್ಯಕ್ತ ಪಡಿಸುವುವರ ಜೊತೆಗೆ, 'ಅನ್ಯಾಯಪರ ಕಾನೂನುಗಳನ್ನು ಮಾಡಿ, ಹೊರಲಾಗದ ಆಜ್ಞೆಗಳನ್ನು ಹೊರಡಿಸಿ ಬಡವರನ್ನು ನ್ಯಾಯದಿಂದ ವಂಚಿತರನ್ನಾಗಿ ಮಾಡಿ, ನನ್ನ ಜನರಲ್ಲಿಯ ಅತ್ಯಂತ ನಿಸ್ಸಹಾಯಕರನ್ನು ಅವರ ಅಧಿಕಾರಗಳಿಂದ ವಂಚಿತರನ್ನಾಗಿ ಮಾಡಿ, ವಿಧವೆಯನ್ನು ಕೆಡಿಸಿ, ಅನಾಥರನ್ನು ಕೊಳ್ಳೆ ಹೊಡೆಯುವವರೆ, ನಿಮಗೆ ನಾಚಿಕೆಯಾಗಬೇಕು'[6] ಎಂದು ಸರಕಾರ ಕೂಡ ಬಡವರನ್ನು ಶೋಷಿಸುವುದನ್ನು ಖಂಡಿಸುತ್ತಾನೆ. ಬರಿ ಶ್ರೀಮಂತರನ್ನು ಖಂಡಿಸುವುದಕ್ಕಷ್ಟೇ ನೀಮಿತಗೊಳ್ಳದೇ, ಯೆಹೂದ್ಯ ಪ್ರವಾದಿಗಳು ಬಡವರ ಬಗ್ಗೆ ಕಾಳಜಿಯನ್ನೂ ವ್ಯಕ್ತ ಪಡಿಸುತ್ತಾರೆ. ದೇವರು ಮೋಸಸ್‌ಗೆ ಹೇಳುತ್ತಾನೆ, 'ನೀನು ಒಬ್ಬನ ಕಂಬಳಿಯನ್ನು ಅಡವು

4. ಅಮೋಸ್ 8 : 4—6
5. ಇಸ್ಸೈಯ 3 : 14—15
6. ಇಸ್ಸೈಯ 10 : 1—2

ಇಟ್ಟುಕೊಂಡರೆ ಸೂರ್ಯ ಮುಳುಗುವಷ್ಟರಲ್ಲಿ ಅದನ್ನು ಮರಳಿ ಕೊಡಬೇಕು, ಏಕೆಂದರೆ ಅವನಿಗೆ ಬೇರಾವ ಹೊದಿಕೆಯೂ ಇರುವುದಿಲ್ಲ,"[7] ಇದೇ ರೀತಿ ದೇವರು ಹೇಳಿಕೊಟ್ಟ ವಿಧಿ-ನಿಷೇಧಗಳನ್ನು ಹೇಳುವಾಗ ಮೋಸೆಸ್ 'ಏಳು ವರ್ಷಗಳು ಕಳೆದ ನಂತರ ನೀವು ಎಲ್ಲ ಸಾಲಗಳನ್ನು ಬಿಟ್ಟು ಕೊಡಬೇಕು'[8] ಎಂದು ಹೇಳುತ್ತಾನೆ. ಸಿರಾಕನ ಮಗ ಯೇಸೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ಕಾರ್ಮಿಕನನ್ನು ಅವನ ಕೂಲಿಯಿಂದ ವಂಚಿತಗೊಳಿಸುವವನು ರಕ್ತಕಾರುತ್ತಾನೆ'[9] ಎಂದು ಹೇಳುತ್ತಾನೆ.

ಯೇಸೂಕ್ರಿಸ್ತ ಕೂಡ ಶ್ರೀಮಂತರನ್ನು ನಿಂದಿಸಿದ. ಬಡವರ ಬಗ್ಗೆ ಕಾಳಜಿ ತೋರಿಸಿದ. ಶ್ರೀಮಂತರ ಬಗ್ಗೆ ಆತ, "ಐಶ್ವರ್ಯವಂತನು ದೇವರ ರಾಜ್ಯವನ್ನು ಸೇರುವುದು ಕಷ್ಟ. ಐಶ್ವರ್ಯವಂತನು ದೇವರ ರಾಜ್ಯವನ್ನು ಸೇರುವುದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವುದು ಸುಲಭ"[10] ಎಂದು ಹೇಳಿದ. "ನೀನು ಸಂಪೂರ್ಣನಾಗಬೇಕೆಂದಿದ್ದರೆ ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು"[11] ಎಂದು ಆತ ಶ್ರೀಮಂತ ಯುವಕನೊಬ್ಬನಿಗೆ ಉಪದೇಶ ಮಾಡಿದ. ಶ್ರೀಮಂತರಿಗೆ ಮರಣಾನಂತರ ನರಕ ಪ್ರಾಪ್ತಿಯಾಗುವುದೆಂದೂ, ಬಡವರು ದೇವರನ್ನು ಸೇರುವರೆಂದೂ ತನ್ನ ಶಿಷ್ಯರಿಗೆ ತಿಳಿಸಿ ಹೇಳಲು ಆತ ಲಾಜರಸನ ಕಥೆ ಹೇಳುತ್ತಾನೆ. ಯೇಸೂವಿನ ವಿಚಾರಗಳು ಸಹ ಬರಿ ಶ್ರೀಮಂತರನ್ನು ನಿಂದಿಸಿ[12] ಬಡವರ ಬಗ್ಗೆ ಕಾಳಜಿ ತೋರಿಸುವುದಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಆತ ಸಮಾನತೆಯನ್ನೂ ಬಯಸುತ್ತಾನೆ, ಹಾಗೂ ಆ ಸಮಾನತೆಯಲ್ಲಿ ಕೂಡಾ ನಿರ್ಗತಿಕರಿಗೆ ಪ್ರಾಶಸ್ತ್ಯ ಕೊಡುತ್ತಾನೆ ದೇವರ ರಾಜ್ಯವನ್ನು ವಿವರಿಸುತ್ತ ಆತ ಒಂದು ಕಥೆಯನ್ನು ಹೇಳುತ್ತಾನೆ. "ಒಬ್ಬ ಯಜಮಾನ, ... ತನ್ನ ದ್ರಾಕ್ಷಿತೋಟಕ್ಕೆ ಕೂಲಿ ಆಳುಗಳನ್ನು ಕರೆಯುವುದಕ್ಕೆ ಬೆಳಿಗ್ಗೆ ಹೊರಟನು. ಆಳಿಗೆ ದಿನಕ್ಕೆ ಒಂದು ಪಾವಲಿಯಂತೆ ಕೂಲಿ ಗೊತ್ತುಮಾಡಿ ಅವರನ್ನು ದ್ರಾಕ್ಷಿ ತೋಟಕ್ಕೆ ಕಳುಹಿಸಿದನು. ತರುವಾಯ ಸುಮಾರು ಒಂಬತ್ತು ಗಂಟೆಗೆ ಹೋಗಿ ಪೇಟೆಯಲ್ಲಿ ಸುಮ್ಮನೆ ನಿಂತಿದ್ದ ಇನ್ನೂ ಕೆಲವರನ್ನು ಕಂಡು "ನೀವೂ ಸಹ ನನ್ನ ದ್ರಾಕ್ಷಿ ತೋಟಕ್ಕೆ ಹೋಗಿರಿ; ನಿಮಗೆ ಸರಿಯಾದ ಕೂಲಿ ಕೊಡುತ್ತೇನೆ" ಅನ್ನಲು ಅವರೂ ತೋಟಕ್ಕೆ ಹೋದರು. ಅವನು ಮತ್ತೆ ಹನ್ನೆರಡು ಗಂಟೆ ಮತ್ತು ಮೂರು ಗಂಟೆಗೆ ಹೋಗಿ ಅದೇ ಪ್ರಕಾರ

---

7. ಎಕ್ಸೋಡಸ್ 22 : 26
8. ಡ್ಯುಟ್ರೊನೊಮಿ 15—1
9. ಎಕ್ಲಿಸಿಯಾಸ್ಟಿಕಸ್ : 34 : 22
10 ಮ್ಯಾಥ್ಯೂ : 19:24
11 ಮ್ಯಾಥ್ಯೂ : 19:21
12 ಲೂಕ್ : 16:19

ಮಾಡಿದನು. ಮತ್ತೇ ಸುಮಾರು ಸಾಯಂಕಾಲ ಐದು ಗಂಟೆಗೆ ಹೋಗಿ ಬೇರೆ ಕೆಲವರು ನಿಂತಿರುವುದನ್ನು ಕಂಡು ಅವರನ್ನು ದಿನವೆಲ್ಲಾ ಇಲ್ಲಿ ಯಾಕೆ ಸುಮ್ಮನೇ ನಿಂತಿದ್ದೀರಿ ಎಂದು ಕೇಳಲು ಅವರು ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ ಅಂದಾಗ ಅವನು ನೀವೂ ಸಹ ನನ್ನ ದ್ರಾಕ್ಷಿತೋಟಕ್ಕೆ ಹೋಗಿರಿ ಅಂದನು. ಸಂಜೆ ಹೊತ್ತಿಗೆ ದ್ರಾಕ್ಷಿತೋಟದ ಯಜಮಾನನು ತನ್ನ ಪಾರುಪತ್ಯಗಾರನಿಗೆ ಆ ಆಳುಗಳನ್ನು ಕರೆದು ಕೊನೆಗೆ ಬಂದವರನ್ನು ಮೊದಲು ಮಾಡಿಕೊಂಡು ಮೊದಲು ಬಂದವರ ತನಕ ಅವರಿಗೆ ಕೂಲಿಕೊಡು ಎಂದು ಹೇಳಿದನು. ಆಗ ಸಾಯಂಕಾಲ ಐದು ಗಂಟೆಗೆ ಬಂದವರಿಗೆ ಒಂದೊಂದು ಪಾವಲಿ ಸಿಕ್ಕಿತು. ತರುವಾಯ ಮೊದಲಿನವರು ತಮಗೆ ಹೆಚ್ಚು ದೊರೆಯುವುದೆಂದು ಭಾವಿಸಿದರು; ಆದರೆ ಇವರಿಗೆ ಸಹ ಒಂದೊಂದು ಪಾವಲಿಯೇ ಸಿಕ್ಕಿತು."[13] ಈ ಪ್ರಸಂಗ ಮಹಾತ್ಮಾ ಗಾಂಧಿ ಹೇಳುವ ಅಂತ್ಯೋದಯವನ್ನು ನೆನಪಿಗೆ ತರುತ್ತದೆ. ದೇವರು ತನ್ನನ್ನು ಭೂಮಿಗೆ ಕಳುಹಿಸಿದ ಉದ್ದೇಶವನ್ನು ವಿವರಿಸುತ್ತ ಯೇಸೂ "ಬಡವರಿಗೆ ಶುಭವಾರ್ತೆಯನ್ನು ಉಪದೇಶಿಸಲು... ಶೋಷಿತರನ್ನು ಮುಕ್ತಗೊಳಿಸಲು..."[14] ಎಂದು ಹೇಳುತ್ತಾನೆ.

ಈ ಸಮಾಜವಾದಿ ವಿಚಾರಗಳ ಪರಂಪರೆಯ ಪರಿಣಾಮವಾಗಿ ಮೊದಮೊದಲು ಹುಟ್ಟಿಕೊಂಡ ಕ್ರಿಸ್ತ ಚರ್ಚುಗಳಲ್ಲಿ ಸಮಾಜವಾದಿ ವ್ಯವಸ್ಥೆಯನ್ನೇ ಅನುಸರಿಸಲಾಯಿತು. ಈ ಚರ್ಚುಗಳಲ್ಲಿ "ಧರ್ಮ ಒಟ್ಟಿಗೆ ಸೇರಿಸಿದ ಎಲ್ಲಾ ಜನರೂ ಎಲ್ಲವನ್ನೂ ಸಾಮೂಹಿಕವಾಗಿ ಹೊಂದಿದ್ದರು"[15] ಎಂದು ಹೇಳಲಾಗಿದೆ. ಇನ್ನೊಂದು ಕಡೆ, "ಅವರೆಲ್ಲರನ್ನೂ ಹೆಚ್ಚಾಗಿ ಗೌರವಿಸಲಾಗುತ್ತಿತ್ತು. ಏಕೆಂದರೆ ಅವರಲ್ಲಿ ಯಾರೂ ಬಡವರಾಗಿರಲಿಲ್ಲ, ಏಕೆಂದರೆ ಅವರಲ್ಲಿ ಭೂಮಿ, ಮನೆ ಮೊದಲಾದ ಆಸ್ತಿ ಇರುವವರೆಲ್ಲ ಅವುಗಳನ್ನು ಮಾರಿ, ಬಂದ ಹಣವನ್ನು ಧರ್ಮಪ್ರವರ್ತಕರಿಗೆ ಕೊಡುತ್ತಿದ್ದರು, ಅದನ್ನು ನಂತರ ಅವಶ್ಯಕತೆ ಇದ್ದವರಿಗೆಲ್ಲ ಹಂಚಲಾಗುತ್ತಿತ್ತು",[16] ಎಂದು ಹೇಳಲಾಗಿದೆ.

ಬರಬರುತ್ತ ಕ್ರಿಸ್ತ ಚರ್ಚುಗಳು ಇಂತಹ ವಿಚಾರಗಳನ್ನು ತ್ಯಜಿಸಿ ಖಾಸಗಿ ಆಸ್ತಿಯ ರಕ್ಷಣೆಯ ಸಾಧನೆಗಳಾಗಿ ಮಾರ್ಪಟ್ಟಿದ್ದು ಒಂದು ದುರಂತ. "ಎಲ್ಲಾ ವಸ್ತುಗಳೂ ಸಾಮೂಹಿಕ ಒಡೆತನದಲ್ಲಿದ್ದರೆ ಕಳ್ಳತನವೆಂಬುದೇ ಉಳಿಯಲಾರದು. ಹಾಗಾದಲ್ಲಿ 'ಕಳ್ಳತನ ಮಾಡಬೇಡ' ಎಂಬ ಬೈಬಲ್ಲಿನ ಉಪದೇಶ ನಿರರ್ಥಕ

---

13 ಮ್ಯಾಥ್ಯೂ 20 : 1–11
14 ಲೂಕ 4 : 16–22
15 ಆ್ಯಕ್ಟ್ಸ್ ಆಫ್ ದ ಅಪೋಸ್ಸಲ್ಸ್ : 2:44
16 ಆ್ಯಕ್ಟ್ಸ್ ಆಫ್ ದ ಅಪೋಸ್ಸಲ್ಸ್ : 4:34

ವಾಗುತ್ತದೆ." ಎಂದು ಬಿಷಪ್ ಲ್ಯಾಟಿಮರ್ ವಾದಿಸುವ ಮಟ್ಟಕ್ಕೆ ಈ ಮಾರಂತ ಇಳಿಯಿತು ಎನ್ನುವುದು ವಿಷಾದಕರ.

ಹಿಂದೂ ಸಂಸ್ಕೃತಿಯಲ್ಲಿ ಕೂಡಾ ಇಂತಹ ವಿಚಾರಗಳು ಸಿಕ್ಕುತ್ತವೆ. ಆದರೆ ಹಿಂದೂ ಧಾರ್ಮಿಕ ಗ್ರಂಥಗಳು ಧಾರ್ಮಿಕ ಮಟ್ಟದಲ್ಲಿಯೇ ಉಳಿದುಹೋಗುತ್ತವೆ, ಶ್ರೀಮಂತಿಕೆಯನ್ನು ಖಂಡಿಸುವ ಬಡವರ ಬಗ್ಗೆ ಕಾಳಜಿ ತೋರಿಸುವ ಸಮಾನತೆಯ ಬಗ್ಗೆ ಚರ್ಚೆ ಮಾಡುವ ಭೌತಿಕ ಮಟ್ಟಕ್ಕೆ ಇಳಿಯುವುದಿಲ್ಲ. ಇಂಥ ಸಮಸ್ಯೆಗಳು ಹಿಂದೂ ಧರ್ಮಕ್ಕೆ ಮಹತ್ವಹೀನವಾಗುತ್ತವೆ. ಸಂಪತ್ತಿನ ಬಗ್ಗೆ, ಶ್ರೀಮಂತಿಕೆಯ ಬಗ್ಗೆ ಉದಾಸೀನತೆ ಇದೆಯೇ ಹೊರತು ಕೋಪವಿಲ್ಲ. ಉದಾಹರಣೆಗೆ ಕಠೋಪನಿಷತ್ತು "ನ ವಿತ್ತೇನ ತರ್ಪಣೀಯೋ ಮನುಷ್ಯಃ"[17] (ಸಂಪತ್ತಿನಿಂದ ಮನುಷ್ಯನಿಗೆ ತೃಪ್ತಿ ದೊರಕುವುದಿಲ್ಲ) ಎಂದು ಹೇಳುತ್ತದೆ. ಐಶ್ವರ್ಯವಂತ ಸ್ವರ್ಗ ಸೇರುವುದು ಕಷ್ಟ ಎಂದು ಯೇಸೂ ಹೇಳುವುದನ್ನು ನೆನಪಿಗೆ ತರುವಂತಹ ಒಂದು ಸಂದರ್ಭ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುತ್ತದೆ. ಯಾಜ್ಞವಲ್ಕ್ಯನ ಹೆಂಡತಿ ಮೈತ್ರೇಯಿ ತನ್ನ ಗಂಡನಿಗೆ, "ಸ್ವಾಮಿ, ಸಂಪದ್ಭರಿತ ಈ ಜಗತ್ತೇ ನನ್ನದಾದರೂ, ನಾನು ಅದರಿಂದ ಅಮರಳಾಗುತ್ತೇನೆಯೇ" ಎಂದು ಕೇಳಿದಾಗ, ಯಾಜ್ಞವಲ್ಕ್ಯ "ಇಲ್ಲ. ಐಶ್ವರ್ಯವುಳ್ಳವರ ಜೀವನದಂತೆ ನಿನ್ನ ಜೀವನವಾಗುತ್ತದೆಯೇ ಹೊರತು ಐಶ್ವರ್ಯದಿಂದಾಗಿ ಅಮರತ್ವ ದೊರೆಯದು"[18] ಎಂದು ಹೇಳುತ್ತಾನೆ. ಶ್ರೀಮಂತಯುವಕನೊಬ್ಬನಿಗೆ ತನ್ನ ಐಶ್ವರ್ಯವನ್ನು ಬಡವರಲ್ಲಿ ಹಂಚುವಂತೆ ಯೇಸೂ ಹೇಳಿದಂತೆಯೇ ಪ್ರಜಾಪತಿಯೂ ಹೇಳುತ್ತಾನೆ. ದೇವರು, ಮಾನವರು ಹಾಗೂ ದಾನವರು ಪ್ರಜಾಪತಿಯನ್ನು ಉಪದೇಶ ನೀಡಲು ಕೇಳಿದಾಗ ಅತ 'ದ' ಎಂದು ಹೇಳುತ್ತಾನೆ. ದೇವರು ಇದನ್ನು 'ದಮ್ಯತ' ಎಂದೂ, ಮಾನವರು 'ದತ್ತ' ಎಂದೂ, ದಾನವರು 'ದಯಧ್ವಂ' ಎಂದೂ ಅರ್ಥಮಾಡಿಕೊಂಡಾಗ ಈ ಅರ್ಥಗಳು ಸರಿ ಎಂದೂ ಪ್ರಜಾಪತಿ ಹೇಳುತ್ತಾನೆ.[19] ಇಲ್ಲಿ ದೇವರು, ಮಾನವರು ಹಾಗೂ ದಾನವರು ಎಂದರೆ ಮನೋಭಾವವನ್ನು ಆಧರಿಸಿ ಮಾನವರಲ್ಲಿಯೇ ಮಾಡಲಾದ ಪ್ರಭೇದಗಳು ಅಥವಾ ಮಾನವನಲ್ಲಿಯ ಮೂರು ಮನೋಧರ್ಮಗಳು. ಆದುದರಿಂದ ಇಲ್ಲಿ 'ಮಾನವ' ಎಂದರೆ ಭೌತಿಕ ಜಗತ್ತಿನ ಬಗ್ಗೆ, ಐಶ್ವರ್ಯದ ಬಗ್ಗೆ ಮೋಹ ಉಳ್ಳವನು,

---

17 1 : 1 : 27

18 "ಸಾ ಹೋವಾಚ ಮೈತ್ರೇಯೀ : ಯನ್ನು ಮ ಇಯಂ ಭಗೋಃ ಸರ್ವಾ ಪೃಥಿವೀ ವಿತ್ತೇನ ಪೂರ್ಣಾ ಸ್ಯಾತ್ಕಥಾ ತೇನಮೃತಾ ಸ್ಯಾಮಿತಿ. ನೇತಿ ಹೋವಾಚ ಯಾಜ್ಞವಲ್ಕ್ಯ : ಯಥೈವೋಪಕರಣವತಾಂ ಜೀವಿತಂ ತಥೈವ ತೆ ಜೀವಿತಂ ಸ್ಯಾದಮೃತತ್ವಸ್ಯ ತು ನಾ ಶಾಸ್ತಿ ವಿತ್ತೇನೇತಿ" 4 : 5 : 3

19 ಬೃಹದಾರಣ್ಯಕ ಉಪನಿಷತ್ತು 5 : 2 : 1, 2, 3

ಅಥವಾ ಮಾನವನ ಭೌತಿಕ ಜಗತ್ತಿನ, ಐಶ್ವರ್ಯದ ಬಗೆಗಿನ ಮೋಹ ಎಂದೇ ಅರ್ಥ. ಆದುದರಿಂದ ಪ್ರಜಾಪತಿ 'ಮಾನವ'ನಿಗೆ 'ಕೊಡು' ಎಂದು ಹೇಳುತ್ತಾನೆ. ಈ ಶ್ಲೋಕದ ಮೇಲೆ ಭಾಷ್ಯ ಬರೆಯುತ್ತ ಶಂಕರ, "ಸ್ವಭಾವದಿಂದ ನೀವು ಲೋಭಿಗಳು, ಆದುದರಿಂದ ಸಾಧ್ಯವಿದ್ದಷ್ಟು ನಿಮ್ಮ ಸಂಪತ್ತನ್ನು ಹಂಚಿ"[20] ಎಂದು ಹೇಳುತ್ತಾನೆ. ಬೈಬಲ್ಲಿನ ಲಾಝರಸ್‌ನ ಕಥೆಯಲ್ಲಿ ಲಾಝರಸ್ ಸ್ವರ್ಗಕ್ಕೆ ಹೋದರೆ, ಶ್ರೀಮಂತ ನರಕಕ್ಕೆ ಹೋಗುತ್ತಾನೆ. ಇದೇ ರೀತಿ ಛಾಂದೋಗ್ಯ ಉಪನಿಷತ್ತಿನ ಒಂದು ಕಥೆಯಲ್ಲಿ ಎಲ್ಲಾ ಕಡೆ ತಾನು ಕೊಟ್ಟ ಆಹಾರದಿಂದಾಗಿ ಬಹಳ ಜನ ಬದುಕುತ್ತಾರೆ ಎಂದು ಗರ್ವ ಪಡುತ್ತಿದ್ದ ಜನಶ್ರುತಿ ರಾಜ, ಕೊನೆಗೆ ಶೂದ್ರ ಹಾಗೂ ದರಿದ್ರನಾದ ರೈತನ ಹತ್ತಿರ ಜ್ಞಾನಾರ್ಜನೆಗಾಗಿ ಹೋಗಬೇಕಾಗುತ್ತದೆ.[21]

ವೈದಿಕ ಸಾಹಿತ್ಯದಲ್ಲಿ ಇಂತಹ ವಿಚಾರಗಳು ವಿರಳವಾಗಿದ್ದರೂ ಪ್ರಾಚೀನ ಭಾರತದಲ್ಲಿ ಪ್ರಚಲಿತವಾಗಿದ್ದ ಆಸ್ತಿಯ ಸಂಬಂಧಗಳಲ್ಲಿ ಸಮಾಜವಾದಿ ವಿಚಾರಗಳಿಗೆ ಹೆಚ್ಚಿನ ಬೆಂಬಲ ದೊರೆಯುತ್ತದೆ. ವೇದಗಳ ಯುಗದಲ್ಲಿ ಆಸ್ತಿಯ ಒಡೆತನದ ಬಗ್ಗೆ ಚರ್ಚಿಸುತ್ತ ವಿ. ಎಮ್. ಆಪ್ಟೆಯವರು "ಸಾಗುವಳಿಯ ಉದ್ದೇಶಕ್ಕಾಗಿ, ಭೂಮಿಯಲ್ಲಿ ವೈಯ್ಯಕ್ತಿಕ ಆಸ್ತಿ ಅಥವಾ ವೈಯ್ಯಕ್ತಿಕ ಒಡೆತನವನ್ನು ಮಾನ್ಯ ಮಾಡಲಾಗಿತ್ತು. ಆದರೆ ಭೂಮಿಯು ಈ ವೈಯ್ಯಕ್ತಿಕ ಒಡೆತನ ಕಾನೂನಿನಲ್ಲಿಲ್ಲ ದಿದ್ದರೂ, ವಾಸ್ತವದಲ್ಲಿ ಹಾಗೂ ನಿತ್ಯಜೀವನದಲ್ಲಿ ಒಬ್ಬ ವ್ಯಕ್ತಿಯ ಒಡೆತನವಾಗಿರದೇ ಒಂದು ಪರಿವಾರದ ಒಡೆತನವಾಗಿತ್ತು."[22] ಎಂದು ಹೇಳುತ್ತಾರೆ. ಈ ಪರಿವಾರಗಳು ಹಲವಾರು ತಲೆಮಾರುಗಳವರೆಗೆ ಜಂಟಿಯಾಗಿಯೇ ಉಳಿಯುತ್ತಿದ್ದುದರಿಂದ ಇವು ಗಳಲ್ಲಿ ನೂರಾರು ಸದಸ್ಯರಿರುತ್ತಿದ್ದರು. "ಹಲವಾರು ತಲೆಮಾರುಗಳವರೆಗೆ ಆಸ್ತಿಯೂ ಅವಿಭಕ್ತವಾಗಿಯೇ ಉಳಿಯುತ್ತಿತ್ತು."[23] ಇಂತಹ ಒಂದೊಂದು ಪರಿವಾರಗಳೇ ಒಂದೊಂದು ಹಳ್ಳಿಗಳಾಗುತ್ತಿದ್ದವು. ಈ ಬಗ್ಗೆ ಭಾರತದ ಇತಿಹಾಸಕಾರ ಮೌಂಟಸ್ಟು ಆರ್ಟ ಎಲ್ಫಿನ್‌ಸ್ಟನ್ "ಹಳ್ಳಿಯ ಭೂಮಾಲಿಕರೆಲ್ಲ ಹಳ್ಳಿಗಳನ್ನು ಕಟ್ಟಿದ ಒಬ್ಬ ಅಥವಾ ಹಲವು ವ್ಯಕ್ತಿಗಳಿಂದ ಹುಟ್ಟಿಬಂದವರು ಎಂದು ನಂಬಲಾಗುತ್ತದೆ. ಭೂಮಾಲಿಕರ ಹಕ್ಕುಗಳು ಸಾಮೂಹಿಕವಾಗಿರುತ್ತವೆ"[24] ಎನ್ನುತ್ತಾನೆ. ಅವನ ಈ ವಾದವನ್ನು ಪ್ರಾಚೀನ ಕಾನೂನಿನ ಅಧ್ಯಯನ ನಡೆಸಿದ ಹೆನ್ರಿ ಮೇನ್ ಒಪ್ಪಿಕೊಳ್ಳು ತ್ತಾನೆ. "ಉತ್ತರ ಭಾರತದಲ್ಲಿ ಹಳ್ಳಿಯ ಸಮಾಜ ರಕ್ತಸಂಬಂಧಿಗಳ ಒಟ್ಟುಗೂಡು

---

20 "ಸ್ವಭಾವತೋ ಲುಬ್ಧಾ ಯೂಯಂ, ಅತೋ ಯಥಾಶಕ್ತ್ಯಾ ಸಂವಿಭಜತ"

21 4 : 1–5

22 ದ ವೇದಿಕ್ ಏಜ (ಭಾರತೀಯ ವಿದ್ಯಾ ಭವನ) ಪುಟ 438-9

23 ಏನ್‌ಶಿಯಂಟ ಲಾ : ಹೆನ್ರಿ ಮೇನ್, ಪುಟ 154

24 ಹಿಸ್ಟರಿ ಆಫ್ ಇಂಡಿಯಾ, ಪುಟ 126

ವಿಕೆಯಿಂದ ನಿರ್ಮಾಣವಾಯಿತು. ದಕ್ಷಿಣ ಭಾರತದಲ್ಲಿ ಒಂದು ಪರಿವಾರದಿಂದಲ್ಲ ದಿದ್ದರೂ, ಎರಡು ಅಥವ ಹೆಚ್ಚು ಪರಿವಾರಗಳಿಂದ ನಿರ್ಮಿತವಾದ ಹಳ್ಳಿಗಳು ಸಿಕ್ಕುತ್ತವೆ''[25] ಎಂದು ಹೆನ್ರಿ ಮೇನ್ ಹೇಳುತ್ತಾನೆ. ಆದುದರಿಂದ ಈ ಹಳ್ಳಿಗಳು "ಜಂಟಿ ಒಡೆಯರ ಗುಂಪು''ಗಳಾಗುತ್ತವೆ. ಒಂದೇ ಪರಿವಾರದಿಂದ ನಿರ್ಮಾಣಗೊಂಡ ಇಂತಹ ಹಳ್ಳಿಗಳಲ್ಲಿ ಅಥವಾ ಪರಿವಾರದಲ್ಲಿ ರಕ್ತಸಂಬಂಧಿಗಳಿಗೆ ಮಾತ್ರ ಪ್ರವೇಶ ವಿದ್ದರೂ, ಎಲ್ಲರ ಅನುಮತಿಯು ಮೇರೆಗೆ ಆಸ್ತಿಯು ಮಾರಾಟದ ಮೂಲಕ ಹೊರಗಿನವರನ್ನೂ ಸೇರಿಸಿಕೊಳ್ಳಲಾಗುತ್ತಿತ್ತು. ಹೆಕ್ಸಥೌಸೆನ್ ನಡೆಸಿದ ಸಂಶೋಧನೆ ಯನ್ನು ಪ್ರಸ್ತಾಪಿಸುತ್ತ ಹೆನ್ರಿ ಮೇನ್ ಭಾರತದ ಹಳ್ಳಿಗಳನ್ನು ಸಾಮೂಹಿಕ ಒಡೆತನ ಪ್ರಚಲಿತದಲ್ಲಿದ್ದ ರಶಿಯನ್ ಹಳ್ಳಿಗಳೊಡನೆ ಹೋಲಿಸುತ್ತಾನೆ.[26] ಆದರೆ ಆಸ್ತಿಯು ಈ ಸಾಮೂಹಿಕ ಒಡೆತನ ಬರಿ ರಕ್ತಸಂಬಂಧಿಗಳಿಗೆ ಮಾತ್ರವೇ ಸೀಮಿತ ವಾಗಿದ್ದುದರಿಂದ ಅಥವಾ ಅಪರಿಚಿತರ ಗುಂಪುಗಳಲ್ಲಿ ಸಾಮೂಹಿಕ ಒಡೆತನ ಇಲ್ಲ ದಿದ್ದುದರಿಂದ (ಬಹುಶಃ ಅಂತಹ ಪ್ರಸಂಗಗಳು ಬಹಳ ಕಡಿಮೆ ಇದ್ದಿರಬೇಕು) ಬಹುಶಃ ವಿ. ಎಮ್. ಆಪ್ಟೆಯವರು ''ಒಂದು ಗುಂಪಿನ ಒಡೆತನ'' ಅಥವಾ ಸಸಾಮೂಹಿಕ ಸಾಗುವಳಿ' ಎನ್ನುವ ಅರ್ಥದಲ್ಲಿ ಸಾಮೂಹಿಕ ಆಸ್ತಿ ಅಸ್ತಿತ್ವದಲ್ಲಿರ ಲಿಲ್ಲ[27], ಎನ್ನುತ್ತಾರೆ.

ಗ್ರೀಕ್, ಜೆಹೂದ್ಯ-ಕ್ರಿಸ್ತ ಹಾಗೂ ಹಿಂದೂ ಪರಂಪರೆಗಳಲ್ಲಿ ಮೇಲೆ ಹೇಳಿದ ಮಾಜವಾದಿ ವಿಚಾರಗಳಿಗೆ ತದ್ವಿರುದ್ಧವಾದ ವಿಚಾರಗಳೂಕ್ತ ವ್ಯವಾಗಿರಬಹುದು. ಇವಕ್ಕೆ ಕಾರಣ ಈ ಪರಂಪರೆಯ ಯಾರೂ, ಅವನು ಪ್ಲೆಟೋ ಅಥವಾ ಇಸೈಯಸೇ ಆಗಿರಲಿ, ಕ್ರಿಸ್ತ ಅಥವಾ ಯಾಜ್ಞವಲ್ಕ್ಯನೇ ಆಗಿರಲಿ, ಸಮಾಜವಾದಿ ವಿಚಾರಗಳ ಒಂದು ಸುವ್ಯಸ್ಥಿತ ಚೌಕಟ್ಟನ್ನು ನಿರ್ಮಿಸಲು ಪ್ರಯತ್ನಿಸಲಿಲ್ಲ, ಅಂದಿನ ವಾಸ್ತವಿಕತೆಯ ಬಗ್ಗೆ ಧರ್ಮದ ಅಥವಾ ತತ್ವಶಾಸ್ತ್ರದ ಚೌಕಟ್ಟಿನೊಳಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಆದರೆ ಇಂತಹ ಸಮಾಜವಾದಿ ವಿಚಾರಗಳೂ ಅಂದು ವ್ಯಕ್ತವಾದವು ಎಂಬ ಅಂಶವನ್ನು ಮಾತ್ರ ಅಲ್ಲಗಳೆಯಲಾಗದು.

---

25 ಎನ್‌ಶಿಯಂಟ ಲಾ : ಪುಟ 155

26 ಎನ್‌ಶಿಯಂಟ್ ಲಾ : ಪುಟ 157

27 ದ ವೇದಿಕ್ ಏಜ : ಪುಟ 139

ಯೋಜನಾಯುಗದಲ್ಲಿ ರಾಜ್ಯಸ್ವಾಯತ್ತತೆಯುಂಟೆ ?

ಡಿ. ಟಿ. ನಂಜೇಗೌಡ

ಯೋಜನೆ ಮತ್ತು ಸಾಮಾಜಿಕ ಪ್ರಗತಿಗಳಿಗೆ ಅನಿವಾರ್ಯವಾದ ಸಾಮಾಜಿ ಕಾರ್ಥಿಕ ಮತ್ತು ರಾಜಕೀಯ ಅಂಶಗಳ ಸುಮಧುರ ಸಾಮರಸ್ಯವನ್ನು ಸಾಧಿಸಲು ಮೂರು ದಶಕಗಳಿಗೂ ದೀರ್ಘಕಾಲದ ಯೋಜನಾಯುಗದ ಅನುಭವದ ನಂತರವೂ ಅಧಿಕಾರಸ್ಥರು ಸಮರ್ಥರಾಗಿಲ್ಲ. ಯೋಜನೆಯ ಮಾರ್ಗದಲ್ಲಿ ಎದುರಾಗುವ ಬದಲಾವಣೆಯ ಸನ್ನಿವೇಶಗಳು, ಹಾಗೂ ಯೋಜನಾಬದ್ಧ ಪ್ರಗತಿಯಿಂದ ಉಂಟಾಗುವ ಸಮಸ್ಯೆಗಳನ್ನು ಎದುರಿಸಲು ಬೇಕಾಗುವ ರಾಜಕೀಯ ಮನೋಸ್ಥೈರ್ಯದ ಅಭಾವ ಈ ಎರಡೂ ಸಂಗತಿಗಳು ಅಂಶತಃ ಇದಕ್ಕೆ ಕಾರಣೀಭೂತವಾಗಿವೆ. ಈ ಸಮಸ್ಯೆಗಳ ಜಟಿಲತೆ ಮತ್ತು ಘನತೆಗಳು ಭಾರತದಲ್ಲಿ ಇನ್ನಷ್ಟು ಹೆಚ್ಚು ; ಇದಕ್ಕೆ ಕಾರಣ ನಮ್ಮಲ್ಲಿ ಯೋಜನೆಗಳನ್ನು ನಮ್ಮ ಪ್ರಜಾತಂತ್ರದ ಚೌಕಟ್ಟಿನಲ್ಲಿ ಹೊಂದಿಸಬೇಕಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿಖರವಾದ ಮತ್ತು ಖಚಿತವಾಗಿ ಗುರುತಿಸಲಾದ ಮೇರೆಗಳುಳ್ಳ ವಿಧಾನ ಅಥವಾ ಶೈಲಿಯನ್ನು ಯೋಜನೆಯ ವಿಚಾರದಲ್ಲಿ ರೂಪಿಸುವುದು ಸಾಧ್ಯವಿಲ್ಲ. ಹೀಗಿದ್ದರೂ ನಮ್ಮ ಯೋಜನೆಗಳ ಯಶಸ್ಸು ಬಹುಮಟ್ಟಿಗೆ ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧಗಳ ಕುರಿತು ರೂಢವಾದ ಹಿತಕರ ಸಂಪ್ರದಾಯಗಳ ಮೇಲೆ ಅವಲಂಬಿತವಾಗಿದೆಯೆಂಬುದು ನಮಗೆ ಅನುಭವ ವೇದ್ಯವಾಗಿದೆ. ಆದರೆ ಇಂಥ ಹಿತಕರ ಸಂಪ್ರದಾಯಗಳು ಇನ್ನೂ ನಮ್ಮಲ್ಲಿ ಮೂಡಿ ಬಂದಿಲ್ಲವೆಂಬುದು ದುರ್ದೈವದ ಸಂಗತಿ.

1967ರ ವರೆಗೂ ಕಾಂಗ್ರೆಸ್ ಪಕ್ಷಕ್ಕೆ ಕೇಂದ್ರದಲ್ಲೂ ರಾಜ್ಯಗಳಲ್ಲೂ ಏಕ ಪಕ್ಷದ ಅಖಂಡ ಆಡಳಿತವನ್ನು ನಡೆಸುವ ಸವಲತ್ತು ದೊರೆತಿತ್ತು. ಆದರೆ 1967, ವಿಶೇಷತಃ 1977ರ ಚುನಾವಣೆಗಳ ನಂತರ ರಾಜ್ಯಗಳಲ್ಲೂ ಕೇಂದ್ರದಲ್ಲೂ ಅಸ್ಥಿರತೆ ಮೂಡಿ ಬಂದಿದೆ. ಇದಕ್ಕೆ ಕಾರಣ ಎರಡೂ ಹಂತಗಳಲ್ಲೂ ವಿವಿಧ ರಾಜಕೀಯ ಛಾಯೆಗಳ ಸರಕಾರಗಳು ಅಧಿಕಾರಕ್ಕೆ ಬಂದುದು ಮತ್ತು ತಮ್ಮ ಅಧಿಕಾರಾವಧಿಯಲ್ಲಿ ಸದಾ ಒಳಜಗಳಗಳ ಪಿಡುಗಿಗೆ ಅವು ತುತ್ತಾದುದು. ಉದ್ದಕ್ಕೂ ರಾಜ್ಯ ಮತ್ತು ಕೇಂದ್ರಗಳ ನಡುವೆ ಬೆಳೆದು ಬಂದಿದ್ದ ಹಿತಕರ ಸಂಬಂಧಗಳಿಗೆ ಇದರಿಂದ ಹಾನಿಯಾಗುತ್ತಿದೆಯಲ್ಲದೆ ಕೆಲಮಟ್ಟಿಗೆ ದೇಶದ ಆರ್ಥಿಕ ಪ್ರಗತಿಗೂ ಇದರಿಂದ

ತೊಡಕಾಗಿದೆ. ಇದರಿಂದ ಆರ್ಥಿಕ ಪ್ರಗತಿಯ ಗುರಿಗಿಂತ ರಾಜಕೀಯ ಸ್ವಾರ್ಥಕ್ಕೆ ದೇಶದಲ್ಲಿ ಮೇಲುಗೈಯಾಗಿದೆ. ಈ ಹಿಡುಗಿನಿಂದ ತಮ್ಮ ಆರ್ಥಿಕಪ್ರಗತಿಯನ್ನು ಸಾಧಿಸುವ ನೆಪದಲ್ಲಿ ಪ್ರಾಂತೀಯ ಸ್ವಾಯತ್ತತೆಯ ಕೂಗನ್ನು ಕೆಲವು ಪ್ರಾಂತಗಳು ಹಾಕುತ್ತಿವೆ. ಈಗಿನ ಪರಿಸ್ಥಿತಿಯಲ್ಲಿ ಕೇಂದ್ರ-ರಾಜ್ಯಗಳ ನಡುವೆ ಪರಿಣಾಮಕಾರೀ ಸಹಕಾರ ಮತ್ತು ಹೊಂದಾಣಿಕೆಗಳು ಗತಕಾಲದ ಕತೆಗಳಾಗಿ ಬಿಟ್ಟಿವೆ. ಇಂದಿನ ಈ ನಿರಾಶೆಯ ವಾತಾವರಣ ಎಂದಿಗೂ ಇರಲಾರದೆಂದು ನಾವು ಆಶಿಸೋಣ. ಆದರೆ ಕೇಂದ್ರ ಮತ್ತು ರಾಜ್ಯಗಳ ಮಟ್ಟದಲ್ಲಿ ಈವರೆಗೆ ಇರುವ ಪರಿಸ್ಥಿತಿಯಿಂದ ಯೋಜನೆಗಳ ಮೇಲೆ ಪ್ರತಿಕೂಲ ಪರಿಣಾಮವಾಗಿದೆ. ರಾಷ್ಟ್ರೀಯಹಿತವನ್ನು ಗಮನಿಸಿ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಕೇಂದ್ರ ಸರಕಾರವು ಹಿಂದೆ ಮುಂದೆ ನೋಡಬೇಕಾದ ಸಂದಿಗ್ಧ ಸ್ಥಿತಿ ಬಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವ ಪ್ರಶ್ನೆಯನ್ನು ನಾವು ಕೂಲಂಕಷವಾಗಿ ಪರಿಶೀಲಿಸಬೇಕಾಗಿದೆ. ನಮ್ಮ ಆರ್ಥಿಕ ಪ್ರಗತಿಯನ್ನು ತೀವ್ರತರವಾಗಿ ಸಾಧಿಸಲು ಕೇಂದ್ರ-ರಾಜ್ಯಗಳ ನಡುವಣ ಸಹಕಾರ ಯಾವ ಪ್ರಮಾಣದಲ್ಲಿ ಇರಬೇಕು, ಎಂದೂ ಯೋಚಿಸಬೇಕಾಗಿದೆ.

ಮೇಲೆ ಎತ್ತಿದ ಪ್ರಶ್ನೆಗಳು ವಿವಾದಾಸ್ಪದವಾದುವುಗಳು. ಆದರೆ ಯೋಜನಾ ಚಟುವಟಿಕೆಯು ಫಲಪ್ರದವಾಗಬೇಕಾದರೆ ಕೆಲಮಟ್ಟಿಗೆ ಕೇಂದ್ರೀಕೃತ ಅಧಿಕಾರ ಅನಿವಾರ್ಯವೆಂದು ಯೋಜನಾ ಚಟುವಟಿಕೆಯ ಇತಿಹಾಸ ನಮಗೆ ತಿಳಿಸಿ ಹೇಳುತ್ತದೆ. ಪ್ರಗತಿಗೆ ಅತಿ ಅವಶ್ಯವಾದ ಸೂತ್ರವೆಂದರೆ 'ಬಾಳು, ಬಾಳಗೊಡು' ಎಂಬುದು ಎಂಬ ಸಂಗತಿ ಈಗ ಸರ್ವಮಾನ್ಯವಾಗುತ್ತಲಿದೆ. ಆರ್ಥಿಕ ಪ್ರಗತಿಗೆ ಬೇಕಾದ ಈ ತಳಹದಿಯ ವಿಚಾರದಲ್ಲಿ ನಮ್ಮ ದೇಶವಷ್ಟೇ ಒಂದು ಅಪವಾದವಾಗುವಂತಿಲ್ಲ. ಆದರೆ ಇಂಥ ಸೂತ್ರವನ್ನು ಅನುಸರಿಸುವಾಗ ನಮ್ಮ ದೇಶದಲ್ಲಿ ಸ್ವೀಕೃತವಾಗಿರುವ ಪ್ರಜಾತಾಂತ್ರಿಕ ನಿಯಮಗಳಿಗೆ ಅದು ಹೊಂದಿಕೊಳ್ಳಬೇಕು, ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನೇ ಕುರಿತು ಚಿಂತಿಸಲಾಗಿತ್ತು. "ನಮ್ಮ ಸಂವಿಧಾನದಂತೆ ಭಾರತವು ಒಂದು ಒಕ್ಕೂಟವಾಗಿ ಸಂಘಟಿತವಾಗಿದ್ದು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ತಮ್ಮದೇ ಕಾರ್ಯವಲಯಗಳನ್ನು ನಿರ್ದೇಶಿಸಲಾಗಿದೆ. ಕೆಲವೊಂದು ಇಲಾಖೆಗಳು ಉಭಯ ಸಾಮಾನ್ಯವಾಗಿದ್ದು ಇಲ್ಲಿ ಕೇಂದ್ರವು ಸಾಮರಸ್ಯದಿಂದ ವರ್ತಿಸುವುದು ಅವಶ್ಯ", ಎಂದು ಅಲ್ಲಿ ಹೇಳಲಾಗಿತ್ತು. ಯೋಜನಾ ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಕಾರ್ಯಾಚರಣೆಗೆ ತರುವ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯಗಳೆರಡೂ ಮುಂಚೂಣಿಯಲ್ಲಿದ್ದು ಅವು ಒಂದಾಗಿ ದುಡಿಯಬೇಕಾಗುತ್ತದೆ. ಆದರೆ ಪ್ರಥಮ ಯೋಜನೆಯ ಆರಂಭದಲ್ಲಿ ಹಮ್ಮಿಕೊಂಡಿದ್ದ ಈ ಸಾಮರಸ್ಯದ ಕಲ್ಪನೆ ಇಂದಿನ ರಾಜಕೀಯ ಹಾಗೂ ಆರ್ಥಿಕ ಪರಿಸರದಲ್ಲಿ ಎಷ್ಟರ

ಮಟ್ಟಿಗೆ ವಾಸ್ತವ, ಎಂಬುದು ಈಗಿನ ಮುಖ್ಯ ಪ್ರಶ್ನೆ. ರಾಜ್ಯಗಳು ಮತ್ತು ಕೇಂದ್ರದ ನಡುವೆ ಇಂದಿರುವ ಸಂಬಂಧದ ಸ್ವರೂಪವೇನು ಎಂಬ ಸಮಗ್ರ ಅಧ್ಯಯನದಲ್ಲೇ ಈ ಪ್ರಶ್ನೆಯ ಉತ್ತರ ಅಡಗಿದೆ. ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಯೋಜನಾ ಚಟುವಟಿಕೆಗಳನ್ನು ಕಾರ್ಯಾಚರಣೆಗೆ ತರುವ ಜವಾಬ್ದಾರಿ ಹೊಂದಿರುವ ಅನೇಕಾನೇಕ ಸಂಸ್ಥೆ ಸಿಬ್ಬಂದಿಗಳ ನಡುವೆ ಅಧಿಕಾಧಿಕ ಸಹಕಾರವನ್ನು ಅಪೇಕ್ಷಿಸುವ ಯೋಜನೆಗಳ ವಿವಿಧ ಮುಖಗಳ ಪರಿಶೀಲನೆ ಇಲ್ಲಿ ಆಗಬೇಕಾಗಿದೆ.

ಯೋಜನಾ ಆಯೋಗ ಮತ್ತು ಕೇಂದ್ರ ಸರಕಾರ ಈ ನಡುವೆ ತಕ್ಕಮಟ್ಟಿಗೆ ಸಮನ್ವಯವಿದ್ದರೂ ಯೋಜನಾ ಕಾರ್ಯಕ್ರಮಗಳ ರೂಪಿಸುವಿಕೆ ಮತ್ತು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಇದೇ ಮಟ್ಟದ ಹೊಂದಾಣಿಕೆ ರಾಜ್ಯಗಳು ಮತ್ತು ಕೇಂದ್ರದ ನಡುವೆ ಇರದೇ ಇರುವುದು ಭಾರತೀಯ ಆಡಳಿತ ವ್ಯವಸ್ಥೆಯ ವೈಚಿತ್ರ್ಯ. ಇದರಿಂದ ಆಧಾರಿತ ಯೋಜನೆಯ ವ್ಯವಸ್ಥೆಯ ಬುಡಕ್ಕೇ ಕೊಡಲಿ ಏಟು ಬೀಳುತ್ತಿದೆ. "ಧೋರಣೆಗಳ ಪೂರ್ಣ ಸಮನ್ವಯ ಮತ್ತು ಸಕಾಲಿಕ ಸಂಕಲಿತ ಕ್ರಮ ಇವುಗಳು ಇರದೇ ಇದ್ದಲ್ಲಿ ಯೋಜನಾಯತ್ನಗಳ ಪೋಲು ಇಲ್ಲವೇ ತಪ್ಪುದಾರಿ ಹಿಡಿಯುವಿಕೆಗಳಿಗೆ ಅವಕಾಶವಿದ್ದು ಇದರ ಪರಿಣಾಮವು ಯಾವುದೇ ಒಂದು ಅಧಿಕಾರಕೇಂದ್ರದ ಹಿಡಿತಕ್ಕೆ ಮೀರುವ ಸ್ಥಿತಿ ಮುಟ್ಟುವಂತಾಗಬಹುದು; ಇದರಿಂದ ಕೇಂದ್ರ ಸರಕಾರದ ಜವಾಬ್ದಾರಿ ಹೆಚ್ಚಿನದೆಂದು 'ಇಲ್ಲಿ ಮಾನ್ಯಮಾಡಬೇಕಾಗುವುದು", ಎಂದು "ಪಂಚವಾರ್ಷಿಕ ಯೋಜನೆಯ ಕುರಿತು ವರದಿ"ಯಲ್ಲಿ ಇಂಥ ಪರಿಸ್ಥಿತಿಯನ್ನು ನಿರೀಕ್ಷಿಸಿ ಹೇಳಲಾಗಿದೆ. ಯೋಜನಾ ಕಾರ್ಯಕ್ರಮಗಳ ಫಲಪ್ರದ ಕಾರ್ಯಾಚರಣೆಯ ದೃಷ್ಟಿಯಿಂದ ಅವಶ್ಯವಿದ್ದಲ್ಲಿ ಕೇಂದ್ರವು ಹೆಚ್ಚಿನ ಅಧಿಕಾರವನ್ನು ಚಲಾಯಿಸಬಹುದು, ಎಂಬುದಾಗಿ ಇಲ್ಲಿ ಖಚಿತ ನಿರೂಪಣೆ ಇದೆ. ಆದರೆ ಇಡೀ ದೇಶದಲ್ಲಿನ ಯೋಜನಾ ನೀತಿಗಳ ಪರಿಣಾಮಕಾರೀ ಸುಸಂಕಲನದ ದೃಷ್ಟಿಯಿಂದ ಕೇಂದ್ರವು ಹೆಚ್ಚಿನ ಅಧಿಕಾರ ಚಲಾಯಿಸುವುದನ್ನು ರಾಜ್ಯಸರಕಾರಗಳು ಸಹಿಸಬಲ್ಲವೆ?

ಕೇಂದ್ರದ ನಡಾವಳಿಯ ಬಗ್ಗೆ ನಿಷ್ಕ್ರಿಯ ಪ್ರೇಕ್ಷಕರಾಗಿರಲು ರಾಜ್ಯಗಳು ಒಪ್ಪುತ್ತಿಲ್ಲವೆಂದು ಅನುಭವ ವೇದ್ಯ. ರಾಜ್ಯಗಳು ತಮ್ಮ ಹಕ್ಕುಗಳ ಪ್ರಜ್ಞೆ ಹೊಂದಿದ್ದು ಅವು ಈ ಬಗ್ಗೆ ಕೂಗಾಡಲಾರಂಭಿಸಿವೆ; ಕೇಂದ್ರವು ರಾಜ್ಯಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪಮಾಡುವಲ್ಲಿ ಮಿತಿ ಹಾಕಲು ಅವು ಒತ್ತಾಯ ತರುತ್ತಿವೆ. ಒಂದು ತೀರ ಹೊಸ ಒಕ್ಕೂಟರಾಜ್ಯದಲ್ಲಿನ ಭಿನ್ನ ಭಿನ್ನ ರಾಜಕೀಯ, ಆಡಳಿತಾತ್ಮಕ ಮತ್ತು ಸಾಮಾಜಿಕ ಹಿತಾಸಕ್ತಿಗಳುಳ್ಳ ಪ್ರದೇಶಗಳು ಎದುರಿಸುವ ಪರಿಸ್ಥಿತಿಗೆ ಅನುಗುಣವಾದ ಪರಿಸ್ಥಿತಿ ಈಗ ನಮ್ಮ ಒಕ್ಕೂಟದಲ್ಲಿ ಮೂಡಿಬಂದಂತೆ ಆಗಿದೆ. ಒಂದು ಆಧಾರಿತ ಘಟಕಕ್ಕೆ ಹೊಂದಿಕೊಳ್ಳುವಂತೆ ರಾಜಕೀಯ ಗುರಿಗಳನ್ನು ಗುರುತಿಸುವ ಕಾರ್ಯ ನಮ್ಮ ರಾಜ್ಯ ಪುನರ್ಘಟನೆಯಿಂದ ಆಗಲಿಲ್ಲ. "ಗಾತ್ರ,

ಸಾಂಪತ್ತಿಕ ಸ್ಥಿತಿ ಮತ್ತು ಕ್ಷೇತ್ರದ ಆಧುನೀಕರಣಗಳಲ್ಲಿ ಭಿನ್ನತೆ ಇದ್ದಲ್ಲಿ, ಸ್ವಾತಂತ್ರ್ಯಾನಂತರ ಪ್ರಭಾವೀ ಪ್ರದೇಶಗಳು ತಮ್ಮ ಮೇಲೆ ಸವಾರಿಮಾಡುವ ಭಯದಿಂದ ದುರ್ಬಲ ಪ್ರದೇಶಗಳು ಹೆಚ್ಚಿನ ಸ್ವಾಯತ್ತತೆಯನ್ನು ಒತ್ತಾಯಿಸುವ ಸ್ಥಿತಿಗೆ ಈ ಸಂಗತಿಗಳು ಕಾರಣವಾಗಿವೆ." ಎಂದು ಬಿ. ಎಲ್. ವಾಟ್ಸ್ ತಮ್ಮ "ನ್ಯೂ ಫೆಡೆರೇಶನ್ಸ್ : ಎಕ್ಸ್‌ಪೆರಿಮೆಂಟ್ಸ್ ಇನ್ ಕಾಮನ್‌ವೆಲ್ತ್" ಎಂಬ ಪುಸ್ತಕದಲ್ಲಿ ಹೇಳಿದ್ದಾರೆ. ಈ ಎಲ್ಲ ಸಮಸ್ಯೆಗಳ ಮೂಲ ರಾಜ್ಯ ಮತ್ತು ಕೇಂದ್ರಗಳು ನಡುವಣ ಅಸಮತೋಲವೇ. ಈ ಸನ್ನಿವೇಶ ಹೊಸ ಒಕ್ಕೂಟಗಳಲ್ಲಿಯಷ್ಟೇ ಹಳೆಯ ಒಕ್ಕೂಟಗಳಲ್ಲೂ ಇರುವುದು ಸಾಮಾನ್ಯ. ರಾಜ್ಯ ಸರಕಾರಗಳು ಕೇಂದ್ರಕ್ಕೆ ಅಡಿಯಾಳಾಗಿರುವಂತೆ ಮಾಡುವ ಸಂವಿಧಾನ ನಮ್ಮದು. ಈ ಹಿನ್ನೆಲೆಯಲ್ಲೇ ರಾಜ್ಯಗಳು ತಮಗೆ ಹೆಚ್ಚಿನ ಸ್ವಾಯತ್ತತೆಬೇಕೆಂದು ಕೂಗೆಬ್ಬಿಸಿ ಕೇಂದ್ರದ ಪ್ರಭಾವದಿಂದ ಬಿಡುಗಡೆ ಹೊಂದಲು ಯತ್ನಿಸುತ್ತಿವೆ. ಇಂಥ ಪರಿಸ್ಥಿತಿಯು ಒಕ್ಕೂಟ ರಾಜ್ಯಗಳಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಆದರೆ ಭಿನ್ನ ಸ್ವರೂಪದಲ್ಲಿ ಕಾಣಿಸಿಕೊಂಡೇ ತೀರುತ್ತವೆ; ಈ ಭಿನ್ನತೆ ಅವರ ಸಂವಿಧಾನದಲ್ಲಿ ನಿರೂಪಿತವಾದ ವಿಧಾನದ ಮೇಲೆ ಅವಲಂಬಿಸಿದೆ. ಈ ಸಂಗತಿ ಭಾರತದ ಬಗೆಗೂ ನಿಜ. ಕಲ್ಯಾಣಕಾರೀ ಕಾರ್ಯಕ್ರಮಗಳು ಮತ್ತು ಸಮಗ್ರ ಆರ್ಥಿಕ ಪ್ರಗತಿಗೆ ಸಂಬಂಧಿಸಿದ ಯೋಜನೆಗಳ ಕಾರ್ಯಾಚರಣೆಗಳು, ಈ ವಿಚಾರದಲ್ಲಿ ಕೇಂದ್ರಕ್ಕಿಂತ ರಾಜ್ಯಗಳ ಜವಾಬ್ದಾರಿ ಹೆಚ್ಚಿನದು, ಎಂಬುದೇ ನಮ್ಮ ರಾಜ್ಯಗಳ ತಕರಾರು. ಇದರಿಂದ ಹೆಚ್ಚಿನ ಸಂಪನ್ಮೂಲಗಳ ಜೊತೆ ಯೋಜನೆಗಳನ್ನು ರೂಪಿಸುವಲ್ಲಿ ಕೂಡ ರಾಜ್ಯಗಳು ಹೆಚ್ಚಿನ ಅಧಿಕಾರವನ್ನು ಅಪೇಕ್ಷಿಸುತ್ತಿವೆ. ಸಾಕಷ್ಟು ಸ್ವಾಯತ್ತತೆ ನೀಡಿದಲ್ಲಿ ಅಪೇಕ್ಷಿತ ಪ್ರಗತಿಯನ್ನು ತಾವು ಸಾಧಿಸಬಲ್ಲೆವೆಂಬುದೇ ರಾಜ್ಯಗಳ ಭಾವನೆ. ಪ್ರತಿಯೊಂದು ಹಂತದಲ್ಲೂ ಕೇಂದ್ರದ ಸಲಹೆ ಪಡೆಯಬೇಕಾಗಿರುವುದರಿಂದ ತಮ್ಮ ಕೈಗಳನ್ನು ಕಟ್ಟಿದಂತೆ ಆಗಿದೆ, ಎಂಬುದೇ ರಾಜ್ಯಗಳ ಕೊರಗು. ಇಂಥ ಮತ್ತು ಇನ್ನೂ ಕಟುವಾದ ಅಭಿಪ್ರಾಯಗಳನ್ನು ಬೇರೆ ಬೇರೆ ವಲಯಗಳಲ್ಲಿ ಪ್ರಕಟಿಸಲಾಗಿದೆ. ರಾಜ್ಯಗಳಿಗೆ ವಾಸ್ತವವಾದ ಸ್ವಾಯತ್ತತೆ ಇಲ್ಲದಲ್ಲಿ ಅವು ತಮ್ಮ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾರವೆಂದು ಹೇಳಲಾಗುತ್ತದೆ. ಜನಮನದಲ್ಲಿ ತಮ್ಮ ಬಗ್ಗೆ ಗೌರವ ಉಳಿಸಿಕೊಳ್ಳಲು ಕೇಂದ್ರವನ್ನು ಬಲಿಪಶುವಾಗಿ ರಾಜ್ಯಮಟ್ಟದ ಪಕ್ಷಗಳು ಬಳಸಿಕೊಳ್ಳುತ್ತವೆ. "ಒಕ್ಕೂಟದ ತತ್ವವನ್ನು ಬೆದರುಗುಮ್ಮವಾಗಿ ಮಾಡುವ ನಿಲುವು," ಎಂದೂ ಸ್ವಾಯತ್ತ ತತ್ವದ ಟೀಕಾಕಾರರು ಇಂಥ ಕ್ರಮಗಳಿಂದ ಕೆರಳಿ ನುಡಿದುದೂ ಇದೆ. ಅವರು ಅಪೇಕ್ಷಿಸುವ ಸ್ವಾಯತ್ತತೆಯ ಸ್ವರೂಪ ಮತ್ತು ಒಳಹುರುಳು ಮತ್ತು ಅದರ ಬೇಡಿಕೆಗೆ ಅವರು ಕೊಡುವ ಒತ್ತಿನಿಂದಲೇ ಈ ಸಂಗತಿ ಸ್ಪಷ್ಟವಾಗುತ್ತಿದೆ; ಅವರಿಗೆ ಬೇಕಾಗುವ ಸ್ವಾಯತ್ತತೆ ಖಚಿತವಾದುದು, ಆರ್ಥಿಕ ಮತ್ತು ಆಡಳಿತ ವಿಚಾರಗಳಲ್ಲಿ ಅವರಿಗೆ ಅಡೆತಡೆ

ಗಳಿಲ್ಲದ ಸ್ವಾತಂತ್ರ್ಯ ಬೇಕು, ಈ ವಿಚಾರವು ನಿಜವಾದಲ್ಲಿ ಇಂಥ ರಿಯಾಯಂತಿಗಳಿಗೆ ತೊಡರಿರುವ ಸಂಗತಿಗಳೇನು ಮತ್ತು ಭಾರತದ ಯೋಜನಾಬದ್ಧ ಪ್ರಗತಿಯ ಮೇಲೆ ಅದರ ಪರಿಣಾಮವೇನು ಎಂದೂ ಪರಿಶೀಲಿಸಬೇಕು.

ರಾಜ್ಯ ಸರಕಾರಗಳ ಇಂಥ ಬೇಡಿಕೆಗಳನ್ನು ವಿಶ್ಲೇಷಿಸುವ ಮೊದಲು ಈ ಕೆಳಗಿನ ಅನ್ವೇಷಕ ಪ್ರಶ್ನೆಗಳನ್ನು ಮುಂದಿಡಬೇಕಾಗುತ್ತದೆ. ಸಂಪನ್ಮೂಲಗಳ ಬದಲಿಗೆ ಇಂಥ ವಿಸ್ತೃತ ಅಧಿಕಾರಗಳ ಪ್ರದಾನ ಸಮಗ್ರ ಆರ್ಥಿಕ ಬೆಳವಣಿಗೆಗೆ ಸಾಧಕವಾದೀತೆ? ರಾಜ್ಯ ಸರಕಾರಗಳು ಅನಿರೀಕ್ಷಿತ ಒತ್ತಡಗಳನ್ನು ಎದುರಿಸಿ ಆದಾಯ ಮತ್ತು ವೆಚ್ಚಗಳನ್ನು ಸರಿದೂಗಿಸಬಲ್ಲವೆ? ಆರ್ಥಿಕ ಪ್ರಗತಿಯ ವೇಗ ಮತ್ತು ಸ್ಥಿರತೆಗಳನ್ನು ಅವು ಕಾಯ್ದುಕೊಳ್ಳಬಲ್ಲವೆ? ಉತ್ಪಾದನೆಯು ಎಲ್ಲ ಹಂತಗಳಲ್ಲಿ ಒಂದೇ ಮಟ್ಟದ ಉಪಕ್ರಮ ಮತ್ತು ಆಡಳಿತ ಚಾತುರ್ಯ ಕಂಡುಬರಬಹುದೆ? ಮತ್ತು ಎಲ್ಲಕ್ಕೂ ಮೇಲಾಗಿ ಇದರಿಂದ ರಾಜ್ಯರಾಜ್ಯಗಳ ನಡುವೆ ವೈಮನಸ್ಯಗಳಿಗೆ ಹಾದಿ ಆಗದೇ?

ಮೇಲಿನ ಪ್ರಶ್ನೆಗಳನ್ನು ಕುರಿತು ಚಿಂತಿಸುವಾಗ, ಈ ಎಲ್ಲ ಪ್ರಶ್ನೆಗಳು ವಿತ್ತೀಯ ಪ್ರಶ್ನೆಯ ಸುತ್ತ ತಿರುಗುತ್ತವೆಂಬುದನ್ನು ಗಮನಿಸಬೇಕು ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ವಿತರಣೆ ಮಾಡಲು ಭಾರತದಲ್ಲಿ ಇರತಕ್ಕ ಸಾಂಸ್ಥಿಕ ವ್ಯವಸ್ಥೆಗಳು ಮತ್ತು ಭಾರತದ ಆರ್ಥಿಕ ಯೋಜನೆಯ ಮೇಲೆ ಅವು ಬೀರುವ ಪ್ರಭಾವಗಳನ್ನು ಕುರಿತು ಚಿಂತಿಸಬೇಕು.

ಕೇಂದ್ರ ಸರಕಾರವು ತೆರಿಗೆ ಮೂಲಗಳ ಮೇಲೆ ಸಿಂಹಪಾಲನ್ನು ಹೊಂದಿದ್ದು ರಾಜ್ಯಗಳಿಗೆ ಅದು ಅನುದಾನ ಮತ್ತು ಸಾಲಗಳನ್ನು ನೀಡುತ್ತದೆ. ವಿತ್ತೀಯ ಆಯೋಗವು ನಿರ್ಧರಿಸಿದ ಕೆಲವೊಂದು ಸೂತ್ರಗಳಂತೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲಗಳ ವಿತರಣೆ ಆಗುತ್ತದೆ. ತಮಗೆ ಹೆಚ್ಚಿನ ನೆರವುಬೇಕೆಂಬ ತಮ್ಮ ಬೇಡಿಕೆಯನ್ನು ಕಡೆಗಣಿಸಲಾಗಿದೆಯೆಂದು ರಾಜ್ಯ ಸರಕಾರಗಳಿಗೆ ಅನಿಸುತ್ತಿದೆ. ಹೆಚ್ಚಿನ ಆದಾಯವನ್ನು ಸೆಳೆದುಕೊಳ್ಳುವ ಅವಕಾಶ ಕೇಂದ್ರ ಸರಕಾರಕ್ಕೆ ಇದ್ದರೂ ಈ ಆದಾಯದಲ್ಲಿ ವಾಸ್ತವವಾಗಿ ಆಗಿರುವ ಹೆಚ್ಚಳ ನಾಮಮಾತ್ರವಾದುದೆಂಬುದನ್ನು ಇಲ್ಲಿ ಗಮನಿಸಬೇಕು. ಆದರೆ ಕೇಂದ್ರ ಸರಕಾರದ ಆರ್ಥಿಕ ಪ್ರಗತಿಯ ಚಟುವಟಿಕೆಗಳು ಮತ್ತು ರಾಜ್ಯಗಳ ಬಗೆಗೆ ಅದರ ಆರ್ಥಿಕ ಕಟ್ಟುಪಾಡುಗಳು ಹೆಚ್ಚುತ್ತ ಸಾಗಿವೆಯಷ್ಟೆ ಅಲ್ಲ ಅವುಗಳು ತಮ್ಮ ಸ್ವರೂಪ ಮತ್ತು ಸತ್ವಗಳಲ್ಲಿ ವಿಪುಲವಾಗಿ ಬೆಳೆಯುತ್ತಲೇ ಸಾಗಿವೆ. ಯೋಜನಾಬದ್ಧ ಪ್ರಗತಿಗೆ ಸಂಬಂಧಿಸಿ ಹೆಚ್ಚುತ್ತಿರುವ ತನ್ನ ಭಾರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ರಾಜ್ಯ ಸರಕಾರವು ಎಲ್ಲ ರೀತಿಯ ಹಲವು ಹತ್ತು ಸಾಧನ ಮತ್ತು ವಿಧಾನಗಳನ್ನು ಕಂಡುಹಿಡಿದು ಸಂಪನ್ಮೂಲಗಳನ್ನು ಕೂಡಿಹಾಕಲು ಯತ್ನಿಸಿದೆ. ಈ ದೆಸೆಯಲ್ಲಿ ಕೇಂದ್ರ ಮಟ್ಟದಲ್ಲಷ್ಟೇ ಅಲ್ಲ ರಾಜ್ಯಗಳಲ್ಲೂ ಯತ

ಆಗಬೇಕು. ಇದಕ್ಕೆ ವಿರುದ್ಧವಾಗಿ, ಕೆಲವೊಂದು ಅಪವಾದಗಳನ್ನು ಬಿಟ್ಟರೆ, ರಾಜ್ಯಗಳು ಈ ದೆಸೆಯಲ್ಲಿ ಮಾಡಿದ ಯತ್ನ ಗಮನಾರ್ಹವಾಗಿಲ್ಲ. ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿ ಇಂಥ ಯತ್ನ ಮಾಡುವ ಬದಲು ಕೇಂದ್ರವನ್ನು ದೂಷಿಸುತ್ತ ಸಮಾಧಾನ ಪಡುವ ನಿಲುವನ್ನು ಬಹುಪಾಲು ರಾಜ್ಯಗಳು ತಳೆದಂತೆ ಇದೆ. ಯೋಜನಾಯುಗದ ಆರಂಭದಿಂದಲೂ ಯೋಜನಾ ಆಯೋಗವೂ ವಿತ್ತೀಯ ಆಯೋಗವೂ ರಾಜ್ಯಗಳಿಗೆ ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ಒದಗಿಸುತ್ತ ಬಂದಿದ್ದರೂ ರಾಜ್ಯಗಳ ವಾಸ್ತವ ಅವಶ್ಯಕತೆ ಮತ್ತು ಅವುಗಳಿಗೆ ಲಭ್ಯವಾದ ಸಂಪನ್ಮೂಲಗಳ ನಡುವಣ ಅಂತರ ಹೆಚ್ಚುತ್ತಲೇ ಸಾಗಿದೆ. ವಿತ್ತೀಯ ಆಯೋಗದ ವರದಿ (1973) ಯಂತೆ ಪ್ರಥಮ ಯೋಜನೆಯ ಕಾಲಾವಧಿಯಲ್ಲಿ ರಾಜ್ಯಗಳಿಗೆ ಸಂದ ಅನುದಾನವು ಕೇವಲ 1431 ಕೋಟಿ ರೂ. ಗಳಾದರೆ ನಾಲ್ಕನೆಯ ಯೋಜನೆಯ ಅವಧಿಯಲ್ಲಿ ಇದು 31,866 ಕೋಟಿ ರೂ. ಗಳಿಗೆ ಏರಿದೆ. ಈ ಮೊತ್ತವು ಐದನೆಯ ಯೋಜನೆಯ ಕಾಲದಲ್ಲಿ 4293 ಕೋಟಿ ರೂ. ಗಳಷ್ಟು ಇನ್ನೂ ಹೆಚ್ಚಿತ್ತು. ಇದರಿಂದ ಕೇಂದ್ರವು ನೀಡುತ್ತಿರುವ ವೆಚ್ಚದಲ್ಲಿ ಆದ ಹೆಚ್ಚಳದಿಂದ ಅದರ ಮೇಲೆ ಬಿದ್ದ ಭಾರ ಹಾಗೂ ರಾಜ್ಯಗಳು ಕೇಂದ್ರದ ನೆರವಿಲ್ಲದೆ ತಮ್ಮ ಪ್ರಗತಿಯ ಕಾರ್ಯಕ್ರಮಗಳನ್ನು ಪೂರೈಸಲು ಸಾಮರ್ಥ್ಯವಿಲ್ಲದೇ ಇರುವ ಸ್ಥಿತಿ ನಿಚ್ಚಳವಾಗುತ್ತದೆ. ಕೇಂದ್ರ ಮತ್ತು ಯೋಜನಾ ಆಯೋಗಗಳು ಒಂದೆಡೆಯಿಂದ ಮತ್ತು ರಾಜ್ಯಗಳು ಇನ್ನೊಂದೆಡೆಯಿಂದ ಒಟ್ಟಾಗಿ ನಡೆಸುವ ಸಂಕಲಿತ ಯತ್ನವೊಂದೇ ಈ ಸ್ಥಿತಿಯನ್ನು ಸುಧಾರಿಸಬಹುದು. ತಮ್ಮ ಸ್ವಾಯತ್ತತೆಯ ಬೇಡಿಕೆ ತತ್ತ್ವಂಥವಾದುದಾಗಿರದೇ ಚೈತನ್ಯಶೀಲವಾದುದಾಗಿ ಇರಬೇಕೆಂಬ ನಿಲುವನ್ನು ರಾಜ್ಯಗಳು ತಳೆಯಬೇಕಾಗಿದೆ.

ಉದ್ಯೋಗಸ್ಥ ತಾಯಂದಿರು ಮತ್ತು ಅವರ ಕುವರಿಯರ ಸಮಸ್ಯೆಗಳು

ಡಾ. ಬಿ. ಜಿ. ಸುಧಾ ಮತ್ತು ಎಸ್. ಗೀತಾ

ಪ್ರಸ್ತಾವನೆ

ಶಿಕ್ಷಣ ಜೀವನದ ಪರಿಪೂರ್ಣತೆಯನ್ನು ಅರಿಯುವ ಸಾಧನ. ಶಿಕ್ಷಣದಿಂದ ವ್ಯಕ್ತಿಗೆ, ಸಮುದಾಯಕ್ಕೆ, ನಾಡಿಗೆ, ಹಾಗೂ ಇಡೀ ಮಾನವ ಕೋಟಿಗೆ ಆಗುವ ಪ್ರಯೋಜನ ಬಹುವಿಧ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಸುಪ್ತವಾಗಿರುವ ಶಕ್ತಿಗಳನ್ನು, ಅವನಲ್ಲಿರುವ ಪ್ರತಿಭೆಗಳನ್ನು ಪ್ರಕಾಶಗೊಳಿಸಿ, ಬೆಳೆಸುವುದೇ ಅಲ್ಲದೆ ಶಿಕ್ಷಣ ಪ್ರತಿ ವ್ಯಕ್ತಿಯ ಜೀವನವನ್ನೂ ಅರ್ಥವತ್ತಾಗಿಸುವುದರಲ್ಲಿ ಸಹಾಯಕವಾಗುತ್ತದೆ. ಜೊತೆಗೆ ಪ್ರತಿಯೊಂದು ಜನಾಂಗದಲ್ಲಿನ ಸಂಸ್ಕೃತಿ, ಸಾಹಿತ್ಯ, ಕಲೆ ಮುಂತಾದುವನ್ನು, ಬರುವ ಪೀಳಿಗೆಗೆ ಪರಿಚಯ ಮಾಡಿಕೊಡುವುದೇ ಅಲ್ಲದೆ, ಬರುವ ಜನಾಂಗ ತಮ್ಮ ಸಂಸ್ಕೃತಿ, ಪರಂಪರೆಯನ್ನು ಬೆಳೆಸಿಕೊಂಡು ಬರುವುದಕ್ಕೆ ಸಹಾಯವಾಗುತ್ತದೆ. ಅಂದರೆ ಸಮಾಜದಲ್ಲಿ ಶಿಕ್ಷಣದ ಸ್ಥಾನ ಮತ್ತು ಪಾತ್ರ ಬಹಳ ಗುರುತರವಾದುದು. ಅದು ವ್ಯಕ್ತಿಯ ಸರ್ವತೋಮುಖ ಹಾಗೂ ಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕ (ಡ್ಯೂಯಿ, 1976).

ಆದರೆ ವ್ಯಕ್ತಿಯ ಶಿಕ್ಷಣವು ಶೂನ್ಯದಲ್ಲಿ ನಡೆಯಲು ಸಾಧ್ಯವಿಲ್ಲ. ಸಂಸಾರದ ಸಮಾಜದ, ಸರ್ಕಾರದ ಹಾಗೂ ಇತರ ಸಾಮಾಜಿಕ ಶಕ್ತಿಗಳ ಸಹಾಯ ಅತ್ಯಗತ್ಯ. ಅದರಲ್ಲಿಯೂ ಸಂಸಾರದಲ್ಲಿ ಅಥವಾ ಕುಟುಂಬದಲ್ಲಿರುವ ವ್ಯಕ್ತಿಗಳ ಪಾತ್ರ ಅತ್ಯಂತ ಹಿರಿದು. ಮುಖ್ಯವಾಗಿ ತಾಯಿಯ ಜವಾಬ್ದಾರಿ, ಮಕ್ಕಳ ಶಿಕ್ಷಣ ಪ್ರಗತಿಗೆ ಅತ್ಯಂತ ಅನಿವಾರ್ಯ ಹಾಗೂ ಅವಶ್ಯಕ. ಒಂದು ಕುಟುಂಬದಲ್ಲಿನ ಶಕ್ತಿಗಳಲ್ಲಿ, ಮಗುವು ಚೆನ್ನಾಗಿ ಓದುಬರಹ ಕಲಿತು ವಿದ್ಯಾವಂತನಾಗಬೇಕಾದರೆ, ಅತ್ಯಂತ ಪ್ರಮುಖ ಪರಿಸರವೆಂದರೆ ತಾಯಿ (ಬರ್ಟ್, 1935). ನಮ್ಮ ಸಂಸ್ಕೃತಿಯನ್ನು ಮಕ್ಕಳಿಗೆ ಕಲಿಸುವ ಪ್ರಥಮ ಮಾಧ್ಯಮ ತಾಯಿ. ಭಾರತ ಸಮಾಜದಲ್ಲಿ ಅನಾದಿಕಾಲದಿಂದಲೂ ಮಾತೆಗೆ ಅತ್ಯಂತ ಉನ್ನತ ಸ್ಥಾನವನ್ನು ಕೊಡುತ್ತಿದ್ದರೂ

ಡಾ॥ ಸುಧಾ ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಉಪ-ಪ್ರಾಧ್ಯಾಪಕಿಯರಾಗಿದ್ದಾರೆ. ಶ್ರೀಮತಿ ಗೀತಾ ಬೆಂಗಳೂರಿನಲ್ಲಿ ಶಾಲಾ ಶಿಕ್ಷಕಿಯಾಗಿದ್ದಾರೆ.

ಸತತ ಅನೇಕ ವಿಧವಾದ ಸಾಮಾಜಿಕ, ಶೈಕ್ಷಣಿಕ ಹಾಗೂ ಇತರ ಬದಲಾವಣೆಗಳಿಂದಾಗಿ ನಮ್ಮ ಹಿಂದಿನ ಕುಟುಂಬದ ಚೌಕಟ್ಟು ಬದಲಾಗಿರುವುದಲ್ಲದೆ, ಅದರ ಪರಿಣಾಮವಾಗಿ ಗೃಹಿಣಿಯರ ಹಾಗೂ ಮಾತೆಯರ ಕಾರ್ಯವ್ಯಾಪ್ತಿ ಮತ್ತು ಅವರ ಪಾತ್ರ ಬದಲಾಗಿದೆ. ಆರ್ಥಿಕ ದೃಷ್ಟಿಯಿಂದ ಇಂದು ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯೂ ಸಹ ಹೆಣ್ಣು–ಗಂಡೆಂಬ ತಾರತಮ್ಯವಿಲ್ಲದೆ, ಉದ್ಯೋಗಸ್ಥರಾಗ ಬೇಕಾಗಿದೆ. ಇದರಿಂದಾಗಿ ಶಿಕ್ಷಣ ಸ್ವರೂಪವೇ ಸಾಕಷ್ಟು ಬದಲಾಗಿರುವುದಲ್ಲದೆ, ಸ್ವತಂತ್ರ ಭಾರತದ ಪ್ರತಿಯೊಬ್ಬ ಪ್ರಜೆಗೂ ಸಹ ಶಿಕ್ಷಣ ಪಡೆಯುವ ಸಮಾನ ಅವಕಾಶವನ್ನು ಭಾರತ ಸಂವಿಧಾನ ಒದಗಿಸಿಕೊಟ್ಟಿದೆ. ಹೀಗಾಗಿ ಸನಾತನ ಧರ್ಮದ, ಪುರಾಣ ಇತಿಹಾಸಗಳಲ್ಲಿನ ನಾರಿಯರ ಚಿತ್ರಣ ಮತ್ತು ಆದರ್ಶಗಳ ಪ್ರಭಾವ ಅಷ್ಟು ಪ್ರಖರವಾಗಿ ಇಲ್ಲದೇ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ದೇಶದ ನಾರಿಯರ ಆದರ್ಶಗಳು ಅನೇಕ ರೀತಿಯಲ್ಲಿ ಬದಲಾಗುತ್ತಿವೆ.

ಆಧುನಿಕ ಭಾರತದ ನಾರಿ ಸಮಾಜದ ಎಲ್ಲ ಕ್ಷೇತ್ರಗಳನ್ನೂ ಪ್ರವೇಶಿಸುತ್ತಿದ್ದಾಳೆ. ಎಲ್ಲ ವಿಧದಲ್ಲಿಯೂ ಇಂದು ಅವಳು ಪುರುಷನಿಗೆ ಸರಿ ಸಮಾನಳು. ಇಲ್ಲಿಯವರೆವಿಗೂ ಗೃಹ ಬಂಧನದಲ್ಲಿದ್ದ ಆಕೆ ಈಗ ಹೊರಗೆಬಂದು ತನ್ನ ಸಮಾನ ಹಕ್ಕನ್ನು ಸ್ಥಾಪಿಸಲಾರಂಭಿಸಿದ್ದಾಳೆ. ಈ ಸ್ಥಿತಿಗೆ ಇಂದಿನ ಆಧುನಿಕ ಶಿಕ್ಷಣವೂ ಸಹ ಕಾರಣ. ಸಂಪ್ರದಾಯದ ಸಂಕೋಲೆಯಿಂದ ಬಿಡುಗಡೆ ಹೊಂದಿರುವ ಅವಳು ತನ್ನ ಶಕ್ತಿಯನ್ನು, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸುತ್ತಿದ್ದಾಳೆ. ಹೀಗಾಗಿ ಈಗವಳು ಸಮಾಜದ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರಲ್ಲಿ ಸಮರ್ಥಳಾಗುತ್ತಿದ್ದಾಳೆ.

ಈ ಬದಲಾವಣೆಗಳಿಂದಾಗಿ, ಒಂದು ರೀತಿಯಲ್ಲಿ ನೋಡಿದರೆ ಆಧುನಿಕ ನಾರಿಯ ಮಾನಸಿಕ ಒತ್ತಡ ತೀವ್ರವಾಗುತ್ತಿದೆ. ತನ್ನ ಪತಿಯ ಹಾಗೂ ಕುಟುಂಬದ ಅವಶ್ಯಕತೆಯನ್ನು ಪೂರೈಸಿ ಕೊಳ್ಳುವ ಸಲುವಾಗಿ ತಾನೂ ಸಂಪಾದನೆ ಮಾಡುವುದರ ಜೊತೆಗೆ ಗೃಹಕೃತ್ಯದ ಅನೇಕ ಹೊರೆ ಅವಳ ಮೇಲೆಯೇ ಇದೆ. ಅಲ್ಲದೆ, ನೈಸರ್ಗಿಕ ಕಾರಣದಿಂದಾಗಿ ಸಂಸಾರದ ಅನೇಕ ಗುರುತರ ಕಾರ್ಯಗಳನ್ನು ಜವಾಬ್ದಾರಿಗಳನ್ನೂ ಅವಳೇ ನಿರ್ವಹಿಸಬೇಕಾಗಿದೆ. ಹೀಗಾಗಿ, ಇಂದಿನ ಮಹಿಳೆಯರಿಗೆ ಉದ್ಯೋಗ ಅತ್ಯಂತ ಅವಶ್ಯಕವಾಗಿದ್ದರೂ ಅದರಿಂದ ಅವರ ಮಕ್ಕಳ ಮೇಲೆ, ಹಾಗೂ ಕುಟುಂಬದ ಆಗುಹೋಗುಗಳ ಮೇಲೆ ಆಗುವ ಪರಿಣಾಮ ಅತ್ಯಂತ ಗಹನವಾದುದು. ಮಹಿಳೆಯರು ಉದ್ಯೋಗಕ್ಕೆ ಹೋಗುವುದು ಅನಿವಾರ್ಯ ಅಥವಾ ಅವಶ್ಯಕವೆನಿಸಿದರೂ, ಅದೇ ಕಾರಣದಿಂದಾಗಿ ಅವರು ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

ಮುಖ್ಯವಾಗಿ ಆರ್ಥಿಕ ಕಾರಣದಿಂದಾಗಿ ಮಹಿಳೆಯರು ಕೆಲಸವನ್ನು ಕೈಗೊಂಡರೂ ಸಹ ಹಾಫ್‌ಮನ್ (1974) ಹೇಳುವಂತೆ ಅದಕ್ಕೆ "ಸ್ವಾತಂತ್ರ್ಯಾಪೇಕ್ಷೆ, ವೈಯ್ಯಕ್ತಿಕ ಸಾಧನೆ, ಮತ್ತು ಸಮಾಜದ ಸ್ಥಾನಮಾನಗಳ" ಇವೇ ಮುಂತಾದುವು ಮುಖ್ಯ ಪ್ರೇರಕಗಳಾಗಿರಬಹುದು. ಅಂತೂ ಅನೇಕ ಕಾರಣಗಳಿಂದಾಗಿ ಉದ್ಯೋಗಸ್ಥ ಮಹಿಳೆಯರು ಸಮಾಜದ ಒಂದು ಮುಖ್ಯ ಹಾಗೂ ಅವಿಭಾಜ್ಯ ಅಂಶವಾಗಿದ್ದಾರೆ.

ಉದ್ಯೋಗಸ್ಥ ಮಹಿಳೆಯರು, ಅದರಲ್ಲಿಯೂ ಉದ್ಯೋಗಸ್ಥ ತಾಯಂದಿರು ಎದುರಿಸುವ ಸಮಸ್ಯೆಗಳು ಅನೇಕ. ಅದರಲ್ಲಿ ಅತಿಮುಖ್ಯವಾದ ಸಮಸ್ಯೆ ಎಂದರೆ, ಅವರು ತಮ್ಮ ಬೆಳೆಯುತ್ತಿರುವ ಮಕ್ಕಳ, ಅದರಲ್ಲಿಯೂ ಹೆಣ್ಣು ಮಕ್ಕಳ ಬಗ್ಗೆ, ಅವರ ಶಿಕ್ಷಣದ ಬಗ್ಗೆ ಎದುರಿಸಬೇಕಾಗಿರುವ ಸಮಸ್ಯೆ.

ಶಾಲೆಯಲ್ಲಿ ಕಲಿಯುತ್ತಿರುವ ಕಿಶೋರ, ಕಿಶೋರಿಯರ ಸಮಸ್ಯೆಗಳೂ ಸಹ ಈ ಉದ್ಯೋಗಸ್ಥ ತಾಯಂದಿರ ಸಮಸ್ಯೆಗಳಿಗೆ ಪೂರಕವಾಗಿವೆ. ತಾವು ಕೈಗೊಂಡಿರುವ ಉದ್ಯೋಗಕ್ಕಾಗಿ ಸಮಯವನ್ನು ವಿನಿಯೋಗಿಸುವುದರ ಜೊತೆಗೆ, ಅವರು ತಮ್ಮ ಮಕ್ಕಳಿಗಾಗಿ ಎಷ್ಟು ಸಮಯವನ್ನು ಕೊಡಬಲ್ಲರು, ಹಾಗೂ ಅವರಲ್ಲಿ ತಮ್ಮ ಉದ್ಯೋಗದ ಬಗ್ಗೆ ಮತ್ತು ಮಕ್ಕಳ ಪ್ರಗತಿಯ ಬಗ್ಗೆ ಎಂತಹ ಭಾವನೆಗಳಿವೆ ಎಂಬುದು ಅವರ ಹಾಗೂ ಅವರ ಮಕ್ಕಳ ಅನೇಕ ಸಮಸ್ಯೆಗಳಿಗೆ ಮೂಲವಾಗಿರುತ್ತದೆ. ತಾಯಂದಿರ ಉದ್ಯೋಗ ಮತ್ತು ಮಕ್ಕಳ ಪ್ರಗತಿಯ ಬಗ್ಗೆ ಅನೇಕ ಸಂಶೋಧನೆಗಳು ಈ ವಿಷಯವನ್ನು ಸ್ಪಷ್ಟಪಡಿಸಿವೆ (ಹಾಫ್‌ಮನ್, 1974 ; ನೈ, 1951 ; ಕೋಚ್. 1943 ; ಪೋಪ್. 1943 ; ಬೇಕರ್ 1945 ; ಕುಲ್ಹನ್ ಮತ್ತು ಬ್ರೆಟ್ಜ್ 1942 ; ರೆಮರ್ಸ್ ಮತ್ತು ಸ್ಪೆನ್ಸರ್, 1950 ; ಗ್ಯಾಮ್ಸನ್ ಮತ್ತು ಕನ್ನಿಂಗ್‌ಹ್ಯಾಮ್, 1952 ; ಎಲ್ಲಿಸ್, 1949). ಅದರಲ್ಲಿಯೂ ಕಲಿಯುವ ಹೆಣ್ಣುಮಕ್ಕಳ ಮೇಲೆ ತಾಯಿ-ತಂದೆಗಳ ಪ್ರಭಾವ ಹೆಚ್ಚು ಎಂಬುದನ್ನು ಅನೇಕ ಸಂಶೋಧನೆಗಳು ಗುರುತಿಸಿವೆ (ಸೈಮಂಡ್ಸ್, 1936 ; ಪೋಪ್, 1943).

ಅಧ್ಯಯನ

ತಾಯಂದಿರು ಉದ್ಯೋಗಸ್ಥ ಮಹಿಳೆಯರಾಗಿದ್ದರೆ, ಅದರ ಪರಿಣಾಮ ಏಳನೆಯ ತರಗತಿಯಲ್ಲಿ ಕಲಿಯುತ್ತಿರುವ ಅವರ ಹೆಣ್ಣು ಮಕ್ಕಳ ಸಮಸ್ಯೆಗಳ ಮೇಲೆ ಯಾವ ರೀತಿ ಇರುತ್ತದೆ, ಮತ್ತು ಕೆಲಸಕ್ಕೆ ಹೋಗದ ತಾಯಿಯರ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಇವರ ಸಮಸ್ಯೆಗಳೊಂದಿಗೆ ತುಲನೆ ಮಾಡಿದಾಗ ಯಾವ ರೀತಿಯಲ್ಲಿರುತ್ತದೆ, ಎನ್ನುವುದನ್ನು ಪರೀಕ್ಷಿಸುವ ಸಲುವಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಒಂದು ಅಧ್ಯಯನವನ್ನು ನಡೆಸಲಾಯಿತು.

ಇದಕ್ಕಾಗಿ ಒಂದು ಶಾಲಾ ಬಾಲಿಕೆಯರ ಸಮಸ್ಯಾ ಪ್ರಶ್ನಾವಳಿ, (ಸುಧಾ, 1977), ಸಿನ್ಹರ ಆತಂಕಮಾಪಕ, ಸಾಮಾಜಾರ್ಥಿಕ ಮಾಪಕ (ಸುಧಾ, 1977), ಬೆಂಗಳೂರಿನ ಶಾಲೆಗಳಲ್ಲಿ ಕಲಿಯುತ್ತಿರುವ ಏಳನೆಯ ತರಗತಿಯ 240 ವಿದ್ಯಾರ್ಥಿನಿಯರಿಗೆ ಕೊಟ್ಟು ಅವರಿಂದ ಅವರ ಸಮಸ್ಯೆಗಳ, ಆತಂಕದ ಹಾಗೂ ಸಾಮಾಜಾರ್ಥಿಕ ಮಟ್ಟದ ಮಾಪನವನ್ನು ಮಾಡಲಾಯಿತು. ಇವರಲ್ಲಿ 80 ವಿಧ್ಯಾರ್ಥಿನಿಯರ ತಾಯಂದಿರು ಉದ್ಯೋಗಸ್ಥರು, ಉಳಿದ 160 ವಿದ್ಯಾರ್ಥಿನಿಯರ ತಾಯಂದಿರು ಕೆಲಸಕ್ಕೆ ಹೋಗದವರು ಆಗಿದ್ದರು. ಈ ಅಧ್ಯಯನದಲ್ಲಿ ಉಪಯೋಗಿಸಿದ ಎಲ್ಲ ಮಾಪಕಗಳೂ ವೈಜ್ಞಾನಿಕವಾಗಿ ರಚಿಸಲ್ಪಟ್ಟು ಸಮರ್ಪಕ ಮಟ್ಟದ ನಿಖರ ಸೂಚಕಾಂಕಗಳು ಹಾಗೂ ವಸ್ತುನಿಷ್ಠತಾ ಸೂಚಕಾಂಕಗಳು ಅಪೇಕ್ಷಿತ ಮಟ್ಟದಲ್ಲಿ ಹೊಂದಿದ್ದುವು. ಆದುದರಿಂದ ಇವುಗಳ ಲಬ್ಧಾಂಶಗಳು ಸಮರ್ಪಕ ಎಂದು ಪರಿಗಣಿಸಲಾಯಿತು. ಬಾಲಿಕಾ ಪ್ರಶ್ನಾವಳಿಯು 150 ಪ್ರಶ್ನೆಗಳನ್ನು ಹೊಂದಿದ್ದು ಸಮಸ್ಯೆಗಳನ್ನು ಹತ್ತು ವರ್ಗಗಳಾಗಿ ವಿಂಗಡಿಸಲ್ಪಟ್ಟಿರುವುದರಿಂದ, ಇದರ ಪ್ರಯೋಗ ದಿಂದ ಬಾಲಿಕೆಯರ ಸಮಸ್ಯೆಗಳನ್ನು ಹತ್ತು ವರ್ಗಗಳಲ್ಲಿ ವಿಶ್ಲೇಷಿಸಬಹುದಾಗಿದೆ. ದತ್ತಾಂಶ ವಿಶ್ಲೇಷಣೆಗಾಗಿ ಭೇದ ಸೂಚಕಾಂಕ(t-test)ವನ್ನು ಕಂಡು ಹಿಡಿದು ಅದರ ಆಧಾರದ ಮೇಲೆ ಅವರ ಸಮಸ್ಯೆಗಳಲ್ಲಿರುವ ಅಂತರದ ವ್ಯಾಪ್ತಿಯನ್ನು ನಿರ್ಧರಿಸಲಾಯಿತು.

ಲಬ್ಧಾಂಶ ವಿಶ್ಲೇಷಣೆ

ತಾಯಿಯ ಉದ್ಯೋಗ ಮತ್ತು ಸಮಸ್ಯೆಗಳು

ಈ ಕೆಳಗಿನ ಪಟ್ಟಿಯಲ್ಲಿ ಉದ್ಯೋಗಸ್ಥ ಹಾಗೂ ಕೆಲಸಕ್ಕೆ ಹೋಗದ ತಾಯಂದಿರ ಹೆಣ್ಣು ಮಕ್ಕಳ ಸಮಸ್ಯಾತೀವ್ರತೆಯನ್ನು ಕೊಟ್ಟು ವಿಶ್ಲೇಷಿಸ ಲಾಗಿದೆ.

ಪಟ್ಟಿ 1.

ಸಮಸ್ಯೆಗಳ ಮಧ್ಯಾಂಕ, ವಿತರಣಾಂಕ ಮತ್ತು ಭೇದ ಸೂಚಕಾಂಕ

ಕ್ರಮ ಸಂಖ್ಯೆ	ಸಮಸ್ಯೆಗಳ ವರ್ಗ	ಕೆಲಸಕ್ಕೆ ಹೋಗುವ ತಾಯಂದಿರು (ಸಂ = 80) ಮಧ್ಯಾಂಕ	ವಿತರಣಾಂಕ	ಕೆಲಸಕ್ಕೆ ಹೋಗದ ತಾಯಂದಿರು (ಸಂ = 160) ಮಧ್ಯಾಂಕ	ವಿತರಣಾಂಕ	ಭೇದ ಸೂಚಿ
1	ಆರೋಗ್ಯ, ಬೆಳವಣಿಗೆ ಮತ್ತು ಪ್ರಗತಿ ಸಮಸ್ಯೆಗಳು	15·10	7·58	15·72	8·09	0·59
2	ವೈಯಕ್ತಿಕ ನ್ಯೂನತೆಯ ಸಮಸ್ಯೆಗಳು	16·19	8·00	16·72	7·94	0·48
3	ಸಾಮಾಜಿಕ ಸಂಬಂಧ ಸಮಸ್ಯೆಗಳು	13·25	8·20	14·69	8·22	1·28
4	ಹೊಂದಾಣಿಕಾ ಸಮಸ್ಯೆಗಳು	14·31	8·90	16·03	8·07	1·45
5	ಆಕಾಂಕ್ಷೆ ಮತ್ತು ಜೀವನ ಧ್ಯೇಯ ಸಮಸ್ಯೆಗಳು	12·75	8·88	15·78	8·49	2·53*
6	ಮನರಂಜನಾ ಸಮಸ್ಯೆಗಳು	12·81	9·47	14·88	9·21	1·60
7	ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಮಸ್ಯೆಗಳು	14·94	9·30	16·10	8·51	0·93
8	ಶೈಕ್ಷಣಿಕ ಸಾಧನಾ ಸಮಸ್ಯೆಗಳು	13·56	8·30	15·59	8·73	1·76
9	ಸಾಂಸ್ಕೃತಿಕ, ಸಾಂಪ್ರದಾಯಿಕ ಆಚರಣಾ ಸಮಸ್ಯೆಗಳು	14·75	8·32	16·50	8·37	1·53
10	ಆರ್ಥಿಕ ಸಮಸ್ಯೆಗಳು	13·13	9·48	21·47	10·00	6·30**

* ಸಂಭಾವ್ಯ ಸೂಚಿ $p < 0{\cdot}05$;

** ಸಂಭಾವ್ಯ ಸೂಚಿ $p < 0{\cdot}01$

ಈ ಎರಡು ಬಗೆಯ ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ತುಲನೆ ಮಾಡಿದಾಗ ಎರಡು ಸಮಸ್ಯಾವರ್ಗಗಳನ್ನುಳಿದು, ಉಳಿದ ಇನ್ನಾವ ತುಲನೆಯಲ್ಲಿಯೂ ಸಹ ಅವರ ಸಮಸ್ಯಾತೀವ್ರತೆಯಲ್ಲಿ ವ್ಯತ್ಯಾಸವನ್ನು ಗುರುತಿಸಲಾಗಲಿಲ್ಲ, ಏಕೆಂದರೆ ಪಡೆದ ಎಲ್ಲ ಭೇದ ಸೂಚ್ಯಂಕಗಳೂ ಸಹ ಸಂಭಾವ್ಯ ಸೂಚ್ಯಂಕಕ್ಕಿಂತ ಕಡಿಮೆ ಇದ್ದುವು. ಆದುದರಿಂದ ಎಂಟು ಸಮಸ್ಯಾವರ್ಗಗಳಲ್ಲಿ ಅಂದರೆ, ಆರೋಗ್ಯ, ಬೆಳವಣಿಗೆ ಮತ್ತು ಪ್ರಗತಿ; ವೈಯಕ್ತಿಕ ನ್ಯೂನತೆ; ಸಾಮಾಜಿಕ ಸಂಬಂಧಿ; ಹೊಂದಾಣಿಕೆ; ಮನರಂಜನೆ; ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಷಯಗಳು; ಶೈಕ್ಷಣಿಕ ಸಾಧನೆ; ಹಾಗೂ ಸಾಂಸ್ಕೃತಿಕ, ಸಾಂಪ್ರದಾಯಿಕ ಆಚರಣೆಗಳು—ಈ ವಿಷಯದಲ್ಲಿನ ಸಮಸ್ಯೆಗಳಲ್ಲಿ ಈ ವರ್ಗದ ವಿದ್ಯಾರ್ಥಿನಿಯಲ್ಲಿ ಯಾವ ವಿಧವಾದ ವ್ಯತ್ಯಾಸವೂ ಇಲ್ಲವೆಂದಾಯಿತು.

ಆದರೆ ಉಳಿದೆರಡು ಸಮಸ್ಯಾವರ್ಗಗಳಲ್ಲಿ ಅಂದರೆ, ಆಕಾಂಕ್ಷೆ ಮತ್ತು ಜೀವನ ಧ್ಯೇಯಗಳು ಹಾಗೂ ಆರ್ಥಿಕ ಸಮಸ್ಯೆಗಳು ಇವೆರಡೂ, ಕೆಲಸಕ್ಕೆ ಹೋಗದ ತಾಯಂದಿರ ಹೆಣ್ಣು ಮಕ್ಕಳಲ್ಲಿ, ಕೆಲಸಕ್ಕೆ ಹೋಗುವ ತಾಯಂದಿರ ಮಕ್ಕಳಿಗಿಂತ ನಿಖರವಾಗಿ ಹೆಚ್ಚಾಗಿರುವುದು ಸ್ಪಷ್ಟವಾಯಿತು. ಅಂದರೆ, ಉದ್ಯೋಗಸ್ಥ ತಾಯಂದಿರ ಮಕ್ಕಳಲ್ಲಿ ಆರ್ಥಿಕ ಸಮಸ್ಯೆಗಳು ಕಡಿಮೆ ಎಂದಾಯಿತು. ಇದು ಸಹಜವೇ. ಇವರಿಬ್ಬರ ಮಧ್ಯಾಂಕ ಸೂಚಿಗಳಿಂದ ಕೆಲಸಕ್ಕೆ ಹೋಗದ ತಾಯಂದಿರ ಮಕ್ಕಳಲ್ಲಿ ಈ ಆರ್ಥಿಕ ಸಮಸ್ಯೆ ಉದ್ಯೋಗಸ್ಥ ತಾಯಂದಿರ ಮಕ್ಕಳಲ್ಲಿನ ಈ ಸಮಸ್ಯೆಗಿಂತ ಸುಮಾರು ಒಂದೂವರೆ ಪಟ್ಟು ಹೆಚ್ಚಾಗಿದೆ ಎಂದು ವೇದ್ಯವಾಗುತ್ತದೆ. ಹಾಗೆಯೇ ಅವರ ಆಕಾಂಕ್ಷೆಗಳಿಗೆ ಸಂಬಂಧಪಟ್ಟ ಹಾಗೂ ಜೀವನದ ಧ್ಯೇಯಗಳನ್ನು ಕುರಿತ ಸಮಸ್ಯೆಗಳೂ ಸಹ ಉದ್ಯೋಗಸ್ಥ ತಾಯಂದಿರ ಮಕ್ಕಳ ಸಮಸ್ಯೆಗಳಿಗಿಂತ ಹೆಚ್ಚಾಗಿವೆ ಎಂದಾಯಿತು.

ಆತಂಕ ಮತ್ತು ಸಮಸ್ಯೆಗಳು

ಮುಂದಿನ ಪಟ್ಟಿಯಲ್ಲಿ ಬಾಲಕಿಯರ ಆತಂಕದ ದೃಷ್ಟಿಯಿಂದ ಅವರ ಸಮಸ್ಯೆಗಳನ್ನು ವಿಶ್ಲೇಷಿಸಲಾಗಿದೆ.

ಪಟ್ಟಿ 2

ಬಾಲಿಕೆಯರ ಆತಂಕದ ದೃಷ್ಟಿಯಿಂದ ಅವರ ಸಮಸ್ಯೆಗಳ ಮಧ್ಯಾಂಕ, ವಿತರಣಾಂಕ ಮತ್ತು ಭೇದ ಸೂಚಕಾಂಕ

ಕ್ರಮ ಸಂಖ್ಯೆ	ಸಮಸ್ಯೆಗಳ ವರ್ಗ	ತೀವ್ರ ಆತಂಕ (ಸಂ = 64) ಮಧ್ಯಾಂಕ	ತೀವ್ರ ಆತಂಕ (ಸಂ = 64) ವಿತರಣಾಂಕ	ಸಾಧಾರಣ ಆತಂಕ (ಸಂ = 114) ಮಧ್ಯಾಂಕ	ಸಾಧಾರಣ ಆತಂಕ (ಸಂ = 114) ವಿತರಣಾಂಕ	ಕಡಿಮೆ ಆತಂಕ (ಸು = 62) ಮಧ್ಯಾಂಕ	ಕಡಿಮೆ ಆತಂಕ (ಸು = 62) ವಿತರಣಾಂಕ	ಭೇದ ಸೂಚ್ಯಾಂಕ
1.	ಆರೋಗ್ಯ, ಬೆಳವಣಿಗೆ ಮತ್ತು ಪ್ರಗತಿ ಸಮಸ್ಯೆಗಳು	14.81	7.28	16.12	7.17	15.06	9.22	1.56 0.78 0.17
2.	ವೈಯುಕ್ತಿಕ ನ್ಯೂನತೆಯು ಸಮಸ್ಯೆಗಳು	18.17	7.17	17.45	7.38	14.91	9.36	0 64 1.85 2.20*
3.	ಸಾಮಾಜಿಕ ಸಂಬಂಧ ಸಮಸ್ಯೆಗಳು	14.19	8.43	15.05	7.95	12.72	8.79	0.67 1.73 0.95
4.	ಹೊಂದಾಣಿಕಾ ಸಮಸ್ಯೆಗಳು	14.27	4.23	16.51	8 15	13.86	9.08	2.40* 0.52 0.32
5.	ಆಕಾಂಕ್ಷೆ ಮತ್ತು ಜೀವನ ಧ್ಯೇಯ ಸಮಸ್ಯೆಗಳು	13.64	9.44	15.83	8.28	13.77	8.37	1.55 1.56 0.08
6.	ಮನರಂಜನಾ ಸಮಸ್ಯೆಗಳು	18.79	15.06	15.19	9.19	12.00	10.74	1.74 1.98* 2.92*
7.	ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಮಸ್ಯೆಗಳು	14.58	8.10	16.93	8.38	17.73	10.60	1.83 0.51 1.87

8.	ಶೈಕ್ಷಣಿಕ ಸಾಧನೆಯ ಸಮಸ್ಯೆಗಳು	14.11	8.24	15.70	8 01	13.86	9.51	1.25 1.30	0.15
9.	ಸಾಂಸ್ಕೃತಿಕ, ಸಾಂಪ್ರದಾಯಿಕ ಆಚರಣಾ ಸಮಸ್ಯೆಗಳು	16.53	8.65	16.79	7.93	13.77	8.28	0.20 2.37*	1.83
10.	ಆರ್ಥಿಕ ಸಮಸ್ಯೆಗಳು	18.02	10.24	15.77	9.43	13.94	10 52	1.44 1.14	2.20*

ಸೂಚನೆ: ಭೇದ ಸೂಚ್ಯಂಕಗಳನ್ನು ಮೊದಲೆರಡು; ಕೊನೆಯೆರಡು; ಮತ್ತು ಮೊದಲ ಹಾಗೂ ಕೊನೆಯ ಆತಂಕ ವರ್ಗಗಳ ತುಲನಾತ್ಮಕವಾಗಿ ಕೊಟ್ಟಿದೆ.

[*ಸಂಭಾವ್ಯ ಭೇದ ಸೂಚ್ಯಂಕ $P < 0.05$; **ಸಂಭಾವ್ಯ ಸೂಚ್ಯಂಕ $P < 0.01$]

ಮೇಲಿನ ಪಟ್ಟಿಯಿಂದ ಅನೇಕ ಅಂಶಗಳು ಸ್ಫುಟವಾಗುತ್ತವೆ. ತೀವ್ರ ಆತಂಕ ಹಾಗೂ ಸಾಧಾರಣ ಆತಂಕವಿರುವ ಬಾಲಕಿಯರ ಸಮಸ್ಯೆಗಳನ್ನು ತುಲನೆ ಮಾಡಿದಾಗ, ಹೊಂದಾಣಿಕಾ ಸಮಸ್ಯೆಗಳನ್ನು ಹೊರತು ಮಿಕ್ಕ ಯಾವ ಸಮಸ್ಯೆಗಳಲ್ಲಿಯೂ ಈ ಎರಡು ವರ್ಗದ ಬಾಲಕಿಯರಲ್ಲಿ ವ್ಯತ್ಯಾಸವಿಲ್ಲ ಎನ್ನುವುದು ಸ್ಪಷ್ಟ. ಏಕೆಂದರೆ ಲಬ್ಧವಾಗಿರುವ ಎಲ್ಲ ಭೇದ ಸೂಚ್ಯಂಕಗಳೂ ಸಹ ಸಂಭಾವ್ಯ ಸೂಚ್ಯಂಕಕ್ಕಿಂತ ಕಡಿಮೆಯಾಗಿವೆ. ಆದರೆ, ಹೊಂದಾಣಿಕಾ ಸಮಸ್ಯೆಗಳ ತೀವ್ರತೆಯಲ್ಲಿ ಸಾಧಾರಣ ಆತಂಕವುಳ್ಳ ಬಾಲಿಕೆಯರು, ತೀವ್ರ ಆತಂಕವುಳ್ಳ ಬಾಲಿಕೆಯರಿಗಿಂತ ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಏಕೆಂದರೆ ಈ ಎರಡು ಸಮಸ್ಯಾತೀವ್ರತೆಯ ಮಧ್ಯಾಂಕಗಳ ವ್ಯತ್ಯಾಸದ ಭೇದ ಸೂಚ್ಯಂಕವು ಸಂಭಾವ್ಯ ಸೂಚ್ಯಂಕಕ್ಕಿಂತ ಹೆಚ್ಚಾಗಿದೆ.

ಇದೇ ರೀತಿ ಸಾಧಾರಣ ಆತಂಕವುಳ್ಳ ಬಾಲಿಕೆಯರು ಹಾಗೂ ಕಡಿಮೆ ಆತಂಕವುಳ್ಳ ಬಾಲಿಕೆಯರ ಸಮಸ್ಯೆಗಳ ತೀವ್ರತೆಯನ್ನು ತುಲನೆ ಮಾಡಿದಾಗ ಎರಡು ವರ್ಗಗಳ ಸಮಸ್ಯೆಗಳನ್ನುಳಿದು ಉಳಿದ ಯಾವ ಸಮಸ್ಯಾ ವರ್ಗಗಳಲ್ಲಿಯೂ ಇವರಿಬ್ಬರಲ್ಲಿ ವ್ಯತ್ಯಾಸವಿಲ್ಲವೆಂಬುದು ಸ್ಪಷ್ಟವಾಗಿದೆ. ಮನರಂಜನಾ ಸಮಸ್ಯೆಗಳು ಹಾಗೂ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಆಚರಣಾ ಸಮಸ್ಯೆಗಳು ಸಾಧಾರಣ ಆತಂಕವುಳ್ಳ ವಿದ್ಯಾರ್ಥಿನಿಯರಲ್ಲಿ ಕಡಿಮೆ ಆತಂಕವುಳ್ಳ ವಿದ್ಯಾರ್ಥಿನಿಯರಿಗಿಂತ ಅಧಿಕವಾಗಿರುವುದು ವಿದಿತವಾಗಿದೆ. ಹಾಗೆಯೇ ತೀವ್ರ ಮತ್ತು ಕಡಿಮೆ ಆತಂಕವುಳ್ಳ ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ತುಲನೆ ಮಾಡಿದಾಗ ಇವರಿಬ್ಬರಲ್ಲಿ ಮೂರು ವಿಧವಾದ ಸಮಸ್ಯೆಗಳಲ್ಲಿ ಮಾತ್ರ ವ್ಯತ್ಯಾಸವಿದ್ದು ಉಳಿದ ವರ್ಗಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದಿರುವುದು ತಿಳಿದುಬಂದಿದೆ. ತೀವ್ರ ಆತಂಕವುಳ್ಳ ವಿದ್ಯಾರ್ಥಿನಿಯರಿಗೆ ಕಡಿಮೆ ಆತಂಕವುಳ್ಳ ವಿದ್ಯಾರ್ಥಿನಿಯರಿಗಿಂತ ವೈಯಕ್ತಿಕ ನ್ಯೂನತೆಯ ಸಮಸ್ಯೆಗಳು, ಮನರಂಜನಾ ಸಮಸ್ಯೆಗಳು ಹಾಗೂ ಆರ್ಥಿಕ ಸಮಸ್ಯೆಗಳು ಹೆಚ್ಚಾಗಿರುವುದು ಕಂಡು ಬಂದಿದೆ. ಒಟ್ಟಿನಲ್ಲಿ ವಿದ್ಯಾರ್ಥಿನಿಯರಲ್ಲಿರುವ ಆತಂಕ ಅವರ ಸಮಸ್ಯೆಗಳ ತೀವ್ರತೆಯ ಮೇಲೆ ಸಾಕಷ್ಟು ಪರಿಣಾಮವನ್ನು ಬೀರುತ್ತಿದೆ ಎಂದಾಯಿತು.

ಸಾಮಾಜಾರ್ಥಿಕ ಮಟ್ಟ ಮತ್ತು ಸಮಸ್ಯೆಗಳು.

ಮುಂದಿನ ಪಟ್ಟಿಯಲ್ಲಿ ಅವರ ಸಾಮಾಜಾರ್ಥಿಕ ಮಟ್ಟದಲ್ಲಿನ ವರ್ಗೀಕರಣದಿಂದ ಅವರಲ್ಲಿರುವ ಸಮಸ್ಯಾ ತೀವ್ರತೆಯನ್ನು ವಿವೇಚಿಸಲಾಗಿದೆ.

ಪಟ್ಟಿ 3

ಸಾಮಾಜಾರ್ಥಿಕ ದೃಷ್ಟಿಯಿಂದ ಬಾಲಕಿಯರ ಸಮಸ್ಯೆಗಳ ಮಧ್ಯಾಂಕ ವಿತರಣಾಂಕ ಮತ್ತು ಭೇದಸೂಚಕಾಂಕ.

ಕ್ರಮ ಸಂಖ್ಯೆ	ಸಮಸ್ಯೆಯುವರ್ಗ	ಉನ್ನತ ಸಾಮಾಜಾರ್ಥಿಕ ವರ್ಗ (ಸಂ = 79) ಮಧ್ಯಾಂಕ	ಉನ್ನತ ಸಾಮಾಜಾರ್ಥಿಕ ವರ್ಗ (ಸಂ = 79) ವಿತರಣಾಂಕ	ಮಧ್ಯಮ ಸಾಮಾಜಾರ್ಥಿಕ ವರ್ಗ (ಸಂ = 62) ಮಧ್ಯಾಂಕ	ಮಧ್ಯಮ ಸಾಮಾಜಾರ್ಥಿಕ ವರ್ಗ (ಸಂ = 62) ವಿತರಣಾಂಕ	ಕೆಳ ಸಾಮಾಜಾರ್ಥಿಕ ವರ್ಗ (ಸಂ = 99) ಮಧ್ಯಾಂಕ	ಕೆಳ ಸಾಮಾಜಾರ್ಥಿಕ ವರ್ಗ (ಸಂ = 99) ವಿತರಣಾಂಕ	ಭೇಡ ಸೂಚಿ	
೧.	ಆರೋಗ್ಯ, ಬೆಳವಣಿಗೆ ಮತ್ತು ಪ್ರಗತಿ ಸಮಸ್ಯೆಗಳು	14.22	7.10	15.55	9.00	16.55	7.75	0.96 0.59	1.99
೨.	ವೈಯಕ್ತಿಕ ನ್ಯೂನತೆಯ ಸಮಸ್ಯೆಗಳು	15.23	7.65	7.89	6.95	18.16	8.07	5.97** 8.56**	2.49*
೩.	ಸಾಮಾಜಿಕ ಸಂಬಂಧ ಸಮಸ್ಯೆಗಳು	12.95	7.95	13.21	7.80	16.09	8.50	0.16* 2.20*	2.55*
೪.	ಹೊಂದಾಣಿಕಾ ಸಮಸ್ಯೆಗಳು	13.65	8.10	14.34	8.55	17.51	8.10	0.49 2.33*	3.16**
೫.	ಆಕಾಂಕ್ಷೆ ಮತ್ತು ಜೀವನ ಧ್ಯೇಯ ಸಮಸ್ಯೆಗಳು	21.56	8.15	13.85	8.55	17.00	8.75	5.39** 2.24**	3.56
೬.	ಮನರಂಜನಾ ಸಮಸ್ಯೆಗಳು	11.87	9.15	13.86	8.55	15.99	9.15	1.29 1.25	2.94**
೭.	ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಮಸ್ಯೆಗಳು	15.17	8.65	14.25	8.65	16.95	13.35	0.45 1.58	1.09

1	2	3	4	5	6	7	8	9
೮.	ಶೈಕ್ಷಣಿಕ ಸಾಧನಾ ಸಮಸ್ಯೆಗಳು	13.58	8.70	14.18	7.00	16.55	8.50	0.40 1.92 2.30*
೯.	ಸಾಂಸ್ಕೃತಿಕ, ಸಾಂಪ್ರದಾಯಿಕ ಆಚರಣಾ ಸಮಸ್ಯೆಗಳು	10.95	8.30	14.17	7.50	17.46	8.45	2.41* 2.58** 3.12**
೧೦.	ಆರ್ಥಿಕ ಸಮಸ್ಯೆಗಳು	11.43	9.00	14.98	9.35	18.82	9.80	2.28* 2.48* 5.24**

ಸೂಚನೆ ಭೇದ ಸೂಚ್ಯಂಕಗಳನ್ನು ಮೊದಲೆರಡು, ಕೊನೆಯೆರಡು ಮತ್ತು ಮೊದಲ ಹಾಗೂ ಕೊನೆಯ ಸಾಮಾಜಾರ್ಥಿಕ ವರ್ಗಗಳ ತುಲನಾತ್ಮಕವಾಗಿ ಕೊಟ್ಟಿದೆ.

[*ಸಂಭಾವ್ಯ ಸೂಚ್ಯಾಂಕ $p<0.05$; **ಸಂಭಾವ್ಯ ಭೇದ ಸೂಚ್ಯಂಕ $p<0.01$]

ಉನ್ನತ ಹಾಗೂ ಮಧ್ಯಮ ಸಾಮಾಜಾರ್ಥಿಕ ವರ್ಗದ ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ತುಲನೆ ಮಾಡಿದಾಗ ಆರು ಸಮಸ್ಯಾವರ್ಗಗಳಲ್ಲಿ ಭೇದವಿಲ್ಲದೆ ಇದ್ದು, ನಾಲ್ಕು ಸಮಸ್ಯಾ ವರ್ಗಗಳಲ್ಲಿ ಮಾತ್ರ ವ್ಯತ್ಯಾಸವಿರುವುದು ಕಂಡು ಬಂದಿತು. ವೈಯಕ್ತಿಕ ನ್ಯೂನತೆ ಮತ್ತು ಆಕಾಂಕ್ಷೆ ಹಾಗೂ ಜೀವನ ಧ್ಯೇಯ ಸಮಸ್ಯೆಗಳು ಉನ್ನತ ಸಾಮಾಜಾರ್ಥಿಕ ವರ್ಗವ ವಿದ್ಯಾರ್ಥಿನಿಯರಲ್ಲಿ ಮಧ್ಯಮ ಸಾಮಾಜಾರ್ಥಿಕ ವಿದ್ಯಾರ್ಥಿನಿಯರಿಂದ ಹೆಚ್ಚಾಗಿರುವುದು ಕಂಡುಬಂದಿತು. ಆದರೆ, ಉಳಿದ ಎರಡು ಸಮಸ್ಯಾವರ್ಗಗಳಾದ ಸಾಂಸ್ಕೃತಿಕ, ಸಾಂಪ್ರದಾಯಿಕ ಆಚರಣಾ ಸಮಸ್ಯೆಗಳು ಮಧ್ಯಮ ಸಾಮಾಜಾರ್ಥಿಕ ವರ್ಗದ ಹೆಣ್ಣು ಮಕ್ಕಳಲ್ಲಿ, ಉನ್ನತ ಸಾಮಾಜಾರ್ಥಿಕ ವರ್ಗದ ಹೆಣ್ಣ ಮಕ್ಕಳಿಗಿಂತ ಹೆಚ್ಚಾಗಿರುವುದು ಕಂಡುಬಂದಿತು.

ಹಾಗೆಯೇ, ಮಧ್ಯ ಮತ್ತು ಕೆಳ ಸಾಮಾಜಾರ್ಥಿಕ ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ಪರಿಶೀಲಿಸಿದಾಗ, ನಾಲ್ಕು ಸಮಸ್ಯಾವರ್ಗಗಳಲ್ಲಿ ಅಪರಿಬ್ಬರಿಗೆ ವ್ಯತ್ಯಾಸ ವಿಲ್ಲದೆ, ಉಳಿದ ಆರು ಸಮಸ್ಯಾವರ್ಗಗಳಲ್ಲಿ ಅವರಿಗೆ ವ್ಯತ್ಯಾಸವಿರುವುದು ಕಂಡು ಬಂದಿದೆ. ಈ ಎಲ್ಲ ಆರು ವರ್ಗಗಳಲ್ಲಿಯೂ, ಅಂದರೆ, ವೈಯಕ್ತಿಕ ನ್ಯೂನತಾ ಸಮಸ್ಯೆಗಳು, ಸಾಮಾಜಿಕ ಸಂಬಂಧ ಸಮಸ್ಯೆಗಳು, ಹೊಂದಾಣಿಕಾ ಸಮಸ್ಯೆಗಳು, ಆಕಾಂಕ್ಷೆ ಮತ್ತು ಜೀವನ ಧ್ಯೇಯ ಸಮಸ್ಯೆಗಳು, ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ಆಚರಣಾ ಸಮಸ್ಯೆಗಳು ಮತ್ತು ಆರ್ಥಿಕ ಸಮಸ್ಯೆಗಳು—ಇವೆಲ್ಲದರಲ್ಲಿಯೂ ಕೆಳ ಸಾಮಾಜಾರ್ಥಿಕ ವರ್ಗದ ವಿದ್ಯಾರ್ಥಿನಿಯರಲ್ಲಿ ಮಧ್ಯಮ ಸಾಮಾಜಾರ್ಥಿಕ ವರ್ಗದ ಹುಡುಗಿಯರಿಗಿಂತ ಹೆಚ್ಚು ತೀವ್ರ ಸಮಸ್ಯೆಗಳಿರುವಂತೆ ತಿಳಿದು ಬಂದಿದೆ.

ಉನ್ನತ ಹಾಗೂ ಕೆಳ ಮಟ್ಟದ ಸಾಮಾಜಾರ್ಥಿಕ ವರ್ಗಗಳ ವಿದ್ಯಾರ್ಥಿನಿಯರ ಸಮಸ್ಯೆಗಳ ತೀವ್ರತೆಯನ್ನು ಪರಿಶೀಲಿಸಿದಾಗ, ಒಂದೇ ಒಂದು ಸಮಸ್ಯಾವರ್ಗ, ಎಂದರೆ ನೈತಿಕ, ಧಾರ್ಮಿಕ ಮತ್ತು ಅಧ್ಯಾತ್ಮಿಕ ಸಮಸ್ಯೆಗಳನ್ನು ಬಿಟ್ಟು ಉಳಿದ ಎಲ್ಲ ವರ್ಗದ ಸಮಸ್ಯೆಗಳಲ್ಲಿಯೂ ಸಹ ಪರಸ್ಪರ ವ್ಯತ್ಯಾಸವಿರುವುದು ಕಂಡು ಬಂದಿತು. ಅಂದರೆ, ಕೆಳಮಟ್ಟದ ವಿದ್ಯಾರ್ಥಿನಿಯರಲ್ಲಿ ಆರೋಗ್ಯ, ಬೆಳವಣಿಗೆ, ಮತ್ತು ಪ್ರಗತಿ, ವೈಯಕ್ತಿಕ ನ್ಯೂನತೆಗಳು, ಸಾಮಾಜಿಕ ಸಂಬಂಧ, ಹೊಂದಾಣಿಕೆ, ಮನರಂಜನೆ, ಶೈಕ್ಷಣಿಕ ಸಾಧನೆ, ಸಾಂಸ್ಕೃತಿಕ ಸಾಂಪ್ರದಾಯಿಕ ಆಚರಣೆಗಳು ಹಾಗೂ ಆರ್ಥಿಕ ಸಮಸ್ಯೆಗಳೆಲ್ಲವೂ ಉನ್ನತ ಸಾಮಾಜಾರ್ಥಿಕ ವರ್ಗದ ಹುಡುಗಿಯರಿಗಿಂತ ಹೆಚ್ಚಾಗಿರುವುದು ಕಂಡುಬಂದಿತು. ಉಳಿದ ಇನ್ನೊಂದು ಸಮಸ್ಯೆಯ ವರ್ಗದಲ್ಲಿ ಮಾತ್ರ ಅಂದರೆ, ಆಕಾಂಕ್ಷೆ, ಮತ್ತು ಜೀವನ ಧ್ಯೇಯಗಳ ಸಮಸ್ಯೆಗಳು ಮಾತ್ರ. ಉನ್ನತ ಸಾಮಾಜಾರ್ಥಿಕ ವಿದ್ಯಾರ್ಥಿನಿಯರಲ್ಲಿ ಕೆಳ ಸಾಮಾಜಾರ್ಥಿಕ ವಿದ್ಯಾರ್ಥಿನಿಯರಿಗಿಂತ ತೀವ್ರವಾಗಿರುವುದು ವ್ಯಕ್ತವಾಯಿತು.

ಉಪಸಂಹಾರ

ಒಟ್ಟಿನಲ್ಲಿ ಈ ಅಧ್ಯಯನದಿಂದ ಮುಖ್ಯವಾಗಿ ಏಳನೆಯ ತರಗತಿಯಲ್ಲಿ ಕಲಿಯುತ್ತಿರುವ ಹುಡುಗಿಯರ ಸಮಸ್ಯೆಗಳ ಬಗ್ಗೆ ಹಲವು ಉಪಯುಕ್ತ ಅಂಶಗಳು ಕಂಡುಬಂದಿವೆ. ತಾಯಂದಿರು ಕೆಲಸಕ್ಕೆ ಹೋಗುವುದರಿಂದ ಅವರ ಹೆಣ್ಣು ಮಕ್ಕಳ ಬೆಳವಣಿಗೆಯ ಮೇಲೆ ಅಷ್ಟೊಂದು ಕೆಟ್ಟ ಪರಿಣಾಮವೇನೂ ಇರುವಂತೆ ಕಾಣುವುದಿಲ್ಲ. ಬದಲು ಕೆಲವು ವಿಷಯಗಳಲ್ಲಿ ಅದರಿಂದ ಅನುಕೂಲವಾಗಿರುವ ಅಂಶ ಪ್ರಕಟವಾಗಿದೆ. ಈ ವಿಷಯದಲ್ಲಿ ಹಿಂದಿನ ಅನೇಕ ಸಂಶೋಧನೆಗಳ ಬೆಂಬಲವಿದೆ.

ಹಾಗೆಯೇ ಮಕ್ಕಳಲ್ಲಿರುವ ಆತಂಕ ಅವರ ಸಮಸ್ಯೆಗಳಿಗೆ ಹೇಗೆ ಕಾರಣವಾಗಬಹುದು ಎನ್ನುವ ಅಂಶವನ್ನು ಸಹ ಈ ಅಧ್ಯಯನ ತಿಳಿಸಿಕೊಟ್ಟಿದೆ. ಹೆಚ್ಚು ಆತಂಕವುಳ್ಳ ಹುಡುಗಿಯರು ಹಾಗೂ ಸಾಧಾರಣ ಆತಂಕವುಳ್ಳ ಹುಡುಗಿಯರು ಕಡಿಮೆ ಆತಂಕವುಳ್ಳ ಹುಡುಗಿಯರಿಗಿಂತ ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಾರೆ ಎಂದು ಕಂಡುಬಂದಿದೆ. ಅಂದರೆ ವ್ಯಕ್ತಿಪ್ರಗತಿಗೆ ಮತ್ತು ಸಾಧನೆಗೆ ಆತಂಕ ಒಂದು ಅಡಚಣೆಯಾಗಬಹುದು ಮತ್ತು ಈ ಆತಂಕವನ್ನು ಕಡಿಮೆ ಮಾಡಲು ಶಿಕ್ಷಣ ಸಂಸ್ಥೆಗಳು ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ ಎನ್ನುವುದು ಸ್ಪಷ್ಟ.

ಅಂತೆಯೇ ವಿದ್ಯಾರ್ಥಿನಿಯ ಕುಟುಂಬದ ಸಾಮಾಜಾರ್ಥಿಕ ಮಟ್ಟ ಅವರ ಸರ್ವತೋಮುಖ ಪ್ರಗತಿಯನ್ನು ನಿರ್ಧರಿಸುವುದರಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎನ್ನುವುದು, ಈ ಸಂಶೋಧನೆ ತೋರಿಸಿಕೊಟ್ಟಿದೆ. ಕೆಳಮಟ್ಟದ ಸಾಮಾಜಾರ್ಥಿಕ ಮಟ್ಟದ ವಿದ್ಯಾರ್ಥಿನಿಯರಲ್ಲಿ ಅತ್ಯಂತ ಹೆಚ್ಚು ಸಮಸ್ಯೆಗಳು ಇರುವುದು ಸ್ಪಷ್ಟ. ಉನ್ನತ ಸಾಮಾಜಾರ್ಥಿಕ ಮಟ್ಟದಲ್ಲಿನ ಹುಡುಗಿಯರಲ್ಲಿ ಆಕಾಂಕ್ಷೆ ಮತ್ತು ಜೀವನ ಧ್ಯೇಯಗಳ ಸಮಸ್ಯೆ ಮಾತ್ರ ಹೆಚ್ಚಾಗಿದ್ದು, ಉಳಿದ ಎಲ್ಲ ವರ್ಗಗಳಲ್ಲಿಯೂ ಇತರರ ಸಮಸ್ಯೆಗಳು ಹೆಚ್ಚಾಗಿರುವುದು ಸ್ಪಷ್ಟವಾಗಿದೆ. ಅಂದರೆ, ಕುಟುಂಬದ ಹಾಗೂ ಸಾಮಾಜಿಕ ಪರಿಸರದ ಅನುಕೂಲ ಅನಾನುಕೂಲಗಳು ಹೆಣ್ಣುಮಕ್ಕಳ ಸಮಸ್ಯೆಗಳಿಗೆ ಬಹಳಷ್ಟು ಕಾರಣವಾಗಿವೆ. ಈ ದೃಷ್ಟಿಯಿಂದ ತಾಯಿಯು ಕೆಲಸದಲ್ಲಿರುವುದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮಗೊಂಡರೆ ಅದರಿಂದ ಮಕ್ಕಳ ಸಮಸ್ಯೆಗಳು ಬಹುವಾಗಿ ಕಡಿಮೆಯಾಗಬಹುದಾಗಿದೆ. ಒಟ್ಟಿನಲ್ಲಿ ಈ ದಿಶೆಯಲ್ಲಿ ಇನ್ನೂ ತೀವ್ರ ಹಾಗೂ ಹೆಚ್ಚು ಅಧ್ಯಯನಗಳ ಅವಶ್ಯಕತೆ ಇದೆ ಎನ್ನುವುದರಲ್ಲಿ ಸಂದೇಹವಿಲ್ಲ.

BIBLIOGRAPHY

Abel, et. al. (1958) 'Identifying problems of Adolescent girls' *Journal of Educational Research*, Vol. 58, No. 9, May-June 1965.
Adams, E Henry (1972) *Psychology of Adjustment*, The Ronald Press Co., New York

Buch, M. B. (1974) *'A Survey of Research in Education'*, C.A.S.E. M.S. University of Baroda, Baroda

–do– *'Second Survey of Research in Education'* (1979)

Best, John (1970) *'Research in Educaction'*, Prentice Hall Inc., New Jersey.

Devaki Jain (1975) *'Indian Women'*, Publications Division, Ministry of Information and Brodcasting, Govt. of India, New Delhi

Dinkmeyer (1967) *'Child Development–the emerging Self'*, Prentice-Hall of India Pvt. Ltd., New Delhi

Hurlock, E (1255) *'Adolescent Development'*, McGraw-Hill Book Co., Inc., New York

Kalpana Dasgupta (1976) *'Women on the Indian Scene'* Annotated Bibliography, Abhinav Publications, New Delhi

Memmeya, (1978) 'Gainful employment of women with small children' *Sociological Abstracts*, Volume 27, No. 3, August 1978

Sengupta, Padmini (1974) *'The Story of Women of India'*, Indian Book Company, New Delhi

Popham, W. James (1967) *'Eucational Statistics'*, *Use and Interpretation*, Harper and Row Publishers, New York

Nayar, R. Raman (1971) *Philosophical and Sociological Basis of Education*, College Book House, Trivandrum

Shantakumari (1973) 'A Study of the Problems of adolescent girls studying in Secondary Schools', Unpublished M.Ed. thesis submitted to Banglore University, Bangalore

Sharan, (1972) 'Ideal Perceived Role discrepency and Anxiety and adjustment of college students', *Journal of Psychological Research*, Vol. 16, No. 3, September 1972

Skinner (1961) Educational Psychology, Prentice Hall, New York

Sudha, B. G. (1977) 'A Study of a few socio-psychological correlates of problems of adolescent girls of age group ten to sixteen' Ph.D. thesis (unpublished), submitted to the Bangalore University, Bangalore

Sukhendra, Lal Chopra (1967) 'Parental Occupation and Academic Achievement of High school students in India' Journal of Educational Research, Vol. 60, No. 8, April 1967

ಪ್ರತಿಚಯನವೆಂದರೇನು ? ಯಾಕೆ ?

ಟಿ. ಶ್ರೀವೆಂಕಟರಮಣ

ಫೆಬ್ರುವರಿ ಉಳಿದ ತಿಂಗಳುಗಳಂತಲ್ಲ. ಅದರ ಉದ್ದ ಇಪ್ಪತ್ತೆಂಟೇ ದಿವಸಗಳು ; ಇಲ್ಲ, ನಾಲ್ಕು ವರ್ಷಗಳಿಗೊಮ್ಮೆ ಮಾತ್ರ ಬಂದು ಸೇರಿಕೊಳ್ಳುವ ಇಪ್ಪತ್ತೊಂಭತ್ತನೆ ದಿವಸ. ಜನವರಿ ಸವೆದು ಹೊಸ ಕ್ಯಾಲೆಂಡಿರಿನ ಮೊದಲ ಪುಟ ದಾಟಿ ಫೆಬ್ರುವರಿ ಮೊದಲಾಗುವಾಗ ಅತ್ಯಂತ ಕಿರು ತಿಂಗಳಲ್ಲಿರಲು ನಮಗೆ ತುಂಬ ಹರುಷ. ಅಂದು ಅಂಥ ದಿನ, ಶುಕ್ರವಾರ. ಸಂಜೆಯ ಸಮಯ. ನಾವು ಮೂವರು ಗೆಳೆಯರು ಎಂದಿನಂತೆ ಸೇರಿದ್ದೆವು, ಬಿಸಿಕಾಫಿ ಸವಿಯುತ್ತ. ಹರಟೆ ಗೊತ್ತುಗುರಿಯಿಲ್ಲದೆ ಬಹಳ ಸಾಗಿತ್ತು. ಮೊತ್ತ ಹೆಚ್ಚು ಕಡಿಮೆ ಸೊನ್ನೆಯಾಗಿರುವ ಹರಟೆಯಿಂದ ಉಪಯೋಗವಿಲ್ಲವೆಂದೋ ಏನೋ, ಇದ್ದಕ್ಕಿದ್ದಂತೆ ಶೇಷಗಿರಿ (ಸಂಖ್ಯಾಕಲನ ವಿಜ್ಞಾನದ ಅಧ್ಯಾಪಕ) ಮಾತಿನ ಸೂತ್ರ ವಹಿಸಿಕೊಂಡ. "ನಮ್ಮ ಮಾತುಕತೆಯನ್ನು ಈಗ ಒಂದು ನಿರ್ದಿಷ್ಟ ದಿಕ್ಕಿಗೆ ತಿರುಗಿಸಿ ಮುಂದುವರಿಸೋಣ. ನಿತ್ಯಜೀವನದಲ್ಲಿ ಪದೇ ಪದೇ ಬಳಸಲಾಗುವ ಒಂದು ವಿಧಾನದ ಸಂಖ್ಯಾಕಲನೀಯ ತಳಹದಿಯನ್ನು ಇಂದು ನಿಮಗೆ ತಿಳಿಸಲು ಪ್ರಯತ್ನಿಸುತ್ತೇನೆ. ಅತ್ಯಂತ ಸರಳ ನಿದರ್ಶನವೊಂದರಿಂದ ಆರಂಭಿಸೋಣ. ದ್ರಾಕ್ಷಿ ಹಣ್ಣುಗಳೆಂದರೆ ನಮಗೆಲ್ಲ ತುಂಬ ಇಷ್ಟ. ಮಾರುಕಟ್ಟೆಯಲ್ಲಿ ದ್ರಾಕ್ಷಿಯ ಗೊಂಚಲು ಗೊಂಚಲುಗಳೇ ತೂಗಾಡುತ್ತಿರುವುದನ್ನು ಕಂಡಾಗಲಂತೂ ನಾವೂ ಸ್ವಲ್ಪ ಕೊಳ್ಳಲು ಬಯಸುವುದು ಸಹಜ. ಅವು ಸಿಹಿಯಾಗಿರಬೇಕು, ಉತ್ಕೃಷ್ಟವಾಗಿರಬೇಕು ಎಂಬುದು ನಮ್ಮ ಇನ್ನೊಂದು ಬಯಕೆ. ಆದರೆ ಮಾರುವವನ ಶಿಫಾರಸ್ಸನ್ನು ನಂಬುವುದು ಕಷ್ಟ. ನಮ್ಮ ನಾಲಿಗೆ ಚಪಲವನ್ನು ಅವನು ಗೌರವಿಸುವವನಲ್ಲ. ಪ್ರತಿ ಹಣ್ಣನ್ನು ತಿಂದು ನೋಡುವುದೂ ಆಗದ ಕೆಲಸ. ಆದ್ದರಿಂದ ಗೊಂಚಲುಗಳಿಂದ ಕೆಲವನ್ನು ಮಾತ್ರ ಆಯ್ದು, ರುಚಿನೋಡಿ ದ್ರಾಕ್ಷಿಯ ಗುಣದ ಬಗ್ಗೆ ತೀರ್ಮಾನಿಸುತ್ತೇವೆ. ಈ ರೀತಿ ಅಂಶದಿಂದ ಪೂರ್ಣದ ಕುರಿತು ಅರಿಯುವುದು ಲಾಭಕರವಾಗಿರುವ ಮತ್ತು ಕೆಲವೊಮ್ಮೆ ಅನಿವಾರ್ಯವಾಗಿರುವ ಸನ್ನಿವೇಶಗಳು ವ್ಯವಹಾರದಲ್ಲಿ ಆಗಾಗ ಇದಿರಾಗುತ್ತವೆ. ಇಂಥ ಅಂಶಕ್ಕೆ ಪ್ರತಿಚಯ, ಪೂರ್ಣಕ್ಕೆ ಸಮಷ್ಟಿ ಮತ್ತು ಆಯ್ಕೆಗೆ ಪ್ರತಿಚಯನ ವೆನ್ನುತ್ತಾರೆ. ಇವಕ್ಕೆ ಸಂಬಂಧಿಸಿದ ವಿವರಗಳನ್ನು ಪ್ರತಿಚಯನ ಸಿದ್ಧಾಂತ ನೀಡುತ್ತದೆ. ಪ್ರತಿಚಯದಿಂದ ಸಮಷ್ಟಿಯ ಬಗ್ಗೆ ತಿಳಿಯುವ ಬಯಕೆ ಬಹಳ ಹಳೆಯದು. ಆದರೆ ಪ್ರತಿಚಯನ ವಿಧಾನಗಳನ್ನು ಸಂಖ್ಯಾಕಲನೀಯ

ತಳಹದಿಯ ಮೇಲೆ ಇರಿಸುವ ಸಫಲ ಪ್ರಯತ್ನ ಕಳೆದ ನಾಲ್ಕೈದು ದಶಕಗಳಲ್ಲಿ ಮಾತ್ರ ನಡೆದಿದೆ. ಅಂಥ ಕೆಲವು ವಿಧಾನಗಳ ಮತ್ತು ಅನುಷ್ಠಾನದಲ್ಲಿ ಅವನ್ನು ಬಳಸಿಕೊಳ್ಳಬಹುದಾದ ಕೆಲವು ಸನ್ನಿವೇಶಗಳ ಕುರಿತು ಈಗ ಹೇಳುತ್ತೇನೆ." ಅಷ್ಟರಲ್ಲಿ ಒಳಗಿಂದ ಒಗ್ಗರಣೆ ಸದ್ದು, ಘಮಘಮ ವಾಸನೆ. ಸನಿಹದ ಭವಿಷ್ಯ ಉತ್ತಮವಾಗಲಿರುವ ಖಚಿತ ಸೂಚನೆ. ಹರಟೆಮಲ್ಲರ ಅವಶ್ಯಕತೆಗಳೇನೇನು ಎಂಬುದು ನನ್ನವಳಿಗೆ ಚೆನ್ನಾಗಿ ಗೊತ್ತು.

ಶೇಷಗಿರಿ ಮುಂದುವರಿಸಿದ. "ಸಂಖ್ಯಾಕಲನ ವಿಜ್ಞಾನದಲ್ಲಿ ಸಮಷ್ಟಿಯ ಪರಿಕಲ್ಪನೆ ಸಾಕಷ್ಟು ಸಾರ್ವತ್ರಿಕವಾದುದು. ವಸ್ತುಗಳ ಯಾವುದೇ ಒಂದು ಸಮಗ್ರವನ್ನು ಸಮಷ್ಟಿ ಎನ್ನುತ್ತೇವೆ. ಒಂದು ತೋಟದಲ್ಲಿರುವ ಎಲ್ಲ ದ್ರಾಕ್ಷೆ ಗೊಂಚಲುಗಳ ಸಮಷ್ಟಿ, ಬೆಂಗಳೂರು ನಗರದಲ್ಲಿರುವ ಎಲ್ಲ ಜನರ ಸಮಷ್ಟಿ, ವಿದ್ಯಾರಂಗದಲ್ಲಿ ಸುಧಾರಣೆ ಮಾಡಲು ಕೊಡಬಹುದಾದ ಎಲ್ಲ ಸೂಚನೆಗಳ ಸಮಷ್ಟಿ ಇವು ಮೂರು ನಿದರ್ಶನಗಳು. ಮೊದಲನೆಯದು ನಿರ್ಜೀವ ವಸ್ತುಗಳ ಒಂದು ಸಮಷ್ಟಿ. ಎರಡನೆಯದು ಜೀವಿಗಳ ಒಂದು ಸಮಷ್ಟಿ. ಇವೆರಡರಲ್ಲೂ ಇರುವ ವಸ್ತುಗಳ ಸಂಖ್ಯೆ ಸಾಂತ. ಮೂರನೆಯದು ಕಾಲ್ಪನಿಕ ಸಮಷ್ಟಿಯ ಒಂದು ಉದಾಹರಣೆ. ಅದಲ್ಲದೆ ಇದೊಂದು ಅನಂತ ಸಮಷ್ಟಿ, ಯಾಕೆಂದರೆ ವ್ಯಕ್ತಪಡಿಸ ಬಹುದಾದ ಸೂಚನೆಗಳ ಒಟ್ಟು ಸಂಖ್ಯೆ ಅಪರಿಮಿತ."

"ಸಮಷ್ಟಿಯೊಂದರ ಬಗ್ಗೆ ತಿಳಿಯಲು ಎರಡು ವಿಧಾನಗಳಿವೆ. ಮೊದಲನೆಯದು ಸಮಷ್ಟಿಯಲ್ಲಿರುವ ಪ್ರತಿವಸ್ತುವನ್ನೂ ಗಮನಿಸುವುದು. ಇದು ಪೂರ್ಣ ಗಣನೆ. ಎರಡನೆಯದು ಸಮಷ್ಟಿಯಿಂದ ಆಯ್ದ ಕೆಲವು ವಸ್ತುಗಳಿಗೆ ಮಾತ್ರ ನಮ್ಮ ಗಮನವನ್ನು ಸೀಮಿತಗೊಳಿಸುವುದು ಮತ್ತು ಆ ಮೂಲಕ ಸಮಷ್ಟಿಯ ಬಗ್ಗೆ ಅನುಮಾನಿಸುವುದು. ಇದೇ ಪ್ರತಿಚಯನ ವಿಧಾನ. ಆದರೆ ಕೆಲವೊಮ್ಮೆ ಈ ಎರಡು ವಿಧಾನಗಳ ಪೈಕಿ ಒಂದನ್ನು ಆರಿಸಿಕೊಳ್ಳುವ ಪ್ರಶ್ನೆ ನಿಜವಾಗಿ ಏಳುವುದಿಲ್ಲ. ಉದಾಹರಣೆಗಾಗಿ, ನಗರದ ಪ್ರತಿಯೊಬ್ಬ ಪ್ರಜೆಯ ಕುರಿತು ಕೆಲವು ವಿವರ ಬೇಕಾಗಿರುವಾಗ ಪೂರ್ಣಗಣನೆ ಅನಿವಾರ್ಯ. ಆದರೆ ವಿದ್ಯುದ್ದೀಪಗಳ ಬಾಳಿಕೆಯನ್ನು ಅಂದಾಜುಮಾಡುವ ಸಂದರ್ಭದಲ್ಲಿ (ಆಯ್ದ ದೀಪಗಳನ್ನು) ಅವು ಉರಿದುಹೋಗುವ ತನಕ ಸತತವಾಗಿ ಬಳಸಬೇಕಾಗುವುದರಿಂದ, ಅಂಥ ಪರೀಕ್ಷೆಯ ಬಳಿಕ ದೀಪಗಳು ನಿರುಪಯುಕ್ತ. ಇದೊಂದು ವಿನಾಶಕಾರಿ ಪರೀಕ್ಷೆ. ಕ್ಷಿಪಣಿಗಳ ಪರೀಕ್ಷೆ, ಬಾಂಬುಗಳ ಪರೀಕ್ಷೆ ಇನ್ನೆರಡು ಅಂಥ ಪ್ರಸಂಗಗಳು. ಈ ಸಂದರ್ಭಗಳಲ್ಲಿ ಪೂರ್ಣಗಣನೆ ಸ್ಪಷ್ಟವಾಗಿ ಅವ್ಯಾವಹಾರಿಕ. ಪ್ರತಿಚಯನವೇ ನಮಗಿರುವ ಮಾರ್ಗ." ಅಷ್ಟರಲ್ಲಿ ಬಳೆಗಳ ಸದ್ದು. ದೊಡ್ಡ ತಟ್ಟೆಗಳಲ್ಲಿ ತುಂಬ ಬಿಸಿಬಿಸಿ ಉಪ್ಪಿಟ್ಟು. ಮಾತು ನಿಂತಿತು. ಮೂವರೂ ಕೈ ಮುಂದೆ ಚಾಚಿ ತಿಂಡಿಯನ್ನು ಸ್ವಾಗತಿಸಿದೆವು.

ನನ್ನವಳೆಂದಳು "ನೋಡಿ, ಈ ಉಪ್ಪಿಟ್ಟಿನ ರುಚಿಯನ್ನು ಅರಿಯಲು ಪ್ರತಿಚಯನ ಸಾಕು. ನೀವೆಲ್ಲ ಯಾವ ಮಾರ್ಗ ಅನುಸರಿಸಬೇಕೆಂದಿರುವಿರಿ ?" ಬಳಿಕ ನಸುನಕ್ಕು, ಹಿಂತಿರುಗಿ ಒಳನಡೆದಳು.

ತಿಂಡಿಯ ಪೂರ್ಣಗಣನೆ ನಡೆಯುತ್ತಿರುವಾಗ ಶೇಷಗಿರಿ ಮುಂದುವರಿಸಿದ. "ಪೂರ್ಣಗಣನೆ ಮತ್ತು ಪ್ರತಿಚಯನ ವಿಧಾನಗಳಲ್ಲೊಂದನ್ನು ಆರಿಸಬೇಕಾಗಿರುವಾಗ ಕೆಲವು ನಿರ್ಧಾರಕ ಅಂಶಗಳಿವೆ. ಸಮಷ್ಟಿಯ ಭಾಗವೊಂದನ್ನು ಮಾತ್ರ ಗಮನಿಸಲು ತಗಲುವ ಹಣದ ವೆಚ್ಚ ಪೂರ್ಣಗಣನೆಗೆ ತಗಲುವ ವೆಚ್ಚಕ್ಕಿಂತ ಸಾಮಾನ್ಯವಾಗಿ ಕಡಿಮೆ. ವಿವರಗಳನ್ನು ಸಂಗ್ರಹಿಸಿ, ವಿಶ್ಲೇಷಿಸಲು ತಗಲುವ ಸಮಯವೂ ಕಡಿಮೆ. ಆದರೆ ಹಣ ಮತ್ತು ಸಮಯಗಳ ಮಿತವ್ಯಯವೇ ಪ್ರತಿಚಯನದ ಪ್ರಧಾನ ಗುರಿಯಲ್ಲ. ಅಂದಾಜುಗಳ ನಿಖರತೆ ಅಧ್ಯಯನದ ಉದ್ದೇಶಕ್ಕೆ ಸಾಕೇ ಎಂಬುದು ಮುಖ್ಯ ಪ್ರಶ್ನೆ. ಜಾಗರೂಕತೆಯಿಂದ ಯೋಜಿಸಲ್ಪಟ್ಟು ಸರಿಯಾಗಿ ನಡೆಸಲಾದ ಪ್ರತಿಚಯನ ಅಧ್ಯಯನದಿಂದ ಪಡೆದ ಅಂದಾಜುಗಳು ಪೂರ್ಣಗಣನೆಯಿಂದ ದೊರೆಯಬಹುದಾದ ಫಲಿತಾಂಶಗಳಿಗಿಂತಲೂ ನಿಖರವಾಗಿರಬಲ್ಲವು ? ಉದ್ದೇಶಿತ ಗುರಿಗೆ ಸಮೀಪವಿರಬಲ್ಲವು ಎಂಬುದು ತೋರಿಕೆಗೆ ಸೋಜಿಗದ ಒಂದು ಸತ್ಯಸಂಗತಿ. ಅಧ್ಯಯನದೊಳಗೆ, ಅದು ಪೂರ್ಣವಾಗಿರಲಿ ಯಾ ಪ್ರತಿಚಯವಾಗಿರಲಿ, ದೋಷಗಳು ನುಸುಳುತ್ತವೆ. ಅವನ್ನು ಎರಡಾಗಿ ವಿಂಗಡಿಸಬಹುದು. (i) ಸಮಷ್ಟಿಯ ಎಲ್ಲ ವಸ್ತುಗಳನ್ನು ಗಮನಿಸದೆ ಕೆಲವನ್ನು ಮಾತ್ರ ಗಮನಿಸುವುದರಿಂದ ಉಂಟಾಗುವ ದೋಷ. ಇದಕ್ಕೆ ಪ್ರತಿಚಯನದೋಷ ಎಂದು ಹೆಸರು. ಪೂರ್ಣ ಅಧ್ಯಯನದಲ್ಲಿ ಇದು ಸೊನ್ನೆ. (ii) ಪ್ರತಿಚಯನೇತರ ದೋಷಗಳು. ಸಂದರ್ಶಿತ ವ್ಯಕ್ತಿಗಳು ತಪ್ಪಾಗಿ ಮಾಹಿತಿಕೊಡುವುದು. ಮಾಹಿತಿಕೊಡಲು ನಿರಾಕರಿಸುವುದು, ಮಾಹಿತಿ ಸಂಗ್ರದಲ್ಲಿ ದೋಷಗಳು, ಗಮನಿಸಬೇಕಾದ ಕೆಲವು ವಸ್ತುಗಳನ್ನು ಬಿಟ್ಟುಬಿಡುವುದು, ವಿಶ್ಲೇಷಣೆ ದೋಷಗಳು ಮೊದಲಾದವು ಈ ತರಹದವು. ಇಂಥ ದೋಷಗಳು ಪೂರ್ಣ ಮತ್ತು ಪ್ರತಿಚಯ ಅಧ್ಯಯನಗಳೆರಡರಲ್ಲೂ ಇರುತ್ತವೆಂಬುದನ್ನು ಗಮನಿಸಿ. ಪೂರ್ಣಗಣನೆಯ ಗಾತ್ರ ದೊಡ್ಡದಾಗಿದ್ದಲ್ಲಿ ಅದಕ್ಕೆ ತೊಡಗಿಸಬೇಕಾದ ಜನಬಲ ದೊಡ್ಡದು. ಬೃಹತ್‌ಗಾತ್ರದ ಪರಿಸರದಲ್ಲಿ ಪ್ರತಿಚಯನೇತರ ದೋಷಗಳ ಪರಿಮಾಣವನ್ನು ನಿಯಂತ್ರಿಸುವುದು ಕಠಿನ. ಆದರೆ ಪೂರ್ಣಗಣನೆಗೆ ಸಾಪೇಕ್ಷವಾಗಿ ಪ್ರತಿಚಯ ಅಧ್ಯಯನದ ಗಾತ್ರ ಮಿತವಾದದ್ದಾದ್ದರಿಂದ ಯೋಗ್ಯ ಕಾರ್ಯಕರ್ತರನ್ನು ನೇಮಿಸಿಕೊಂಡು, ಅವರಿಗೆ ಚೆನ್ನಾಗಿ ತರಬೇತಿ ನೀಡಿ, ಅಧ್ಯಯನವನ್ನು ಹೆಚ್ಚಿನ ದಕ್ಷತೆಯಿಂದ ನಡೆಸುವ ಮೂಲಕ ಇಲ್ಲಿನ ಪ್ರತಿಚಯನೇತರ ದೋಷಗಳನ್ನು ಹತ್ತಿಕ್ಕಬಹುದು. ಅದಲ್ಲದೆ ಸೂಕ್ತ ಪ್ರತಿಚಯನ ವಿಧಾನದ ಆಯ್ಕೆ ಮತ್ತು ಪ್ರತಿಚಯದ ಗಾತ್ರ ತೀರ ಕಡಿಮೆಯಿಲ್ಲದಂತೆ ಮಾಡುವುದರ ಮೂಲಕ ಪ್ರತಿಚಯನ ದೋಷದ ಪರಿ

ಮಾಣವನ್ನೂ ಇಳಿಸಬಹುದು. ಹೀಗಾಗಿ ಪ್ರತಿಚಯ ಅಧ್ಯಯನದಲ್ಲಿ ಪ್ರತಿಚಯ ಮತ್ತು ಪ್ರತಿಚಯನೇತರದೋಷಗಳ ಮೊತ್ತ ಅನುರೂಪವಾದ ಪೂರ್ಣ ಅಧ್ಯಯನದ ಪ್ರತಿಚಯನೇತರ ದೋಷಗಳಿಗಿಂತ ಸಾಕಷ್ಟು ಕಡಿಮೆಯಿರಬಹುದೆಂದು ನಿರೀಕ್ಷಿಸಬಹುದು. ಇಂಥ ಸಂಚಿತ ಅನುಭವ ಪ್ರಚಯನ ಅಧ್ಯಯನ ವಿಧಾನದ ಉಪಯುಕ್ತತೆಯನ್ನು ಹೆಚ್ಚಿಸುತ್ತದೆ. ಈ ತಂತ್ರದ ವ್ಯಾಪಕ ಬಳಕೆಗೆ ಒಂದು ಕಾರಣವೂ ಇದೇ.'' ಶೇಷಗಿರಿ ತುಸು ನಿಲ್ಲಿಸಿದ. ಶಶಿ ಮತ್ತು ನಾನು ಸುಮ್ಮನಿದ್ದೆವು. ಒಳಸೇರಿದ ಉಪ್ಪಿಟ್ಟನ್ನು ಸಾಂತ್ವನಗೊಳಿಸಲೋ. ಏನೋ ಕಾಫಿ ಮತ್ತೊಂದು ಬಾರಿ ಬಂತು. ನಮಗೂ ಅದೇ ಬೇಕಾಗಿತ್ತು. ಯಾಂತ್ರಿಕವಾಗಿ ಕಾಫಿಯನ್ನು ಸ್ವೀಕರಿಸಿದೆವು. ಶೇಷಗಿರಿ ಮಾತು ಮುಂದುವರಿಸಿದ.

"ಜೀವನದಲ್ಲಿ ಎಲ್ಲ ಪ್ರತಿಚಯನ ಸಂದರ್ಭಗಳೂ ಗೊಂಚಲಿಂದ ದ್ರಾಕ್ಷೆ ಕಿತ್ತು ರುಚಿನೋಡುವಷ್ಟು ಸರಳ ಪ್ರಸಂಗಗಳಲ್ಲ. ಒಂದೇ ಗೊಂಚಲಿನ ಹಣ್ಣುಗಳ ರುಚಿ ಒಂದೇ ರೀತಿಯಿದೆ ಎಂದು ನಂಬಬಹುದಾದ್ದರಿಂದ ಆಯ್ದ ಹಣ್ಣು ಯಾವುದೆಂಬುದು ಅಪ್ರಾಸಂಗಿಕ. ಆದರೆ ಸಮಷ್ಟಿಯ ವಸ್ತುಗಣದಲ್ಲಿ ಸಾಕಷ್ಟು ಏರಿಳಿತವಿರುವ ಸಂದರ್ಭದಲ್ಲಿ ಆಯ್ದ ವಸ್ತು ಯಾವುದೆಂಬುದು ಮುಖ್ಯ. ಅಂದರೆ ಬೇರೆ ಬೇರೆ ಕ್ಲಿಷ್ಟ ಪರಿಸರಗಳಿಗೆ ಹೊಂದಿಕೊಳ್ಳುವ ಪ್ರತಿಚಯನ ತಂತ್ರಗಳ ರಚನೆ ಅವಶ್ಯವೆಂದಾಯಿತು. ಅಂಥ ಕೆಲವು ತಂತ್ರಗಳ ಬಗ್ಗೆ ಈಗ ಹೇಳುತ್ತೇನೆ".

"ಐದೇ ಐದು ವಸ್ತುಗಳಿರುವ ಒಂದು ಸಮಷ್ಟಿಯನ್ನು ನಿದರ್ಶನವಾಗಿ ತೆಗೆದುಕೊಳ್ಳೋಣ. ವಿವರಣೆಯ ಅನುಕೂಲತೆಗಾಗಿ ಆ ವಸ್ತುಗಳನ್ನು A, B, C, D, E ಎಂದು ಸೂಚಿಸೋಣ. ಅವುಗಳಿಂದ ಮೂರು ವಸ್ತುಗಳ ಒಂದು ಪ್ರತಿಚಯ ಬೇಕಾಗಿದೆ. ಅಂಥ ಬೇರೆ ಬೇರೆ ಪ್ರತಿಚಯಗಳ ಒಟ್ಟುಸಂಖ್ಯೆ $\binom{5}{3} = \frac{5!}{3!\ 2!} = 1$ (ಆ ಪ್ರತಿಚಯಗಳು ಹೀಗಿವೆ.

ABC	ABD	ABE	ACD	ACE
ADE	BCD	BCE	BDE	CDE

ಇಂಥ ಸಂದರ್ಭವನ್ನು ಸಾರ್ವತ್ರಿಕವಾಗಿ ವಿವರಿಸಲು 5, 3 ಗಳ ಬದಲು ಸಂಜ್ಞೆಗಳನ್ನು ಬಳಸುತ್ತೇವೆ. ಸಮಷ್ಟಿಯಲ್ಲಿರುವ ವಸ್ತುಗಳ ಒಟ್ಟುಸಂಖ್ಯೆ N ಮತ್ತು

ಪ್ರತಿಚಯದಲ್ಲಿರಬೇಕಾಗಿರುವ ವಸ್ತುಗಳ ಒಟ್ಟು ಸಂಖ್ಯೆ n ಎಂದಾದರೆ, ಆಗ ಪಡೆಯಬಹುದಾದ ವಿಭಿನ್ನ ಪ್ರತಿಚಯಗಳ ಒಟ್ಟು ಸಂಖ್ಯೆ

$$\binom{N}{n} = \frac{N!}{n!\,(N-n)!}\ .$$

ಈ $\binom{N}{n}$ ಪ್ರತಿಚಯಗಳ ಪೈಕಿ ಒಂದನ್ನು ಆರಿಸಬೇಕಾಗಿದೆ. ಒಂದು ನಿರ್ದಿಷ್ಟ ಪ್ರತಿಚಯವನ್ನು ಆಯ್ಕೆಮಾಡುವ ಸಂಭವತೆಯೇನು ಎಂಬ ಪ್ರಶ್ನೆ ಸಹಜ, ಸಾಧ್ಯವುಳ್ಳ $\binom{N}{n}$ ಪ್ರತಿಚಯಗಳ ಆಯ್ಕೆ ಸಂಭವತೆಗಳು ಒಂದಕ್ಕೊಂದು ಸಮವಿರುವಂತೆ ಮಾಡುವುದು ಒಂದು ಕ್ರಮ. ಇದಕ್ಕೆ ಸರಳ ಯಾದೃಚ್ಛಿಕ ಪ್ರತಿಚಯನವೆಂದು ಹೆಸರು. ಒಂದಲ್ಲವೊಂದು ಪ್ರತಿಚಯವನ್ನು ಆಯ್ಕೆಮಾಡಲೇ ಬೇಕಾದ್ದರಿಂದ ಎಲ್ಲ ಆಯ್ಕೆ ಸಂಭವತೆಗಳ ಮೊತ್ತ 1. ಆದ್ದರಿಂದ ಯಾವುದೇ ನಿರ್ದಿಷ್ಟ ಪ್ರತಿಚಯವನ್ನು ಪಡೆಯುವ ಸಂಭವತೆ $1 / \binom{N}{n}$. ” ಅಷ್ಟರಲ್ಲಿ ಶಶಿ ಕೇಳಿದ. “ಅನುಷ್ಠಾನದಲ್ಲಿ ಈ ಸಂಭವತೆಗಳು ಪರಸ್ಪರ ಸಮವಿರುವಂತೆ ಮಾಡುವ ಬಗೆ ಹೇಗೆ ? ಅದಕ್ಕೂ ಏನಾದರೂ ವಿಶೇಷ ತಂತ್ರಗಳಿವೆಯೇ ? ” ಶೇಷಗಿರಿಗೆ ಈ ಪ್ರಶ್ನೆ ತುಂಬ ಹಿಡಿಸಿತು. ಅವನು ಹೇಳಿದ. “ಇದು ಸಂದರ್ಭೋಚಿತ ಪ್ರಶ್ನೆ. ಇದಕ್ಕೆ ಉತ್ತರ ಹೀಗಿದೆ. ಸಮಷ್ಟಿಯಲ್ಲಿರುವ N ವಸ್ತುಗಳನ್ನು 1, 2,...,N ಎಂದು ಸಂಖ್ಯೆಗಳಿಂದ ನಮೂದಿಸಬೇಕು. ಬಳಿಕ 1 ಮತ್ತು N ಗಳ ನಡುವೆ n ಸಂಖ್ಯೆಗಳನ್ನು ಯಾದೃಚ್ಛಿಕವಾಗಿ ಆರಿಸಬೇಕು. ಅಂಥ ಆಯ್ಕೆಯನ್ನು ನಡೆಸುವ ಒಂದು ವಿಧಾನವಿದು : 1 ರಿಂದ N ವರೆಗಿನ ಸಂಖ್ಯೆಗಳನ್ನು ಒಂದೇ ತೆರನ ಬಿಲ್ಲೆಗಳ ಮೇಲೆ ಬರೆದು, ಅವನ್ನು ಚೆನ್ನಾಗಿ ಕಲಸಿ, ಅವುಗಳ ಪೈಕಿ n ಬಿಲ್ಲೆಗಳನ್ನು ಯಾದೃಚ್ಛಿಕವಾಗಿ ಆರಿಸುವುದು. ಯಾದೃಚ್ಛಿಕ ಎಂದರೆ at random ಅನ್ನುತ್ತಾರಲ್ಲ, ಅದು. ಆಯ್ದ ಬಿಲ್ಲೆಗಳ ಮೇಲಿರುವ ಸಂಖ್ಯೆಗಳು ಪ್ರತಿಚಯದಲ್ಲಿರಬೇಕಾದ ವಸ್ತುಗಳನ್ನು ಸೂಚಿಸುತ್ತವೆ. ಬಿಲ್ಲೆಗಳನ್ನು ಒಟ್ಟೊಟ್ಟಿಗೆ ಆರಿಸಿದರೆಯೂ ಆಯ್ದ ಬಿಲ್ಲೆಗಳನ್ನು ಸಮಷ್ಟಿಗೆ ಮರಳಿಸದೆ ಮುಂದಿನ ಆಯ್ಕೆಗಳನ್ನು ನಡೆಸಿದರೆ ಸಮಷ್ಟಿಯ ಯಾವ ವಸ್ತುವೂ ಪ್ರತಿಚಯದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಕಾಣಿಸಿಕೊಳ್ಳದಂತಾಗುವುದು. ಆದರೆ ಆಚರಣೆಯಲ್ಲಿ ಈ ವಿಧಾನದ ಬಳಕೆ ಅಪರೂಪ. ಇದಕ್ಕೆ ಸಮಾನವಾಗಿರುವ, ಬಳಕೆಗೆ ಅತ್ಯಂತ ಸರಳ ಮತ್ತು ಅನುಕೂಲವಾಗಿರುವ, ಇನ್ನೊಂದು ರೀತಿ ಯಾದೃಚ್ಛಿಕ ಸಂಖ್ಯೆಗಳ-ಕೋಷ್ಟಕವನ್ನು ಬಳಸುವುದು. ಯಾಂತ್ರಿಕ ಪ್ರಕ್ರಮಗಳ ನೆರವಿನಿಂದ ಇಂಥ ಕೋಷ್ಟಕಗಳನ್ನು

ರಚಿಸಲಾಗಿದೆ. ಅಲ್ಲಿರುವ ಸಂಖ್ಯೆಗಳನ್ನು ಯಾದೃಚ್ಛಿಕತೆಗಾಗಿ ಕೂಲಂಕಷ ಪರೀಕ್ಷೆಗೊಳಪಡಿಸಲಾಗಿದೆ. ಈಗ ಅಂಥ ಮುದ್ರಿತ ಕೋಷ್ಟಕಗಳು ದೊರೆಯುತ್ತವೆ. ಸಾಮಾನ್ಯವಾಗಿ ಎರಡು ಅಥವಾ ನಾಲ್ಕು ಅಂಕೆಗಳ ಗಣಗಳಲ್ಲಿ ಈ ಸಂಖ್ಯೆಗಳನ್ನು ವ್ಯವಸ್ಥೆಗೊಳಿಸಿ, ಸಾವಿರಸಂಖ್ಯೆಗಳ ಸಮೂಹಗಳಾಗಿ ವಿಭಾಗಿಸಲಾಗಿರುತ್ತದೆ. ಅಮೇರಿಕದ Rand Corporation ಒಂದು ಮಿಲಿಯನ್ ಯಾದೃಚ್ಛಿಕ ಸಂಖ್ಯೆಗಳಿರುವ ಕೋಷ್ಟಕವನ್ನು ಪ್ರಕಟಿಸಿದೆ. ಇದನ್ನು ಬಳಸಿ ಪ್ರತಿಚಯ ಆಯ್ಕೆಯ ವಿಧಾನ ವಿಶದವಾಗಲು ಒಂದು ನಿದರ್ಶನ ಗಮನಿಸಿ. 600 ವಸ್ತುಗಳಿರುವ ಸಮಷ್ಟಿಯಿಂದ 20 ವಸ್ತುಗಳ ಪ್ರತಿಚಯ ಬೇಕಾಗಿದೆ. ಸಮಷ್ಟಿಯಲ್ಲಿರುವ ವಸ್ತುಗಳನ್ನು 1 ರಿಂದ 600 ವರೆಗೆ ಸಂಖ್ಯೆಗಳಿಂದ ನಮೂದಿಸಬೇಕು. ಬಳಿಕ ಯಾದೃಚ್ಛಿಕ ಸಂಖ್ಯೆಗಳ ಕೋಷ್ಟಕದ ಯಾವ ಭಾಗದಿಂದಾದರೂ ಆರಂಭಿಸಿ, ಮೂರು ಅಂಕೆಗಳುಳ್ಳ ಅನುಕ್ರಮ ಯಾದೃಚ್ಛಿಕ ಸಂಖ್ಯೆಗಳನ್ನು ಗುರುತಿಸಿಕೊಳ್ಳುತ್ತೇವೆ. 600ಕ್ಕಿಂತ ಹೆಚ್ಚಾಗಿರುವ ಯಾ ಒಂದಕ್ಕಿಂತ ಹೆಚ್ಚು ಬಾರಿ ಕಾಣಿಸಿಕೊಳ್ಳುವ ಸಂಖ್ಯೆಗಳನ್ನು ನಿರ್ಲಕ್ಷಿಸಿ, 20 ಸಂಖ್ಯೆಗಳನ್ನು ಪಡೆದರೆ ಅವು ಪ್ರತಿಚಯದಲ್ಲಿರಬೇಕಾದ ವಸ್ತುಗಳನ್ನು ಸೂಚಿಸುತ್ತವೆ. ಉದಾಹರಣೆಗೆ ಆ ಸಂಖ್ಯೆಗಳು 284, 444, 323, 424, 358, 521, 406, 565, 457, 078,... ಆಗಿರಬಹುದು. ಯಾದೃಚ್ಛಿಕ ಸಂಖ್ಯೆಗಳ ಕೋಷ್ಟಕದ ಉಪಯೋಗಗಳು ಇನ್ನೂ ಹಲವಿವೆ. ಈ ರೀತಿಯಾಗಿ ಆಯ್ಕೆ ನಡೆಸಿದರೆ ಸಾಧ್ಯವುಳ್ಳ ಎಲ್ಲ ಪ್ರತಿಚಯಗಳಿಗೆ ದೊರಕುವ ಆಯ್ಕೆ ಸಂಭವತೆಗಳು ಪರಸ್ಪರ ಸಮವೆಂದು ತೋರಿಸಬಹುದು.'' ಶೇಷಗಿರಿ ಹೇಳುತ್ತ ಹೋಗುತ್ತಿದ್ದ. ನಾವು ಕೇಳುತ್ತ ಹೋಗುತ್ತಿದ್ದೆವೇ ಇಲ್ಲವೇ ಎಂಬುದು ಈಗ ಜ್ಞಾಪಕವಿಲ್ಲ. ಕೇಳುವಂತೆ ನಟಿಸುತ್ತಿದ್ದುದಂತೂ ನಿಜ ; ಯಾಕೆಂದರೆ ಶೇಷಗಿರಿ ಶಿಸ್ತಿನ ಪ್ರತಿರೂಪ. ಶ್ರೋತೃಗಳ ಅಸಡ್ಡೆ ಅವನನ್ನು ದೂರ್ವಾಸನಾಗಿಸುತ್ತಿತ್ತು.

ಮಾತಿನ ಚಕ್ರ ಮತ್ತೆ ಉರುಳತೊಡಗಿತು. ''ಪ್ರತಿಚಯ ಆಯ್ಕೆಯ ವಿಧಾನ ಹೇಳಿದೆ. ಈಗ ಪ್ರತಿಚಯ ಮೌಲ್ಯಗಳಿಂದ ಸಮಷ್ಟಿ ಮೌಲ್ಯಗಳನ್ನು ಅಂದಾಜಿಸುವ ಕುರಿತು ತಿಳಿಸುತ್ತೇನೆ. 600 ಮನೆಗಳಿರುವ ಒಂದು ಹಳ್ಳಿಯ ಒಟ್ಟು ಜನಸಂಖ್ಯೆ ಮತ್ತು ಮನೆಗಳಲ್ಲಿ ಸದಸ್ಯರ ಸರಾಸರಿ ಸಂಖ್ಯೆಗಳನ್ನು ಅಂದಾಜಿಸಬೇಕಾಗಿದೆ. 20 ಮನೆಗಳ ಸರಳ ಯಾದೃಚ್ಛಿಕ ಪ್ರತಿಚಯವನ್ನು ಪಡೆದು ಅದರಲ್ಲಿರುವ ಮನೆಗಳ ಸದಸ್ಯರ ಸಂಖ್ಯೆಗಳನ್ನು ತಿಳಿಯಲಾಗಿದೆ. ಅವು ಈ ರೀತಿಯಿದೆ ಎಂದು ಭಾವಿಸಿ.'' ಶೇಷಗಿರಿ ಹಾಳೆಯೊಂದರ ಮೇಲೆ ಬರೆಯುತ್ತ ಹೋದ.

5 8 10 4 12 8 6 9 5 4
7 4 11 10 5 9 8 6 6 3

ಇಲ್ಲಿ ಪ್ರತಿಚಯದ 20 ಮನೆಗಳಲ್ಲಿರುವ ಜನರ ಒಟ್ಟು ಸಂಖ್ಯೆ 140; ಅಂಕಗಣಿತೀಯ ಮಧ್ಯಕ $140/20 = 7$. ಇದನ್ನು ಸಮಷ್ಟಿಯಲ್ಲಿ ಮನೆಗಳ ಸದಸ್ಯರ ಸಂಖ್ಯೆಯ ಅಂಕಗಣಿತೀಯ ಮಧ್ಯಕದ ಅಂದಾಜು ಮೌಲ್ಯವಾಗಿ ತೆಗೆದುಕೊಳ್ಳುತ್ತೇವೆ. ಹಳ್ಳಿಯ ಒಟ್ಟು ಜನಸಂಖ್ಯೆಯನ್ನು $600 \times 7 = 4200$ ಎಂದು ಅಂದಾಜಿಸುತ್ತೇವೆ.''

''ಸಂಜ್ಞೆಗಳಲ್ಲಿ ಫಲಿತಾಂಶಗಳು ಈ ರೂಪ ತಳೆಯುತ್ತವೆ. $y_1, y_2, \ldots, y_n$ ಪ್ರತಿಚಯದಲ್ಲಿರುವ ವಸ್ತುಗಳು ಕೊಡುವ ಚರ y ಯ ಮೌಲ್ಯಗಳು. ಅವುಗಳ ಅಂಕಗಣಿತೀಯ ಮಧ್ಯಕ

$$(y_1 + y_2 + \cdots + y_n)/n = \sum_{1}^{n} y_i/n = \bar{y}.$$

ಇದನ್ನು ಸಮಷ್ಟಿಯ ಅಂಕಗಣಿತೀಯ ಮಧ್ಯಕ $\bar{Y}$ ನ ಅಂದಾಜು ಮೌಲ್ಯವಾಗಿ ಪರಿಗಣಿಸುತ್ತೇವೆ. ಸಮಷ್ಟಿಯ ಮೊತ್ತದ ಅಂದಾಜು ಮೌಲ್ಯವಾಗಿ $N\bar{y}$ ಅನ್ನು ತೆಗೆದುಕೊಳ್ಳುತ್ತೇವೆ. ಇವು ಅನಭಿನತ ಅಂದಾಜು ಮೌಲ್ಯಗಳು. ಅಂದರೆ ಸಾಧ್ಯವುಳ್ಳ ಎಲ್ಲ ಪ್ರತಿಚಯಗಳ ಅಂಕಗಣಿತೀಯ ಮಧ್ಯಕಗಳನ್ನು $\bar{y}_1, \bar{y}_2, \ldots, \bar{y}_{\binom{N}{n}}$ ಸೂಚಿಸಿದರೆ, ಆಗ

$$\left[\bar{y}_1 + \bar{y}_2 + \ldots + \bar{y}_{\binom{N}{n}}\right] \Big/ \binom{N}{n} = \bar{Y}.$$

ಅಂದಾಜು ಮೌಲ್ಯ ನಿಷ್ಕೃಷ್ಟವಾಗಿರುವುದು ಬಹಳ ಮುಖ್ಯ. ಅಂದರೆ ಅದು ಅವ್ಯಕ್ತ ಸಮಷ್ಟಿ ಮೌಲ್ಯದ ನೆರೆಯಲ್ಲಿರಬೇಕು. $\bar{y}$ ನ ನಿಷ್ಕೃಷ್ಟತೆಯ ಮಾನವಾಗಿ

$$v(\bar{y}) = \left(\frac{N-n}{Nn}\right) \frac{1}{(n-1)} \sum_{1}^{n} (y_i - \bar{y})^2$$

ಅನ್ನು ತೆಗೆದು ಕೊಳ್ಳುತ್ತೇವೆ. $v(\bar{y})$ನ ಮೌಲ್ಯ ಕಡಿಮೆ ಇದ್ದಷ್ಟು $\bar{y}$ ನ ನಿಷ್ಕೃಷ್ಟತೆ ಹೆಚ್ಚೆಂದು ತಿಳಿಯಬೇಕು. ಇಷ್ಟರಲ್ಲಿ ನನ್ನವಳೂ ಬಂದು ಸಭೆಯಲ್ಲಿ ಸೇರಿಕೊಂಡಳು. ನಡೆದ ಮಾತುಕತೆಯನ್ನು ಚುಟುಕಾಗಿಯಾದರೂ ಪುನರಾವರ್ತಿಸುವ ಅವಶ್ಯಕತೆಯಿರಲಿಲ್ಲ. ಪ್ರತಿ ಅಡುಗೆಮನೆಯಲ್ಲೂ ವಿಶೇಷ ಶ್ರವಣ ವ್ಯವಸ್ಥೆಯಿರುತ್ತದೆ.

ಅಧ್ಯಾಪಕ ಮತ್ತೆ ಹೇಳತೊಡಗಿದ. “ಸರಳ ಯಾದೃಚ್ಛಿಕ ಪ್ರತಿಚಯನ ಪ್ರತಿಚಯನ ಅನ್ವಯ ಮೂಲಭೂತ ವಿಧಾನ. ಅಧ್ಯಯಿಸಬೇಕಾಗಿರುವ ಚರ

ಸಾಕಷ್ಟು ಏರಿಳಿಯುತ್ತಿರುವಾಗ ಈ ವಿಧಾನದ ನೇರ ಬಳಕೆ ಅಷ್ಟು ಸೂಕ್ತವಲ್ಲ. ಸಮಷ್ಟಿಯ ಪ್ರತಿ ವೈಶಿಷ್ಟ್ಯವೂ ಪ್ರತಿಚಯದಲ್ಲಿರಬೇಕಾದ್ದರಿಂದ ತುಸು ನಿಯಂತ್ರಿತ ಆಯ್ಕೆ ಇಲ್ಲಿ ಉಚಿತ. ಜನಸಂಖ್ಯೆಯನ್ನು ಅಂದಾಜಿಸುವ ನಿದರ್ಶನವನ್ನು ಮತ್ತೆ ಗಮನಿಸಿ. ಮನೆಯಲ್ಲಿರುವ ಸದಸ್ಯರ ಸಂಖ್ಯೆ ಹಳ್ಳಿಯ ಕೆಲವು ವಿಭಾಗಗಳಲ್ಲಿ (ಉದಾ. ಶ್ರಮಿಕವರ್ಗವಿರುವ ವಿಭಾಗ) ತುಂಬಾ ಹೆಚ್ಚು, ಕೆಲವು ಕಡೆ (ಉದಾ. ಧನಿಕವರ್ಗವಿರುವ ವಿಭಾಗ) ಬಹಳ ಕಡಿಮೆ ಇರಬಹುದು. ಆಗ ಈ ವಿಭಾಗಗಳನ್ನು ಬೇರೆ ಬೇರೆ ಉಪಸಮಷ್ಟಿಗಳೆಂದು ತಿಳಿಯುವುದು ಒಳಿತು. ಇಲ್ಲಿ ಸ್ತರೀಕೃತ ಯಾದೃಚ್ಛಿಕ ಪ್ರತಿಚಯನ ಅನ್ವಯಿಸುತ್ತದೆ. N ವಸ್ತುಗಳ ಸಮಷ್ಟಿಯನ್ನು $N_1, N_2, \ldots\ldots, N_b$ ವಸ್ತುಗಳಿರುವ b ಉಪಸಮಷ್ಟಿಗಳಾಗಿ ವಿಂಗಡಿಸಲಾಗಿದೆ ಎಂದು ಭಾವಿಸಿ. ಇವುಗಳಿಗೆ ಸ್ತರಗಳೆಂದು ಹೆಸರು. $N_1 + N_2 + \ldots\ldots + N_b = N$. ಸ್ತರೀಕರಣದ ಪೂರ್ಣ ಲಾಭ ಪಡೆಯಲು $N_1, + N_2, \ldots\ldots, N_b$ ಗಳ ಮೌಲ್ಯ ತಿಳಿದಿರಬೇಕು. ಸ್ತರಗಳ ರಚನೆಯ ಬಳಿಕ ಅವು ಪ್ರತಿಯೊಂದರಿಂದಲೂ ವಸ್ತುಗಳನ್ನು ಆರಿಸಲಾಗುವುದು. ಇವುಗಳ ಸಂಖ್ಯೆಗಳನ್ನು $n_1, n_2, \ldots\ldots, n_b$ ಸೂಚಿಸಲಿ. ಆಗ $n_1 + n_2 + \ldots\ldots + n_b = n$. ಪ್ರತಿಸ್ತರದಿಂದಲೂ ಒಂದು ಸರಳ ಯಾದೃಚ್ಛಿಕ ಪ್ರತಿಚಯನವನ್ನು ಪಡೆಯಲಾದರೆ, ಈ ಇಡೀ ವಿಧಾನಕ್ಕೆ ಸ್ತರೀಕೃತ ಯಾದೃಚ್ಛಿಕ ಪ್ರತಿಚಯನವೆಂದು ಹೆಸರು. $n_1, n_2, \ldots\ldots, n_b$ ಮೌಲ್ಯಗಳನ್ನು ಸಂದರ್ಭೋಚಿತವಾಗಿ ನಿರ್ಧರಿಸುವ ಸೂತ್ರಗಳಿವೆ. ಉದಾ. ಅವು $N_1, N_2, \ldots, N_b$ ಗಳಿಗೆ ಅನುಪಾತೀಯವಾಗಿರುವುದು ; ಅಂದರೆ $n_h = n.\ N_h/N,\ h = 1, 2, \ldots\ldots, b$. $\bar{y}_h$ ಎಂಬುದು ಸ್ತರ h ನಿಂದ ಪಡೆದ ಮೌಲ್ಯಗಳ ಅಂಕಗಣಿತೀಯ ಮಧ್ಯಕವಾದರೆ,

$$\bar{y} = \sum_h N_h \bar{y}_h$$

ಎಂಬುದು $\bar{Y}$ ನ ಒಂದು ಅನಭಿನತ ಅಂದಾಜುಮೌಲ್ಯ''

"ಪ್ರತಿಚಯದ ಆಯ್ಕೆಗೆ ಬೇರೆ ವಿಧಾನಗಳಿವೆಯೇ ?". ನನ್ನವಳ ಪ್ರಶ್ನೆಯಿದು. ತರಗತಿಗೆ ತಡವಾಗಿ ಸೇರಿದರೂ ಚುರುಕಾಗಿ ಪ್ರಶ್ನೆ ಕೇಳುವ ಲವಲವಿಕೆ ಅವಳದ್ದು. ನಮಗಂತೂ ಬೋರು ಹೊಡೆಯುತ್ತಿತ್ತು. ಆದ್ದರಿಂದ ಈ ಪ್ರಶ್ನೆ ಕೇಳಿ ಸಿಟ್ಟು ಬಂತು. ಆದರೆ ಮುನಿಸು ತೋರಿಸಿಕೊಳ್ಳುವುದು ಹೇಗೆ ? ಮೌನವು ಸಮ್ಮತಿ ಲಕ್ಷಣವೆಂದು ಶೇಷಗಿರಿ ತಿರುಗಿ ಸೂತ್ರ ವಹಿಸಿಕೊಂಡ. "ಸರಿಯಾದ ಪ್ರಶ್ನೆ ಸರಿಯಾದ ಹಂತದಲ್ಲಿ ಕೇಳಿದಿರಿ. ಈಗ ಪ್ರತಿಚಯ ಆಯ್ಕೆಯ ಇನ್ನೊಂದು ಕ್ರಮದ ಬಗ್ಗೆ ತಿಳಿಸುತ್ತೇನೆ. ಸಮಷ್ಟಿಯಲ್ಲಿರುವ ವಸ್ತುಗಳನ್ನು ಯಾವುದೊ ದೃಷ್ಟಿಯಿಂದ 1, 2,......, N ಎಂದು ನಮೂದಿಸಲು ಬರುವಾಗ ಈ ಕ್ರಮ ಅನುಕೂಲ. B. E. *b* ಸಂಘ ಕಾರ್ಖಾನೆಯ ಕಾರ್ಮಿಕರ ಪಟ್ಟಿ ಇಂಥ ನಿದರ್ಶನ.

ಮೊದಲು $N/n=k$ ಪೂರ್ಣಾಂಕವೆಂದು ತಿಳಿಯೋಣ. ಯಾದೃಚ್ಛಿಕ ಸಂಖ್ಯೆಗಳ ಕೋಷ್ಟಕವನ್ನು ಬಳಸಿ 1 ಮತ್ತು K ಗಳ ನಡುವೆ ಒಂದು ಸಂಖ್ಯೆಯನ್ನು ಯಾದೃಚ್ಛಿಕವಾಗಿ ಆರಿಸಲಾಗುವುದು. ಅದು i ಎಂದಿರಲಿ. ಆಗ ಪ್ರತಿಚಯದಲ್ಲಿರಬೇಕಾದ n ವಸ್ತುಗಳ ಅನುಕ್ರಮಸಂಖ್ಯೆಗಳು $i, i+k, i+2k, \ldots\ldots, i+(n-1)k$. ನಿದರ್ಶನ: $N=600$, $n=20$; $k=N/n=30$; ಆರಿಸಲ್ಪಟ್ಟ ಸಂಖ್ಯೆ $i=3$ ಆದರೆ ಆಗ ಪ್ರತಿಚಯದಲ್ಲಿರುವ 20 ವಸ್ತುಗಳ ನಮೂದಿನ ಸಂಖ್ಯೆಗಳು 3, 33, 63,……, 573. ಪ್ರತಿಚಯದ ಮೊದಲ ವಸ್ತುವಿನ ಯಾದೃಚ್ಛಿಕ ಆಯ್ಕೆ ಉಳಿದ ವಸ್ತುಗಳನ್ನೂ ನಿರ್ಧರಿಸುವುದೆಂಬುದು ಈ ವಿಧಾನದ ವಿಶಿಷ್ಟ ಸೌಲಭ್ಯ. N/n ಪೂರ್ಣಾಂಕವಲ್ಲದಿರುವಾಗಲೂ ಬಳಸಬಹುದಾದ ಈ ವಿಧಾನದ ರೂಪಾಂತರಗಳಿವೆ. ಆಯ್ಕೆಯ ಸರಳತೆ ಈ ವಿಧಾನದ ವ್ಯಾವಹಾರಿಕಮೌಲ್ಯವನ್ನು ಹೆಚ್ಚಿಸುತ್ತದೆ. $\bar{y}$ ನ ಅನಭಿನತ ಅಂದಾಜು ಮೌಲ್ಯವಾಗಿ $k\sum_{1}^{n} yi/n$ ಅನ್ನು ಬಳಸಬಹುದು.

"ಈಗ ನಾನು ಸ್ಥೂಲವಾಗಿ ತಿಳಿಸಿದ ಮೂರು ವಿಧಾನಗಳೂ ಸಂಭವತೆ ಪ್ರತಿಚಯನದ ನಿದರ್ಶನಗಳು. ಅವಕ್ಕೆ ನಾಲ್ಕು ಗಣಿತೀಯ ಸ್ವಭಾವಗಳಿವೆ.

(i) ನಿರ್ದಿಷ್ಟ ಸಮಷ್ಟಿಗೆ ಅವನ್ನು ಅನ್ವಯಿಸಿದಾಗ ದೊರೆಯಬಲ್ಲ ಬೇರೆ ಬೇರೆ ಪ್ರತಿಚಯಗಳ ಗಣವನ್ನು ನಿರೂಪಿಸಬಹುದು. ಅಂದರೆ ಆ ಗಣ $S_1, S_2, \ldots\ldots, S_v$ ಎಂದಾದರೆ ಆಗ S_1 ನಲ್ಲಿ ಇರುವ ವಸ್ತುಗಳು ಯಾವುವು, S_2 ನಲ್ಲಿರುವ ವಸ್ತುಗಳು ಯಾವುವು ಇತ್ಯಾದಿಯನ್ನು ಖಚಿತವಾಗಿ ತಿಳಿಸಬಹುದು. ನಾನು ತುಸು ಮೊದಲು ತಿಳಿಸಿದ A,B,C,D,E ಗಳೆಂಬ 5 ವಸ್ತುಗಳ ಸಮಷ್ಟಿಯ ನಿದರ್ಶನದಲ್ಲಿ $S_1 =$ ABC, $S_2 =$ ABD ಇತ್ಯಾದಿ.

(ii) ಯಾವುದೇ ಪ್ರತಿಚಯ Si ಆಯ್ಕೆಯಾಗುವ ಸಂಭವತೆ π_i ಎಷ್ಟೆಂದು ಗೊತ್ತು.

(iii) S_i ಗಳ ಪೈಕಿ ಒಂದನ್ನು, ಪ್ರತಿ S_iಗೆ ಆಯ್ಕೆಯ ಸಂಭವತೆ π_i ಆಗಿರುವಂತೆ, ಆರಿಸಲಾಗುವುದು.

(iv) ಪ್ರತಿಚಯಮೌಲ್ಯಗಳಿಂದ ಸಮಷ್ಟಿಮೌಲ್ಯಗಳ ಅಂದಾಜುಗಳನ್ನು ಪಡೆಯುವ ರೀತಿ ಗೊತ್ತು. ಅದಲ್ಲದೆ, ಯಾವುದೇ ನಿರ್ದಿಷ್ಟ ಪ್ರತಿಚಯ ಸಮಷ್ಟಿಯ ಯಾವುದೇ ಲಕ್ಷಣದ ಬಗ್ಗೆ ನೀಡುವ ಅಂದಾಜು ಮೌಲ್ಯ ಏಕೈಕವಾಗಿದೆ

ಮೇಲಿರುವ ನಾಲ್ಕು ಸ್ವಭಾವಗಳುಳ್ಳ ಯಾವುದೇ ಪ್ರತಿಚಯನ ವಿಧಾನದ ಪುನರಾವರ್ತಿತ ಅನ್ವಯದಿಂದ ದೊರೆಯುವ ಅಂದಾಜು ಮೌಲ್ಯಗಳ ಆವರ್ತಾಂಕ ವಿತರಣೆಯನ್ನು ನಮಗೆ ಲೆಕ್ಕಿಸಲು ಬರುವುದು; ಯಾಕೆಂದರೆ ನಿರ್ದಿಷ್ಟ ಪ್ರತಿಚಯ S, ಎಷ್ಟು ಬಾರಿ ಕಾಣಿಸಿಕೊಳ್ಳುವುದು ಮತ್ತು ಅದರಿಂದ ಅಂದಾಜುಮೌಲ್ಯಗಳನ್ನು ಪಡೆಯುವ ಬಗೆಯೇನು ಎಂಬುದು ನಮಗೆ ತಿಳಿದಿರುತ್ತದೆ. ಒಟ್ಟಿನಲ್ಲಿ ಇಂಥ ಯಾವುದೇ ಪ್ರತಿಚಯನ ವಿಧಾನಕ್ಕೆ ಸಂಬಂಧಿಸಿದ ಸಿದ್ಧಾಂತವನ್ನು ರಚಿಸಬಹುದು."

"ಸಂಭವತೆ ಪ್ರತಿಚಯನ ವಿಧಾನಗಳಿಗೆ ವ್ಯಾಸೀಯ ವಿರುದ್ಧವಾಗಿ ಉದ್ದೇಶಿತ ಆಯ್ಕೆಯಿದೆ. ಪ್ರತಿಚಯನದ ಸರಳತೆ ಮತ್ತು ಅನುಕೂಲತೆಗಾಗಿ ಇಲ್ಲಿ ಅನ್ವೇಷಕ ತನ್ನ ಇಚ್ಛೆಯಂತೆ ವಸ್ತುಗಳನ್ನು ಆರಿಸುತ್ತಾನೆ. ಸಂಬಂಧಿಸಿದ ರಂಗದಲ್ಲಿ ನುರಿತವರ ಅಭಿಪ್ರಾಯಗಳನ್ನು ಬಳಸಿ ಅಂದಾಜುಮೌಲ್ಯಗಳನ್ನು ರಚಿಸುವುದು ಒಂದು ನಿದರ್ಶನ. ಬೇರೆಬೇರೆ ನುರಿತವರು ತಿಳಿಸುವ ಅಭಿಪ್ರಾಯಗಳ ಭೇದವನ್ನು ವೈಜ್ಞಾನಿಕವಾಗಿ ಸರಿಹೊಂದಿಸಲು ಬರುವುದಿಲ್ಲ. ಇಂತಿಷ್ಟು ಗಂಡಸರು, ಇಂತಿಷ್ಟು ಹೆಂಗಸರು ಅಥವಾ ಇಂತಿಷ್ಟು ನಿಮ್ನ ಆದಾಯವರ್ಗದವರು, ಇಂತಿಷ್ಟು ಉಚ್ಚ ಆದಾಯವರ್ಗದವರು ಇರಬೇಕೆಂಬ ನಿರ್ಬಂಧಗಳಿಗೆ ಅನುಗುಣವಾಗಿ ಅನ್ವೇಷಕ ತನಗೆ ಅನುಕೂಲಕಾಣುವ ವ್ಯಕ್ತಿಗಳನ್ನು ಆರಿಸುವುದು ಉದ್ದೇಶಿತ ಆಯ್ಕೆಯ ಇನ್ನೊಂದು ನಿದರ್ಶನ. ಕೆಲವೊಮ್ಮೆ ಈ ವಿಧಾನ ತೃಪ್ತಿಕರ ಫಲಿತಾಂಶ ನೀಡಬಲ್ಲದಾದರೂ, ಇದಕ್ಕೆ ಅನ್ವಯಿಸುವ ಸೈದ್ಧಾಂತಿಕ ಚೌಕಟ್ಟನ್ನು ರಚಿಸಲು ಸಾಧ್ಯವಿಲ್ಲ; ಯಾಕೆಂದರೆ ಇಲ್ಲಿಯ ಆಯ್ಕೆಗಳಲ್ಲಿ ಯಾದೃಚ್ಛಿಕತೆಯ ಅಂಶವಿಲ್ಲ".

ಹೊತ್ತು ಕತ್ತಲಾಗುತ್ತ ಬಂದಿತ್ತು. ಶೇಷಗಿರಿ ಗೋಡೆಗಡಿಯಾರ ನೋಡಿದ. ಬಳಿಕ ತನ್ನ ಅಂದಿನ ಮಾತುಗಳನ್ನು ಮುಗಿಸುವ ದನಿಯಲ್ಲಿ ಹೇಳಿದ. "ನಾನು ನಿಮಗೆ ಇಂದು ತಿಳಿಸಿರುವುದು ಪ್ರತಿಚಯನದ ಸಂಖ್ಯಾಕಲನೀಯ ತಳಹದಿಯನ್ನು. ನಿಮಗೆ ಇದಿರಾಗುವ ಸಂದರ್ಭಗಳು ಯಾವಾಗಲೂ ಸರಳವಾಗಿಯೂ ನೇರವಾಗಿಯೂ ಇರುವುದಿಲ್ಲ. ಬೇರೆ ಬೇರೆ ಸಂದರ್ಭಗಳಿಗೆ ಸೂಕ್ತವಾದ ಪ್ರತಿಚಯನ ವಿಧಾನಗಳನ್ನು ಮತ್ತು ಅವುಗಳ ರೂಪಾಂತರಗಳನ್ನು ಪ್ರತಿಚಯನ ಸಿದ್ಧಾಂತ ನೀಡುತ್ತದೆ. ಇದರ ಬೆಳವಣಿಗೆಗೆ ಕಾರಣರಾದ ಕೆಲವು ಪ್ರಮುಖರ ಹೆಸರುಗಳು ಇಂತಿವೆ. R. A. Fisher, J Neyman, M. H. Hansen, W. N. Hurvitz, W. G. Madow, W. G. Cochran, W. E. Deming, Leslie Kish P. C. Mahalanobis, Des Raj, M. N. Murthy, J. N. K. Rao ಮತ್ತು P. V. Sukhatme. ಕೊನೆಯ ಐವರು ಭಾರತೀಯರು." ಶೇಷ

ಗಿರಿ ಮಾತು ನಿಲ್ಲಿಸಿದ. ನಾವು ಕೇಳಿಸಿಕೊಳ್ಳುವುದನ್ನು ನಿಲ್ಲಿಸಿದೆವು. ಮನೆಯ ಮುಂದೆ ಕೆಳಗಿನ ರಸ್ತೆಯಲ್ಲಿ ವ್ಯಾಪಾರಿಯೊಬ್ಬ ನೂಕುಬಂಡಿ ತಳ್ಳುತ್ತ ಹೇಳುತ್ತಿದ್ದ. "ಕಾಬೂಲು ದ್ರಾಕ್ಷೆ ಕೆಜಿಗೆ ಎರಡು ರೂಪಾಯಿ. ಸಿಹಿಸಿಹಿ ದ್ರಾಕ್ಷೆ ಕೆಜಿಗೆ ಎರಡು ರೂಪಾಯಿ !" ಪಕ್ಕದ ಮನೆಯ ಪುಟ್ಟ ಓಡೋಡಿ ಬಂದು ''Uncle, Uncle ದಾಕ್ಷೆ'' ಎಂದ. ನನ್ನವಳು ಎದ್ದು 'ಇವತ್ತು ವಾಕಿಂಗ್‌ಗೆ ಯಾವ ಕಡೆ ಹೋಗೋಣ' ಎಂದಳು.

ದಿವಾನ ಮಿರ್ಜಾ ಇಸ್ಮಾಯಿಲ್‌ರ ರಾಜೀನಾಮೆ : ಒಂದು ಹೊಸ ವಿಶ್ಲೇಷಣೆ.

ಎಸ್. ಚಂದ್ರಶೇಖರ

ಮಿರ್ಜಾ ಇಸ್ಮಾಯಿಲ್‌ರು ಮೈಸೂರಿನ ದಿವಾನಗಿರಿಗೆ ರಾಜೀನಾಮೆ ಕೊಟ್ಟ ಸಂಗತಿಗಳ ಬಗ್ಗೆ ವಾದ ವಿವಾದಗಳೇ ಎದ್ದಿವೆ. ಸುಮಾರು ಹದಿನೈದು ವರ್ಷಗಳ ಕಾಲ ಈ ಸ್ಥಾನದಲ್ಲಿದ್ದ ಮಿರ್ಜಾ ಇಸ್ಮಾಯಿಲ್‌ರು ರಾಜೀನಾಮೆ ಕೊಟ್ಟಿದ್ದಕ್ಕೆ ಮುಖ್ಯವಾಗಿ ಪ್ರಚಲಿತದಲ್ಲಿರುವ ಕಾರಣಗಳು ಎರಡು : ಒಂದನೆಯದು - ಆಗ ಪ್ರಬಲವಾಗುತ್ತಿದ್ದ ಕಾಂಗ್ರೆಸ್ ಚಳವಳಿ. ಎರಡನೆಯದು – ಹೊಸದಾಗಿ ರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರು – ಸ್ವಯಂಚಾಲಕ ಕಂಪನಿಯೊಂದನ್ನು (ಆಟೋಮೋಬಿಲ್ ಕಂಪನಿ) ಸ್ಥಾಪಿಸಲು ಅನುಮತಿಯನ್ನು ಕೊಡದೇ ಇದ್ದದ್ದು. (ಈ ಕಂಪನಿಗೆ ಅಮೇರಿಕದ ವ್ಯಾಪಾರ ಸಂಸ್ಥೆ ಹಾಗೂ ಬೊಂಬಾಯಿಯ ದೊಡ್ಡ ಕೈಗಾರಿಕೆಯ ಮಾಲೀಕರು ಹಣ ಸಹಾಯ ಮಾಡಲು ಒಪ್ಪಿದ್ದರು).

ಮಿರ್ಜಾ ಅವರ ರಾಜೀನಾಮೆಯ ಬಗ್ಗೆ ಚರ್ಚಿಸುವಾಗ ಮೇಲೆ ವಿವರಿಸಿದ ವಿಷಯಗಳನ್ನು ಮುಂದೆ ಮಾಡಲಾಗುತ್ತದೆಯಾದರೂ, ಅವರ ರಾಜೀನಾಮೆಗೆ ಕಾರಣವಾದ ಸಂಗತಿಗಳು ಬೇರೆಯೇ ಆಗಿವೆ. ಯುವರಾಜ ಕಂಠೀರವ ನರಸಿಂಹರಾಜ ಒಡೆಯರಿಗೂ ಮತ್ತು ನಂತರ ಮಹಾರಾಜರಾದ ಅವರ ಮಗ ಜಯಚಾಮರಾಜೇಂದ್ರ ಒಡೆಯರಿಗೂ ಮಿರ್ಜಾ ಅವರ ಮೇಲೆ ಬೆಳೆಯುತ್ತಿದ್ದ ಅತೃಪ್ತಿ ಮತ್ತು ಅಪನಂಬಿಕೆಗಳು ಮಿರ್ಜಾ ಅವರ ರಾಜೀನಾಮೆಗೆ ಕಾರಣವಾದ ಮುಖ್ಯ ಸಂಗತಿಗಳು. ಈ ಅಪನಂಬಿಕೆ ಮತ್ತು ಅತೃಪ್ತಿಗಳು ಮುಖ್ಯವಾಗಿ ವೈಯಕ್ತಿಕ ನೆಲೆಯಲ್ಲಿ ಹುಟ್ಟಿದವುಗಳೇ ಆಗಿವೆ.

ಮಿರ್ಜಾ ಆಡಳಿತಗಾರರಾಗಿ ನಿರಂಕುಶ ಪ್ರವೃತ್ತಿಯುಳ್ಳವರಾಗಿದ್ದರು. ಸರಕಾರದ ಯಾವುದೇ ಕಲಸಕಾರ್ಯಗಳಲ್ಲಿ ಪ್ರಭಾವಿತ ವ್ಯಕ್ತಿಗಳೂ ಸೇರಿದಂತೆ ಬೇರೆಯವರು ನಡುವೆ ತಲೆ ಹಾಕುವದನ್ನು ಮತ್ತು ಪ್ರಭಾವ ಬೀರುವುದನ್ನು ಇವರು ಸಹಿಸುತ್ತಿರಲಿಲ್ಲ. ಯುವರಾಜನೂ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಯಾಗಿದ್ದ. ರಾಜ್ಯದ ಯಾವುದೇ ವ್ಯವಹಾರದ ಬಗ್ಗೆ ತನ್ನ ಅಭಿಪ್ರಾಯವೂ ಅವಶ್ಯವೆಂದು ಇವನು ಬಯಸಿದ್ದ. ಇವನ ಅಧಿಕಾರ ದಾಹವನ್ನು ಅರಿತಿದ್ದ ಹಿಂದಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು – ಯುವರಾಜನಿಗಾಗಿ 'ಕೌನ್ಸಿಲ್‌ನ ವಿಶೇಷ ಸದಸ್ಯ'

(Extraordinary member of council) ಎಂಬ ಸ್ಥಾನವನ್ನು ರಚಿಸಿಕೊಟ್ಟು ಅವನನ್ನು ಸಮಾಧಾನ ಮಾಡಲು ಯತ್ನಿಸಿದರು. ಈ ಸ್ಥಾನ ರಾಜ್ಯದ ಉಳಿದ ಯಾವುದೇ ಸರ್ಕಾರಿ ಕೆಲಸದ ಸ್ಥಾನಕ್ಕಿಂತ ವಿಶೇಷವಾದ ಅರ್ಹತೆಯನ್ನು ಉಳ್ಳದ್ದಾಗಿತ್ತು. ಆದರೆ ಯುವರಾಜನಿಗೆ ಇದರಿಂದ ಸಮಾಧಾನವಾಗಲಿಲ್ಲವೆಂದು ತೋರುತ್ತದೆ. ಬ್ರಾಹ್ಮಣೇತರ ವರ್ಗದ ಜೊತೆಗೆ ತನ್ನನ್ನು ಗುರುತಿಸಿಕೊಂಡ ಇವನು[1], ಕಾಂತರಾಜ ಅರಸ್ ಮತ್ತು ಆಲ್ಬಿಯನ್ ಬ್ಯಾನರ್ಜಿ ಮುಂತಾದ ಪ್ರಭಾವಶಾಲೀ ಮಂತ್ರಿಗಳೊಡನೆ ಸೇರಿಕೊಂಡು ವಿಶ್ವೇಶ್ವರಯ್ಯನವರ ರಾಜೀನಾಮೆಗೆ ಕಾರಣರಾದವರಲ್ಲಿ ಪ್ರಮುಖನಾದನು. ಮಹಾರಾಜರ ಗುಪ್ತ ಸಹಕಾರವೂ ಈ ವಿಷಯದಲ್ಲಿ ಇವನಿಗಿತ್ತು ಹೀಗೆ ಈ ಘಟನೆಗಳಾದ ಮೇಲೆ ಅನೇಕ ವರ್ಷಗಳ ಕಾಲ, ರಾಜಕೀಯವಾಗಿ ಯುವರಾಜನು ನಿಷ್ಕ್ರಿಯನಾಗಿದ್ದ. ಅವನಿಗಾಗಿ ರಚಿಸಲಾಗಿದ್ದ ವಿಶೇಷ ಸ್ಥಾನವನ್ನು 1919 ರಲ್ಲಿ ರದ್ದು ಮಾಡಲಾಯಿತು. ಅಲ್ಲದೇ ವಿಶ್ವೇಶ್ವರಯ್ಯನವರ ನಂತರ ನೇಮಕಗೊಂಡ ಇಬ್ಬರೂ ದಿವಾನರೂ ಯುವರಾಜ ಹೇಳಿದ ಹಾಗೆ ಕೇಳಿಕೊಂಡಿದ್ದರು.

ಮಿರ್ಜಾ ಅವರು ದಿವಾನರಾದ ಮೇಲೆ ಈ ರದ್ದುಗೊಳಿಸಲಾಗಿದ್ದ ವಿಶೇಷ ಸ್ಥಾನವನ್ನು ಮತ್ತೆ ಪುನರ್‌ಸ್ಥಾಪಿಸಬೇಕೆಂಬ ಪ್ರಯತ್ನಗಳು ಯುವರಾಜನ ಸೂಚನೆಯ ಮೇರೆಗೆ ಕ್ರಿಯಾಶೀಲವಾಗತೊಡಗಿದವು. ಆದರೆ ಮಿರ್ಜಾ ಅವರು ಈ ವಿಷಯದಲ್ಲಿ ಉದಾಸೀನರಾಗಿದ್ದುದರಿಂದಲೂ, ಮಹಾರಾಜ 4ನೆಯ ಕೃಷ್ಣರಾಜ ಒಡೆಯರೂ ಸಹ ಈ ಬಗ್ಗೆ ಆಸಕ್ತಿ ತೋರಿಸದೇ ಇದ್ದುದರಿಂದಲೂ ಆ ಪ್ರಯತ್ನಗಳು ಯಶಸ್ವಿಯಾಗಲಿಲ್ಲ.[2] ಮಹಾರಾಜ ಕೃಷ್ಣರಾಜ ಒಡೆಯರಿಗೆ ಯುವರಾಜನಾದ ತಮ್ಮ ತಮ್ಮನು ರಾಜ್ಯದ ಆಡಳಿತದ ಕಾರ್ಯಗಳಿಗೆ ತೊಂದರೆಯುಂಟುಮಾಡಬಹುದೆಂದು ಅನ್ನಿಸಿದ್ದರಿಂದ ದಿವಾನರ ಹಕ್ಕುಬಾಧ್ಯತೆಗಳಿಗೆ ಯಾವ ಒತ್ತಾಯವೂ ಆಗಬಾರದೆಂದು ಆಶಿಸಿದ್ದರು. ಅಂಥಹ ಎಲ್ಲ ಬೆಳವಣಿಗೆಗಳಿಗೆ ಮಿರ್ಜಾ ಇಸ್ಮಾಯಿಲ್‌ರೇ ಜವಾಬ್ದಾರರೆಂದು ಯುವರಾಜನಿಗೆ ಅನ್ನಿಸಿತ್ತು. ಆದರೂ ಅವನು ಏನನ್ನೂ ಮಾಡಲಿಕ್ಕೆ ಆಗದೇ ಹೋದದ್ದಕ್ಕೆ ಮುಖ್ಯಕಾರಣ–'ಮಿರ್ಜಾ ಮತ್ತು ಮಹಾರಾಜರು ಒಟ್ಟಾಗಿಯೇ ಒಂದು ಪಕ್ಷವಾಗಿ ಇದ್ದದ್ದು'[3]

ತನ್ನ ವಾರ್ಷಿಕ ವರಮಾನವನ್ನು ಹೆಚ್ಚಿಸಬೇಕೆಂದು ಯುವರಾಜ ಮಾಡಿದ ಪ್ರಯತ್ನಗಳೂ ಮಿರ್ಜಾ ಅವರಿಂದ ಕಡೆಗಣಿಸಲ್ಪಟ್ಟವು. ರಾಜ್ಯದ ಆರ್ಥಿಕ ಸ್ಥಿತಿ ಇಂಥಹ ಬಡ್ತಿಗೆ ಅವಕಾಶ ನೀಡುವುದಿಲ್ಲವೆಂದು ಮಿರ್ಜಾ ಅವರು ಕಾರಣಕೊಟ್ಟರು. ಈ ಕಾರಣದಿಂದ ಮೇಲ್ನೋಟಕ್ಕೆ ಎಲ್ಲವೂ ಸರಿಯಾಗೇ ಕಂಡರೂ ಒಳಗೊಳಗೇ ಇವರಿಬ್ಬರ ಸಂಬಂಧ ಕೆಟ್ಟು ಹೋಗಲು ಪ್ರಾರಂಭವಾಯಿತು[4]. ಬ್ರಾಹ್ಮಣೇತರ ವರ್ಗಗಳ ಬೆಂಬಲದಿಂದ ವಿಶ್ವೇಶ್ವರಯ್ಯನವರ ರಾಜೀನಾಮೆಯನ್ನು ಸಾಧ್ಯಗೊಳಿ

ಸಲು ಯುವರಾಜನಿಗೆ ಹಿಂದೆ ಆದಂತೆ ಈಗ ಮಿರ್ಜಾ ಅವರ ವಿರುದ್ಧ ಮಾಡಲು ಸಾಧ್ಯವಾಗಲಿಲ್ಲ. ಕಾರಣ ಸ್ವತಃ ಮಿರ್ಜಾ ಮುಸ್ಲಿಂ ಆಗಿದ್ದು ಬ್ರಾಹ್ಮಣೇತರರ ಸಹಕಾರವನ್ನು ಪಡೆದಿದ್ದರು. ಬ್ರಾಹ್ಮಣೇತರ ಚಳವಳಿಯನ್ನು ಹುಟ್ಟಿಹಾಕಿದವರಲ್ಲಿ ಒಬ್ಬನಾದ ಯುವರಾಜ ಈಗ ಅದನ್ನು ಒಡೆಯುವ ಸ್ಥಿತಿಯಲ್ಲೂ ಇರಲಿಲ್ಲ. ಯಾಕೆಂದರೆ ಅವನ ಇಚ್ಛೆಗೆ ಪೂರಕವಾಗಿ ನಡೆದುಕೊಳ್ಳುತ್ತಿದ್ದ ಬ್ರಾಹ್ಮಣೇತರ ಚಳವಳಿಯ ಹಿರಿಯ ಮುಖಂಡರು ಸತ್ತುಹೋಗಿದ್ದರು, ಇಲ್ಲವೇ ರಾಜಕೀಯವಾಗಿ ಬಲಹೀನರಾಗಿದ್ದರು. ಆದರೆ 1935ರಲ್ಲಿ ನಡೆದ ಘಟನೆ ಯುವರಾಜನಿಗೆ ಒಂದು ಅವಕಾಶವನ್ನು ಮಾಡಿಕೊಟ್ಟಿತು. ಆ ವರ್ಷ ಸರ್ಕಾರ ಕೆಲವು ಸ್ಥಾನಗಳಿಗೆ ನಡೆಸಿದ ನೇಮಕಾತಿಯ ವಿಷಯದಲ್ಲಿ ಬ್ರಾಹ್ಮಣೇತರ ವರ್ಗದ ಹಿಂದುಳಿದ ಪಂಗಡದವರು ಅಸಮಾಧಾನಗೊಂಡು ಕೂಗೆಬ್ಬಿಸಿದರು. ದಿವಾನರ ವಿರುದ್ಧ ತಮಗೆ ಸಿಕ್ಕ ಇಂಥ ಅವಕಾಶವನ್ನು ಯುವರಾಜ ಕಳೆದುಕೊಳ್ಳಲು ಇಷ್ಟಪಡಲಿಲ್ಲ. ಈ ಸಂದರ್ಭದ ಘಟನೆಯ ವಿವರಗಳು ಹೀಗಿವೆ.

1935ರಲ್ಲಿ ಖಾಲಿಯಾಗಿದ್ದ ಆರು ಅಮಲ್ದಾರೀ ಗೆಝೆಟೆಡ್ ಹುದ್ದೆಗಳನ್ನು ಸರ್ಕಾರ ಭರ್ತಿಮಾಡಬೇಕಾಗಿತ್ತು. ಯುವರಾಜ, ದಿವಾನ ಮಿರ್ಜಾ ಅವರಿಗೆ ಒಂದು ಕಾಗದ ಬರೆದು ಈ ಹುದ್ದೆಗಳಿಗೆ "ಬ್ರಾಹ್ಮಣೇತರ ಹಿಂದುಳಿದ ವರ್ಗಗಳಾದ ಬೆಸ್ತ, ಯಾದವ, ಮತ್ತು ಕುಂಚಟಿಗ ಪಂಗಡಗಳಿಂದ ಕನಿಷ್ಠ ಪಕ್ಷ ಮೂರು ಅಭ್ಯರ್ಥಿಗಳನ್ನಾದರೂ'' ಆಯ್ಕೆಮಾಡಬೇಕೆಂದು ಸೂಚಿಸಿದ್ದು ಆಯ್ಕೆಯಾಗುವ ಅಭ್ಯರ್ಥಿಗಳು ಒಕ್ಕಲಿಗ, ಲಿಂಗಾಯತ, ಮುಸ್ಲಿಂ ಜಾತಿಗಳವರಾಗಿರಕೂಡದು ಎಂದು ಈ ಸಂದರ್ಭದಲ್ಲೇ ಯುವರಾಜನು ಸ್ಪಷ್ಟವಾಗಿ ಸೂಚಿಸಿದ್ದನು. 'ಪರಸ್ಪರ ಸಹಕಾರ ಮತ್ತು ಒಪ್ಪಂದಕ್ಕೆ ಈ ಮೂಲಕ ಒಂದು ನೆಲೆಯನ್ನು ಎಷ್ಟರಮಟ್ಟಿಗೆ ಸ್ಥಾಪಿಸಬಹುದೋ ಈ ಮೂಲಕವಾದರೂ ನೋಡೋಣ'ವೆಂದೂ ಪತ್ರದಲ್ಲಿ ಯುವರಾಜನ ಅಭಿಪ್ರಾಯಪಟ್ಟಿದ್ದನು.[5]

ಅವರಿಬ್ಬರ ಮಧ್ಯೆ ಇದ್ದ ಒಳವೈಮನಸ್ಯವನ್ನು ಈ ಪತ್ರ ಸ್ಪಷ್ಟಪಡಿಸಿತು. ದಿವಾನ ಮಿರ್ಜಾ ಅವರು ಯುವರಾಜನ ಈ ಸಲಹೆಯನ್ನು ಪರೀಕ್ಷಿಸುವ, ಮತ್ತು ತಮ್ಮಿಬ್ಬರ ಮಧ್ಯೆ ಉಂಟಾಗಿದ್ದ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಿಕೊಳ್ಳುವ ಕಾರಣದಿಂದ ಒಂದು ಬಾರಿ ಅವನನ್ನು ಭೇಟಿಯೂ ಆಗಿದ್ದರು. ಆದರೆ ಮುಂದೆ ಯುವರಾಜನ ಸಲಹೆಗಳಿಗೆ ದಿವಾನರು ಅಂಟಿಕೊಳ್ಳದೆ—ನೇಮಕಾತಿಯ ವಿಷಯದಲ್ಲಿ ತಮ್ಮದೇ ಆದ ನಿರ್ಣಯಗಳನ್ನು ತೆಗೆದುಕೊಳ್ಳುವ ನಿಶ್ಚಯ ಮಾಡಿದರು. ಈ ಘಟನೆಯಿಂದ ಇವರಿಬ್ಬರ ಸಂಬಂಧ ಕೆಡಲು ಕಾರಣವಾಯಿತು.

ಯುವರಾಜರ ಬಗ್ಗೆ ಮಿರ್ಜಾ ಅವರಿಗೆ ಮನಸ್ಸು ಕೆಡಲು ಕಾರಣ ಮುಖ್ಯವಾಗಿ ಯುವರಾಜರ ನೈತಿಕ ದೌರ್ಬಲ್ಯವೇ ಆಗಿತ್ತು. ಆಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯ

ಶಾಹಿಗಳೂ ಈ ವಿಷಯದಲ್ಲಿ ಸ್ವಲ್ಪ ಬೇಜಾರು ಮಾಡಿಕೊಂಡಿದ್ದರು. ಯಾಕೆಂದರೆ ಈ ವಿಷಯ ಯೂರೋಪಿಯನ್ ಸಮಾಜದಲ್ಲಿ ಮಹಾರಾಜರ ಬಗ್ಗೆ 'ಕೆಟ್ಟ ಅಭಿಪ್ರಾಯಗಳನ್ನು' ಮೂಡಿಸುವುದೆಂದು ಇವರ ಯೋಚನೆಯಾಗಿತ್ತು.[6] ಮಹಾರಾಜರನ್ನು ಅಧಿಕವಾಗಿ ಗೌರವಿಸುತ್ತಿದ್ದ ಮಿರ್ಜಾ ಯುವರಾಜನನ್ನು ಯಾವ ಕೆಲಸ ಕಾರ್ಯಗಳಲ್ಲಿಯೂ ಗಂಭೀರವಾಗಿ ಪರಿಗಣಿಸಲೇ ಇಲ್ಲ. 1939ರಲ್ಲಿ ಯುವರಾಜ ಸತ್ತಾಗಲೂ ಮಿರ್ಜಾ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲು ಅಷ್ಟೇನೂ ಕುತೂಹಲ ತೋರಿಸಲಿಲ್ಲ[7]. ಒಂದು ವರ್ಷದ ನಂತರ ಮಹಾರಾಜರು ಸತ್ತರು. ಮಿರ್ಜಾ ಅವರ ಕಾರ್ಯಗಳನ್ನು ಒಪ್ಪಿಕೊಂಡಿದ್ದ ಮಹಾರಾಜರು 'ಅವರು ಮಾಡಿದ್ದೆಲ್ಲವೂ ಒಳ್ಳೆಯದೆಂದು' ಕೊಂಡಿದ್ದಷ್ಟೇ ಅಲ್ಲ ಮಿರ್ಜಾ ಅವರೇ ಎಲ್ಲ ವಿಷಯದಲ್ಲೂ ಅವರಿಗೆ ದೊಡ್ಡ ಕಣ್ಣಾಗಿದ್ದರು. ಇಷ್ಟೊಂದು ನಂಬಿಕೆಯನ್ನು ಮಹಾಜರಿಂದ ಗಳಿಸಿಕೊಂಡಿದ್ದ ಮಿರ್ಜಾ ಅವರಿಗೆ ಈಗ ತಮ್ಮ ಪದವಿ ಹೆಸರಿಗೆ ಮಾತ್ರ ಎಂದು ತೋರತೊಡಗಿತು. ಮಹಾರಾಜರ ಕಾಲದಲ್ಲಿ ಹಿಡಿತದಲ್ಲಿದ್ದ ರಾಜಕೀಯ ಚಳವಳಿ ಈಗ ಬಿಸಿಯೇರುತ್ತಿದ್ದುದು ಇವರ ಅಭದ್ರತೆಗೆ ಇನ್ನೊಂದು ಕಾರಣವಾಯಿತು.

ದಿವಾನರ ಮೇಲೆ ತಮ್ಮೆಲ್ಲ ನಂಬಿಕೆಯನ್ನು ಕಳೆದುಕೊಂಡಿದ್ದ ಯುವರಾಜನ ಮಗ ಜಯಚಾಮರಾಜೇಂದ್ರ ಒಡೆಯರು ಸಿಂಹಾಸನವೇರುವಾಗ ಮಿರ್ಜಾ ಅವರ ಮೇಲೆ ತಂದೆಯ ಎಲ್ಲ ಅತೃಪ್ತಿ, ಅಪನಂಬಿಕೆಯನ್ನು ಇಟ್ಟುಕೊಂಡಿದ್ದರು. ತಮ್ಮ ತಂದೆಯ ಸಂಗಡ ಮಿರ್ಜಾ ಅವರ ಅತೃಪ್ತಿಕರವಾದ ನಡತೆಯನ್ನು ಸ್ವತಃ ಇವರು ಕಂಡವರಾಗಿದ್ದರು. ಆದ್ದರಿಂದಲೇ ತಮ್ಮ ದೊಡ್ಡಪ್ಪನ ಹಾಗೆ (ಮಹಾರಾಜರು) ಮಿರ್ಜಾ ಅವರಿಗೆ ಆಡಳಿತ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಇವರು ಕೊಡಲಿಲ್ಲ. ಮಿರ್ಜಾ ಅವರಿಗೆ 'ತಮ್ಮ ಜೀವನದ ಅಧ್ಯಾಯವೊಂದು ಮುಗಿದ ಹಾಗೆ' ಅನ್ನಿಸಿತಾದರೂ 'ಮುಂದಿನದನ್ನು ಹೇಗೆ ಎದುರಿಸುವುದು' ಎನ್ನುವುದು ತೋರಲಿಲ್ಲ.[9] ನಾಲ್ಕನೆಯ ಕೃಷ್ಣರಾಜ ಒಡೆಯರ ಸಾವಿನ ಕ್ಷಣದಿಂದಲೇ ಈ ಅನ್ನಿಸಿಕೆ ಮಿರ್ಜಾ ಅವರಿಗೆ ತೀವ್ರವಾಗಿ ಪ್ರಾರಂಭವಾದದ್ದು. ಹೊಸದಾಗಿ ಸಿಂಹಾಸನವನ್ನೇರಿದ ರಾಜ ಹಾಗೂ ರಾಜ್ಯದಲ್ಲಿ ತೀವ್ರವಾಗುತ್ತಿದ್ದ ಕಾಂಗ್ರೆಸ್ ಚಳವಳಿ - ಇವೆರಡೂ ಘಟನೆಗಳೂ—ಮಿರ್ಜಾ ಅವರ ಈ ಅನ್ನಿಸಿಕೆಗಳಿಗೆ ಮುಖ್ಯ ಕಾರಣವಾಗಿದ್ದವು.

1940ರಲ್ಲಿ ಹೊಸ ಮಹಾರಾಜರು ಅಧಿಕಾರವನ್ನು ವಹಿಸಿಕೊಂಡ ಕ್ಷಣದಿಂದಲೇ ದಿವಾನರನ್ನು ಅವರ ಸ್ಥಾನದಿಂದ ತೆಗೆದುಹಾಕಲು ಸಿದ್ಧತೆ ನಡೆಸಿದರು. ಮಿರ್ಜಾ ಅವರು ತಮ್ಮ ಆಡಳಿತ ಕಕ್ಷೆಯೊಳಗೆ ಯಾರೂ, ಯಾವ ರೀತಿಯಲ್ಲೂ ತಲೆ ಹಾಕುವದನ್ನು ಸಹಿಸುವದಿಲ್ಲವೆಂದು ಹೊಸ ಮಹಾರಾಜರಿಗೆ ಗೊತ್ತಿದ್ದ ವಿಷಯವೇ

ಆಗಿತ್ತು. ತಮ್ಮ ತಂದೆಗೆ ಆಗಿದ್ದ ಅನುಭವಗಳು ಇವರಿಗೆ ಪರಿಚಯವಿದ್ದವು. ಆದರೆ ಈಗ, ದಿವಾನರಿಗೂ, ಮಹಾರಾಜರಿಗೂ ಇದ್ದ ಸಂಬಂಧದಲ್ಲಿ ಒಂದು ಗುಣಾತ್ಮಕವಾದ ವ್ಯತ್ಯಾಸವಿತ್ತು. ಹಿಂದಿನ ಯುವರಾಜ ಸಿಂಹಾಸನವೇರಿದ ರಾಜಕುಮಾರನಾಗಿದ್ದರೂ ಯಾವುದೇ ಅಧಿಕಾರವೂ ಅವರ ಕೈಯಲ್ಲಿರಲಿಲ್ಲ. ಎಲ್ಲ ಅಧಿಕಾರವೂ ದಿವಾನರ ಕೈಯಲ್ಲೇ ಇತ್ತು. ಆದರೆ ಈಗಿನ ಮಹಾರಾಜರಿಗೆ ದಿವಾನರನ್ನು ತಮ್ಮ ಅಧಿಕಾರ ಬಲದಿಂದ ತಳ್ಳಿಹಾಕುವ ಸಾಮರ್ಥ್ಯ ಇತ್ತು.

ಹೊಸ ಮಹಾರಾಜರು ಅತಿ ಎಚ್ಚರಿಕೆಯಿಂದ ಮಿರ್ಜಾ ಅವರಿಗೆ ತೊಂದರೆ ಕೊಡಲು ಪ್ರಾರಂಭ ಮಾಡಿದರು. ಈ ಮೂಲಕ ರಾಜೀನಾಮೆಯನ್ನು ಸಾಧ್ಯವಾಗುವಂತೆ ಮಾಡುವ ಘಟನೆಗಳು ಶೀಘ್ರವಾಗುವಂತೆ ಮಾಡುವುದರಲ್ಲಿ ಪ್ರವರ್ತರಾದರು. ಮಹಾರಾಜರು ಸಿಂಹಾಸನವೇರಿದ ಕೂಡಲೇ ಕೋಲಾರದ ಚಿನ್ನದ ಗಣಿಯ ಕಾರ್ಮಿಕರ ಮುಷ್ಕರ ಪ್ರಾರಂಭವಾಯಿತು. ಮಹಾರಾಜರು ಕಾರ್ಮಿಕ ಶಾಸನಕ್ಕೆ ಸಂಬಂಧಿಸಿದ ಸಂಗತಿಗಳನ್ನು ತಾವೇ ಸ್ವತಃ ತಿಳಿದುಕೊಳ್ಳಬೇಕೆಂಬ ಕಾರಣದಿಂದ ಅವನ್ನು ದೊರಕಿಸುವಂತೆ ಮಿರ್ಜಾ ಅವರ ಆಪ್ತಕಾರ್ಯದರ್ಶಿಗಳಿಗೆ ಹೇಳಿದರು. ಮಹಾರಾಜರು ಊಹಿಸಿದಂತೆ ಮಿರ್ಜಾ ಅವರ ಈ ಇಚ್ಛೆಯನ್ನು ವಿರೋಧಿಸಿದರು. ಮಹಾರಾಜರು ತಮ್ಮ ಸ್ವತಂತ್ರ ಅಧಿಕಾರವನ್ನು ಅತಿಕ್ರಮಿಸುವ ಕೆಲಸ ಮಾಡುತ್ತಿದ್ದಾರೆಂದು ಮಿರ್ಜಾ ಅವರಿಗೆ ಅನ್ನಿಸಿತು.[10] ಜಯಚಾಮರಾಜೇಂದ್ರ ಒಡೆಯರ ಪಟ್ಟಾಭಿಷೇಕ ಸಮಾರಂಭದ ಕಾರ್ಯಕ್ರಮದಲ್ಲಿ ಬೇರೆ ಕಡೆಗಳಲ್ಲಿ ಆಳುತ್ತಿದ್ದ ರಾಜಕುಮಾರರನ್ನು ಆಮಂತ್ರಿಸಬೇಕೆನ್ನುವ ವಿಚಾರವನ್ನೂ ಅವರು ವಿರೋಧಿಸಿದರು. ಇದರಿಂದ ಮೊದಲೇ ಅಪನಂಬಿಕೆ ಮತ್ತು ಅಸಮಾಧಾನ ಬೆಳೆಸಿಕೊಂಡಿದ್ದ ಮಹಾರಾಜರಿಗೆ ಅವು ಇನ್ನೂ ಹೆಚ್ಚಲು ಕಾರಣವಾಯಿತು. ಇದರ ಪರಿಣಾಮವಾಗಿ ದಿವಾನರು ಮಾಡಬೇಕೆಂದು ಪ್ರಸ್ತಾಪಿಸಿದ ಯಾವುದೇ ವಿಷಯವನ್ನು ಮಹಾರಾಜರು ತಳ್ಳಿಹಾಕಿದರು. ಮಿರ್ಜಾ ಸೂಚಿಸಿದ ಗೌರವಾರ್ಹ ವ್ಯಕ್ತಿಗಳಿಗೆ ಬಿರುದುಗಳನ್ನು ಕೊಡುವ ಸಣ್ಣ ವಿಷಯಗಳನ್ನೂ ಮಹಾರಾಜರು ತಳ್ಳಿಹಾಕಿದರು

1930 ರ ನಂತರ ಉಂಟಾದ ತೀವ್ರ ಆರ್ಥಿಕ ಮುಗಟ್ಟಿನ ಕಾರಣದಿಂದ ಯಾವುದೇ ರೀತಿಯ ರಿಯಾಯಿತಿಗಳೂ ಜನಸಾಮಾನ್ಯರಿಗೆ ಸಿಕ್ಕದೆ ಮಿರ್ಜಾ ಅವರು ಜನರ ನಂಬಿಕೆ ಮತ್ತು ಸಹಾನುಭೂತಿಯನ್ನೂ ಕಳೆದುಕೊಳ್ಳತೊಡಗಿದರು. ತಮ್ಮನ್ನು ವಿರೋಧಿಸಿದ ಯಾವುದೇ ರಾಜಕೀಯ ವ್ಯಕ್ತಿ ಹಾಗೂ ಚಳವಳಿಗಳನ್ನು ನಿರ್ದಯವಾಗಿ ದಮನಮಾಡಲು ಮಿರ್ಜಾ ಅವರು ಹಿಂಜರಿಯಲಿಲ್ಲ. ಇವುಗಳ ಜೊತೆಗೆ ಈಗ ರಾಜನ ನಂಬಿಕೆಯನ್ನೂ ಕಳೆದುಕೊಂಡ ಇವರಿಗೆ ತಮ್ಮ ಸ್ಥಾನದಿಂದ ಹೊರ ಹೋಗುವುದನ್ನು ಬಿಟ್ಟರೆ ಇನ್ನಾವ ಮಾರ್ಗವೂ ಇರಲಿಲ್ಲ. ಮಹಾರಾಜರು ಸಿಂಹಾಸನವನ್ನೇರಿದ ಸ್ವಲ್ಪ ದಿನಗಳಲ್ಲಿಯೇ[11] ಮಿರ್ಜಾ ಅವರು ಮಹಾರಾಜರ ಆಪ್ತ

ಕಾರ್ಯದರ್ಶಿಯಾದ ಚಾರ್ಲ್ಸ್ ಟಾಡ್‌ಹಂಟರ್ ಮೂಲಕ 'ಸಾರ್ವಜನಿಕ ಜೀವನದಿಂದ ತಾವು ನಿವೃತ್ತರಾಗುವ, ಬದಲಾಯಿಸಲಾಗದ ನಿಶ್ಚಯ'ವನ್ನು ತಿಳಿಸಿದರು[12]. ವಾಸ್ತವವಾಗಿ ಮಿರ್ಜಾ ಅವರನ್ನು ತೆಗೆಯುವ ಕಾರ್ಯವಿಧಾನಗಳು ಸುರಳಿತವಾಗಿ ಕೊನೆಗೊಳ್ಳಬೇಕಾದ ಕಾರಣದಿಂದ - ಮಿರ್ಜಾ ಇಸ್ಮಾಯಿಲ್ಲರು 1941 ಜುಲೈವರೆಗೂ ದಿವಾನರಾಗಿ ಮುಂದುವರಿದರು.

ಹೀಗೆ ಯುವರಾಜ ಕಂಠೀರವ ನರಸಿಂಹ ಒಡೆಯರು ಹಾಗೂ ಅವರ ಮಗ ಜಯಚಾಮರಾಜೇಂದ್ರ ಒಡೆಯರ ಅತೃಪ್ತಿಯು ಕಾರಣದಿಂದ ದಿವಾನರಾದ ಮಿರ್ಜಾ ಇಸ್ಮಾಯಿಲ್ಲರು ತಮ್ಮ ಪದವಿಗೆ ರಾಜೀನಾಮೆ ಕೊಡಬೇಕಾಗಿ ಬಂತು. ಉಳಿದ ಕಾರಣಗಳೇನಿದ್ದರೂ ಈ ಘಟನೆಗಳಿಗೆ ಪೂರಕವಾಗಿ ನಿಲ್ಲಬಹುದಾದವುಗಳೆನ್ನುವದನ್ನು ಮೇಲೆ ಲೇಖನದಲ್ಲಿ ನಾನು ವಿವರಿಸಿದ ಅಂಶಗಳಿಂದಲೇ ತಿಳಿಯಬಹುದಾಗಿದೆ.

(ಅನು : ಬಸವರಾಜ ಕಲ್ಗುಡಿ)

ಅಡಿ ಟಿಪ್ಪಣಿಗಳು

1. ಚಂದ್ರಶೇಖರ ಎಸ್. — "Non – brahmin movement and the exit of Visweswaraya from the Dewanship of Mysore".—the Quarterly Journal of the Mythic Society. Vol LXX No. 4 Oct–Dec. Bangalore 1979… ……… p. p. 209–213
2. ಗುಂಡಪ್ಪ ಡಿ. ವಿ. — ಜ್ಞಾಪಕ ಚಿತ್ರಶಾಲೆ, ಮೈಸೂರಿನ ದಿವಾನರು ಸಂಪುಟ 4. ಸ್ವಾತಂತ್ರ್ಯ ಪೂರ್ವದ ಆರು ದಶಕಗಳು, ಕಾವ್ಯಾಲಯ ಮೈಸೂರು, 1971. ಪುಟ. 159
3. ಹೊಲೈನ್ ಹೈನಟ್ (Hollain Hainnaut) ನಿಂದ ಮಿರ್ಜಾ ಇಸ್ಮಾಯಿಲ್‌ರಿಗೆ ಬಂದ ಪತ್ರ ; ತಾರೀಖು ಸೂಚಿಸಿಲ್ಲ, ಮಿರ್ಜಾ ಇಸ್ಮಾಯಿಲ್ ಪೇಪರ್ಸ್, ಕರ್ನಾಟಕ ಸ್ಟೇಟ್ ಆರ್ಕೈವ್ಸ್, ಬೆಂಗಳೂರು.
4. ಗುಂಡಪ್ಪ ಡಿ. ವಿ. - ಮೇಲಿನದೇ.
5. ಕಂಠೀರವ ನರಸಿಂಹರಾಜ ಒಡೆಯರಿಂದ ಮಿರ್ಜಾ ಇಸ್ಮಾಯಿಲ್ಲರಿಗೆ ಬಂದ ಪತ್ರ. ತಾರೀಖು. 29, ಆಗಸ್ಟ್, 1935, ಚಾಮುಂಡಿ ಅರಮನೆ, ಮೈಸೂರು. ಮಿರ್ಜಾ ಇಸ್ಮಾಯಿಲ್ ಪೇಪರ್ಸ್, (Mirza Ismail Papers).

6. ವೆಲ್ಲಿಂಗ್‌ಡನ್‌ನಿಂದ ಮಿರ್ಜಾ ಇಸ್ಮಾಯಿಲ್ಲರಿಗೆ ಬಂದ (ಖಾಸಗಿ ಎಂದು ಗುರುತಿಸಲಾದ) ಪತ್ರ. ತಾರೀಖು. 15 ಜೂನ್, 1937. ಲಂಡನ್ (ಕೆ. ಎಸ್. ಎ.) ಬೆಂಗಳೂರು.

7. ಗುಂಡಪ್ಪ ಡಿ. ವಿ. — ಮೇಲಿನದೇ ... ಪು. 248

8. ಜೊಸ್ಯರ್, ಜಿ. ಆರ್. — "Dewanship of Mirza Ismail 1926–1941" in the Rationalist (English weekly) Mysore 1941.

9. ಮಿರ್ಜಾ ಇಸ್ಮಾಯಿಲ್ಲರು ಗಾಂಧೀಜಿಗೆ ಬರೆದ ಪತ್ರ. ತಾರೀಖು 31 ಜನವರಿ 1940. ಉದ್ಧೃತ: ಹೆಟ್ನೆ. ಬಿ. (Hettne, B) — Political Economy of Indirect Rule, Mysore. 1881–1941. New Delhi, 1978.

10. IOR. R/2|42|392 — Secret D. O. No. F. 246|1940 Bangalore dated. 15 Oct. 1940. India Office Library, London.

11. ಜಯಚಾಮರಾಜೇಂದ್ರ ಒಡೆಯರು ಸಿಂಹಾಸನವೇರಿ ಅಧಿಕಾರ ವಹಿಸಿಕೊಂಡಿದ್ದು. 8 ಸಪ್ಟೆಂಬರ್ 1940 ರಂದು. ಅದೇ ವರ್ಷ ಅಕ್ಟೋಬರ್ 15 ರ ಹೊತ್ತಿಗೆ ಮಿರ್ಜಾ ತಾವು ರಾಜೀನಾಮೆ ಕೊಡುವ ಇಚ್ಛೆಯನ್ನು ತಿಳಿಸಿದ್ದರು.

12. IOR. R | 2 | 42. | 392 — ಮೇಲಿನದೇ.

ನಾಸಾಭರಣ – ಒಂದು ವಿವೇಚನೆ

ಭಾರತೀಯ ಸ್ತ್ರೀಯರ ಅಲಂಕಾರ ಆಭರಣಗಳನ್ನು ಕುರಿತು ವಿಚಾರಮಾಡುವಾಗಲೆಲ್ಲಾ ಮೂಗುತಿಯ ಹೆಸರು ಗಮನಾರ್ಹವಾಗಿ ಕೇಳಿಬರುತ್ತದೆ. ನಾಸಾಭರಣ ಕೇವಲ ಆಭರಣ ಮಾತ್ರವೇ ಅಲ್ಲ ಅದು ಮಂಗಳಾಭರಣ; ಸುಮಂಗಲಿಯ ಸೌಭಾಗ್ಯಲಕ್ಷಣವೆಂಬ ನಂಬಿಕೆಯೂ ಇದೆ. ಆದರೂ ಈ ಆಭರಣ ಭಾರತೀಯವೆ ಅಥವಾ ಪರಕೀಯರ ಪ್ರಭಾವದಿಂದ ಮೂಡಿ ಬಂದದ್ದೆ ಎಂದು ಕೆಲವು ವಿಚಾರವಾದಿಗಳು ಸಂಶಯವನ್ನು ವ್ಯಕ್ತಪಡಿಸಿದ್ದಾರೆ.

ಎ. ಎಸ್. ಅಲ್ತೇಕರ್ ಅವರು ಇದರ ಇತಿಹಾಸದಬಗ್ಗೆ ಬರೆಯುತ್ತಾ 'ಇದು ಯಾವ ಪ್ರಾಚೀನ ಶಿಲ್ಪದಲ್ಲೂ ಕಾಣಸಿಗುವುದಿಲ್ಲ. ನಾಟ್ಯಶಾಸ್ತ್ರ, ಅಮರಕೋಶಗಳಲ್ಲೂ ಈ ಆಭರಣದ ಹೆಸರು ಬರುವುದಿಲ್ಲ' ಎಂದು ಹೇಳಿ ಇದು ಮೂಲತಃ ಮೊಗಲರ ಆಭರಣವೆಂದೂ, ಹಿಂದೂಗಳು ಇದನ್ನು ಹತ್ತು ಹನ್ನೊಂದನೆ ಶತಮಾನದ ಈಚೆಗೆ ಸ್ವೀಕರಿಸಿದರೆಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[1]

ಪಾವೆಂ ಎಂಬ ಮತ್ತೊಬ್ಬ ವಿದ್ವಾಂಸರು 'ಪದಾರ್ಥ ಚಿಂತಾಮಣಿ'ಯಲ್ಲಿ ಬುಲಾಕಿನ ವಿಚಾರವನ್ನು ಹೇಳುತ್ತಾ "ಈ ಆಭರಣವಾಗಲೀ ಅದರ ಹೆಸರಾಗಲೀ ಕನ್ನಡದ್ದಂತೂ ಅಲ್ಲ ಭಾರತೀಯಕೂಡಾ ಅಲ್ಲ" ಎಂದು ಹೇಳಿ "ಮೂಗಿನ ಯಾವ ಆಭರಣವೂ ಭಾರತೀಯವಲ್ಲ, ಎಂದು ಸಂಶೋಧಕರು ಹೇಳುತ್ತಾರೆ, ಪ್ರಾಚೀನ ಧಾರ್ಮಿಕ ಗ್ರಂಥಗಳಲ್ಲಿ, ಶಿಲ್ಪಗಳಲ್ಲಿ ಚಿತ್ರಗಳಲ್ಲಿ ಕಿವಿಯ ಆಭರಣ ಹೇಳಿದ್ದರೂ ಮೂಗಿನದು ಹೇಳಿಲ್ಲ. ಬುಲಾಕು ತುರ್ಕಿ ಶಬ್ದ," ಎಂದಿದ್ದಾರೆ.[2]

ಕನ್ನಡದ ಸುಪ್ರಸಿದ್ಧ ಸಂಶೋಧಕರಾಗಿದ್ದ ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳು 'ಭಾರತೀಯ ಸಂಸ್ಕೃತಿ'ಯಲ್ಲಿ (ಪುಟ 232) ಮುಕುರದ ಪ್ರಾಚೀನತೆಯನ್ನು ಕುರಿತು ಬರೆಯುತ್ತಾ "ಮೂಗುಬೊಟ್ಟು ಅನಾರ್ಯರಲ್ಲಿಯೂ, ವಿದೇಶೀಯರಲ್ಲೂ

---

1 ಉದ್ಧೃತ : ಡಾ॥ ಚಿದಾನಂದಮೂರ್ತಿ. ಗ್ರಾಮೀಣ, ಪುಟ 159

2 ಕಸ್ತೂರಿ, ಜುಲೈ 1980. ಪುಟ 62 'ಕಸ್ತೂರಿ' ಮಾಸ ಪತ್ರಿಕೆಯಲ್ಲಿ ಪಾವೆಂಅವರು 'ಪದಾರ್ಥ ಚಿಂತಾಮಣಿ' ಎಂಬ ಶೀರ್ಷಿಕೆಯಲ್ಲಿ ಬರೆಯುವ ಲೇಖನ-ಭಾಷಾಶಾಸ್ತ್ರಕ್ಕೆ ಸಂಬಂಧಿಸಿ ವಿಚಾರಪೂರ್ಣವಾಗಿ ಸಂಶೋಧಕರ ಗಮನವನ್ನು ಸೆಳೆಯುವಂತಿರುವುದರಿಂದ ಅಲ್ಲಿನ ಒಂದು ತುಣುಕನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

ಹರಪ್ಪಾ ಸಂಸ್ಕೃತಿಯಲ್ಲೂ ಕಂಡುಬಂದರೂ, ಶಂಕರಾಚಾರ್ಯ ವಿರಚಿತ ಕೆಲವು ಸ್ತೋತ್ರಗಳಲ್ಲಿ ಮುಕುರದ ಉಲ್ಲೇಖವಿದ್ದರೂ ಹನ್ನೆರಡನೆಯ ಶತಮಾನದಿಂದೀಚೆಗೆ ಅದು ಸುಮಂಗಲಿಯ ಲಕ್ಷಣವೆಂದು ಗಣಿಸಲ್ಪಟ್ಟಿತು" ಎಂದು ಹೇಳಿದ್ದಾರೆ. ಡಾ॥ ಶಾಸ್ತ್ರಿಗಳ ಆಧಾರಭೂತ ಹೇಳಿಕೆಯ ಪ್ರಕಾರ 'ಮೂಗಿನ ಯಾವ ಆಭರಣವೂ ಭಾರತೀಯವಲ್ಲ ಎಂದು ಸಂಶೋಧಕರು ಹೇಳುತ್ತಾರೆ' ಎಂಬ ಮಾತನ್ನು ನಂಬುವುದು ಕಷ್ಟವಾಗುತ್ತದೆ.

ಸಿಂಧೂನದಿಯ ನಾಗರಿಕತೆಯನ್ನು ಕುರಿತು ಬರೆಯುತ್ತಾ; ಪ್ರಸಿದ್ಧ ಇತಿಹಾಸ ಕಾರರು ಕೊಡುವ ವಿವರಣೆ ಈ ರೀತಿಯಿದೆ :

Ornaments used by women in Indus Valley civilization : Necklace, Fillets, armlets, Finger rings and Bangles were worn by both Men and Women and girls, nose-studs, earrings and anklets by women alone.[3]

ಮುಸ್ಲಿಮರ ಆಗಮನಕ್ಕೆ ಬಹು ಮುಂಚೆಯೇ, ಪುರಾತನ ಭಾರತೀಯ ಸಂಸ್ಕೃತಿಯಲ್ಲೇ ಮೂಗುತಿ ಸ್ತ್ರೀಯರ ಒಂದು ಆಭರಣವಾಗಿತ್ತು ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕಿಲ್ಲ.

ದೇಹದ ಯಾವ ಯಾವ ಭಾಗಗಳನ್ನು ಅಲಂಕರಿಸಿದರೆ ತುಂಬುಶೃಂಗಾರವಾಗಿ ಸೊಬಗು ಪಡೆಯುತ್ತದೆ ಎಂಬುದರ ಬಗೆಗೆ ಹಿಂದಿನವರು ವಿಚಾರಮಾಡಿ ಷೋಡಶಾಲಂಕಾರಗಳನ್ನು ಹೇಳಿದ್ದಾರೆ. ಆ ಷೋಡಶಾಲಂಕಾರಗಳಲ್ಲಿ 'ನಾಸಾ ಭೂಷಣ'ವೂ ಒಂದು ಎಂಬುದು ಇಲ್ಲಿ ಗಮನಾರ್ಹ.[4]

ಕನ್ನಡ ಕಾವ್ಯಗಳಲ್ಲಿ ಮೂಗುತಿಯನ್ನು ಕುರಿತು ಅನೇಕ ವರ್ಣನೆಗಳು ದೊರೆಯುತ್ತವೆ. 'ಮೂಕುತಿ' ಎಂದು ಪ್ರಭುಲಿಂಗ ಲೀಲೆ (4–20), ಭರತೇಶ ವೈಭವ (77–118), ಬಸವ ಪುರಾಣ (16–8) ಗಳಲ್ಲಿ ಹೇಳಿದರೆ, ನಾಸಾಭರಣ ಎಂದು ಪುರಂದರ ದಾಸರ ಕೀರ್ತನೆಯಲ್ಲಿ (1–191) ಹೇಳಿದೆ. ಈ ಮೂಗುತಿ ಮುತ್ತಿನದಾಗಿರಬಹುದು (ಬಸವ ಪು. 16–8), ಮುತ್ತು ರತ್ನದ್ದಾಗಿರಬಹುದು, ಬೆಳ್ಳಿಯದಾಗಿರಬಹುದು (ರತ್ನಾಳಿ. ಬೆಳ್ಳಿಮೂಗುತಿ. ಬಸಪು 16–8). ಹೀಗೆ ಹುಡುಕುತ್ತಾ ಹೋದರೆ ನಾಸಾಭರಣದ ಬಗೆಗೆ ಕನ್ನಡ ಕಾವ್ಯಗಳಲ್ಲಿ ಇನ್ನೂ ಅನೇಕ ಸ್ವಾರಸ್ಯವಾದ ವಿವರಣೆಗಳನ್ನು ಗಮನಿಸಿ ಮೂಕುತಿಯ ಪ್ರಾಚೀನತೆಯನ್ನು ಗುರುತಿಸಬಹುದು.

ಕೆ. ಶ್ರೀಕಂಠಯ್ಯ

---

3 An Advanced History of India (P.18) by Three Authors.

4 ವಿವರಗಳಿಗೆ ನೋಡಿ : ತೀನಂಶ್ರೀ : ಗದಾಯುದ್ಧ ಸಂಗ್ರಹಂ ಟಿಪ್ಪಣಿಗಳು, ಪುಟ 94 ; ಶ್ರೀವತ್ಸ ನಿಘಂಟು ಪುಟ 453.

ಆಹವಮಲ್ಲನುಪ್ಪಳನುಂ

ಪುಲ್ಲಡಿಗ ರೇಚಯ್ಯ ಮಲ್ಲಣ
ಮೊಲ್ಲೆಯರ ಬೊಮ್ಮಯ್ಯ ಮಲ್ಲಣಿ
ತೆಲ್ಲಿಗೇಶನ ಮಸಣಹುಳ್ಳಿಯ ಮಾರತಂದೆಗಳು
ಮಲ್ಲಬೊಮ್ಮಯ್ಯಂಗಳುನ್ನತ
ಬಿಲ್ಲಣಂ ಬಳ್ಳೇಶಮಲ್ಲಂ
ಪಲ್ಲೇಶ ಸೋಮಯ್ಯನಾಹವಮಲ್ಲನುಪ್ಪಳನುಂ

ಇದು ಕುಮಾರಪದ್ಮರಸನ ಸಾನಂದಚರಿತೆಯಲ್ಲಿ ಬರುವ ೯ನೆಯ ಸಂಧಿಯ ೭೯ನೆಯ ಪದ್ಯ. ಈ ಸಂಧಿಯುದ್ದಕ್ಕೂ ಕೈಲಾಸದೊಳಗೆ ಶಿವಸನ್ನಿಧಿಯಲ್ಲಿದ್ದ ಶರಣರ ಹೆಸರಿನ ದೊಡ್ಡ ಪಟ್ಟಿಯನ್ನೇ ಕೊಡಲಾಗಿದೆ. ಬಸವಪೂರ್ವ, ಬಸವಕಾಲೀನ ಶರಣರಲ್ಲದೆ ಬಸವೋತ್ತರಕಾಲೀನ ಗೊಪೆಯ ಶಿವದೇವ, ಮಹಲಿಂಗರಾಮ, ಕೆರೆಯ ಪದ್ಮರಸ, ಮೂಲು ಜಾವದದೇವರು, ಕುರುಗೋಡ ನೃಪ ರಾಜಮಲ್ಲ, ಅಪ್ಪರಸಯ್ಯ, ಗೋಪೆಯ ವಜ್ರರಾಯ ಮೊದಲಾದ ಶಿವಭಕ್ತರ ಹೆಸರುಗಳು ಇಲ್ಲಿ ಉಲ್ಲಿಖಿತವಾಗಿದ್ದು ಚರಿತ್ರೆಕಾರರಿಗೆ ಇದೊಂದು ದೊಡ್ಡ ಗಣಿಯಾಗಿ ಪರಿಣಮಿಸಿದೆ. ಈ ಪಟ್ಟಿಯ ಒಂದು ಭಾಗ ಮೇಲಿನ ಪದ್ಯ ಇಲ್ಲಿಯ 'ಆಹವಮಲ್ಲನುಪ್ಪಳನುಂ' ಎಂಬ ಹೇಳಿಕೆ ಇತಿಹಾಸ ಓದಿದ ವಿದ್ವಾಂಸರನ್ನು ತಟ್ಟನೆ ತನ್ನತ್ತ ಸೆಳೆಯುತ್ತದೆ. ಇದನ್ನು ಆಹವಮಲ್ಲನಾದ (ಯುದ್ಧವೀರನಾದ) ಉಪ್ಪಳನೆಂದು ಭಾವಿಸುವುದಕ್ಕಿಂತ ಆಹವಮಲ್ಲ ಉಪ್ಪಳ ಹೆಸರಿನ ಇಬ್ಬರು ಶಿವಭಕ್ತರೆಂದು ಭಾವಿಸುವುದು ಸೂಕ್ತ ವೆಂದು ತೋರುತ್ತದೆ.

'ಆಹವಮಲ್ಲ' ಎಂಬುದು ರಾಜವ್ಯಕ್ತಿಯ ಹೆಸರಾಗಿದೆ. ಕರ್ನಾಟಕದಲ್ಲಿ ಈ ಹೆಸರಿನ ಅಧೀನರಾಜರು, ಅಧಿಕಾರಿಗಳು ಕಂಡುಬರುತ್ತಿರೂ ಮುಖ್ಯವಾಗಿ ಇದು ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ಪರಂಪರಾಗತ ಹೆಸರು. ಬಹುಶಃ ಈ ಪದ್ಯದಲ್ಲಿ ಕಾಣಿಸಿಕೊಳ್ಳುವವನು ಕಲ್ಯಾಣಚಾಲುಕ್ಯ ಮನೆತನದ ಮೂಲಪುರುಷನಾದ ಆಹವಮಲ್ಲ ಇಮ್ಮಡಿ ತೈಲಪನೇ ಆಗಿರಬಹುದು. ಈತನ ತಾಯಿಯ ಹೆಸರು ಬೊಂಥಾದೇವಿ. ವೀರಶೈವ ಪುರಾಣಗಳು ಆಗಾಗ ಹೆಸರಿಸುವ ಶಿವಭಕ್ತೆ ಬೊಂಥಾ ದೇವಿ ಈಕೆಯೇ ಆಗಿದ್ದ ಪಕ್ಷದಲ್ಲಿ ಇವಳ ಮಗ ಆಹವಮಲ್ಲ ತೈಲಪನೂ ಶಿವಭಕ್ತ ನಾಗಿರಬಹುದಾದ ಕಾರಣ ಅತನೇ ಇಲ್ಲಿ ಉಲ್ಲಿಖಿತನಾಗಿರುವನೆಂದು ಹೇಳಬೇಕಾಗು ತ್ತದೆ.

ಇಲ್ಲಿ ಬರುವ ಇನ್ನೊಂದು ಹೆಸರು ಉಪ್ಪಳ. ಕಾವ್ಯಾವಲೋಕನದಲ್ಲಿ

(ಪದ್ಯ ೬೩)

> ಪದಿನೆಣ್ಛಾಸಿರ ಜೋಹವಕ್ಕರೆಯು ಜಾತ್ಯಶ್ವಂಗಳೆರ್ಭಾಸಿರಂ
> ಮದಮಂ ಮುಕ್ಕಳಿಸಿರ್ದ ದಂತಿಘಟೆಗಳ್ ಪತ್ತೆಂಟು ಲಕ್ಕಂ ರಣೋ
> ನ್ಮದ ಪತ್ತಿವ್ರಜಮೆಂಬ ಸೈನ್ಯಮುದದಿಂ ಬಂದುಪ್ಪಳಂ ಕಾದಿಯೋ
> ಡಿದೊಳೆಬ್ಬಟ್ಟಿದನಟ್ಟಿ ಮುಟ್ಟಿಪಿಡಿದಂ ಚಾಳುಕ್ಯಚಕ್ರೇಶ್ವರಂ ॥

ಎಂಬ ಪದ್ಯವಿದೆ. ಇಲ್ಲಿಯ ಗೆದ್ದ ಚಾಳುಕ್ಯ ಚಕ್ರೇಶ್ವರನೆಂದರೆ ಕಲ್ಯಾಣಚಾಲುಕ್ಯ ಚಕ್ರವರ್ತಿ ಆಹವಮಲ್ಲ ಇಮ್ಮಡಿ ತೈಲಪ (ಕ್ರಿ.ಶ. ೯೭೩-೯೯೭); ಸೋತ ಉಪ್ಪಳ (ಉತ್ಪಲ) ನೆಂದರೆ ಮಾಳವದ ಪರಮಾರಚಕ್ರವರ್ತಿ ಮುಂಜರಾಜ (೯೭೪-೯೯೫). ಸಾನಂದಚರಿತೆಯಲ್ಲಿ ಉಲ್ಲೇಖಿತನಾದ 'ಉಪ್ಪಳ' ಈತನೇ ಆಗಿರಬೇಕು. ಈ ಪದ್ಯದಲ್ಲಿ ಹೆಸರುಗಳು 'ಆಹವಮಲ್ಲನುಪ್ಪಳನುಂ' ಎಂದು ಜೊತೆಯಾಗಿ ಬಂದಿದ್ದು ಇವರು ಇಮ್ಮಡಿ ತೈಲಪ ಮತ್ತು ಮುಂಜನೆಂಬುದಕ್ಕೆ ಪರಸ್ಪರ ಆಧಾರವಾಗಿ ನಿಲ್ಲುತ್ತವೆ.

ಈ ಯುದ್ಧದ ವಿಷಯವನ್ನು ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಜಮ್ಮಿಕುಂಟ ಶಾಸನ (೯೯೫) "ಚಾಳುಕ್ಯಾಭರಣಂ ಸತ್ಯಾಶ್ರಯ ಕುಳತಿಳಕಂ ಶ್ರೀಮದಾಹವ ಮಲ್ಲದೇವ ಪ್ರವರ್ಧಮಾನ ವಿಜಯರಾಜ್ಯಾಭಿವೃದ್ಧಿಯೊಳುತ್ತರ ದಿಗ್ವಿಜಯದೊಳುಪ್ಪಳನಂ ಗೆಲ್ದು" ಎಂದು ಧಾರವಾಡ ಜಿಲ್ಲೆಯ ಚಿಕ್ಕೆರೂರು ಶಾಸನ (ಕ್ರಿ.ಶ. ೯೯೨) "ಮಹಾಮಂಡಳೇಶ್ವರ ಶ್ರೀಮತ್ ಆಹವಮಲ್ಲದೇವಂ ದಕ್ಷಿಣ ದಿಗ್ಭಾಗಮಂ ನಿರಾಕುಳಂ ಮಾಡಿಯುತ್ತರ ದಿಗ್ವಿಜಯಂಗೆಯ್ದುಪ್ಪಳನ ಮೇಲೆ ನಡೆದುದು" ಎಂದು ತಿಳಿಸುತ್ತವೆ. ಈ ಯುದ್ಧಕಾಲದಲ್ಲಿ ಚಕ್ರವರ್ತಿಯಾಗಿದ್ದವನು ಇಮ್ಮಡಿ ತೈಲಪ; ಮಹಾಮಂಡಳೇಶ್ವರನಾಗಿದ್ದವನು ಈತನ ಮಗ ಆಹವಮಲ್ಲ ಇರಿವಬೆಡಂಗ; ಉತ್ಪಲನ ಮೇಲೆ ತಂದೆ ಮಗ ಜೊತೆಯಾಗಿ ಇಲ್ಲವೆ ಇಬ್ಬರಲ್ಲಿ ಒಬ್ಬರು ಏರಿ ಹೋದರೆಂದು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅದೇನೇ ಇದ್ದರೂ ಆಹವಮಲ್ಲ ಇಮ್ಮಡಿ ತೈಲಪನು ಉತ್ಪಲನ ಮೇಲೆ ವಿಜಯ ಸಾಧಿಸಿದುದು ಸತ್ಯಸಂಗತಿ. ಈ ಆಹವಮಲ್ಲ ಮತ್ತು ಉತ್ಪಲರೇ ಸಾನಂದಚರಿತೆಯಲ್ಲಿ ಉಲ್ಲಿಖಿತರಾಗಿರುವರೆಂದೂ ಶಿವನ ಒಡ್ಡೋಲಗದ ಭಕ್ತಗಣದಲ್ಲಿ ಹೆಸರಿಸಿರುವುದರಿಂದ ಇವರು ಶಿವಶರಣ (ಶಿವಭಕ್ತರೆನ್ನುವುದು ಹೆಚ್ಚು ಸಮಂಜಸ) ರೆಂದೂ ಹೇಳಬೇಕಾಗುತ್ತದೆ. ಹೀಗಾಗಿ ಇನ್ನು ಮೇಲೆ ಇವರು ಮೆರೆದ ಶಿವಭಕ್ತಿಯ ವಿಶೇಷತೆಗಳನ್ನು ವಿದ್ವಾಂಸರು ಶೋಧಿಸಬೇಕಾಗಿದೆ.

ಎಂ. ಎಂ. ಕಲ್ಬುರ್ಗಿ

---

೧. Epigraphia Andhrika II p 36-38
Epigraphia Indica XXXIII p. 130

ಖಳನ್ಯಾಯ—ಒಂದು ಟಿಪ್ಪಣಿ

ವಾಯಸಂದಂತೆ ನೋಡು ಬಕನಂತಿರೆ ಮೆಲ್ಲನೆ ಮೆಟ್ಟು ಕಚ್ಛಪೋ
ಪಾಯದಡಂಗು ನಿಲೆ ಭ್ರಮರಿವೋಲ್ ಭ್ರಮಿಯಂತಿರ ಬಿಚ್ಚರಾಗು ಖ
ಡ್ಗಾಯುಧ ಚಾಪಮಂ ಪೊಳೆವಖಂಚನೆ ಪೋಲ್ತಿರೆ ಬೀಸುನೀಂ ಖಲ
ನ್ಯಾಯದಿ ನೆಲ್ಲಮಂ ನೆರೆಯೆ ಕಲ್ತುಪದೇಶಕನಾಗು ಲೋಕದೊಳ್

ಶಬ್ದಮಣಿದರ್ಪಣ 230

ಕಾಗೆಯಂತೆ ನೋಡು. ಬಕಪಕ್ಷಿಯಂತೆ ಮೆಲ್ಲನೆ ಹೆಜ್ಜೆ ಇಡು, ಆಮೆಯಂತೆ ಅಡಗಿ ನಡೆ, ದುಂಬಿಯಂತೆ ನಿಲ್ಲು, ಚಕ್ರದಂತೆ (ಅವಿಶ್ರಾಂತನಾಗಿ) ತಿರುಗು, ಹೊಳೆವ ಮಿಂಚನ್ನು ಹೋಲುವ ಖಡ್ಗ—ಬಾಣ (ಚಾಮರ)ಗಳನ್ನು ಬೀಸು—ಖಲ ನ್ಯಾಯದಿಂದ ಎಲ್ಲವನ್ನು ಕಲಿತು ಲೋಕದಲ್ಲಿ ನೀನು ಉಪದೇಶಕನಾಗು.

ಉಪದೇಶಕನನ್ನು ಕುರಿತ ವಿಡಂಬನೆಯೇ ಈ ಕಾವ್ಯದ ವಿಷಯ. ಇದು ವಿಡಂಬನೆಯೇ ವಿನಾ ಅನ್ಯವಲ್ಲವೆಂದು ಕಾಗೆ, ಬಕ, ಮೊದಲಾದ ಉಪಮಾನಗಳು ಸೂಚಿಸುತ್ತವೆ. ಖಳ (ನ್ಯಾಯ)ದ ಹೊರತು ಮಿಕ್ಕ ಎಲ್ಲ ಉಪಮೆಗಳನ್ನು ಸುಲಭವಾಗಿ ಅರ್ಥೈಸಬಹುದು.

ಖಳ (ಖಲ)—ನ್ಯಾಯ ಪದಕ್ಕೆ ದುಷ್ಟವ್ಯವಹಾರ, ದುಷ್ಟರೀತಿ ಅಥವಾ ಸಂಚಯ ಪದ್ಧತಿ, ಕ್ರಮಗಳೆಂಬ ಅರ್ಥಗಳುಂಟು. ಮೊದಲನೆಯ ಪ್ರಕಾರ, ಪದ್ಯದ (ನಾಲ್ಕನೆ ಸಾಲಿನ) ಅರ್ಥವು, ಉಕ್ತವಾದ ಎಲ್ಲ ದುಃಶ್ಚೇಷ್ಟೆಗಳನ್ನು ದುರ್ಜನನಂತೆ ಕಲಿತು 'ಗುರು' ಆಗೆಂದು ಎರಡನೆಯ ಪ್ರಕಾರ, ಆ ನಾಜೋಕು ನಡವಳಿಕೆಗಳೆಲ್ಲವನ್ನು ಒಟ್ಟಾಗಿ ಕಲಿತು ಉಪದೇಶಕನಾಗೆಂದು ಅರ್ಥವಾಗುವುದು.

ಮೂರನೆಯ ಅರ್ಥವೂ ಉಂಟು. ಖಳನ್ಯಾಯವೆಂಬುದು ಪ್ರಾಯಶಃ ಸಂಸ್ಕೃತವ ಲೌಕಿಕನ್ಯಾಯಗಳಲ್ಲೊಂದಾದ ಖಲೇಕಪೋತದ ಅಥವಾ ಖಲಕಪೋತದ ಕನ್ನಡ ರೂಪಾಂತರ ವಿರಬಹುದು. ಮತ್ತು ಈ ವ್ಯಾಖ್ಯೆಯನ್ನು ಪ್ರಸ್ತುತ ವಿಷಯಕ್ಕೆ ಬಹುಮಟ್ಟಿಗೆ ಹೊಂದಿಸಬಹುದು ಕೂಡ. ಖಲವೆಂದರೆ ಧಾನ್ಯ ಒಕ್ಕುವ ಸ್ಥಳ, ಕಣ. ಕಣದಲ್ಲಿ ಕಾಳುಗಳು ಚೆಲ್ಲಿದ್ದರೆ ಪಾರಿವಾಳಗಳು ಒಂದಾಗಿ, ಒಟ್ಟಾಗಿ ಬರುವುವು. ಒಂದು ಬರುವುದಿಲ್ಲ. ಒಂದೊಂದಾಗಿ ಬರುವುದಿಲ್ಲ. ತಾಮುಂದು ನಾಮುಂದೆಂಬ ರೀತಿಯಲ್ಲಿ (ಅಹಮಹಮಿಕಯಾ) ಬಂದು ಕಾಳುಗಳನ್ನು ಹೆಕ್ಕುವುವು. ಇದರಂತೆ, ಉಪದೇಶಕನಾಗುವವನಲ್ಲಿ ಮೇಲೆ ಹೇಳಿದ ಎಲ್ಲ ಚಾತುರ್ಯಗಳು ಒಮ್ಮೆಲೆ ಕಂಡುಬರಬೇಕು.

ಹೀಗೆ ಮೂರು ವಿಧಗಳಲ್ಲಿ ಅರ್ಥಾನ್ವಯ ಮಾಡಬಹುದಾದರೂ ಮೂರನೆಯ ವಿಧವು ದ್ವಂದ್ವಾರ್ಥವೊಂದಿಗೆ ಹೆಚ್ಚು ಫಲಕಾರಿಯಾಗಿ, ಮನೋಜ್ಞವಾಗಿ

ಕಾಣುತ್ತದೆ. ಆದರೆ ಈ ರೀತಿ ಹೇಳುವ ಸಾಧ್ಯತೆ–ಅಸಾಧ್ಯತೆಗಳು ಸಮಂಜಸವೊ ಅಸಮಂಜಸವೊ ಕಾವ್ಯಜ್ಞರು ತಿಳಿಸಬೇಕು.*

ಬಿ. ಜಿ. ಶ್ರೀಲಕ್ಷ್ಮಿ, ವೀರಾಚಕ್ರವರ್ತಿ

ಶಾಲಿಚೆನ್ನಬಸವ–ಕಾಲವಿಚಾರ

ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು 'ಕರ್ನಾಟಕ ಕವಿಚರಿತೆ' ತೃತೀಯ ಸಂಪುಟ (1974) ಪುಟ 153ರಲ್ಲಿ 'ವೀರಸಂಗಯ್ಯ ದುಂದುಮೆ'ಯ ಕರ್ತೃ ಶಾಲಿ ಚೆನ್ನಬಸವನ ಕಾಲದ ಬಗೆಗೆ 'ಇವನು ಸುಮಾರು 1800ರಲ್ಲಿ ಇದ್ದಿರಬಹುದು' ಎಂದಿದ್ದಾರೆ.

ಕನ್ನಡ ಅಧ್ಯಯನ ಪೀಠ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ)ದಲ್ಲಿನ ಹಸ್ತಪ್ರತಿ ಸಂಗ್ರಹದಲ್ಲಿ ಕ್ರಮಾಂಕ 1071ರ 'ಸಿಂಗಿರಾಜ ಪುರಾಣ'ದ ಪ್ರತಿಯೊಂದಿದೆ. ಅದರ ಅಂತ್ಯದಲ್ಲಿ 'ಈ ಪುಸ್ತಕವು ಅಮಿನಬಾವಿಯಲ್ಲಿರುವ ಯಳವತ್ತಿ ಮಟದ ಸಾಲಿ ಚೆನ್ನಬಸವಯ್ಯನವರದು. ಇದು ಶಕೆ 1780 ಕಾಳಯುಕ್ತಾಕ್ಷಿ, ನಾಮ ಸಂವತ್ಸರದ ಫಾಲ್ಗುಣ ಬಹುಳ 5 ಸೌಮ್ಯ ವಾಸರದಲ್ಲಿ ಸಮಾಪ್ತವಾಯಿತು ಎಂದಿದೆ.[1]

ಪ್ರತಿಯ ಒಡೆಯ ಸಾಲಿ ಚೆನ್ನಬಸವಯ್ಯ ಹಾಗೂ ದುಂದುಮೆ ಕರ್ತೃ ಶಾಲಿ ಚೆನ್ನಬಸವ ಅಭಿನ್ನರಾತದ್ದಂತೆ ಕಾಣುತ್ತದೆ. ಹೀಗಾಗಿ ಶಾಲಿ (ಸಾಲಿ) ಚೆನ್ನಬಸವನ ಕಾಲ ಕ್ರಿ. ಶ. 1858 ಎಂಬುದು ಖಚಿತವಾಗುತ್ತದೆ.

ಈ ಪ್ರತಿಯ ಅಂತ್ಯದ ಉಲ್ಲೇಖದಿಂದ ಸಾಲಿ ಚೆನ್ನಬಸವನ ಕಾಲವಲ್ಲದೆ, ಅವನು ಅಮೀನಭಾವಿ ನಿವಾಸಿ ಹಾಗೂ ಎಳವತ್ತಿ ಮಠದ ಸಂಪ್ರದಾಯಿಯಾಗಿದ್ದ ಹೆಚ್ಚಿನ ಅಂಶಗಳು ತಿಳಿದುಬಂದಂತಾಗಿದೆ.

ಎಸ್. ಶಿವಣ್ಣ

ಅಡಿಟಿಪ್ಪಣಿ :

* ಈ ಸಮಸ್ಯೆಯ ಪ್ರಸ್ತಾಪಕ್ಕೆ ಡಾ. ಚಿದಾನಂದಮೂರ್ತಿಯವರಿಗೆ ನಮ್ಮ ಕೃತಜ್ಞತೆಗಳು

[1] ಹಿರೇಮಠ ಆರ್. ಸಿ , ಸುಂಕಾಪುರ, ಎಂ.ಎಸ್. (ಸಂ.) : ಶ್ಯೋಮ ಮೂರುತಿ ಅಲ್ಲಮ ಪ್ರಭು ದೇವರ ವಚನಗಳು, ಮುನ್ನುಡಿ. 1976, ಪು. xx.

ಈ ಸಂಚಿಕೆಯ ಲೇಖಕರು

ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನ ಭಾರತಿ, ಬೆಂಗಳೂರು–56
ಕ. ವೆಂ. ರಾಜಗೋಪಾಲ	1/1, 17ನೇ 'ಎ' ಕ್ರಾಸ್, 13ನೇ ಮುಖ್ಯ ರಸ್ತೆ, ಮಲ್ಲೇಶ್ವರಂ ಬೆಂಗಳೂರು–56
ಎಸ್. ವಿದ್ಯಾಶಂಕರ	ಕನ್ನಡ ಅಧ್ಯಯನ ಕೇಂದ್ರ ಜ್ಞಾನ ಭಾರತಿ, ಬೆಂಗಳೂರು–56
ಟಿ. ಎಸ್. ಸತ್ಯನಾಥ್	ಕನ್ನಡ ಅಧ್ಯಾಪಕ, ಆಧುನಿಕ ಭಾರತೀಯ ಭಾಷೆಗಳ ವಿಭಾಗ, ದೆಹಲಿ ವಿಶ್ವವಿದ್ಯಾಲಯ, ದೆಹಲಿ–110 007
ತಾಳ್ತಜೆ ಕೃಷ್ಣಭಟ್	ಪಂಜಳ ಮನೆ ಉಪ್ಪಿನಂಗಡಿ ಪೋಸ್ಟ್. ಪುತ್ತೂರು ತಾ. (ದ.ಕ.)
ಜಿ. ಎಸ್. ಮೋಹನ್	ತೆಲುಗು ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-56
ವಿ. ಶಿವಾನಂದ	ಕನ್ನಡ ವಿಭಾಗ, ಕಲ್ಬುರ್ಗಿ ವಿಶ್ವವಿದ್ಯಾಲಯ ಕಲ್ಬುರ್ಗಿ
ನಾ. ಗೀತಾಚಾರ್ಯ	ಪ್ರಥಮ ಎಂ. ಎ. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಜ್ಞಾನ ಭಾರತಿ, ಬೆಂಗಳೂರು–56

ವಿ. ಎಸ್. ಕುಲಕರ್ಣಿ	ಪ್ರಿನ್ಸಿಪಾಲ್ ಸರಕಾರಿ ಜೂನಿಯರ್ ಕಾಲೇಜು ಹುಮ್ನಾಬಾದ್, ಬೀದರ್ ಜಿಲ್ಲೆ
ಬಿ. ಎಸ್. ಸತ್ಯನಾರಾಯಣ	ಸಹ ಪ್ರಾಧ್ಯಾಪಕರು ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–56
ಜಿ. ಕುಮಾರ ಬಸಾಪುರ	ಎಸ್. ಟಿ. ಜಿ. ಲೈಬ್ರರಿ ಎಸ್. ಟಿ. ಜೆ. ಮಠ ಸಿರಿಗೆರೆ–577 541
ಬಾಪು. ಹೆದ್ದೂರಶೆಟ್ಟಿ	15, 4ನೇ 'ಎನ್' ಬ್ಲಾಕ್ ರಾಜಾಜಿನಗರ, ಬೆಂಗಳೂರು–10
ಡಿ. ಟಿ. ನಂಜೇಗೌಡ	ಸಹ ಪ್ರಾಧ್ಯಾಪಕರು ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–56
ಬಿ. ಜಿ. ಸುಧಾ ಮತ್ತು ಎಸ್. ಗೀತಾ	ಶಿಕ್ಷಣ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-56
ಟಿ. ಶ್ರೀವೆಂಕಟರಮಣ	ಮುಖ್ಯಸ್ಥರು, ಸಂಖ್ಯಾಕಲನ ವಿಜ್ಞಾನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–56
ಎಸ್. ಚಂದ್ರಶೇಖರ	ಇತಿಹಾಸ ವಿಭಾಗ (ಇಂಗ್ಲೀಷ್ ಮೂಲ) (ಅನು : ಬಸವರಾಜ ಕಲ್ಗುಡಿ) ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–56

ಡಿ. ವಿ. ರಾಜಶೇಖರ್	ಸಹ ಸಂಪಾದಕ 'ಪ್ರಜಾವಾಣಿ' ದೈನಿಕ ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು
ಕಟಾವೀರನಹಳ್ಳಿ ಜನ್ನಪ್ಪ	310, 15ನೇ ಕ್ರಾಸ್, ಸದಾಶಿವನಗರ, ಬೆಂಗಳೂರು–40
ಕೆ. ಎಂ. ಮುನಿಕೃಷ್ಣಪ್ಪ	C/O ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು–56
ಕೆ. ಶ್ರೀಕಂಠಯ್ಯ	393, I ಬ್ಲಾಕ್, ಜಯನಗರ ಬೆಂಗಳೂರು–11
ಎಂ. ಎಂ. ಕಲ್ಬುರ್ಗಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ಶ್ರೀಮತಿ ಬಿ. ಜಿ. ಶ್ರೀಲಕ್ಷ್ಮಿ ಮತ್ತು ಶ್ರೀಮತಿ ಮೀರಾ ಚಕ್ರವರ್ತಿ	ಸಂಸ್ಕೃತ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–56
ಎಸ್. ಶಿವಣ್ಣ	ಸಂಪಾದಕರು, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು–56